# THE BOOK WAS DRENCHED

Damage Book

UNIVERSAL LIBRARY
OU_198965
UNIVERSAL LIBRARY

ಶ್ರೀಶೇಷಾಚಲ ಪ್ರೆಸ್ಸ.

ಶ್ರೀಶೇಷಾಚಲ ಪ್ರೆಸ್ಸ ಮತ್ತು ಗ್ರಂಥಮಾಲೆ,
ಪೊ. ಆನಂದವನ, ಜಿ. ಧಾರವಾಡ.
श्री शेषाचल प्रेस व ग्रंथमाला.
पो. आनंदवन, जि. धारवाड
SHRI SHESHACHAL PRESS & GRANTHAMALA,
Post ANANDVAN, Dist Dharwar.

# ಆತ್ಮಬಲಿ!

[ಐತಿಹಾಸಿಕ ಕಾದಂಬರಿ.]

ಲೇಖಕ:

ನಾಗೇಶ ರಂಗೋ ಕುಲಕರ್ಣಿ.
ಅ|| ಮಾ|| ಒನ್ನಿಕೊಪ್ಪ.

ಪ್ರಕಾಶಕ:

ಭಿ. ಪ. ಕಾಳೆ,
ಶ್ರೀ ಶೇಷಾಚಲ ಗ್ರಂಥಮಾಲೆ
ಆ ನಂ ದ ವ ನ.

ಫೆಬ್ರುವಾರಿ ೧೯೩೪

ಬೆಲೆ ೧ ರೂ.


Printed by
B. P. KALE at his
Shri Sheshachal Press
Anandvan.

# ಮುನ್ನುಡಿ.

ಈ ಪುಸ್ತಕವು "बंडाचा वणवा" ಎಂಬ ಪುಸ್ತಕದ ನಿರೀಕ್ಷಣದಿಂದ ಬರೆಯಲ್ಪಟ್ಟಿದೆ. ೧೮೫೭ನೇ ಇಸವಿಯ ಬಂಡಾಯವು ಭಾರತವರ್ಷದ ಅರ್ವಾಚೀನ ಇತಿಹಾಸದಲ್ಲಿ ಅತ್ಯಂತ ಮಹತ್ವವಾದದ್ದು. ದೇಶದಲ್ಲೆಲ್ಲ ಬಂಡಾಯದ ಬೇಗೆಯು ಪಸರಿಸಿದಾಗ ಬಿಹಾರದ ಭೀಷ್ಮನಂತಿದ್ದ ಬಾಬೂ ಕುವರಸಿಂಹನು ಅದರಲ್ಲಿ ಸೇರಿ ಅತುಲ ಪರಾಕ್ರಮದಿಂದ ಕಾದಿ, ಕಡೆಗೆ ರಣಕುಂಡದಲ್ಲಿ ಹೇಗೆ ಆತ್ಮಬಲಿದಾನಮಾಡಿದನೆಂಬದು ಈ ಪುಸ್ತಕದಲ್ಲಿ ವರ್ಣಿಸಲ್ಪಟ್ಟಿದೆ.

ಈ ಕಥಾನಕದೊಳಗಿನ ಅಜಯಸಿಂಹ-ಲಿಲಿಯರ ಸಮತಾಬುದ್ಧಿಯೂ, ಘುಲಶಾಹ-ಕೊಳಲಸ್ವಾಮಿಗಳ ಪರೋಪಕಾರ ತತ್ಪರತೆಯೂ, ಇಂದುಮತಿ ರಾಣಿ-ಪ್ಯಾರಿಯರ ಪತಿನಿಷ್ಠೆಯೂ ವರ್ಣನೀಯವಿರುವವು. ರಾಮಶರಣನಂತಹ ನೀಚಮನೋವೃತ್ತಿಯ ಜನರಿಂದ ಸಜ್ಜನರಿಗೂ ಸಮಾಜಕ್ಕೂ ರಾಷ್ಟ್ರಕ್ಕೂ ಹೇಗೆ ಗಂಡಾಂತರಗಳೊದಗುವವೆಂಬದರ ಕೆಲವು ದೃಶ್ಯಗಳನ್ನು ಇದರಲ್ಲಿ ಕಾಣಬಹುದು.

ಬನ್ನಿಕೊಪ್ಪ,
ತಾ|| ೧೪-೧೨-೧೯೩೩

ಕನ್ನಡಿಗರ ವಿಧೇಯ,
**ನಾಗೇಶ.**

(ಈ ಪುಸ್ತಕದ ಎಲ್ಲ ಹಕ್ಕುಗಳು ಪ್ರಕಾಶಕರವಾಗಿವೆ.).

# ಅನುಕ್ರಮಣಿಕೆ


| ವಿಷಯ | ಪುಟ |
|---|---|
| ೧ ನಿರಾಶೆಯಲ್ಲಿ ಆಶಾಂಕುರ | ೧ |
| ೨ ಭವಿಷ್ಯ ಸೂಚನೆ | ೬ |
| ೩ ಬಂಡಾಯದ ಬೇಗೆ | ೧೧ |
| ೪ ನಷ್ಟೋ ಮೋಹಃ | ೧೬ |
| ೫ ಸಂನ್ಯಾಸ ತ್ಯಾಗ | ೨೦ |
| ೬ ಅಪೂರ್ವ ವಿಜಯ | ೨೫ |
| ೭ ಕುಟಿಲ ನೀತಿ | ೩೨ |
| ೮ ಆ ದರೋಗಾನು ಯಾರು? | ೩೭ |
| ೯ ಜಯ ಜಯಕಾರಕ್ಕೆ ಪ್ರತಿಯಾಗಿ ಹಾ ಹಾಕಾರವು | ೪೨ |
| ೧೦ ರಾಮಶರಣ ದರೋಗಾ | ೪೬ |
| ೧೧ ಸುಣ್ಣತಿಂದ ಮಂಗ! | ೫೧ |
| ೧೨ ರಾಷ್ಟ್ರಧರ್ಮ | ೫೭ |
| ೧೩ ಕರ್ಮಫಲ | ೬೨ |
| ೧೪ ವಜ್ರಾಘಾತ | ೬೭ |
| ೧೫ ಪಾಷಾಣ ಹೃದಯ | ೭೧ |
| ೧೬ ಪುನಶ್ಚ ಹರಿಃ ಓಂ | ೭೭ |
| ೧೭ ಲಿಲಿಯೋ, ಲೀಲೆಯೊ? | ೮೨ |
| ೧೮ ಸಂಶಯ ಪಿಶಾಚಿ | ೮೭ |
| ೧೯ ಬಿಹಾರದ ಭೀಷ್ಮ | ೯೨ |
| ೨೦ ಶಂಕಾ ನಿರಸನ | ೯೭ |
| ೨೧ ಕೃತಘ್ನ ರಾಮಶರಣ | ೧೦೭ |
| ೨೨ ಎಲಾ, ಇದೇನು? | ೧೧೧ |
| ೨೩ ಮೋಹನಾಸ್ತ್ರ | ೧೧೫ |
| ೨೪ ಪ್ರೇಮಪ್ರಭಾವ | ೧೨೧ |
| ೨೫ ಆತ್ಮಬಲಿ | ೧೨೭ |
| ೨೬ ಉಪಸಂಹಾರ | ೧೩೦ |

# ಆತ್ಮಬಲಿ!

(ಐತಿಹಾಸಿಕ ಕಾದಂಬರಿ)

## ನಿರಾಶೆಯಲ್ಲಿ ಆಶಾಂಕುರ.

ಮಧ್ಯರಾತ್ರಿಯ ಸಮಯವು. ಕೃಷ್ಣಪಕ್ಷವಿದ್ದುದರಿಂದ ಎಲ್ಲ ಕಡೆಯಲ್ಲಿ ಗಾಢಾಂಧಕಾರವು ವ್ಯಾಪಿಸಿತ್ತು. ಆಕಾಶವು ಮೇಘಾಚ್ಛನ್ನವಾದದ್ದರಿಂದ ನಕ್ಷತ್ರ ಪ್ರಕಾಶಕ್ಕೆ ಸಹ ಎಡೆಯಿಲ್ಲದಂತಾಗಿ ಆ ಅಂಧಕಾರಕ್ಕೆ ಭೀಷಣ ಸ್ವರೂಪವು ಪ್ರಾಪ್ತವಾಗಿತ್ತು. ವರ್ಷಾಕಾಲವಿದ್ದುದರಿಂದ ಸೌದಾಮಿನಿಯ ಚಕಚಕಾಟವೂ, ಗುಡುಗಿನ ಗಡಗಡಾಟವೂ, ಸಿಡಿಲಿನ ಖಡಖಡಾಟವೂ ಪ್ರಾರಂಭವಾಗಿದ್ದವು. 'ಜಿಟಿ ಜಿಟಿ' ಮಳೆಯು ಹತ್ತಿದ್ದರಿಂದಲೂ ತಂಗಾಳಿಯು ಸುಳಿಯತೊಡಗಿದ್ದರಿಂದಲೂ ವಾತಾವರಣವು ಅತ್ಯಂತ ಶೀತಲವಾಗಿತ್ತು. ಪ್ರಾಣಿಮಾತ್ರವೆಲ್ಲವೂ ತಮ್ಮ ತಮ್ಮ ನಿವಾಸದಲ್ಲಿ ವಿಶ್ರಮಿಸಿದ್ದರಿಂದ ಸೃಷ್ಟಿಯಲ್ಲಿ ಶಾಂತತಾಸಾಮ್ರಾಜ್ಯವು ಪ್ರಸ್ಥಾಪಿತವಾಗಿತ್ತು.

ಇಂತಹ ಸಮಯದಲ್ಲಿ ಜಗದೀಶಪುರದ ರಾಜಮಂದಿರದಿಂದ ನವಪ್ರಾಯದ ತರುಣಿಯೋರ್ವಳು ಹೊರಬಿದ್ದಳು. ನಿಬಿಡವಾದ ತಮವು ಇಡಿಯ ಸೃಷ್ಟಿಯನ್ನು ಶೂನ್ಯವತ್ತಾಗಿ ಮಾಡಿದ್ದರಿಂದ ತನ್ನ ಇಚ್ಛಿತ ಸ್ಥಳವು ಯಾವ ಕಡೆಗಿರುವದೆಂಬದನ್ನು ತಿಳಿಯಲಾರದೆ, ಆ ಯುವತಿಯು ದಿಙ್ಮೂಢಳಾಗಿ ಮೆಲ್ಲ ಮೆಲ್ಲನೆ ಹೆಜ್ಜೆಯಿಡತೊಡಗಿದ್ದಳು. ಪರ್ಜನ್ಯದಿಂದ ಕರ್ದಮಮಯವಾದ ಮಾರ್ಗ

ದಲ್ಲಿ ಅವಳು ಜಾರುತ್ತ ಎಡವುತ್ತ ಮುಗ್ಗುತ್ತ ಮಾರ್ಗಕ್ರಮಣ ಮಾಡತೊಡಗಿದ್ದಳು. ಮಿಂಚಿನ ಸಹಾಯದಿಂದ ಅವಳು ಹಾಗೂ ಹೀಗೂ ಮಾಡಿ ಒಂದು ಭವ್ಯವಾದ ದೇವಸ್ಥಾನವನ್ನು ಮುಟ್ಟಿದಳು.

ದೇವಸ್ಥಾನದಲ್ಲ ಮಹಾಕಾಲಿಯ ಮೂರ್ತಿಯು ಒಳ್ಳೆಯ ಭಯಾನಕವಾಗಿತ್ತು. ಆ ಮೂರ್ತಿಯು ವಿಶಾಲವಾದ ನೇತ್ರಗಳೂ ಉಗ್ರವಾದ ಮುಖಲಕ್ಷಣವೂ ಅಳ್ಳೆದೆಯುವರನ್ನು ಅಂಜಿಸುತ್ತಲಿದ್ದವು. ಆ ಅಷ್ಟಭುಜಾದೇವಿಯು ಸಿಂಹವನ್ನೇರಿದ್ದಳು ಕರದಲ್ಲಿ ನಾನಾವಿಧ ಶಸ್ತ್ರಾಸ್ತ್ರಗಳನ್ನು ಧರಿಸಿದ ಆ ಮಹಿಷಾಸುರಮರ್ದಿನಿಯು ದೈತ್ಯ ಸಂಹಾರಕ್ಕಾಗಿ ಸುಸಜ್ಜಿತಳಾಗಿರುವಳೋ ಏನೋ ಎಂಬಂತೆ ಕಂಗೊಳಿಸತೊಡಗಿದ್ದಳು.

ಆ ತರುಣಿಯು ದೇವಸ್ಥಾನವನ್ನು ಪ್ರವೇಶಿಸಿ:—"ಜಗದಂಬೇ! ಮಹಾಕಾಳೀ! ಸರ್ವಮಂಗಲೆ!" ಎಂದು ಧ್ಯಾನಿಸಿ, ದೇವಿಗೆ ದಂಡವತ್ ಪ್ರಣಾಮಗಳನ್ನು ಅರ್ಪಿಸಿದಳು. ತರುವಾಯ ಅವಳು ವಿಶ್ವಂಭರಿಯ ಸಮ್ಮುಖದಲ್ಲಿ ಕೈಜೋಡಿಸಿ ಮೊಳಕಾಲೂರಿ ಕುಳಿತು:—"ಆದಿಮಾಯೆ! ಇಷ್ಟು ದಿನಗಳ ವರೆಗ ಏಕನಿಷ್ಠೆಯಿಂದ ನಿನ್ನನ್ನು ಆರಾಧಿಸಿದ್ದಕ್ಕೆ ಈ ಒಗೆಯ ಫಲವು ದೊರೆಯಬೇಕೆ? ತಾಯೆ! ಸೌಖ್ಯದ ಸುದಿನಗಳು ಬೇಗನೆ ಬರುವವೆಂದು ನೀನು ಸ್ವಪ್ನದಲ್ಲಿ ಹೇಳಿದ್ದರಿಂದ ನಾನು ಇದುವರೆಗೂ ಜೀವಿಸಿದ್ದೆನು; ಆದರೆ, ನನ್ನ ಆಶಾತಂತುಗಳೆಲ್ಲವೂ ಇಂದು ಪೂರ್ಣವಾಗಿ ಹರಿದು ಹೋದವು. ದೇವೀ, ನಿನ್ನ ವಾಣಿಯು ಹೀಗೆ ಅಸತ್ಯವಾಗಬೇಕೆ! ಅನನ್ಯಭಾವದಿಂದ ಸೇವಿಸಿದ ಈ ನಿನ್ನ ಚರಣದಾಸಿಯನ್ನು ಈ ಒಗೆಯಾಗಿ ವಂಚಿಸಬೇಕೆ? ಭೈರವಿ! ನಾನು ಇನ್ನು ಮೇಲೆ ಜೀವಿಸಲಾರೆನು. ನಾಯಿ-ನರಿಗಳಂತೆ ಹೊಟ್ಟೆ ಹೊರೆದುಕೊಳ್ಳುತ್ತ ವ್ಯರ್ಥವಾಗಿ ಬಾಳುವದರಲ್ಲಿ ಅರ್ಥವೇನಿರುವದು?"

ಆ ತರುಣಿಯು ದೇವಿಯನ್ನು ಸಂಬೋಧಿಸಿ ಈ ಪ್ರಕಾರವಾಗಿ ಮಾತನಾಡತೊಡಗಿದ್ದಳು. ನೇತ್ರಗಳು ಸಜಲವಾಗಿದ್ದವು; ಕಂಠವು ಸದ್ಗದಿತವಾಗಿತ್ತು; ನಿರಾಶೆಯಿಂದ ಅವಳು ತೀರ ಉದಾಸೀನಳಾಗಿದ್ದಳು. ಅವಳು ಮೇಲಿಂದ ಮೇಲೆ ದೀರ್ಘನಿಶ್ವಾಸ ಬಿಡತೊಡಗಿದ್ದಳು. ಎಷ್ಟೋ ಹೊತ್ತಿನ ವರೆಗೆ ದೇವಿಯನ್ನು ನಾನಾಬಗೆಯಾಗಿ ಪ್ರಾರ್ಥಿಸಿ ಕಡೆಗೆ ಸೀರೆಯ ನೆರಗಿನಲ್ಲಿ ಬಚ್ಚಿಟ್ಟ ಕೈಗತ್ತಿಯನ್ನು ಕಡೆಗೆ ತೆಗೆದಳು.

"ಕರವಾಲವೇ! ಜಗದಂಬೆಯು ನನ್ನ ಮೇಲೆ ಮುನಿದಿರುವಳು. ನೀನಾದರೂ ದಯೆದೋರಿ, ನನ್ನನ್ನು ಈ ದುಃಖಮಯ ಪರಿಸ್ಥಿತಿಯಿಂದ ಬಿಡುಗಡೆ ಮಾಡು!" ಎಂದು ನುಡಿದು, ಆ ಶಸ್ತ್ರವನ್ನೊಮ್ಮೆ ಚುಂಬಿಸಿದಳು. ಆಗ ಅವಳು

ಜಗದಂಬೆಯನ್ನು ಕುರಿತು —"ದೇವೀ, ಆತ್ಮ ಘಾತಮಾಡಿಕೊಂಡಳೆಂದು ನನ್ನ ಮೇಲೆ ಮುನಿಯಬೇಡ ಕಂಡಿಯಾ? ನಾನು ಈ ದುಃಖಕಾರಕ ಸೃಷ್ಟಿಯಿಂದ ಪಾರಾಗಿ ಹೋಗಬೇಕೆಂದು ಈ ಕೃತ್ಯ ಮಾಡತೊಡಗಿರುವೆನು. ಮುಂದಿನ ಜನ್ಮದಲ್ಲಾದರೂ ಪತಿಯು ನನ್ನೊಡನೆ ಪ್ರೇಮದಿಂದ ನಡೆಯುವಂತೆ ಆಶೀರ್ವಾದವನ್ನು ಕೊಡು!" ಎಂದು ನುಡಿದವಳೆ ಶಸ್ತ್ರವನ್ನು ಮೇಲಕ್ಕೆತ್ತಿದಳು. ಇನ್ನು ಮೇಲೆ ಅವಳು ಅದಕ್ಕೆ ತನ್ನ ಹೃದಯಸ್ಥಾನದಲ್ಲಿ ಆಶ್ರಯ ಕೊಡತಕ್ಕವಳು; ಅಷ್ಟರಲ್ಲಿ 'ಖಟ್-ಖಡಲ್' ಎಂದು ಘೋರ ನಿನಾದವಾಯಿತು! ಆ ತರುಣಿಯು ಬೆಚ್ಚಿಬಿದ್ದಳು. ವಿದ್ಯುದುತ್ಪಾತದ ಸಪ್ಪಳಕ್ಕೆ ದೇವಾಲಯವು ನಡುಗಿತು. ಅವಳು ಭಯವಿಹ್ವಲಳಾಗಿ ತಿರುಗಿ ನೋಡಿದಳು.

"ರಾಣೀ! ಇದೇನು ಅನುಚಿತ ಕಾರ್ಯವನ್ನಾರಂಭಿಸಿದೆ!" ಎಂದು ಯಾರೋ ನುಡಿದು ಅವಳ ಕೈಯೊಳಗಿನ ಶಸ್ತ್ರವನ್ನು ಕಸಿದುಕೊಂಡರು. ಆಗ ರಾಣಿಯು ಮತ್ತಿಷ್ಟು ಭಯಚಕಿತಳಾದಳು. ಅವಳು ಆಪಾದ ಮಸ್ತಕದ ವರೆಗೆ ನಡುಗತೊಡಗಿದಳು. ಆಗ ಕಂಪಿತ ಧ್ವನಿಯಿಂದ ಅವಳು:—

"ನನ್ನ ಕಾರ್ಯಕ್ಕೆ ವಿಘ್ನಕಾರಿಗಳಾದವರು ನೀವು ಯಾರು?"

"ನಾನೊಬ್ಬ ಫಕೀರನು." ಎಂದು ನುಡಿದು, ಅವನು ಕರುಣೆಯಿಂದ:— "ತಾಯೀ! ಇಂತಹ ಕಟು ಕರ್ತವ್ಯವನ್ನಾಚರಿಸಿ ಸರ್ವರನ್ನೂ ದುಃಖಾಬ್ಧಿಯಲ್ಲಿ ಕೆಡಹುವ ಸಾಹಸವನ್ನು ಕೈಕೊಳ್ಳಬಹುದೆ? ನಿನಗೆ ಬಂದ ಆಪತ್ತಾದರೂ ಏನು? ನಿಷ್ಕಾರಣವಾಗಿ ಆತ್ಮಘಾತದಂತಹ ಮಹಾ ಪಾತಕವನ್ನು ಆಚರಿಸುವದು ಶ್ರೇಯಸ್ಕರವೆ?"

"ಮಹಾತ್ಮರೇ, ನನ್ನ ಸಲುವಾಗಿ ದುಃಖಿಸುವವರು ಯಾರೂ ಇಲ್ಲ. ಇಹಲೋಕದ ವಿಷಯವಾಗಿ ಅತ್ಯಂತ ಔದಾಸೀನ್ಯಭಾವವನ್ನು ತಳೆದವಳಾದ ನಾನು ಬಾಳಲೇಕೆ? ಜೀವವೇ ಬೇಡವಾದ ಮೇಲೆ ಆತ್ಮಘಾತಪಾತಕಕ್ಕೆ ಬೆದರಿದರೆ ಹೇಗೆ?"

"ಅಮ್ಮಾ, ನಿನಗೆ ಜೀವವು ಬೇಡವಾಗಲಿಕ್ಕೆ ಅಂತಹ ಕಾರಣವಾದರೂ ಏನು ಘಟಿಸಿರುವದು? ಕುವರಸಿಂಹರು ನಿನ್ನನ್ನು ಹೊಟ್ಟೆಯ ಮಗಳಂತೆ ಭಾವಿಸಿರುವರು; ತಾರಾದೇವಿಯಾದರೂ ನಿನ್ನನ್ನು ಭಗಿನಿಯೆಂದು ತಿಳಿದಿರುವಳು; ನಿನ್ನ ಪತಿಯಾದರೂ ನಿನಗೆ ಯಾವ ರೀತಿಯಿಂದಲೂ ತೊಂದರೆ ಕೊಡುವದಿಲ್ಲ. ವಸ್ತುಸ್ಥಿತಿಯು ಹೀಗಿದ್ದ ಮೇಲೆ ಇಂತಹ ಘೋರ ಕೃತಿಯನ್ನಾಚರಿಸಲಿಕ್ಕೆ ಯತ್ನಿಸಬಹುದೆ?"

ಆ ಫಕೀರನು ತನ್ನ ವಿಷಯವಾಗಿದ್ದ ಎಲ್ಲ ಸಂಗತಿಯನ್ನು ಹೇಳಿದ್ದನ್ನು ಕೇಳಿ

ಅವಳು ವಿಸ್ಮಿತಳಾದಳು. ತಾನು ಇವನನ್ನು ಎಂದೂ ನೋಡದಿದ್ದರೂ, ಇವನು ಎಲ್ಲ ವೃತ್ತಾಂತವನ್ನು ಹೇಗೆ ತಿಳಿದನೆಂದು ಅವಳು ವಿಚಾರ ಮಾಡತೊಡಗಿದಳು. ಅವಳು ಸೂಕ್ಷ್ಮ ದೃಷ್ಟಿಯಿಂದ ಆ ಫಕೀರನನ್ನೊಮ್ಮೆ ನಿರೀಕ್ಷಿಸಿದಳು. ಅವಳು ಅವನನ್ನು ಎಂದೂ ಕಾಣದಿದ್ದ ಮೇಲೆ ಹೇಗೆ ಗುರತಿಸುವಳು? ಫಕೀರನು ಅವಳ ಮನೋಗತವನ್ನು ತಿಳಿದು:—

"ರಾಣೀ, ನೀನು ನನ್ನನ್ನು ಗುರತಿಸಲಾರೆ. ದಿನಾಲು ಸಾವಿರ ಸ್ಥಳಗಳಲ್ಲಿ ಅಲೆದಾಡುವವರಾದ ನಮ್ಮಂತಹ ಫಕೀರರಿಗೆ ದೊಡ್ಡ ಜನರಾದ ನಿಮ್ಮ ಪರಿಚಯವಾಗುತ್ತದೆ; ಆದರೆ ನಮ್ಮಂತಹ ಸಾವಿರಾರು ಫಕೀರರನ್ನು ನೀವು ನೋಡಿರುವಿರೆಂದ ಮೇಲೆ ಇವನು ಇಂತಹನೇ ಎಂಬದು ನಿಮಗೆ ತಿಳಿಯುವದು ಶಕ್ಯವಿಲ್ಲ. ಅಮ್ಮಾ, ನೀವು ಜೀವನದ ವಿಷಯವಾಗಿ ಇಷ್ಟು ನಿರ್ದಯರಾದ ಕಾರಣವನ್ನು ನಾನು ಕಂಡುಹಿಡಿದಿರುವೆನು. ನಿಮ್ಮ ಪತಿಯಾದ ಅಜಯಸಿಂಹನು ವಿರಾಗಿಯಾಗಿ ಹೋಗಿರುವದನ್ನು ಕೇಳಿ ನೀವು ಆತ್ಮನಾಶಮಾಡಿಕೊಳ್ಳಲು ಪಕ್ರಮಿಸಿರುವಿರಲ್ಲವೆ?"

ಆ ಫಕೀರನ ಮಾತುಗಳು ಒಂದಕ್ಕಿಂತ ಮತ್ತೊಂದು ಹೆಚ್ಚು ವಿಸ್ಮಯವನ್ನುಂಟು ಮಾಡತೊಡಗಿದವು. ಇವನೇನು ಫಕೀರನಾಗಿ ಬಂದ ದೇವನೋ, ದೇವಾಂಶವುಳ್ಳ ಫಕೀರನೋ? ತ್ರಿಕಾಲ ಜ್ಞಾನಿಯಾದ ಯೋಗಿಯೋ, ಯೋಗ ಬಲದಿಂದಾದ ತ್ರಿಕಾಲಜ್ಞಾನಿಯೋ? ಎಂದು ನಾನಾತರದ ವಿಚಾರದಲ್ಲಿ ಅವಳು ಮುಳುಗಿ ಹೋಗಿದ್ದಳು. ಅಸ್ವಾಧೀನ ಮನಸ್ಕಳಾದ ಅವಳಿಗೆ ಯಾವ ಮಾತಿನ ನಿರ್ಣಯವಾಗದೆ ದಿಙ್ಮೂಢಳಾಗಿ ನಿಂತಳು. ಅವನ ಮಾತಿಗೆ ಏನು ಉತ್ತರ ಕೊಡಬೇಕೆಂಬದು ಸಹ ಅವಳಿಗೆ ತಿಳಿಯದೆ ಹೋಯಿತು. ಅವಳು ನಿರುತ್ತರಳಾಗಿ ಸುಮ್ಮನೆ ನಿಂತದ್ದನ್ನು ನೋಡಿ ಆ ಫಕೀರನು ಮತ್ತೆ:—

"ಅಮ್ಮಾ, ನಿಮ್ಮಂತಹ ವಿಚಾರಶೀಲರು ಈ ಬಗೆಯಾಗಿ ಭ್ರಮಿಷ್ಠರಂತೆ ಆಚರಿಸತೊಡಗಿದ್ದನ್ನು ನೋಡಿ ನನಗೆ ವಿಷಾದವೆನಿಸುತ್ತದೆ. ಅಜಯಸಿಂಹರು ಗೃಹಸ್ಥಾಶ್ರಮೋಚಿತ ಕರ್ತವ್ಯವನ್ನಾಚರಿಸದೆ, ಈಗಾಗಲೆ ವಿರಕ್ತವೃತ್ತಿಯನ್ನು ಕೈಕೊಂಡದ್ದು ಯಥಾಸ್ಥಿತವಾದ ಮಾತೆಂದು ನಾನು ಅನ್ನಲಾರೆನು. ಸಂಸಾರದಲ್ಲಿಯಾದರೂ ಪಾರಮಾರ್ಥಜ್ಞಾನವನ್ನು ದೊರಕಿಸುವದಕ್ಕೆ ಬರುವದು. ಜನಕಾದಿಗಳು ಕರ್ಮನಿರತರಾಗಿ ರಾಜಯೋಗಿಗಳೆನಿಸಿಕೊಳ್ಳಲಿಲ್ಲವೆ? ಪ್ರಜಾಪಾಲನ ಕರ್ತವ್ಯ ಭಾರವುಳ್ಳವರೂ, ಗೃಹಸ್ಥಧರ್ಮದಲ್ಲಿದ್ದವರೂ ಆದ ಜನರು ಎಲ್ಲವನ್ನೂ ತ್ಯಜಿಸಿ ಅರಣ್ಯವನ್ನು ಸೇರುವದೆಂದರೆ, ಒಂದು ವಿಧದ ಪಾತಕವೆಂದೇ ಹೇಳಬಹುದು. ಇವೆಲ್ಲ ಮಾತುಗಳನ್ನು ನಿಮ್ಮೆದುರಿನಲ್ಲಿ ವಿವರಿಸುವದು ಈಗ ಅಪ್ರಯೋಜಕವಾಗಿರುವದು. ಪತಿಯು ಅಜ್ಞಾನವಶಾತ್ ಜಾರಿದರೆ, ಸತಿಯಾ

ದರೂ ಜಾರಬೇಕೆಂಬದು ಎಲ್ಲಿಯ ನೀತಿಯು? ರಾಣೀ, ಅಜಯಸಿಂಹನಲ್ಲಿ ಹುಟ್ಟಿದ ವಿರಕ್ತಿಯು ನಿಮ್ಮ ಮರಣದಿಂದ ಮತ್ತಿಷ್ಟು ದೃಢವಾಗಲಿಕ್ಕಿಲ್ಲವೆ? ಒಂದು ವೇಳೆ ಹಾಗಾದರೆ ಅವರಿಂದಾಗಬಹುದಾದ ರಾಷ್ಟ್ರಕಾರ್ಯಗಳು ನಿಂತು ಹೋಗಿ, ದೇಶಕ್ಕೆ ಹಾನಿಯೊದಗದಿರುವದೆ? ತಾಯಿ, ಪತಿಯು ಈಗ ವಿರಕ್ತನಾಗಿದ್ದರೂ ಅವನು ಬೇಗನೆ ಹಾದಿಗೆ ಬರುವನು. ನೀವು ಈ ವಿಷಯವಾಗಿ ನನ್ನ ಮಾತಿನಲ್ಲಿ ವಿಶ್ವಾಸವಿಟ್ಟು, ಈ ದುಷ್ಕಾರ್ಯವನ್ನು ಕೈಕೊಳ್ಳಬೇಡಿರಿ. ಅಕಸ್ಮಾತ್ತಾಗಿ ನಿಮ್ಮನ್ನು ಪತಿಯು ತ್ಯಜಿಸಿ, ವೈರಾಗ್ಯವೃತ್ತಿಯನ್ನು ಕೈಕೊಂಡು ಹೊರಟು ಹೋದುದರಿಂದ, ನಿಮ್ಮ ಮನಸ್ಸು ತಲ್ಲಣಗೊಂಡು ಆತ್ಮಘಾತಮಾಡಿಕೊಳ್ಳತೊಡಗಿರುವಿರಲ್ಲವೆ? ನಡೆಯಿರಿ; ನೀವು ಸುಮ್ಮನೆ ಮನೆಗೆ ತೆರಳಿರಿ. ನನ್ನ ಮಾತಿನಂತೆ ನೀವು ನಡೆದಿರೆಂದರೆ, ನಿಮ್ಮ ಭಾಗ್ಯೋದಯವು ಬೇಗನೆ ಆಗದಿರದೆಂದು ನಾನು ನಿಶ್ಚಯಪೂರ್ವಕವಾಗಿ ಹೇಳುವೆನು.''

ಫಕೀರನ ಮಾತುಗಳನ್ನು ಕೇಳಿ ರಾಣಿಗೆ ಪರಮಾನಂದವಾಯಿತು. ಅವಳು ಅವನನ್ನು ಪ್ರೇಮಪೂರ್ಣ ದೃಷ್ಟಿಯಿಂದ ನೋಡತೊಡಗಿದಳು. ಫಕೀರನು ನಿಜವಾಗಿಯೂ ತ್ರಿಕಾಲಜ್ಞಾನಿಯಾಗಿರುವನೆಂಬ ನಂಬಿಗೆಯು ಅವಳಿಗಾಯಿತು. ತನ್ನ ಪತಿಯ ದರ್ಶನವು ಬೇಗನೆ ಆಗಿ, ಅವನು ಸಂಸಾರ ನಿರತನಾಗುವನೆಂದು ಅವಳು ಸಂಭ್ರಮಗೊಂಡಳು. ಅವಿಚಾರದಿಂದ ಆತ್ಮಘಾತ ಮಾಡಿಕೊಳ್ಳಲು ಪ್ರವೃತ್ತಳಾದದ್ದಕ್ಕೆ ಅವಳು ತನ್ನನ್ನು ತಾನೇ ನಿಂದಿಸಿಕೊಳ್ಳತೊಡಗಿದಳು. ಜಗದಂಬೆಯ ಅನುಗ್ರಹದಿಂದ ಮಹಾತ್ಮನಾದ ಫಕೀರನ ವಾಣಿಯು ಸತ್ಯವಾಗಲೆಂದು ಅವಳು ಸರ್ವಮಂಗಲೆಯನ್ನು ಅನನ್ಯಭಾವದಿಂದ ಪ್ರಾರ್ಥಿಸಿದಳು.

''ಭಗವತಿ! ನಿನ್ನ ಕೃಪೆಯಿದ್ದರೆ ಯಾವದು ತಾನೇ ಅಸಾಧ್ಯವು? ಸ್ವಲ್ಪ ವೇಳೆಯಲ್ಲಿ ಇಹಲೋಕದಿಂದ ಬಿಡುಗಡೆಯಾಗಿ ಹೋಗಬೇಕೆಂಬ ನಿರಾಶಾಮನಸ್ಕಳಿಗೆ ಆಶಾಂಕುರವನ್ನು ಹುಟ್ಟಿಸುವ ಕಾರ್ಯವನ್ನು ನೀನೇ ಮಾಡಿದೆಯಾದ್ದರಿಂದ ನಿನ್ನ ಈ ಕೃತಿಯು ವ್ಯರ್ಥವಾಗಲಾರದೆಂದು ಭಾವಿಸುವೆನು.'' ಎಂದು ಕರಗಳನ್ನು ಜೋಡಿಸಿ ಜಗದಂಬೆಯನ್ನು ಸ್ತುತಿಸಿ, ನಂತರ ರಾಣಿಯು ಫಕೀರನನ್ನು ಕುರಿತು: —

''ಮಹಾತ್ಮರೆ ನಿಮ್ಮ ದೇವವಾಣಿಯಿಂದ ನನಗೆ ನಿರಾಶೆಯಲ್ಲಿ ಆಶಾಂಕುರವು ಹುಟ್ಟಿತು. ನಾನು ಚಾತಕಪಕ್ಷಿಯಂತೆ ಪತಿ ಮಾರ್ಗಪ್ರತೀಕ್ಷೆ ಮಾಡುತ್ತಿರುವೆನು. ಜಗದಂಬೆಯ ಅನುಗ್ರಹವು ಎಂದಾಗುವದೋ ನೋಡೋಣ.''

''ರಾಣೀ, ಈ ವಿಷಯದಲ್ಲಿ ನೀವು ನಿಶ್ಚಿಂತರಾಗಿರಿ. ನಾನು ನಿಮ್ಮ ಪತಿಯನ್ನು ಪ್ರವೃತ್ತಿ ಮಾರ್ಗಕ್ಕೆ ಹಚ್ಚುವೆನು.''

ಆ ಯುವತಿಗೆ ಆನಂದವಾಯಿತು ಆಗ ಅವಳು:--"ಸ್ವಾಮಿನ್, ತಮ್ಮ ಹೆಸರೇನೆಂಬದನ್ನು ಹೇಳಿದರೆ ಕೃತಜ್ಞಳಾಗುವೆನು. ಉಪಕಾರ ಕರ್ತೃಗಳ ಹೆಸರು ಗೊತ್ತಿರಬೇಕೆಂದು ಇಚ್ಛಿಸುವದು ಸ್ವಾಭಾವಿಕವಲ್ಲವೆ?"

"ಇದರಲ್ಲಿ ಉಪಕಾರವೇತರದು! ಸಾಧುಸಂತರು ಇಂತಹ ಕೃತಿಗಳನ್ನೆ ಮಾಡಬೇಕಲ್ಲದೆ, ಅವರಿಗೆ ಅನ್ಯಕಾರ್ಯಗಳೇನಿರುವವು? ನನ್ನ ಹೆಸರನ್ನು ಕೇಳಬೇಕೆಂದು ನೀವು ಇಚ್ಛಿಸುತ್ತೀರಲ್ಲವೆ? ನನಗೆ ಜನರು "ಫುಲಶಾಹ"ನೆನ್ನುವರು.

ರಾಣಿಯು ಮೆಟ್ಟಿ ಬಿದ್ದಳು. ಪರ್ಣಶಾಲೆಯಲ್ಲಿ ಅವನ ಪಾದಗಳನ್ನು ಹಿಡಿದಳು. ಫಕೀರನು ಅವಳನ್ನು ಹಿಡಿದೆತ್ತಿ ತಲೆಯ ಮೇಲೆ ತನ್ನ ವರದ ಹಸ್ತವನ್ನಿಟ್ಟನು.

---

## ಭವಿಷ್ಯ ಸೂಚನೆ.

"ನೀನು ಯಾರು?"

"ನಾನು ನಿಮ್ಮ ಸೇವಕನು."

"ಎಲಾ, ನೀನು ಕಳ್ಳನಿರುವೆ."

"ದೇವರೆ, ಏನು ಮಾತನಾಡುವಿರಿ?"

ಶಹಾಬಾದ ಜಿಲ್ಹೆಯ ಅಧಿಕಾರಿಯು ಆರಾ ಪಟ್ಟಣದಲ್ಲಿರುತ್ತಿದ್ದನು ಅವನು ಪಟ್ಟಣದ ಹೊರಗೆ ಒಂದು ವಿಶಾಲವಾದ ಸ್ಥಳದಲ್ಲಿಯ ಪ್ರಶಸ್ತವಾದ ಮಂದಿರದಲ್ಲಿ ವಾಸವಾಗಿದ್ದನು. ಆ ಅಧಿಕಾರಿಯು ಒಳ್ಳೇ ವಿಲಾಸಿಯಿದ್ದುದರಿಂದ ತನ್ನ ಗೃಹೋದ್ಯಾನದಲ್ಲಿ ಅನೇಕ ಬಗೆಯ ಫಲ ಪುಷ್ಪ-ವೃಕ್ಷಗಳನ್ನು ಹಚ್ಚಿಸಿ, ಅವುಗಳ ಪೋಷಣೆಯ ಬಗ್ಗೆ ಚೆನ್ನಾಗಿ ಲಕ್ಷ್ಯಗೊಡುತ್ತಿದ್ದನು. ಆ ಅಧಿಕಾರಿಯು ತನ್ನ ಉದ್ಯಾನದಲ್ಲಿ ಅವನ ಸೌಂದರ್ಯವನ್ನು ನಿರೀಕ್ಷಿಸುತ್ತ ಕುಳಿತಿದ್ದನು. ಪ್ರಭಾತಕಾಲವಿದ್ದುದರಿಂದ ಅನೇಕ ಬಗೆಯ ಪುಷ್ಪಗಳು ಅರಳಿ, ಸುತ್ತಲೂ ಸುಗಂಧವನ್ನು ಪಸರಿಸಿದ್ದವು. ಕೀರಕೋಕಿಲೆಗಳು ವೃಕ್ಷಶಾಖೆಯಲ್ಲಿ ಕುಳಿತು ತಮಿಮಣ್ಣಿಗಳನ್ನು ಹೇಳುತ್ತ ಶ್ರುತಿಮನೋಹರವಾಗಿ ಧ್ವನಿಗೈಯತೊಡಗಿದ್ದವು. ಆ ಆಂಗ್ಲಅಧಿಕಾರಿಯು ಈ ನೈಸರ್ಗಿಕ ವನಶೋಭೆಯಿಂದ ಆಹ್ಲಾದಗೊಳ್ಳುತ್ತ ಕಾಷ್ಠಾಸನದ ಮೇಲೆ ಮಂಡಿಸಿದ್ದನು. ಆಗ ತನ್ನ ಉದ್ಯಾನದೊಳಗಿನ ಮಲ್ಲಿಕಾಮಂಟಪದೊಳಗಿನ ಪುಷ್ಪಗಳನ್ನು ಯಾವನೋ ಒಬ್ಬನು ಕೊಯ್ಯುತ್ತಿರುವದು ಅವನ ದೃಷ್ಟಿಗೆ ಬಿದ್ದಿತು. ಕೂಡಲೆ ಅವನು: "ನೀನು ಯಾರು?"

ಎಂದು ದರ್ಪೋಕ್ತಿಯಿಂದ ವಿಚಾರಿಸಿದನು. ಆಗಂತುಕನು ಅಂಜದೆ ಅಳುಕದೆ ಸರಳವಾದ ವಾಣಿಯಿಂದ ಉತ್ತರ ಕೊಟ್ಟದ್ದು ಆ ಅಧಿಕಾರಿಗೆ ಸಹನವಾಗದೆ, ತನ್ನ ಅನುಚರರನ್ನು ಕರೆದು ಆ ಮನುಷ್ಯನನ್ನು ಹಿಡಿದು ತರುವದಕ್ಕೆ ಆಜ್ಞಾಪಿಸಿದನು. ಕೂಡಲೆ ಅವನು ಆ ಸಾಹೇಬನ ಬಳಿಗೆ ತಾನಾಗಿ ಹೋಗಿ ನಿಂತನು. ಅವನನ್ನು ನೋಡಿ ಸಾಹೇಬನು ತೀಕ್ಷ್ಣಧ್ವನಿಯಿಂದ:—

"ಏನೋ ಫಕೀರಾ, ನೀನು ಈ ಉದ್ಯಾನದೊಳಗಿನ ಹೂವುಗಳನ್ನೇಕೆ ಕಳವು ಮಾಡಿದೆ?"

"ನಾನು ಕಳವು ಮಾಡಿಲ್ಲ; ನಿಮ್ಮ ಸಮಕ್ಷ ತೆಗೆದುಕೊಂಡಿರುವೆನು. ಪರಮಾತ್ಮನಿಗೆ ಅರ್ಪಿಸುವದಕ್ಕೆ ಅವನ ಸೃಷ್ಟಿಯೊಳಗಿನ ಪತ್ರ ಪುಷ್ಪಗಳಂತಹ ಪದಾರ್ಥಗಳನ್ನು ತೆಗೆದುಕೊಂಡರೆ ಕಳವು ಮಾಡಿದಂತಾಗುವದೆ?"

"ನೀನು ಒಳ್ಳೆಯ ಮೋಸಗಾರನಿರುವಂತೆ ತೋರುವೆ. ನಿನ್ನ ಈ ಅಪರಾಧಕ್ಕೆ ಯೋಗ್ಯ ಶಾಸನವು ವಿಧಿಸಲ್ಪಡುವದೆಂಬದನ್ನು ಮರೆಯಬೇಡ." ಎಂದು ಸಾಹೇಬನು ನುಡಿದು, ತನ್ನ ಸೇವಕರನ್ನು ಕುರಿತು ಅಧಿಕಾರಯುಕ್ತ ವಾಣಿಯಿಂದ:—"ಯಾರಿರುವಿರೊ ಅಲ್ಲಿ? ಬೇಗನೆ ಬರ್ರಿ ಈ ಫಕೀರನು ನಮ್ಮ ತೋಟದೊಳಗಿನ ಹೂಗಳನ್ನು ಕೊಯ್ದಿರುವದರಿಂದ ಇವನನ್ನು ಹಿಡಿದು ಬಂಧಿಸಿರಿ."

ಸಾಹೇಬನು ಹೀಗೆ ಅಪ್ಪಣೆಯಿತ್ತ ಕೂಡಲೆ ಸೇವಕರು ಗಾಬರಿಗೊಂಡರು. ಒಡೆಯನ ಅಪ್ಪಣೆಯ ಮೇರೆಗೆ ಆ ಫಕೀರನನ್ನು ಹಿಡಿಯುವ ಧೈರ್ಯವು ಅವರಲ್ಲಿ ಯಾರಿಗೂ ಹುಟ್ಟಲಿಲ್ಲ. ಆಗ ಅವರೊಳಗಿನವನೊಬ್ಬನು ಸಾಹೇಬನಿಗೆ ಕೈಮುಗಿದು, ವಿನಯದಿಂದಲೂ ಭಯದಿಂದಲೂ:—

"ಹುಜೂರ, ಇವರು ಫಲಹಾರರೆಂಬ ಹೆಸರಿನ ಮಹಾ ಸಾಧುಗಳಿರುವರು. ಇವರಿಗೆ ಸರ್ವ ಜನರೂ ಹೂಗಳನ್ನು ಕೊಡುತ್ತಿರುವರು. ನಾವು ಈ ಮಹಾತ್ಮರ ಅಂಗಸ್ಪರ್ಶ ಮಾಡಲಾರೆವು. ಇವರ ಮೇಲೆ ಯಾರಾದರೂ ಕೈ ಮಾಡಿದರೆ ಅವನ ಸರ್ವಸ್ವವೂ ನಾಶವಾಗಿ ಹೋಗುವದು."

ಒಬ್ಬ ಸೇವಕನು ಹೀಗೆ ಮಾತನಾಡಿದ ಕೂಡಲೆ ಸಾಹೇಬನ ಸಂತಾಪವು ಮಸ್ತಕಕ್ಕಡರಿತು. ಆಗ ಅವನು ತಾಳ್ಮೆಯನ್ನು ಹೊಂದಿ ಮತ್ತೊಬ್ಬನಿಗೆ ಫಲಹಾರನನ್ನು ಹಿಡಿಯುವ ಬಗ್ಗೆ ಆಜ್ಞಾಪಿಸಿದನು. ಕಡೆಗೆ ಎಲ್ಲ ಜನರೂ ಈ ಕಾರ್ಯವನ್ನು ಮಾಡಲಾರೆವೆಂದು ಖಂಡಿತವಾಗಿ ಹೇಳಿದರು. ಅನುಚರರು ಹೀಗೆ ತನ್ನ ಆಜ್ಞಾಭಂಗ ಮಾಡಿದ್ದರಿಂದ ಸಾಹೇಬನು ಕ್ರೋಧಾಂಧನಾಗಿ:—

"ಉನ್ಮತ್ತರೆ, ನಿಮ್ಮೆಲ್ಲರನ್ನು ಕೆಲಸದಿಂದ ತೆಗೆದಿರುವೆನು. ಆಜ್ಞಾಧಾರಕ

ತ್ವವಿಲ್ಲದ ನಿಮ್ಮಂತಹ ಸೇವಕ ವರ್ಗದ ಅಗತ್ಯವು ನನಗಿರುವದಿಲ್ಲ. ಎಲ್ಲರೂ ಈಗಲೆ ಇಲ್ಲಿಂದ ತೆರಳಿರಿ;'' ಎಂದು ಸಾಹೇಬನು ನುಡಿದ ಕೂಡಲೆ ಆ ಸೇವಕರು ಒಡೆಯನಿಗೆ ಕೊನೆಯ ಮುಜುರೆಯನ್ನರ್ಪಿಸಿ ಅಲ್ಲಿಂದ ಹೊರಟು ಹೋದರು. ಫಕೀರನು ಈ ದೃಶ್ಯವನ್ನು ನೋಡಿ ಖೇದಪಟ್ಟನು. ತನ್ನ ಸಲುವಾಗಿ ಪಾಪ! ಈ ಬಡಜೀವಿಗಳಿಗೆ ಅಪಾಯ ತಟ್ಟಿತೆಂದು ಅವನು ಮನದಲ್ಲಿ ಮರುಗಿದನು. ಆಗ ಅವನು ದೀನಸ್ವರದಿಂದ: —

''ಬಿಸ್ಮಿಲ್ಲಾ, ಅವರು ಮಾಡಿದ ಅಪರಾಧವೇನು? ನಾನು ಮಾಡಿದ ತಪ್ಪಿಗಾಗಿ ಎರಡನೆಯವರಿಗೆ ಶಿಕ್ಷೆಯನ್ನು ವಿಧಿಸುವದು ಇದೆಲ್ಲಿಯ ನ್ಯಾಯವು?''

''ನೀನು ಅಧಿಕಪ್ರಸಂಗತನ ಮಾಡಬೇಡ. ಅವರು ನನ್ನ ಆಜ್ಞೆಯನ್ನು ಮೀರಿದ್ದರಿಂದ ದಂಡನೆಗೊಳಗಾದರು. ನೀನು ನನ್ನ ತೋಟದೊಳಗಿನ ಹೂಗಳನ್ನು ಕದ್ದಿರುವೆಯಾದ್ದರಿಂದ ನಿನಗಾದರೂ ಯೋಗ್ಯ ಶಾಸನವು ವಿಧಿಸಲ್ಪಡುವದು.''

''ನಾನು ಹೂಗಳನ್ನು ಕಳವು ಮಾಡಿಲ್ಲ; ಬುದ್ಧಿಪೂರ್ವಕವಾಗಿ ತೆಗೆದುಕೊಂಡಿರುವೆನು.''

''ಭಲೆ! ನೀನು ಜಾಣನಿರುವೆ. ದೇಶದೇಶಗಳನ್ನಲೆಯುತ್ತ ಹೊಟ್ಟೆ ಹೊರೆಯುವವರಾದ ನಿನ್ನಂತಹ ಫಕೀರರು ಒಳ್ಳೆಯ ಮಾತಾಳಿಗಳಿರುತ್ತಾರೆ.''

''ನಾನು ದೇಶದೇಶಗಳನ್ನಲೆಯುತ್ತಿರುವದಿಲ್ಲ; ಇದೇ ಹಿಂದಭೂಮಿಯು ನನ್ನ ಮಾತೃಭೂಮಿಯು. ಇದನ್ನು ಬಿಟ್ಟು ಅನ್ಯ ದೇಶವನ್ನು ನಾನು ಕಂಡಿಲ್ಲ. ದೇಶದೇಶಗಳನ್ನಲೆಯುವ ಜನರು ನೀವಂದಂತೆ ಮಾತಾಳಿಗಳಿರಬಹುದು.''

''ಹೆಚ್ಚು ಮಾತನಾಡಬೇಡ. ನೀನು ಮಾಡಿದ ಅಪರಾಧಕ್ಕಾಗಿ ನಿನಗೆ ಕಾರಾಗೃಹದ ಶಿಕ್ಷೆಯನ್ನು ವಿಧಿಸುವೆನು.''

''ನಮ್ಮಂತಹ ಫಕೀರರಿಗೆ ಕಾರಾಗೃಹವೂ ಅಷ್ಟೇ; ಅನುಗೃಹವೂ ಅಷ್ಟೇ! ನಮ್ಮಂತಹ ಸಾಧುಸಂತರಿಗೆ ಪೀಡೆಕೊಡುವ ದುರ್ಬುದ್ಧಿಯು ನಿಮ್ಮಲ್ಲಿ ಹುಟ್ಟಿದ್ದನ್ನು ನೋಡಿದರೆ, ನಿಮಗೆ ಅನಿಷ್ಟ ಕಾಲವು ಸಮೀಪಿಸಿರುವದೆಂದು ತಿಳಿಯುವದು. ನಿಜವು; ಭಾವೀಪರಿಸ್ಥಿತಿಯನ್ನು ಸೂಚಿಸುವದಕ್ಕಾಗಿಯೇ ಅಧಿಕಾರಿವರ್ಗದವರಿಂದ ಅನುಚಿತ ಕೃತಿಯು ಘಟಿಸುತ್ತಿರುವದು. ಪ್ರಜಾಜನರ ಕ್ಷೋಭೆಯುಂಟಾಗುವಂತೆ ವರ್ತನಪಡುವ ಅಧಿಕಾರಿಗಳಿಗೆ ಅದರ ಫಲವು ದೊರೆಯದಿರುವದೆ?'' ಎಂದು ಫಕೀರನಾದ ಘುಲಶಾಹನು ನುಡಿದು, ಆಕಾಶವನ್ನು ನೋಡಿ ದೀರ್ಘ ನಿಶ್ವಾಸ ಬಿಟ್ಟು, ತರುವಾಯ ಆ ಸಾಹೇಬನ ಕಡೆಗೆ ಮುಖವನ್ನು ತಿರುಗಿಸಿ: ಆಂಗ್ಲರಾದ ನಿಮ್ಮ ಪುಣ್ಯವು ಬಲವತ್ತರವಿರುವದು. ಭಾವೀ

ಸ್ವಾತಂತ್ರ್ಯ ಸಂಗ್ರಾಮದಲ್ಲಿ ನಿಮಗೆ ಮಹಾವಿಜಯವು ಪ್ರಾಪ್ತವಾಗಬೇಕೆಂದು ಈಶಸಂಕೇತವಿದ್ದಂತೆ ತೋರುವದು. ಭಾರತೀಯರು ತಮ್ಮೊಳಗಿನ ಅನೇಕ ದುರ್ಗುಣಗಳಿಂದ ಅಧೋಗತಿಯನ್ನು ಹೊಂದುವರು. ದೇವತಾಘಟನೆಯು ಮುಂದೆ ಯಾರ ಯತ್ನವೂ ನಡೆಯದು. ನಾನು ನಿಮ್ಮ ಹಾಗು ನಿಮ್ಮ ಜ್ಞಾತಿ ಬಾಂಧವರ ಹಿತಕ್ಕಾಗಿ ಒಂದು ಬೀಜಮಂತ್ರವನ್ನು ಹೇಳುವೆನು; ಅದನ್ನು ನೀವು ಸ್ವಜನರಿಗೆಲ್ಲ ಅರುಹಿರಿ. ನಿಸ್ವಾರ್ಥಬುದ್ಧಿಯಿಂದಲೂ, ಸಮತಾ ದೃಷ್ಟಿಯಿಂದಲೂ, ಪ್ರೇಮಭಾವದಿಂದಲೂ ಪ್ರಜೆಗಳೊಡನೆ ಏಕಜೀವಿಗಳಾಗಿ ಎಲ್ಲಿಯ ವರೆಗೆ ರಾಜನೂ ರಾಜಪರಿವಾರವೂ ನಡೆಯುವದೋ, ಅಲ್ಲಿಯ ವರೆಗೆ ಅವರ ಅಸ್ತಿತ್ವವು ರಾಜ್ಯದಲ್ಲಿ ಉಳಿಯುವದು. ಅವರು ಎಂದು ಜಡಸ್ವಾರ್ಥಲೋಲುಪರಾಗುವರೋ, ಎಂದು ಅವರಲ್ಲಿ ವೈಷಮ್ಯ ಭಾವವು ಉದಯಿಸುವದೋ, ಎಂದು ಅವರ ಹೃದಯವು ಪ್ರಜಾಜನರ ವಿಷಯಕ್ಕೆ ಕಠೋರ ಭಾವನೆಯನ್ನು ಹೊಂದುವದೋ ಅಂದೇ ದೇಶದಲ್ಲಿ ಸ್ವಾತಂತ್ರ್ಯದ ರಣಕುಂಡವು ಪ್ರಜ್ವಲಿತವಾಗುವದು; ದೇಶಕ್ಕಾಗಿ ಜನರು ಬಲಿದಾನ ಮಾಡಲು ಸಿದ್ಧರಾಗುವರು. ಪ್ರಜಾಕ್ಷೋಭೆಯೆಂಬ ಜಾಜ್ವಲ್ಯಮಾನವಾದ ಜ್ವಾಲೆಯು ಸರ್ವನಾಶ ಮಾಡುವದೆಂಬ ಮಾತು ಚಿರಸ್ಮರಣೀಯವಿರುವದು!

ಘುಲಶಾಹನು ಗಂಭೀರವಾಣಿಯಿಂದ ಹೀಗೆ ನುಡಿದ ಕೂಡಲೆ ಆ ಸಾಹೇಬನ ಪಿತ್ತವು ನೆತ್ತಿಗೇರಿತು. ಇವನೊಬ್ಬ ಗುಪ್ತಚರನಿರಬಹುದೇನೆಂದು ಅವನು ವಿಚಾರಕ್ಕೊಳಗಾದನು; ಮತ್ತೊಂದು ಕ್ಷಣದಲ್ಲಿ ಅವನ ವಿಚಾರವು ಬೇರೆಯಾಯಿತು. ಯಾಕಂದರೆ ಅವನ ಸೇವಕರು ಇವನ ಗುರುತು ಹಿಡಿದದ್ದು ಆ ಸಾಹೇಬನ ಸ್ಮರಣೆಯಲ್ಲಿ ಬಂದಿತು. ಇವನೊಬ್ಬ ಭ್ರಮಿಷ್ಟ ಫಕೀರನಿರಬಹುದೆಂದೂ, ಅಂತೆಯೇ ಮನಬಂದಂತೆ ಮಾತನಾಡತೊಡಗಿರುವನೆಂದೂ ಅವನು ಭಾವಿಸಿದನು. ಹೇಗಿದ್ದರೂ ಇವನನ್ನು ಸೆರೆಮನೆಯಲ್ಲಿರಿಸಬೇಕೆಂದು ನಿರ್ಧರಿಸಿ:—

'ಏನೋ ಫಕೀರಾ, ನೀನು ಗೌರವಮಂಡಿತರಾದ ಆಂಗ್ಲರ ವಿಷಯಕ್ಕೆ ಕುಭಾವನೆಯುಳ್ಳವನಾಗಿರುವೆ. ನಿನ್ನನ್ನು ಹೀಗೆಯೇ ಬಿಟ್ಟರೆ ಜನರ ಮುಂದೆ ಇಲ್ಲದ್ದೊಂದು ಹೇಳಿ ರಾಜದ್ರೋಹವನ್ನು ಹಬ್ಬಿಸುವದಕ್ಕೆ ಪ್ರವೃತ್ತನಾಗುವೆಯೆಂದು ನನ್ನ ನಿದರ್ಶನಕ್ಕೆ ಬಂದಿದೆ. ಇನ್ನು ನಿನಗೆ ಕ್ಷಮೆಯು ದೊರೆಯಲಾರದು."

"ವಸ್ತುಸ್ಥಿತಿಯನ್ನು ನಿವೇದಿಸಿರುವೆನು. ಆಂಗ್ಲರೂ ಹಿಂದುಗಳೂ ಮುಸಲಮಾನರೂ ಜಗತ್ತಿನೊಳಗಿನ ಇನ್ನುಳಿದ ಜನರೂ ನನಗೆ ಸಮಾನರಾಗಿ ತೋರುವರು. ನಾನು ರಾಜದ್ರೋಹವನ್ನಾಗಲಿ, ಪ್ರಜಾದ್ರೋಹವನ್ನಾಗಲಿ ಮಾಡು

ವವನಲ್ಲ. ನೀಚ ವೃತ್ತಿಯ ಜನರು ಯಾರಿದ್ದರೂ ಅವರ ಅನ್ಯಾಯಗಳನ್ನು ಬೈಲಿಗಿಡುವದಕ್ಕೆ ನನಗೆ ಯಾರ ಅಂಜಿಕೆಯೂ ಇರುವದಿಲ್ಲ. ಅನ್ಯಾಯಗಳು ಎಂದೂ ಮುಚ್ಚಲಾರವು. ಆಂಗ್ಲ ಅಧಿಕಾರಿಗಳು ಮಾಡಿದ ಅನ್ಯಾಯಕ್ಕಾಗಿ ದೇಶದಲ್ಲಿ ಸ್ವಾತಂತ್ರ್ಯದ ರಣಕುಂಡವು ಬೇಗನೆ ಹೊತ್ತಿಸಲ್ಪಡುವದು. ಪೆಟ್ಟು ತಿಂದವರಿಗೆ ತಿರುಗಿ ಹೊಡೆಯಿರೆಂದು ಯಾರೂ ಹೇಳಬೇಕಾಗಿಲ್ಲ. ಭಾವೀ ಸ್ವಾತಂತ್ರ್ಯಸಂಗ್ರಾಮವು ಆಂಗ್ಲರನ್ನು "ತ್ರಾಹಿ ತ್ರಾಹಿ" ಎಂದೆನಿಸದಿದ್ದರೆ ನಾನು ಅಗ್ನಿಕಾಷ್ಠ ಭಕ್ಷಣೆ ಮಾಡೇನು!"

ಫುಲಶಾಹನ ಅರುಚಿಕಾರಕಗಳಾದ ಈ ಮಾತುಗಳು ಸಾಹೇಬನಿಗೆ ತಿರಸ್ಕಾರವನ್ನುಂಟು ಮಾಡಿದವೆಂದು ಬೇರೆ ಹೇಳುವ ಕಾರಣವಿಲ್ಲ. ಅವನು ಆ ಫಕೀರನನ್ನು ಕಾರಾಗೃಹದಲ್ಲಿ ಹಾಕುವದನ್ನು ನಿಶ್ಚಯಿಸಿದನು. ಅವನ ಎಲ್ಲ ಸೇವಕರು ಕೆಲಸದಿಂದ ಬಿಡುಗಡೆಯಾಗಿ ಹೋದದ್ದರಿಂದ, ಇವನನ್ನು ಹೇಗೆ ಬಂಧಿಸಬೇಕೆಂಬದು ಸಾಹೇಬನಿಗೆ ತಿಳಿಯದಾಯಿತು. ಕಡೆಗೆ ತಾನೇ ಅವನ ಕೈಯನ್ನು ಹಿಡಿದು:—

"ಎಲೋ ಫಕೀರಾ! ಕಾರಾಗೃಹದಲ್ಲಿ ನಡೆ." ಎಂದು ನುಡಿಯಲು, ಫುಲಶಹಾನು ಧೀರೋದಾತ್ತ ಮುಖಮುದ್ರೆಯಿಂದ:—"ಅವಶ್ಯ! ಅವಶ್ಯ!" ಎಂದೆನ್ನುತ್ತ ಸೆರೆಮನೆಯಲ್ಲಿ ಹೋದನು.

ಸಾಹೇಬನು ಅವನನ್ನು ಕಾರಾಗೃಹದಲ್ಲಿ ಹಾಕಿ ಬೀಗದ ಕೈಗಳನ್ನು ತನ್ನ ಬಳಿಯಲ್ಲಿರಿಸಿಕೊಂಡನು. ಕಾವಲಿಗೆ ಶಸ್ತ್ರಧಾರಿಗಳಾದ ಹೊಸ ಸೇವಕರನ್ನಿರಿಸಿದನು. ಆಗ ಅವನ ಮನಸ್ಸು ಶಾಂತವಿದ್ದಿಲ್ಲ. ಯಾವದೊ ಒಂದು ಅಜ್ಞಾತ ಸಂಗತಿಯಿಂದ ತಳಮಳಗೊಳ್ಳತೊಡಗಿತ್ತು. ಇಂದು ತನ್ನ ಮನಸ್ಸು ಇಷ್ಟೇಕೆ ಉದ್ವಿಗ್ನವಾಗಿರುವದೆಂಬದರ ಒಗ್ಗೆ ತನ್ನಲ್ಲಿ ತಾನೇ ವಿಚಾರಿಸತೊಡಗಿದ್ದನು. ಎಷ್ಟುಹೊತ್ತಿನ ವರೆಗೆ ಆಲೋಚನೆ ಮಾಡಿದರೂ, ಮನಸ್ಸಿನೊಳಗಿನ ಶಂಕೆಗೆ ಸಮರ್ಪಕವಾದ ಉತ್ತರವೇ ದೊರೆಯದಾಗಲು, ಅವನು ಮತ್ತಷ್ಟು ತೊಂದರೆಯಲ್ಲಿ ಮುಣುಗಿದನು.

ಫುಲಶಾಹನನ್ನು ಸೆರೆಮನೆಯಲ್ಲಿರಿಸಿ ಕೃತಕೃತ್ಯನಾದನೆಂದು ಆ ಆಂಗ್ಲ ಅಧಿಕಾರಿಯು ತನ್ನ ದಿವಾಣಖಾನೆಯಲ್ಲಿ ಕುಚಾಸನದ ಮೇಲೆ ಕುಳಿತುಕೊಂಡಿದ್ದನು. ಮನಸ್ಸಿನಲ್ಲಿ ಸಮಾಧಾನವಿದ್ದಿಲ್ಲ. ಅಷ್ಟರಲ್ಲಿ "ಅಲಹಂದುಲಿಲ್ಲಾ!" ಎಂಬ ಗಂಭೀರ ಸ್ವರವು ಅವನ ಕರ್ಣರಂಧ್ರವನ್ನು ಪ್ರವೇಶಿಸಿತು. ಕೂಡಲೆ ಎದ್ದು ಎದುರಿನಲ್ಲಿದ್ದ ವಾತಾಯನದಲ್ಲಿ ನೋಡಲು, ಫುಲಶಾಹನು ಹೋಗುತ್ತಿರುವದು ಅವನ ದೃಷ್ಟಿಗೆ ಬಿತ್ತು. ಕೂಡಲೆ ಅವನು ತನ್ನ ಜೇಬಿನಲ್ಲಿ

ಕೈಹಾಕಲು ಸೆರೆಮನೆಯ ಬೀಗದ ಕೈಯು ಇತ್ತು! ಆಗ ಅವನು ಎದ್ದು ಕಾರಾಗೃಹದ ಬಾಗಿಲನ್ನು ನೋಡಲು ಬೀಗವು ಹಾಕಿದಂತೆಯೇ ಇತ್ತು; ಕಾವಲಾದರೂ ಯಥಾಸ್ಥಿತವಾಗಿಯೇ ಇತ್ತು. ಅವನು ವಿಸ್ಮಿತನಾಗಿ ಬಾಗಿಲ ತೆಗೆದು ನೋಡಲು ಅಲ್ಲಿ ಘುಲಶಾಹನು ಇದ್ದಿಲ್ಲ! ಕೂಡಲೆ ಅವನನ್ನು ಹಿಡಿಯುವದಕ್ಕೆ ತನ್ನ ಸಶಸ್ತ್ರ ದೂತರನ್ನು ನಾಲ್ಕೂ ಕಡೆಗೆ ಕಳಿಸಿದನು. ಅಷ್ಟರಲ್ಲಿ ಅವನು ಎತ್ತ ಕಡೆಯಲ್ಲಿಯೋ ಮಾಯವಾಗಿದ್ದನು! ಸಾಹೇಬನು ಘುಲಶಾಹನ ಈ ಅಘಟಿತ ಘಟನೆಯಿಂದ ಹುಚ್ಚನಂತಾದನು. ಅವನು ನಿಜವಾಗಿ ಮಹಾತ್ಮನಿರಬಹುದೆಂದು ಅವನ ಭಾವನೆಯಾಯಿತು. ಕೂಡಲೆ ಅವನು ಹೇಳಿದ ಭವಿಷ್ಯ ಸೂಚನೆಯು ಜ್ಞಾಪಕವಾಗಲು, ಆ ಆಂಗ್ಲ ಪುರುಷನ ಎದೆಯೊಡೆದು ನೀರಾಯಿತು. ಮಹಾನುಭಾವನೂ, ತ್ರಿಕಾಲಜ್ಞಾನಿಯೂ ಆದ ಫಕೀರನ ನುಡಿಯಲ್ಲಿ ಸತ್ಯಾಂಶವಿರುವದೆಂದು ಅವನಿಗೆ ನಂಬಿಗೆಯಾದ್ದರಿಂದ ಅವನ ಭವಿಷ್ಯ ಸೂಚನೆಯು ಆ ಅಧಿಕಾರಿಯನ್ನು ಧೃತಿಗುಂದಿಸಿತು!

---

## ಬಂಡಾಯದ ಬೇಗೆ!

ಹದಿನೆಂಟುನೂರಾ ಐವತ್ತೇಳನೆಯ ಕ್ರಿಸ್ತಾಬ್ದವು ಭರತಖಂಡದ ಇತಿಹಾಸದಲ್ಲಿ ಚಿರಸ್ಮರಣೀಯವಾಗುವದು. ಈ ಯುಗವು ಇಡೀ ಭರತಭೂಮಿಗೆ ನೂತನ ಸ್ವರೂಪವನ್ನುಂಟುಮಾಡಿತು. ಭಾರತವರ್ಷದಲ್ಲಿ ಎಂದೂ ಆಗದೆ ಇದ್ದಂತಹ ಕ್ರಾಂತಿಯು ಇದೇ ವರ್ಷ ಘಟಿಸಿತು ಇದೇ ವರ್ಷವು ಭಾರತ ಭೂಮಿಯನ್ನು ಏಕಛತ್ರಾಧಿಪತ್ಯಕ್ಕೆ ಒಳಪಡಿಸಿತು. ಎಲ್ಲ ರಾಜರೂ ಮಹಾರಾಜರೂ ಸಂಸ್ಥಾನಾದಿಪತಿಗಳೂ ಜಹಾಗೀರದಾರರೂ ಇದೇ ವರ್ಷದಲ್ಲಿ ಆಂಗ್ಲವಚಃಸ್ಸಿಗೊಳಗಾದರು.

ಲಾರ್ಡ ಡಲಹೌಸಿಯ ಆಳಿಕೆಯು ಹಿಂದುಗಳ ಮನಸ್ಸಿನ ಮೇಲೆ ದುಷ್ಪರಿಣಾಮವನ್ನುಂಟುಮಾಡಿತೆಂಬದರಲ್ಲಿ ವಾದವಿಲ್ಲ. ನಿಪುತ್ರಿಕ ಜನರು ಪೋಷ್ಯಪುತ್ರರನ್ನು ತೆಗೆದುಕೊಳ್ಳಬಾರದೆಂಬ ಕಟ್ಟಪ್ಪಣೆಯಾದ್ದರಿಂದ ಸಂತಾನಹೀನ ರಾಜಪರಿವಾರವು ಕ್ಷುಬ್ಧವಾಯಿತು. ಆಂಗ್ಲರ ವಶದಲ್ಲಿರುವ ಹಿಂದು ಸೈನಿಕರ ಮನಸ್ಸು ಕೆಲವು ಕಾರಣಗಳಿಂದ ಕಲುಷಿತವಾಗಿತ್ತು. ರಾಜ್ಯಗಳನ್ನು ಕಳೆದುಕೊಂಡ ನಿಪುತ್ರಿಕ ರಾಜಪರಿವಾರವೂ ಬೇರೆ ಕೆಲವು ಪ್ರಮುಖರೂ ಸೈನ್ಯವನ್ನು ಒಡೆಯಿಸುವ ಕಾರಸ್ಥಾನಗಳನ್ನು ರಚಿಸತೊಡಗಿದರು.

ಲಾರ್ಡ ಡಲಹೌಸಿಯು ಸ್ವದೇಶಕ್ಕೆ ತೆರಳಿದೊಡನೆಯೆ ಲಾರ್ಡ ಕ್ಯಾನಿಂಗನು ಹಿಂದುಸ್ಥಾನದ ಸರ್ವಾಧಿಪತಿಯಾಗಿ ಬಂದನು. ಮೊದಲು ಅವನಿಗೆ ದೇಶದಲ್ಲಿ ಹೊತ್ತುತ್ತಿರುವ ಬೇಗೆಯು ಗಂಧನೇ ಗೊತ್ತಿರಲಿಲ್ಲ. ಆಂಗ್ಲರಾಳಿಕೆಯು ಹಿಂದುಗಳ ಅಂತಃಕರಣವನ್ನು ಕಲುಷಿತ ಮಾಡಿರುವದೆಂಬದನ್ನು ಅವನು ತಿಳಿದಿದ್ದಿಲ್ಲ. ಝಾಂಸಿಯ ಮಹಾರಾಣೀ ಲಕ್ಷ್ಮೀಬಾಯಿ, ಅಯೋಧ್ಯೆಯ ಮೌಲವೀ ಸಾಹೇಬ, ಶ್ರೀಮಂತ ಬಾಜೀರಾಯನ ದತ್ತಪುತ್ರನಾದ ನಾನಾಸಾಹೇಬ ಪೇಶವೆ, ತಾತ್ಯಾ ಟೋಪಿ, ನರಗುಂದದ ಬಾಬಾಸಾಹೇಬ ಭಾವೆ, ಮುಂಡರಗಿಯ ಭೀಮರಾಯ ಮೊದಲಾದ ಅರಸು-ಅರಸಿಯರೂ, ಸಂಸ್ಥಾನಿಕರೂ, ಜಹಾಗೀರದಾರರೂ, ಸರದಾರರೂ, ಇವರಲ್ಲದೆ ಆಂಗ್ಲರ ವಶದೊಳಗಿನ ಏತದ್ದೇಶೀಯ ಸೈನಿಕರೂ ದೇಶದ ಸ್ವಾತಂತ್ರ್ಯಕ್ಕಾಗಿ ಆತ್ಮಬಲಿದಾನ ಮಾಡಬೇಕೆಂದು ಗುಪ್ತ ಕಾರಸ್ಥಾನವನ್ನು ನಡೆಯಿಸಿದ್ದರು. ಅದರ ಗಂಧವಾರ್ತೆಯು ಮೊದಲು ಸರ್ವಾಧಿಪತಿಗೆ ಗೊತ್ತಾಗಿದ್ದಿಲ್ಲ. ಹಿಂದುಗಳು ಆಂಗ್ಲರ ವಿರುದ್ಧವಾಗಿ ಕಾರಸ್ಥಾನವನ್ನು ಅತ್ಯಂತ ಗುಪ್ತರೀತಿಯಿಂದ ನಡೆಯಿಸಿದ್ದರು. ಎಂದು ರಕ್ತದ ಕಾಲುವೆಗಳು ಹರಿದವೋ, ಅಂದು ಹಿಂದುಗಳು ಕ್ರಾಂತಿಗೆ ಪ್ರಾರಂಭಿಸಿದರೆಂಬದು ಆಂಗ್ಲರಿಗೆ ತಿಳಿಯಿತು.

ಬಾಬೂ ಕುವರಸಿಂಹನು ಜಗದೀಶಪುರದ ಜಹಾಗೀರದಾರನು. ಶಹಾಬಾದ ಜಿಲ್ಲೆಯೊಳಗಿನ ಜಹಾಗೀರದಾರರಲ್ಲಿ ಇವನು ಪ್ರಮುಖನೂ, ಶೂರನೂ, ಕಟ್ಟಾಭಿಮಾನಿಯೂ ಎಂದು ಹೆಸರಾಗಿದ್ದನು. ಅವನ ಜಾಹಾಗೀರಿನೊಳಗಿನ ಪ್ರಜಾಜನರು ಅವನನ್ನು ರಾಜರಾಜೇಶ್ವರನಿಗಿಂತಲೂ ಹೆಚ್ಚಾಗಿ ಮನ್ನಿಸುತ್ತಿದ್ದರು. ಎಂಭತ್ತು ವರ್ಷದ ವಯಸ್ಸಿನವನಾಗಿದ್ದರೂ ಇವನ ಮುಖದಲ್ಲಿ ತಿಲಾಂಶವಾದರೂ ವೃದ್ಧಾಪ್ಯದ ಕಳೆಯು ಬಂದಿರಲಿಲ್ಲ. ಇವನ ದೇಹಯಷ್ಟಿಯಾದರೂ ಬಲಿಷ್ಠವಾದದ್ದಾಗಿತ್ತು. ಇವನು ಆಗಿನ ಕಾಲದ ತರುಣರನ್ನು ಸಹ ನಾಚಿಸುವಂತಹನಿದ್ದನು. ಶೂರನೂ ಸಾಹಸಿಯೂ ದೃಢನಿಶ್ಚಯದವನೂ ಆದ ಇವನು ದ್ವಾಪರ ಯುಗದ ಭೀಷ್ಮ-ದ್ರೋಣಾದಿ ಮಹಾರಥಿಕರನ್ನು ಮರೆಯಿಸುವಂತಹನಿದ್ದನು. ಉದಾರನೂ, ಪರೋಪಕಾರ ಬುದ್ಧಿಯವನೂ, ಪ್ರಜಾನುರಾಗವುಳ್ಳವನೂ ಆದ ಈ ಮಹಾನುಭಾವನನ್ನು ರಾಜ್ಯದೊಳಗಿನ ಜನರು ಹಾಡಿ ಹರಿಸುತ್ತಿದ್ದರಲ್ಲದೆ, ಇವನ ಧವಲಕೀರ್ತಿಯು ಹಿಂದು ಭೂಮಿಯಲ್ಲೆಲ್ಲ ಪಸರಿಸಿತ್ತು.

ಬಾಬೂ ಕುವರಸಿಂಹನಿಗೆ ಪುತ್ರಸಂತಾನವಿರಲಿಲ್ಲ. ಇವನು ತನ್ನ ಚಿಕ್ಕ ತಮ್ಮನಾದ ಅಜಯಸಿಂಹನನ್ನು ಮಗನೆಂದು ಭಾವಿಸಿದ್ದನು. ತನ್ನ ತರುವಾಯ ತನ್ನ ಎಲ್ಲ ಜಹಾಗೀರಿಯು ಅಜಯಸಿಂಹನಿಗೇ ದೊರೆಯಬೇಕೆಂದು ಅವನು ಪ್ರಬಲ

ವಾದ ಇಚ್ಛೆಯನ್ನು ತಳೆದಿದ್ದನು. ಅವನು ತನ್ನ ಇಚ್ಛೆಯ ಮೇರೆಗೆ ಮೃತ್ಯು ಪತ್ರವನ್ನಾದರೂ ಒರೆದಿಟ್ಟಿದ್ದನು.

ಅಜಯಸಿಂಹನಿಗೆ ಸುರೂಪಿಯೂ ಗುಣವತಿಯೂ ಆದ ಇಂದುಮತಿ ಯೆಂಬಪತ್ನಿಯಿದ್ದಳು. ನಿವೃತ್ತಿ ಮಾರ್ಗದವನಾದ ಇವನು ವಿವಾಹವಾದಂದಿನಿಂದ ಪತ್ನಿಯ ಮುಖವನ್ನೇ ಕಂಡಿರಲಿಲ್ಲ. ಸಂಸಾರವು ಅಸಾರವೆಂದು ಗೃಹಿಸಿ ಇವನು ಬಹುತರವಾಗಿ ಸಾಧುಸಂತರ ಸಹವಾಸದಲ್ಲಿ ಕಾಲಹರಣ ಮಾಡುತ್ತಿದ್ದನು. ಸಾಧ್ವಿಯಾದ ಪತ್ನಿಯೊಂದಿಗೆ ಸುಖದಿಂದ ಸಂಸಾರ ನಿರತನಾಗುವದನ್ನು ತಿರಸ್ಕರಿಸಿ ತನ್ನ ಬಂಧುವು ಈ ರೀತಿಯಾಗಿ ವಿರಕ್ತನಾದದ್ದರಿಂದ ಕುವರಸಿಂಹನು ಚಿಂತಾಕ್ರಾಂತನಾಗಿದ್ದನು. ಅವನು ಅಜಯಸಿಂಹನನ್ನು ಸಂಸಾರದಲ್ಲಿ ತೊಡಗಿಸಲಿಕ್ಕೆ ಬಹುಪರಿಯಾಗಿ ಯತ್ನಿಸಿದರೂ ಅದರಿಂದ ಯಾವ ಬಗೆಯ ಪ್ರಯೋಜನವೂ ಆಗಿರಲಿಲ್ಲ. ತನ್ನ ಉಪದೇಶದಿಂದ ಮತ್ತಿಷ್ಟು ದುಷ್ಪರಿಣಾಮವಾಗುತ್ತ ನಡೆದದ್ದರಿಂದ ಕುವರಸಿಂಹನು ಇತ್ತೀಚೆಗೆ ತಟಸ್ಥವೃತ್ತಿಯನ್ನು ಕೈಕೊಂಡಿದ್ದನು.

ಕುವರಸಿಂಹನು ತನ್ನ ಬಂಧುವಿನೊಡನೆ ಆರಾದಲ್ಲಿರುತ್ತಿದ್ದನು. ತನ್ನ ಜಹಾಗೀರಿಯ ಗ್ರಾಮವಾದ ಜಗದೀಶಪುರಕ್ಕೆ ಕೆಲಸಬಿದ್ದಾಗ ಹೋಗಿ ಬರುತ್ತಿದ್ದನು. ಅಜಯಸಿಂಹನು ವಿರಕ್ತನಾದ್ದರಿಂದ ಅವನ ಪತ್ನಿಯಾದ ಇಂದುಮತಿಯು ಜಗದೀಶಪುರದಲ್ಲಿಯೇ ಕಾಲಕಳೆಯಬೇಕಾಗಿತ್ತು. ಅಜಯಸಿಂಹನ ಇನ್ನೊಬ್ಬ ಮೃತಬಂಧುವಿನ ಪತ್ನಿಯಾದ ತಾರಾದೇವಿಯು ಇವಳೊಡನೆ ಜಗದೀಶಪುರದಲ್ಲಿರತೊಡಗಿದಳು.

ತಾರಾದೇವಿಯು ವಿಧವೆಯಾಗಿದ್ದಳು. ಇವಳು ಇಂದುಮತಿಯೊಡನೆ ನಿರ್ವ್ಯಾಜ ಪ್ರೇಮದಿಂದ ನಡೆದುಕೊಳ್ಳುತ್ತಿದ್ದಳು. ತಾನು ಹತಭಾಗಿನಿಯಾಗಿದ್ದರೂ ಭಗಿನಿಯಂತಿರುವ ಇಂದುಮತಿಯ ಸೌಖ್ಯವೇ ತನ್ನ ಸೌಖ್ಯವೆಂದು ತಿಳಿದು, ಅವಳು ಸಂತುಷ್ಟಳಾಗುತ್ತಿದ್ದಳು. ಅಜಯಸಿಂಹನು ನಿವೃತ್ತಿಮಾರ್ಗವನ್ನು ಕೈಕೊಂಡು ತನ್ನ ಭಗಿನಿಯ ಸುಖವನ್ನು ಸೂರೆಮಾಡಲುದ್ಯುಕ್ತನಾದದ್ದನ್ನು ನೋಡಿ, ತಾರಾದೇವಿಯ ಹೃದಯವು ದಹಿಸತೊಡಗಿತು. ರೂಪವತಿಯೂ ಗುಣನಿಧಿಯೂ ಸಾಧ್ವೀಮಣಿಯೂ ಆದ ಇಂದುಮತಿಯನ್ನು ಕೂಡಿ ಸಂಭ್ರಮದಿಂದ ಬಾಳುವೆ ಮಾಡುವದನ್ನು ಬಿಟ್ಟು, ಅಜಯಸಿಂಹನು ಸಂನ್ಯಾಸಮಾರ್ಗವನ್ನವಲಂಬಿಸಿ ಗಿರಿ-ಗಹ್ವರಗಳಲ್ಲಿಯೂ ತೀರ್ಥ-ಕ್ಷೇತ್ರಗಳಲ್ಲಿಯೂ, ಸಾಧು-ಸಂತರಲ್ಲಿಯೂ ಕಾಲಕ್ಷೇಪ ಮಾಡುವದನ್ನು ನೋಡಿ ಅವಳ ಅಂತಃಕರಣವು ಬೆಂದು ಬೆಂಡಾಗುತ್ತಿತ್ತು.

ಇಂದುಮತಿಗಾದರೂ ಜೀವವು ಬೇಸರವಾಗಿತ್ತು. ತನ್ನನ್ನು ಪತಿಯು

ನಡುನೀರಿನಲ್ಲಿ ಕೈಬಿಟ್ಟು ಅಡವಿಪಾಲಾದನೆಂಬ ದುಃಖದಿಂದ ಬೆಂದು ಬಸವಳಿದವಳಾದ ಅವಳು ಆತ್ಮಹತ್ಯೆ ಮಾಡಿಕೊಳ್ಳುವದಕ್ಕೆ ಸಿದ್ಧಳಾಗಿದ್ದಳು. ಹಿಂದೆ ಹೇಳಿದಂತೆ ಕಾಳಿಯ ದೇವಸ್ಥಾನದಲ್ಲಿ ಘುಲಶಾಹನ ಕಡೆಯಿಂದ ಅಭಯ ವಾಣಿಯನ್ನು ಹೊಂದಿದವಳು ಇಂದುಮತಿಯೇ ಆಗಿದ್ದಳು. ಅಜಯಸಿಂಹನು ವೈರಾಗ್ಯ ಮಾರ್ಗಪ್ರವೃತ್ತನಾದ್ದರಿಂದ ಕುವರಸಿಂಹನ ಮನೋಮಂದಿರವಾದರೂ ಕಳಚಿ ಬೀಳತೊಡಗಿತ್ತು. ತನ್ನ ತರುವಾಯ ಎಲ್ಲ ಸ್ಥಿರ-ಚರಸ್ವತ್ತಿನ ಮೇಲೆ ಬಂಧುವಾದ ಅಜಯಸಿಂಹನೇ ಬಾಧ್ಯಸ್ಥನಾಗಿ, ಅವನಿಂದಲೇ ತನ್ನ ವಂಶೋದ್ಧಾರವಾಗಬೇಕೆಂಬ ಪ್ರಬಲ ಆಶೆಯನ್ನು ತಳೆದಿದ್ದ ಕುವರಸಿಂಹನು, ಬಂಧುವಿನ ಸ್ಥಿತಿಯನ್ನು ನೋಡಿ ಭಗ್ನಮನೋರಥನಾಗತೊಡಗಿದ್ದನು. ಅಜಯನನ್ನು ಯಾವ ಉಪಾಯದಿಂದಲಾದರೂ ಹಾದಿಗೆ ತರಬೇಕೆಂದು ಅವನು ಸಾಹಸ ನಡೆಯಿಸಿದ್ದನು. ಕುವರಸಿಂಹನಿಗೆ ಈ ದುಃಖವೊಂದಲ್ಲದೆ ಮತ್ತೊಂದು ಆಗಂತುಕ ಉಪಾಧಿಯೂ ಗಂಟು ಬಿದ್ದು ಅವನನ್ನು ಜರ್ಜರಗೊಳಿಸಿತು. ಆ ಉಪಾಧಿಯೇ ಬಿಹಾರ ಪ್ರಾಂತದಲ್ಲಿ ವೀರಗರ್ಜನೆಯನ್ನು ಹೊರಡಿಸಿತೆಂದು ನಿಸ್ಸಂದೇಹವಾಗಿ ಹೇಳಬಹುದು. ಆ ಉಪಾಧಿಯೇ ಕುವರಸಿಂಹ-ಅಜಯಸಿಂಹರನ್ನು ಯುದ್ಧಕ್ಷೇತ್ರದಲ್ಲಿ ಪ್ರವೇಶಿಸುವಂತೆ ಮಾಡುವದಕ್ಕೆ ಹೇಗೆ ಕಾರಣೀಭೂತವಾಯಿತೆಂಬದನ್ನು ಮುಂದೆ ಕಾಣಬಹುದು.

ಆಗ ಆಸೇತುಹಿಮಾಚಲದ ವರೆಗೆ ಆಂಗ್ಲರ ಪರಾಕ್ರಮದ ಯಶೋದುಂದುಭಿಯು ಮೊಳಗುತಲಿತ್ತು. ಪ್ರತಿಯೊಂದು ಭಾಗದಲ್ಲಿಯ, ಆ ಭಾಗದೊಳಗಿನ ಹಳ್ಳಿಯಲ್ಲಿಯ, ಹಳ್ಳಿಯೊಳಗಿನ ಮನೆಯಲ್ಲಿಯ, ಮನೆಯೊಳಗಿನ ಜನರಲ್ಲಿಯ ಜನರ ಮನಸ್ಸಿನಲ್ಲಿಯ ಚಲನವಲನವನ್ನು ತಿಳಿಯುವಂತಹ ಧೋರಣವು ಆಂಗ್ಲ ಕರ್ಮಚಾರಿಗಳಲ್ಲಿತ್ತು. ಈ ಬಗೆಯ ಮುಂಜಾಗ್ರತೆಯುವರಾದ ಆ ಜನರು ಭಾವೀ ಆಪತ್ತಿನ ಗಂಧವನ್ನು ಸಹ ಅರಿಯದವರಾಗಿದ್ದರೆಂದ ಮೇಲೆ, ಇದಕ್ಕೆ ಏನೆನ್ನತಕ್ಕದ್ದೆಂಬದನ್ನು ವಾಚಕ ಮಹಾಶಯರೇ ನಿರ್ಧರಿಸಲಿ. ಮುಂದಿನ ಭೀಷಣವಾದ ಗಂಡಾಂತರವನ್ನು ಅನುಭವಿಸುವದು ಅವರ ಲಲಾಟದಲ್ಲಿತ್ತೆಂದು ಸಮಾಧಾನ ಹೊಂದಿ ನಾವು ಮುಂದಿನ ಕಥಾನಕದ ಕಡೆಗೆ ತೆರಳುವೆವು.

ನೆತ್ತರದ ಕಾಲುವೆಗಳು ಹರಿಯತೊಡಗುವವರೆಗೆ ಹೊತ್ತುತ್ತಿರುವ ಬೇಗೆಯ ಹೊಗೆಯು ಸಹ ಆಂಗ್ಲರ ಕಣ್ಣಿಗೆ ಬೀಳದಿದ್ದ ಮೇಲೆ, ಆಗಿನ ಬಹುಜನ ಸಮಾಜವು ಅವರ ವಿರುದ್ಧವಾಗಿತ್ತೆಂದು ಸಹಜವಾಗಿ ತರ್ಕಿಸಬಹುದು. ಬಂಡಾಯದಂತಹ ಭಯಂಕರವಾದ ಸತ್ರವು ಕೆಲವು ದಿನಗಳಾದರೂ ಗುಪ್ತವಾಗಿರಬೇಕಾದರೆ, ಆಂಗ್ಲರು ಆಗಿನ ಬಹುಜನ ಸಮಾಜದ ರೋಷಕ್ಕೆ ಪಾತ್ರರಾಗಿದ್ದರೆಂದು ತರ್ಕಿಸ

ಬೇಕಾಗುತ್ತದೆ. ಆಸೇತು ಹಿಮಾಚಲದ ವರೆಗೆ ಬಹುತರವಾಗಿ ಎಲ್ಲ ಸ್ಥಳಗಳಲ್ಲಿ ಬಂಡಾಯದ ಬೇಗೆಯು ಹೊತ್ತತೊಡಗಿತು. ಕೆಲವು ದಿನಗಳ ವರೆಗೆ ಈ ಬೇಗೆಯು ಒಳಗಿಂದೊಳಗೇ ಹೊತ್ತತೊಡಗಿತ್ತು. ಆದಕ್ಕೆ ಉರುವಲಗಳೂ ಎಣ್ಣೆಯೂ ಬೀಳ ತೊಡಗಿ ಅಕಸ್ಮಾತ್ತಾಗಿ ಜಾಜ್ವಲ್ಯಮಾನವಾಗಿ ಉರಿಯತೊಡಗಿತು. ಭಾರತ ವರ್ಷದಲ್ಲೆಲ್ಲ ಬಂಡಾಯದ ಬೇಗಯು ಹಬ್ಬಿದಂತೆ ಬಿಹಾರ ಪ್ರಾಂತದಲ್ಲಾದರೂ ಅದು ಪಸರಿಸುವ ಚಿಹ್ನವು ತೋರಲಾರಂಭಿಸಿತು.

ಬಾಬೂ ಕುವರಸಿಂಹನು ಅತ್ಯಂತ ಉದಾರನಿದ್ದನು. ಪ್ರಜಾಜನರನ್ನು ಹೊಟ್ಟೆಯ ಮಕ್ಕಳಂತೆ ಪರಿಪಾಲಿಸುತ್ತಿದ್ದನು. ಎಲ್ಲಿಯಾದರೂ ಅಲ್ಪಸ್ವಲ್ಪ ಆವರ್ಷಣವುಂಟಾದರೆ ಕಂದಾಯವನ್ನು ಎತ್ತುತ್ತಿದ್ದಿಲ್ಲ. ಅವನು ಬಡಜನರಿಗೆ ಅನೇಕ ಬಗೆಯಿಂದ ಸಹಾಯ ಮಾಡುತ್ತಿದ್ದನು. ಉದಾರತನದ ಅತಿರೇಕಕ್ಕಾಗಿ ಅವನಿಗೆ ಲಕ್ಷಾವಧಿ ರೂಪಾಯಿಗಳ ಸಾಲವಾಗಿತ್ತು. ಸಾವುಕಾರ ಜನರು ತಮಗೆ ಹಣವು ದೊರಯುವದಕ್ಕಾಗಿ ನ್ಯಾಯಾಸನದ ಮುಂದೆ ಹೋಗಿ ಫಿರ್ಯಾದಿ ಮಾಡಿ ಕೊಂಡರು. ಅವಕಾಶವು ದೊರೆತರೆ ಹಣವನ್ನು ಕೂಡಿಸುವೆನೆಂದು ಕುವರ ಸಿಂಹನು ನ್ಯಾಯಾಧೀಶನಿಗೆ ವಿಜ್ಞಾಪಿಸಿಕೊಂಡನು. ಒಂದು ತಿಂಗಳೊಳಗಾಗಿ ಹಣವು ಬಾರದಿದ್ದರೆ ಜಹಾಗೀರಿಯು ಜಪ್ತಿಯಾಗಲ್ಪಡುವದೆಂದು ತೀರ್ಪಾಗಲು, ಅವನು ಗಂಡಾಂತರದಲ್ಲಿ ಬಿದ್ದನು. ಇಪ್ಪತ್ತು ಲಕ್ಷ ರೂಪಾಯಿಗಳನ್ನು ಒಂದು ತಿಂಗಳೊಳಗಾಗಿ ಕೂಡಿಸುವದು ದುಸ್ತರವಿದ್ದುದರಿಂದ ಹೆಚ್ಚಿನ ಅವಧಿಯು ದೊರೆಯಬೇಕೆಂದು ಅವನು ಸರಕಾರಕ್ಕೆ ವಿಜ್ಞಾಪನೆ ಮಾಡಿಕೊಂಡನು; ಆದರೆ ಅವನ ಬೇಡಿಕೆಗೆ ಯಶವು ದೊರೆಯಲಿಲ್ಲ. ದೊಡ್ಡ ಜಹಾಗೀರದಾರನಾದ ತಾನು ಬೀದಿಯ ಭಿಕ್ಷುಕನಾಗುವ ಪ್ರಸಂಗವೊದಗಿತೆಂದು ಅವನು ಆಂಗ್ಲ ಅಧಿಕಾರಿಗಳ ಮೇಲೆ ಕ್ಷೋಭಗೊಂಡನು. ಆಂಗ್ಲರು ಹೊತ್ತು ಸಾಧಿಸಿ ಸರ್ವನಾಶ ಮಾಡ ಲುಪಕ್ರಮಿಸುವಂತಹ ಸ್ವಭಾವದವರೆಂದು ಅವನ ಮನವರಿಕೆಯಾಯಿತು.

ದುಃಖಿಮಗ್ನರೂ, ಸಿಂಹಾಸನ ಚ್ಯುತರೂ, ತಮ್ಮ ಸ್ವತ್ತುಗಳಿಗೆ ಎರವಾದ ವರೂ ಆದ ಲಕ್ಷಾವಧಿ ಜನರು ಅಲ್ಲಲ್ಲಿ ಬಂಡಾಯದ ಬೇಗಯನ್ನು ಹೊತ್ತಿಸ ತೊಡಗಿರುವರೆಂಬ ವಾರ್ತೆಯು ಬಾಬೂ ಕುವರಸಿಂಹನಿಗೆ ತಿಳಿಯಿತು. ಬಿಹಾರ ಪ್ರಾಂತದಲ್ಲಾದರೂ ಜನರ ಓಘವು ಅತ್ತಕಡೆಗೆ ಹರಿಯ ತೊಡಗಿದ್ದನ್ನು ನೋಡಿ, ದುಃಖಿತಾಂತಃಕರಣಿಯಾದ ಕುವರಸಿಂಹನು ತನ್ನ ಪ್ರಾಂತದಲ್ಲಾದರೂ ಬಂಡಾ ಯದ ಬೇಗೆಯನ್ನು ಹೊತ್ತಿಸಲಿಕ್ಕೆ ಟೊಂಕ ಕಟ್ಟಿದನು.

# ನಷ್ಟೋ ಮೋಹಃ

ಸಂಸಾರದ ಬಂಧನಗಳನ್ನೆಲ್ಲ ಕಡಿದೊಗೆದು ಭಗವನ್ನಾಮಸ್ಮರಣೆಯಲ್ಲಿದ್ದು ಬ್ರಹ್ಮಾನಂದವನ್ನು ಪಡೆಯಬೇಕೆಂದು, ಅಜಯಸಿಂಹನು ಎಲ್ಲ ಬಗೆಯ ರಾಜೋಪಭೋಗಗಳನ್ನೂ ತೊರೆದು, ದೇವಸ್ಥಾನ ಮಠಗಳಲ್ಲಿಯೂ ಗಿರಿ ವನಗಳಲ್ಲಿಯೂ ಕಾಲಹರಣ ಮಾಡತೊಡಗಿದ್ದನು. ಅವನು ಬಹುತರವಾಗಿ ತನ್ನ ಮನೆಯಿಂದ ಸ್ವಲ್ಪ ಅಂತರದ ಮೇಲಿದ್ದ ಮಠದಲ್ಲಿ ವಾಸವಾಗಿರುತ್ತಿದ್ದನು. ಅಲ್ಲಿಗೆ ನಿತ್ಯಶಃ ಎಷ್ಟೋ ಭಿಕ್ಷುಕರೂ, ಬೈರಾಗಿಗಳೂ, ಫಕೀರರೂ, ಬ್ರಹ್ಮಚಾರಿಗಳೂ, ಪರಮಹಂಸರೂ ಬರುತ್ತಿದ್ದರು. ಅಜಯಸಿಂಹನು ಆ ಜನರಲ್ಲಿ ಸದ್ವರ್ತನಿಗಳಾದವರೊಡನೆ ಪಾರಮಾರ್ಥ ಜ್ಞಾನದ ವಿಷಯವಾಗಿ ಚರ್ಚೆ ಮಾಡುತಲಿದ್ದನು. ಅಲ್ಲಿ ಭಂಗಿಯು ದಿನಾಲು ಮಿತಿಮೀರಿ ಸುಡಲ್ಪಡುತ್ತಿತ್ತು. ಆ ಮಠವು ನೋಡಿದಾಗೆಲ್ಲ ಹೊಗೆಯಿಂದ ತುಂಬಿದ್ದಾಗಿ ಕಾಣುತ್ತಿತ್ತು!

ಅಜಯಸಿಂಹನು ಇಂದು ಮಠದಲ್ಲಿ ಒರ್ವನೇ ಕುಳಿತಿದ್ದನು. ಅವನು ಕೈಯಲ್ಲಿ ತಾಳ ಹಿಡಿದು ''ರಘೂತ್ತಮರಾಮಾ, ರಮಾಕಾಂತರಾಮಾ'' ಎಂದು ಭಜನೆಮಾಡುತ್ತ ಬ್ರಹ್ಮಾನಂದದಲ್ಲಿ ಮಗ್ನನಾಗಿದ್ದನು. ಆಗ ಅವನಿಗೆ ಹೊರಗೆ ''ಅಲಹಂ ದುಲಿಲ್ಲಾ'' ಎಂಬ ಧ್ವನಿಯು ಕೇಳಿಸಿತು. ಕೂಡಲೆ ಅವನು:-''ಯಾರವರು?'' ಎಂದು ವಿಚಾರಿಸಿದನು. ಆಗ ಹೊರಗಿದ್ದ ಮನುಷ್ಯನು ಅವನ ಬಳಿಗೆ ಹೋಗಿ:-''ನಾನು ನಿನ್ನ ದಾಸನು.''

ಹೀಗೆ ಮಾತನಾಡಿದವನು ಘುಲಶಾಹನಿದ್ದನು. ಕೂಡಲೆ ಅಜಯನು ಎದ್ದು, ಅವನ ಚರಣಗಳ ಮೇಲೆ ಮಸ್ತಕವಿಟ್ಟು:—

''ಸ್ವಾಮಿನ್, ಹೀಗೆ ತಾವು ಮಾತನಾಡಕೊಳ್ಳಬಾರದು.''

''ಅದೇಕೆ? ನಾನು ಈ ಈಶ್ವರೀ ಸೃಷ್ಟಿಯಲ್ಲಿ ಸರ್ವರಿಗೂ ದಾಸನಾಗಿರುವೆನು. ಈ ಸೃಷ್ಟಿಯೊಳಗಿನ ಪ್ರತಿಯೊಂದು ಪದಾರ್ಥವು ನನಗೆ ದೇವತಾಸ್ವರೂಪವು.'' ಎಂದು ನುಡಿದು, ಘುಲಶಾಹನು ಅಜಯನನ್ನು ಹಿಡಿದೆತ್ತಿ:--''ಅಜಯ, ನೀನು ಹಿಂದುವು; ನಾನು ಯವನನು. ಹೀಗಿದ್ದು ನೀನು ನನ್ನ ಪಾದಗಳ ಮೇಲೆ ಮಸ್ತಕವನ್ನಿರಿಸಬಹುದೇ?

ಮಹಾತ್ಮನ್, ತಾವು ಮುಸಲಮಾನರಿದ್ದರೇನಾಯಿತು? ಸತ್ಪುರುಷರು ಯಾವ ಜಾತಿಯವರಿದ್ದರೂ ಅವರು ಸರ್ವರಿಗೂ ವಂದ್ಯರೇ ಸರಿ. ಪರಮಪೂಜ್ಯರಾದ ತಮ್ಮ ನಾಮವು ಪ್ರಾತಃಸ್ಮರಣೀಯವಿರುವದು. ಸಂಸ್ಕಾರಭೇದದಿಂದ

ಜಾತಿ ವೈಷಮ್ಯತೆಯಿದ್ದರೂ, ಅಂತರಾತ್ಮನು ಮಾತ್ರ ಯಾವ ಜಾತಿಯವನೂ ಅಲ್ಲ; ಯಾವ ಪಂಥದವನೂ ಅಲ್ಲ.

"ಅಜಯಸಿಂಹ, ನೀನು ಮಾತಿನ ಪಾರಮಾರ್ಥಿಯಾಗಿರುವೆ; ಆದರೆ ಆಡಿದಂತೆ ನಡೆಯುವಂತಹನಾಗಿಲ್ಲ. ನಿನಗೆ ಧರ್ಮವೆಂದರೇನೆಂಬದು ಗೊತ್ತಿಲ್ಲ. ನಾನು ನಿನಗೆ ಎರಡು ಮಾತುಗಳನ್ನು ಹೇಳಬೇಕೆಂದು ನಿಶ್ಚಯಿಸಿಕೊಂಡಿರುವೆನು. ನಾನು ಹೇಳಿದಂತೆ ಕೇಳುತ್ತಿದ್ದರೆ ಹೇಳುವೆನು.'' ಎಂದು ಘುಲಶಾಹನು ನುಡಿದ ಕೂಡಲೆ ಅಜಯಸಿಂಹನು ಉತ್ಕಂಠೆಯಿಂದ:—

"ಅದೇನು? ನೀವು ಹೇಳಿದ ಮಾತನ್ನು ನಾನು ಅವಶ್ಯವಾಗಿ ಕೇಳುವೆನು."

"ಅಜಯ, ನೀನು ನಿನ್ನ ಮನೆಯನ್ನು ತೊರೆದು ಅರಣ್ಯದಲ್ಲಿಯೂ ಮಠ-ದೇವಸ್ಥಾನಗಳಲ್ಲಿಯೂ ವಾಸವಾಗಿರುವದೇಕೆ?"

"ಮಹನೀಯರೇ, ಮನೆಯಲ್ಲಿ ಯಾವ ಸುಖ-ಸೌಕರ್ಯಗಳಿರುವವು? ಏಕಾಂತ ಸ್ಥಳದಲ್ಲಿದ್ದು ಭಗವದಾರಾಧನೆಯಲ್ಲಿ ಕಾಲ ಕಳೆಯುವದು ಧರ್ಮಲಂಡತನವೆಂದು ನೀವು ಅನ್ನುತ್ತಿದ್ದರೆ ಉಪಾಯವಿಲ್ಲ."

"ಸದ್ಯಕ್ಕೆ ನಾನು ನಿನ್ನ ಕೃತಿಗೂ ಧರ್ಮಲಂಡತನದ್ದೆಂದು ಅನ್ನಬೇಕಾಗಿದೆ. ನೀನು ಎಂದು ಸಂಸಾರ ಪರಾಙ್ಮುಖನಾಗಿ ಈ ಅಸಿಧಾರಾ ವ್ರತವನ್ನು ಕೈಕೊಂಡೆಯೋ, ಅಂದಿನಿಂದ ನಾನು ನಿನ್ನ ಕಡೆಗೆ ಸೂಕ್ಷ್ಮ ದೃಷ್ಟಿಯಿಂದ ನೋಡುತ್ತಲಿರುವೆನು. ಕೇವಲ ಸಂಸಾರತ್ಯಾಗದಿಂದ ಮನುಷ್ಯನು ಬ್ರಹ್ಮಾನಂದವನ್ನು ಹೊಂದುತ್ತಿರುವನೆಂದು ನಿನ್ನ ಭಾವನೆಯಿದ್ದಂತೆ ತೋರುವದು. ಹಾಗಿದ್ದರೆ ನಿನ್ನ ಬುದ್ಧಿಯು ಇಷ್ಟೇಕೆ ಉದಾಸೀನತೆಯನ್ನು ಹೊಂದಿರುವದು? ನೀನು ಗೀತೆಯ ಅಧ್ಯಯನ ಮಾಡಿದ್ದು, ಕರ್ಮಯೋಗವೆಂದರೆ ಏನೆಂಬದನ್ನು ನೀನು ತಿಳಿದಿಲ್ಲವೇಕೆ? ನಿನ್ನ ಶರೀರದೊಳಗಿನ ಪ್ರತಿಯೊಂದು ರಕ್ತಬಿಂದುಗಳಲ್ಲಿ ಕ್ಷಾತ್ರತೇಜವು ಪ್ರಕಾಶಿಸುತ್ತಿರುವದರಿಂದ ನಿನ್ನ ಮಾರ್ಗವು ಅಸಮಾಧಾನಕಾರಕವಾಗಿ, ನಿನ್ನ ವೈರಾಗ್ಯವು ಪರಿಣತಸ್ಥಿತಿಯನ್ನು ಹೊಂದದಾಗಿರುವದು. ಅಂತೆಯೇ ನೀನು ಅಂಧನಂತಾಗಿ ಔದಾಸೀನ್ಯದಿಂದ ತಲ್ಲಣಗೊಳ್ಳತೊಡಗಿರುವೆ. ನೀನು ನಿನ್ನ ಧರ್ಮವನ್ನು ತ್ಯಜಿಸಿರುವೆ; ಹೊಸ ಧರ್ಮಕ್ಕೆ ಕೈಹಾಕಿರುವೆ. ಹಳೆಯದನ್ನು ಆಚರಿಸುವಂತಿಲ್ಲ; ಹೊಸದು ತಿಳಿಯುವಂತಿಲ್ಲ. ಹೀಗಾಗಿ ಪ್ರವಾಹಪತಿತನಂತೆ ನಿನ್ನ ಅವಸ್ಥೆಯಾಗಿರುವದು. ಅಜಯ, ಸಂಸಾರದಲ್ಲಿದ್ದು ಪಾರಮಾರ್ಥವನ್ನು ಸಾಧಿಸುವದಕ್ಕೆ ಬರುವದಿಲ್ಲವೆಂದು ನಿನ್ನ ಅಭಿಪ್ರಾಯವೋ? ಹಾಗಿದ್ದರೆ, ನಿನ್ನ ಕಲ್ಪನೆಯು ತೀರ ತಪ್ಪಾದದ್ದಿರುವದು. ಜನಕಾದಿ ರಾಜರ್ಷಿಗಳು ಅರಣ್ಯದಲ್ಲಿ ಘೋರ ತಪವನ್ನಾಚರಿಸುವ ಮುನಿಗಳಷ್ಟು, ಕಿಂಬಹುನಾ ಅವರಿಗಿಂತ ಹೆಚ್ಚಾಗಿ

ಘನತೆಯನ್ನು ಹೊಂದಿದುದಕ್ಕೆ ಅವರು ತಮ್ಮ ಸಂಸಾರ ಧರ್ಮವನ್ನು ಯಥೋಚಿತವಾಗಿ ನೆರವೇರಿಸಿದ್ದೇ ಕಾರಣವಲ್ಲವೆ? ತಪಸ್ವಿಯು ಕೇವಲ ತನ್ನನ್ನು ತಾನು ಉದ್ಧಾರ ಮಾಡಿಕೊಳ್ಳಲು ಶಕ್ತನು; ಆದರೆ ರಾಜಯೋಗಿಯು ಇಡಿಯ ಜಗತ್ತನ್ನೇ ಉದ್ಧಾರ ಮಾಡುವನು. ಗೀತೆಯ ತತ್ವಗಳನ್ನು ಇಡಿಯ ಜಗತ್ತಿನ ಮುಂದಿಟ್ಟ ಭಗವಾನ್ ಶ್ರೀಕೃಷ್ಣನು ಸಂಸಾರಿಯಿದ್ದಿಲ್ಲವೇನು? ದುಷ್ಟ ನಿಗ್ರಹ, ಶಿಷ್ಟಪರಿಪಾಲನೆ ಮಾಡಿದ ಶ್ರೀರಾಮಚಂದ್ರನು ಸಂಸಾರಿಯಾಗಿದ್ದಿಲ್ಲವೇನು? ಅರಬಸ್ತಾನದ ಮರುಭೂಮಿಯ ಪ್ರದೇಶದಲ್ಲಿ ವಾಸಿಸುವ ಕಾಡು ಜನರನ್ನು ಸನ್ಮಾರ್ಗಕ್ಕೆ ಹಚ್ಚಿದ ಹಜರತ ಮಹಮ್ಮದ ಪೈಗಂಬರರು ಸಂಸಾರಿಗಳಿದ್ದಿಲ್ಲವೇನು? ಸಂಸಾರದಲ್ಲಿದ್ದುಕೊಂಡು ಜಗತ್ತನ್ನೇ ಉದ್ಧರಿಸಿದ ಜನರು ಹಿಂದೆಯಾದರೂ ಆಗಿ ಹೋಗಿರುವರು; ಮುಂದೆಯಾದರೂ ಆಗುವರು. ಸಂಸಾರಪಾಶದಿಂದ ಬಂಧಿಸಲ್ಪಟ್ಟರೆ ಪರಮಾತ್ಮನ ಸನ್ನಿಧಿಯು ದೊರೆಯುವದಿಲ್ಲವೆಂದು ನಿನ್ನ ಭಾವನೆಯಿದ್ದರೆ, ಅದನ್ನು ತೆಗೆದು ಹಾಕು. ನಿನ್ನ ಸ್ವಧರ್ಮೋಚಿತವಾದ ಕ್ಷಾತ್ರವೃತ್ತಿಯು ನಿನ್ನಿಂದ ಯಥಾಸ್ಥಿತವಾಗಿ ಪಾಲಿಸಲ್ಪಟ್ಟರೆ, ಅದೇ ನಿನ್ನನ್ನು ತಾರಿಸುವದೆಂದು ನಾನು ಕೈಯೆತ್ತಿ ಹೇಳುವೆನು. ಅಜಯ, ಚನ್ನಾಗಿ ಕಣ್ಣು ತೆಗೆದು ನೋಡು. ಮೂವತ್ತು ಕೋಟಿ ಬಾಲಕರನ್ನು ಹೆತ್ತ ಭಾರತಮಾತೆಯು, ರುಗ್ಣಶಯ್ಯಾಶಾಯಿಯಾಗಿ ಹಾಹಾಕಾರ ಧ್ವನಿಗೈಯುತ್ತಿರುವಾಗ, ನಿನ್ನಂತಹ ಕ್ಷಾತ್ರವೀರರು ಸ್ವಧರ್ಮೋಚಿತ ಕರ್ಮಗಳನ್ನು ಬಿಟ್ಟು, ಗಿರಿ-ವನಗಳಲ್ಲಿ ಸಂಚರಿಸುವದಕ್ಕೆ ಪ್ರವೃತ್ತರಾಗುವದು ಎಂದೂ ಶ್ರೇಯಸ್ಕರವಾಗಲಾರದು. ಜನ್ಮದಾತ್ರಿಯ ದುಃಖವನ್ನು ದೂರ ಮಾಡುವದಕ್ಕೆ ನೀನು ಶಕ್ತಿಮೀರಿ ಪ್ರಯತ್ನಿಸಲಿಕ್ಕೇ ಬೇಕು. ಪರಾಕ್ರಮಶಾಲಿಗಳಾದ ಅಜಿತಸಿಂಹರ ಪ್ರಖರವಾದ ರಕ್ತವು ನಿನ್ನ ಶರೀರದೊಳಗಿನ ಪ್ರತಿಯೊಂದು ಧಮನಿಗಳಲ್ಲಿ ಹರಿದಾಡುತ್ತಿರುವಾಗ ಕರ್ಮಯೋಗಿಯಾಗುವದನ್ನು ತುಚ್ಛೀಕರಿಸಿ, ಕ್ಲೈಬ್ಯತ್ವವನ್ನು ತಳೆಯುವದು ಕುಕೀರ್ತಿಸಾಧನವಲ್ಲವೆ? ವೀರಮಾತೆಯಾದ ಭಾರತಿಯ ದುಃಖನಿವಾರಣೆಯನ್ನು ಮಾಡದ ಹೊರತು ಅವಳ ಪುತ್ರರಾದ ನಿಮಗೆ ಸುಖಶಾಂತಿಗಳು ಲಭಿಸಲಾರವು. ಆದರ್ಶಕ್ಷತ್ರಿಯವೀರನಾದ ನೀನು, "ರಾಮರಾಮ ಎನ್ನುತ್ತ ಗಿರಿ-ಗಂಹರಗಳಲ್ಲಿ ಕುಳಿತುಕೊಳ್ಳುವದಕ್ಕಿಂತ ಲೋಕಸೇವೆಯನ್ನು ಮಾಡಿ ಶರೀರ ಸಾರ್ಥಕತೆ ಮಾಡಿಕೊಂಡರೆ ಭಗವದನುಗ್ರಹಕ್ಕೆ ಪಾತ್ರನಾಗುವೆ. ಅಜಯ, ತಸ್ಮಾತ್ತ್ವಮುತ್ತಿಷ್ಠ ಯಶೋಲಭಸ್ವಂ, ಏಳು; ಕರ್ತವ್ಯಪಾಲನೆಗಾಗಿ ಬದ್ಧಕಂಕಣನಾಗು."

ಘುಲಶಾಹನು ಈ ಮೇರೆಗೆ ಯೋಗಯುಕ್ತ ಮಾನಸನಾಗಿ ಉಪದೇಶಿಸಿದ ಕೂಡಲೆ ಅಜಯಸಿಂಹನ ಮನಸ್ಸು ಇತ್ಯಂಥವಾಯಿತು. ಘುಲಶಾಹನ ಪ್ರತಿ

ಯೊಂದು ಮಾತುಗಳು ವೇದವಾಕ್ಯಗಳಂತೆ ಅವನಿಗೆ ಭಾಸವಾಗತೊಡಗಿದವು. 'ಹೇಗೆ ಮಾಡಲಿ, ಎಲ್ಲಿಗೆ ಹೋಗಲಿ?' ಎಂದು ಅವನು ವಿಚಾರಿಸುತ್ತ ಸ್ವಸ್ಥವಾಗಿ ಕುಳಿತು ಬಿಟ್ಟನು. ಘುಲಶಾಹನಿಗೆ ಏನು ಉತ್ತರ ಕೊಡಬೇಕೆಂಬದು ಕೂಡ ಅವನಿಗೆ ತೋಚದಾಯಿತು. ಆಗ ಘುಲಶಾಹನು ಪ್ರೇಮಳ ಸ್ವರದಿಂದ:—

"ಅಜಯಸಿಂಹ, ಇನ್ನೂ ನಿನ್ನ ಮನಸ್ಸಿನೊಳಗಿನ ಭ್ರಮೆಯು ಬಿಡಲೊಲ್ಲದೇನು? ಮಹಾ ಮಹಾ ಜನರು ಹೀಗೆ ಭ್ರಾಂತರಾಗುತ್ತಿರುವಾಗ ನಿನ್ನನ್ನಾದರೂ ಅದು ಒಮ್ಮೆಲೆ ಹೇಗೆ ತ್ಯಜಿಸುವದು? ಚೆನ್ನಾಗಿ ವಿಚಾರಮಾಡಿ ಯಾವ ಮಾರ್ಗವು ಶ್ರೇಯಸ್ಕರವೆಂಬದನ್ನು ನಿನ್ನ ಬುದ್ಧಿಯಿಂದ ನೀನೇ ನಿರ್ಣಯಿಸು."

"ಗುರುಮಹಾರಾಜ, ಭಾರತಮಾತೆಯ ಉದ್ಧಾರಕ್ಕಾಗಿ ಸಾಹಸ ಮಾಡುವದು ಭಾರತೀಯರಾದ ನಮ್ಮ ಕರ್ತವ್ಯವಾಗಿರುವದು. ಜನರು ಸ್ವಾರ್ಥಾಂಧರಾಗಿರುವರು. ನಮ್ಮ ನಮ್ಮಲ್ಲಿ ದ್ವೇಷಾಸೂಯೆಗಳು ನೆಲೆಗೊಂಡಿರುವವು. ಅನೇಕ ಧರ್ಮ-ಪಂಥಗಳಿಂದಲೂ, ಸ್ವಾರ್ಥಬುದ್ಧಿ ಪ್ರೇರಿತರಾದುದರಿಂದಲೂ ಸ್ವಜನರಲ್ಲಿ ಸಂಘಟಿತ ಶಕ್ತಿಯು ನಾಶವಾಗಿರುವದು. ವಸ್ತುಸ್ಥಿತಿಯು ಹೀಗಿದ್ದ ಮೇಲೆ ನಾನೊಬ್ಬನು ಮಾಡತಕ್ಕ ಕರ್ತವ್ಯವೇನು? ಒಂದು ವೇಳೆ ಏನಾದರೂ ಮಾಡಿದರೆ ಅದರಿಂದ ಲಾಭವೇನು?"

"ಅಜಯ, ನೀನು ದೀರ್ಘ ವಿಚಾರಿಯಿರುವದಿಲ್ಲ. ದೃಢನಿಶ್ಚಯದಿಂದ ಒಬ್ಬನು ಕರ್ತವ್ಯತತ್ಪರನಾದರೆ ಸಮಾಜವು ಅವನ ಬೆನ್ನು ಹತ್ತುವದು. ಜನರಲ್ಲಿ ವಾಸವಾಗಿರುವ ದುರ್ಗುಣಗಳನ್ನು ಹೋಗಲಾಡಿಸುವದಕ್ಕೆ ನಿನ್ನಂತಹ ದೃಢಬುದ್ಧಿಯ ವೀರರ ಅವಶ್ಯಕತೆಯು ಭಾರತ ಭೂಮಿಗೆ ಬಹಳವಾಗಿರುವದು. ದೇಶದಲ್ಲಿ ಬೇಗನೆ ಬಂಡಾಯದ ಬೆಂಗೆಯು ಪ್ರಜ್ವಲಿತವಾಗತಕ್ಕದ್ದಿರುವದು. ಆಗ ಹಿಂದದೇವಿಯ ಪುತ್ರರೆಲ್ಲರೂ ಸಂಘಟಿತ ಶಕ್ತಿಯಿಂದ ಕಾದಿದರೆ ವಿಜಯಲಕ್ಷ್ಮಿಯು ಪ್ರಸನ್ನಳಾಗುವಳು. ಆದರಿಂದ ನೀನು ಸದ್ಯಕ್ಕೆ ದೇವತಾರಾಧನೆಯನ್ನು ತ್ಯಜಿಸಿ, ಲೋಕಾರಾಧನೆಗೆ ಸಿದ್ಧನಾಗು. ಅದರಿಂದಲೇ ನಿನಗೆ ದೇವೀಪ್ರಸನ್ನತೆಯು ಪ್ರಾಪ್ತವಾಗುವದು. ನೀನು ಸರ್ವಸಂಗಪರಿತ್ಯಾಗಿಯಾಗಿರುವದರಿಂದ ಪುಣ್ಯವೊದಗದೆ, ಪಾತಕವು ಮಾತ್ರ ಒದಗುವದು. ಅಜಯಾ, ನಿನ್ನ ಹೃದಯವು ಬಹಳೇ ನಿಷ್ಠುರವು ಕಂಡಿಯಾ! ಸದಾ ಸರ್ವದಾ ಪತಿನಾಮ ಚಿಂತನೆಯಲ್ಲಿ ಕಾಲಕಳೆಯುವ ನಿನ್ನ ರಾಣಿಯಾದ ಸಾಧ್ವೀಮಣಿ ಇಂದುಮತಿಯ ಕಡೆಗಾದರೂ ನೋಡಬಾರದೆ? ಅವಳು ಈಗ ಎಷ್ಟು ಬಗೆಯಿಂದ ಕುದಿಯುತ್ತಿರುವಳೆಂಬದನ್ನು ಕಲ್ಪಿಸಿರುವೆಯೇನು? ಸಾಧ್ವೀಜನರು ಪತಿಯನ್ನು ಅರೆಕ್ಷಣ ಸಹ ಅಗಲಿರುವದಕ್ಕೆ ವ್ಯಸನ ಪಡುತ್ತಾರೆ. ಹೀಗಿದ್ದು

ನೀನು ಹೀಗೆ ಘಾತುಕನಂತೆ ಅವಳನ್ನು ಬಿಸುಟಿ, ವನ-ವನಗಳಲ್ಲಿ ತಿರುಗ ತೊಡಗಿದಿ. ನಿನಗೆ ಆ ಸಾಧ್ವಿಯು ಗೋಳು ತಪ್ಪೀತೇ? ಆ ಪ್ರಾಣಿಯು ಆತ್ಮ ವಿಸರ್ಜನೆಗೆ ಸಹ ಸಿದ್ಧವಾದಾಗ ನಾನು ಅಭಯವಿತ್ತು ಇತ್ತ ಬಂದೆನು. ನಿನ್ನ ಸಹೋದರನು ಕೇವಲ ನಿನ್ನನ್ನೇ ಅವಲಂಬಿಸಿ, ನಿನ್ನಿಂದಲೇ ವಂಶೋದ್ಧಾರ ವಾಗಬೇಕೆಂದು ಹಾರೈಸಿಕೊಂಡು ಕುಳಿತಿರುವನು. ಪಾಪ! ಆ ಕುವರಸಿಂಹನ ಅವಸ್ಥೆಯು ಈಗ ಹೇಗಾಗಿರಬಹುದೆಂಬದನ್ನು ಕೇವಲ ಕಲ್ಪನಾ ದೃಷ್ಟಿಯಿಂದ ನೋಡು. ನಾನು ಹೇಳತಕ್ಕಷ್ಟು ಹೇಳಿದೆನು. ನೀನು ಒಳಿತು-ಹೀನಗಳನ್ನು ವಿಚಾರಿಸಿ ಕರ್ತವ್ಯಮಾಡಬೇಕೆಂದು ಸೂಚಿಸುವೆನು.''

ಫುಲಶಾಹನು ಹೀಗೆ ನುಡಿದ ಕೂಡಲೆ ಅಜಯಸಿಂಹನ ತಲೆಯಲ್ಲಿ ಚಕ್ಕನೆ ಪ್ರಕಾಶವು ಬಿತ್ತು. ನಾನಾವಿಧದ ಅನುತಾಪದಿಂದ ಅವನು ಬಳಲ ತೊಡಗಿದನು. ''ಹಾಯ್! ನನ್ನಿಂದ ಎಂತಹ ಪ್ರಮಾದವು ಘಟಿಸುತ್ತಿತ್ತಲ್ಲ!'' ಎಂದು ಉದ್ಗಾರ ತೆಗೆದು ಫುಲಶಾಹನ ಪಾದಗಳ ಮೇಲೆ ಮಸ್ತಕವಿರಿಸಿ:—

''ನಷ್ಟೋಮೋಹಃ ಸ್ಮೃತಿರ್ಲಬ್ಧಾ ತ್ವತ್ಪ್ರಸಾದಾನ್ಮಯಾಚ್ಯುತ
ಸ್ಥಿತೋಸ್ಮಿ ಗತಸಂದೇಹಃ ಕರಿಷ್ಯೇವಚನಂ ತವ''

---

## ಸಂನ್ಯಾಸ ತ್ಯಾಗ!

ಬಂಡಾಯದ ಬೇಗೆಯು ವಿದ್ಯುದ್ಗತಿಯಿಂದ ಅತ್ಯಂತ ಗುಪ್ತವಾಗಿ ದೇಶದ ತುಂಬ ಪಸರಿಸ ತೊಡಗಿತ್ತು. ಪಾಟಣಾ, ಮೀರತ, ಕಾನಪೂರ ಝಾಂಸಿ ಮೊದ ಲಾದ ಪಟ್ಟಣಗಳು ಬಂಡುಗಾರರ ಸಂಚಿನ ಸ್ಥಳಗಳಾಗಿದ್ದವು. ಗುಪ್ತಚರರು ಒಂದು ಸ್ಥಳದ ಸುದ್ದಿಯನ್ನು ಮತ್ತೊಂದು ಸ್ಥಳಕ್ಕೆ ಗುಪ್ತವಾಗಿ ಮುಟ್ಟಿಸ ತೊಡಗಿದ್ದರು. ಹೊತ್ತಿ ತೊಡಗಿರುವ ಬೇಗೆಯ ಹೊಗೆಯು ಸಹ ಆಂಗ್ಲರ ದೃಷ್ಟಿಗೆ ಬಿದ್ದಿದ್ದಿಲ್ಲ. ಭಾವೀಸಂಕಟದ ವಾರ್ತೆಯು ತಿಳಿಯುವ ಪೂರ್ವದಲ್ಲಿ ಅವರಿಗೆ ನೆತ್ತರದ ಕಾಲುವೆಗಳು ಕಾಣತೊಡಗಿದವು. ಆಗ ಅವರು ಚನ್ನಾಗಿ ಕಣ್ತೆರೆದು ನೋಡುವಷ್ಟರಲ್ಲಿ ತಮ್ಮ ಸುತ್ತ-ಮುತ್ತು ಕಣ್ಣಿಗೆ ಕಾಣುವ ವರೆಗೆ ಬಂಡಿನ ಜ್ವಾಲೆಯು ಹಬ್ಬಿದ್ದನ್ನು ನೋಡಿ ಧೃತಿಗುಂದಿದರು. ಬಂದ ಸಂಕಟ ದಲ್ಲಿ ಧೈರ್ಯದಿಂದ ಎದೆಗೊಡದಿದ್ದರೆ ಗತ್ಯಂತರವಿಲ್ಲದ್ದರಿಂದ ಅವರು ಬಂಡಾ ಯದ ಪರಿಮಾರ್ಜನೆಗಾಗಿ ಸುಸಜ್ಜಿತರಾಗ ತೊಡಗಿದರು.

ಬಿಹಾರ ಪ್ರಾಂತದಲ್ಲಿ ಪಾಟಣಾ ಪಟ್ಟಣವು ಬಂಡುಗಾರರ ಒಳಸಂಚಿನ ಮುಖ್ಯಸ್ಥಳವಾಗಿತ್ತು. ಪಾಟಣಾಕ್ಕೆ ಆರಾ ಪಟ್ಟಣವು ಸಮೀಪವಿದ್ದುದರಿಂದಲೂ,

ಆರಾದ 'ಬಾಬೂ ಕುವರಸಿಂಹನು ದೇಶಾಭಿಮಾನಿಯೂ ಕ್ಷಾತ್ರತೇಜವುಳ್ಳವನೂ ಸಾಹಸಿಯೂ ಇದ್ದುದರಿಂದಲೂ, ಅವನು ತಮ್ಮ ಕಾರ್ಯದಲ್ಲಿ ಸಹಾಯಕ ನಾದರೆ ಬಿಹಾರದ ಸ್ವಾತಂತ್ರ್ಯದ ಕುಂಡವು ಮತ್ತಿಷ್ಟು ಪ್ರಖರವಾಗುವದೆಂದು ಅಲ್ಲಿಯ ಸಂಚುಗಾರರು ತಿಳಿದರು. ಇತ್ತೀಚೆಗೆ ಅವನ ಹಾಗು ಆಂಗ್ಲರ ನಡುವೆ ವೈಮನಸ್ಸು ಪ್ರಾದುರ್ಭವಿಸಿರುವದೆಂಬ ಸಂಗತಿಯನ್ನು ಕೇಳಿ, ಈ ಸಂಧಿಯನ್ನು ವ್ಯರ್ಥವಾಗಗೊಡಬಾರದೆಂದು ಬಂಡುಗಾರರ ಮುಖ್ಯರು ಅವನೊಡನೆ ಸಂಚು ನಡೆಯಿಸಿದರು.

ಬಾಬೂ ಕುವರಸಿಂಹನು ತನ್ನ ಬಾಲ್ಯ ಸ್ನೇಹಿತನಾದ ಜವಾನಸಿಂಗ ನೊಡನೆ ಜಹಾಗೀರಿಯ ವಿಷಯವಾಗಿ ಪ್ರಸ್ತಾಪ ತೆಗೆದುಕೊಂಡು ಕುಳಿತಿದ್ದನು. ಪುರಾತನದಿಂದ ಬಂದ ಜಹಾಗೀರಿಯು ಹೋಗಿ ಬೀದಿಯ ತಿರುಕರ ಅವಸ್ಥೆಯು ತನಗೆ ಬರುವದೆಂದು ಅವನು ಕಡು ದುಃಖಿತನಾಗಿದ್ದನು. ಹೇಗಾದರೂ ತನ್ನ ಜಹಾಗೀರಿಯನ್ನು ತನಗೆ ಉಳಿಸಿಕೊಡಬೇಕೆಂದು ಆಂಗ್ಲರಾಜ್ಯಚಾಲಕರಿಗೆ ಅವನು ಬಹು ವಿಧವಾಗಿ ಪ್ರಾರ್ಥಿಸಿದನು. ಕಡೆಗೆ ಪ್ರಯತ್ನವೆಲ್ಲವೂ ವ್ಯರ್ಥವಾಗಿ ಅವ ನಿಗೆ ಪಶ್ಚಾತ್ತಾಪದ ಪ್ರತಿಫಲವು ಮಾತ್ರ ದೊರೆಯಿತು.

"ಜವಾನಸಿಂಗ, ನನ್ನ ಜಹಾಗೀರಿಯು ಬೇಗನೆ ಕೈಬಿಡುವದು. ಅದನ್ನು ಹೇಗೆ ಉಳಿಸಿಕೊಳ್ಳುವದಕ್ಕೆ ಬರುವದೆಂಬದರ ಬಗ್ಗೆ ನೀನಾದರೂ ಆಲೋಚನೆ ಹೇಳಜಾರದೆ?"

"ನೀವು ಎಲ್ಲ ಬಗೆಯಾಗಿ ಸಾಹಸಮಾಡಿ ನೋಡಿದರೂ ವ್ಯರ್ಥವಾಯಿತು. ದೈವದುರ್ವಿಲಾಸದಿಂದ ಈ ಬಗೆಯ ಅನರ್ಥವು ಪ್ರಾಪ್ತವಾಯಿತೆಂದು ತಿಳಿದು ಕೊಂಡ ಹೊರತು ಮತ್ತೇನು ಮಾಡುವಂತಿದೆ?" ಎಂದು ಜವಾನಸಿಂಗನು ನುಡಿದ ಕೂಡಲೆ, ಆ ವೃದ್ಧ ಕುವರಸಿಂಹನು ಒಮ್ಮೆ ದೀರ್ಘವಾಗಿ ನಿಟ್ಟುಸಿರ ಬಿಟ್ಟನು. ಅಷ್ಟರಲ್ಲಿ ಒಬ್ಬ ಮನುಷ್ಯನು ಅಲ್ಲಿಗೆ ಬಂದು ವಿನಯದಿಂದ ನಮ ಸ್ಕರಿಸಿದನು. ಕುವರಸಿಂಹನು ಅವನಿಗೆ ಕುಳಿತುಕೊಳ್ಳ ಹೇಳಿ:—

"ನೀವು ಯಾರು? ಇಲ್ಲಿಗೇಕೆ ಬಂದಿರಿ?"

"ನಾನು ಪಾಟಣಾದ ಗುಪ್ತಸಂಚುಗಾರರಲ್ಲೊಬ್ಬನು. ಅಲ್ಲಿಯ ಪ್ರಮು ಖರು ತಮಗೆ ಸಂದೇಶವನ್ನು ಕಳುಹಿಸಿರುವರು."

"ಏನೆಂದು?" ಎಂದು ಕುವರಸಿಂಹನು ಉತ್ಕಂಠತೆಯಿಂದ ಕೇಳಿದನು.

"ಆಂಗ್ಲರ ಉಚ್ಚಾಟಣೆಗಾಗಿ ದೇಶದಲ್ಲಿ ಸರ್ವತ್ರವೂ ಸ್ವಾತಂತ್ರ್ಯದ ರಣಕುಂಡವು ಪ್ರಜ್ವಲಿತವಾಗಿರುವದು. ತಾವು ಅದರಲ್ಲಿ ಭಾಗ ತೆಗೆದುಕೊಂಡು ಶ್ರೇಯೋಭಾಗಿಗಳಾಗಬೇಕೆಂದು ಅವರ ವಿನಂತಿಯುಂಟು."

"ಮೌಲವೀಸಾಹೇಬ, ಎಂಭತ್ತು ವರ್ಷದ ಮುಗುಕನಾದ ನನ್ನಿಂದ ಇನ್ನು ಯುದ್ಧಕಾರ್ಯವು ಹೇಗೆ ತಾನೆ ಸಾಧ್ಯವಾದೀತು? ಪರಮೇಶ್ವರನ ನಾಮ ಸಂಕೀರ್ತನೆ ಮಾಡುತ್ತ ನಾನು ಶೇಷಾಯುಷ್ಯವನ್ನು ಕಳೆಯಬೇಕಾದೆ. ಇಂತಹ ಅವೇಳೆಯಲ್ಲಿ ಬಂದವರಾದ ತಮ್ಮನ್ನು ನಿರುತ್ಸಾಹಗೊಳಿಸುವ ಪ್ರಸಂಗ ಬಂದ ದ್ದಕ್ಕಾಗಿ ವಿಷಾದವೆನಿಸುವದು."

"ಕುವರಸಿಂಹ, ತಾವು ವಯಾತೀತರಿದ್ದರೂ, ತರುಣರನ್ನು ನಾಚಿಸು ವಂಥವರಿರುವಿರಿ. ಬಾಬೂ ಕುವರಸಿಂಹರು ಎಂದು ವೃದ್ಧರೂ ಅಕರ್ಮಣ್ಯರೂ ಆಗುವರೋ, ಅಂದೇ ರಜಪೂತರ ಕ್ಷಾತ್ರವೃತ್ತಿಯು ಕ್ಷೀಣವಾಗಿ. ಅವರ ಪ್ರತಾಪ ಸೂರ್ಯನು ಅಸ್ತೋನ್ಮುಖನಾದನೆಂದು ತಿಳಿಯತಕ್ಕದ್ದು. ನೀವು ರಣಕುಂಡ ದಲ್ಲಿ ಪ್ರವೇಶಿಸಿದಿರೆಂದರೆ, ಎಲ್ಲ ಹಿಂದೂ-ಮುಸಲ್ಮಾನರು ನವ್ಯಸ್ಫೂರ್ತಿಯಿಂದ ನಿಮ್ಮ ಬೆನ್ನಹತ್ತುವರು. ನೀವು ಈ ಕಾರ್ಯದಲ್ಲಿ ಭಾಗ ತೆಗೆದುಕೊಂಡರೆ, ಬಿಹಾರದ ಸ್ವಾತಂತ್ರ್ಯದ ರಣಕುಂಡವು ಮತ್ತಿಷ್ಟು ಪ್ರಖರವಾಗುವದೆಂಬದರಲಿ ಸಂದೇಹವಿಲ್ಲ."

ಮೌಲವೀಸಾಹೇಬನ ಭಾಷಣದಿಂದ ಕುವರಸಿಂಹನ ದಮನಿಗಳಲ್ಲಿ ಕ್ಷಾತ್ರ ರಕ್ತವು ರಭಸದಿಂದ ಹರಿಯತೊಡಗಿತು. ಆಗ ಅವನು ನವ್ಯಸ್ಫೂರ್ತಿಯಿಂದ:

"ಮೌಲವೀಸಾಹೇಬ, ಆಂಗ್ಲರು ನನ್ನನ್ನು ಭಿಕ್ಷುಕವೃತ್ತಿಗೆ ಹಚ್ಚಬೇ ಕೆಂದು ನಿಶ್ಚಯಿಸಿರುವರು. ಜಯಾಪಜಯಗಳು ದೈವಾಧೀನವಿದ್ದರೂ ವೀರ ಕ್ಷತ್ರಿಯರ ಕೈಯನ್ನಷ್ಟು ಅವರಿಗೆ ತೋರಿಸಬೇಕೆಂಬ ಉತ್ಕಟೇಚ್ಛೆಯು ನನ್ನಲ್ಲಿ ಉದಯಿಸಿರುವದು. ಸ್ವಾತಂತ್ರ್ಯಯಜ್ಞದ ಅಧ್ವರ್ಯುಗಳ ನಿಮಂತ್ರಣವನ್ನು ನಾನು ಆನಂದದಿಂದ ಸ್ವೀಕರಿಸುವೆನು."

ಹೀಗೆ ಕುವರಸಿಂಹನು ನುಡಿದ ಕೂಡಲೆ, ಮೌಲವೀಸಾಹೇಬನು ಅತ್ಯಾ ನಂದಬಟ್ಟು ಅವನಿಗೆ ಮುಜುರೆ ಮಾಡಿ ಹೊರಟು ಹೋದನು. ಕುವರಸಿಂಹನ ಮನಸಿನಲ್ಲಾದ ಸ್ಥಿತ್ಯಂತರವನ್ನು ನೋಡಿ ಜವಾನಸಿಂಗನಿಗೆ ವಿಸ್ಮಯವೆನಿಸಿತು. ಅಷ್ಟರಲ್ಲಿ ಅಜಯಸಿಂಹನು ಅಲ್ಲಿಗೆ ಬಂದು, ಕುವರಸಿಂಹನಿಗೆ ವಂದಿಸಿ:—

"ನಾನು ಈಗ ನಿವೃತ್ತಿ ಮಾರ್ಗವನ್ನು ತ್ಯಜಿಸಿರುವೆನು. ತಾವು ಕೈ- ಕೊಂಡಿರುವ ಸಮರ ಯಜ್ಞದಲ್ಲಿ ನನಗಾದರೂ ದೀಕ್ಷೆ ಕೊಡಬೇಕೆಂದು ಬೇಡಿ ಕೊಳ್ಳುವೆನು."

ಅಜಯಸಿಂಹನ ಮಾತುಗಳನ್ನು ಕೇಳಿ ಕುವರಸಿಂಹನು ಸಾನಂದಾಶ್ಚರ್ಯ ಗೊಂಡನು. ತನ್ನ ಆಶಾತಂತುವಾಗಿದ್ದ ಬಂಧುವು ಇಷ್ಟು ದಿನ ಅಡವೀಪಾಲಾ ಗಿದ್ದು, ದೇವತಾನುಗ್ರಹದಿಂದ ಮನೆಯನ್ನು ಸೇರಿದ್ದಕ್ಕಾಗಿ ಅವನಿಗೆ ಎಷ್ಟು

ಆನಂದವಾಗಿರಬಹುದೆಂಬುದನ್ನು ಹೇಗೆ ತರ್ಕಿಸಬೇಕು? ಅವನು ಸಂಭ್ರಮದಿಂದ ಬಂಧುವಿನ ಮೈಮೇಲೆ ಕೈಯಾಡಿಸಿ, ವಾತ್ಸಲ್ಯದಿಂದ: —"ನೀನು ಮನೆಯನ್ನು ಹೊಂದಿದ್ದಕ್ಕಾಗಿ ನನಗೆ ಅತ್ಯಾನಂದವಾಯಿತು. ಇನ್ನು ಮೇಲೆ ಸಂಸಾರದಲ್ಲಿ ಪ್ರವೃತ್ತನಾಗಿ ನನ್ನನ್ನು ಆನಂದಗೊಳಿಸುವ ಭಾರವು ನಿನ್ನನ್ನೇ ಕೂಡಿದೆ" ಎಂದು ನುಡಿದು: "ನಾನು ಯುದ್ಧಕ್ಕೆ ಸಿದ್ಧನಾದ ಸಂಗತಿಯನ್ನು ನಿನಗಾರು ತಿಳಿಸಿದರು?"

"ಫುಲಶಾಹ"

"ಫುಲಶಾಹರು ತ್ರಿಕಾಲಜ್ಞಾನಿಗಳೆನ್ನುವದಕ್ಕೆ ಏನೂ ಅಭ್ಯಂತರವಿಲ್ಲ. ಮುಂದೊದಗುವ ಪ್ರಸಂಗಗಳನ್ನು ಅವರು ಮುಂಚಿತವಾಗಿಯೇ ತಿಳಿಸಿದ್ದರಿಂದ ಅವರ ಅತೀಂದ್ರಿಯ ಶಕ್ತಿಯ ಪ್ರಭಾವವು ಸಹಜವಾಗಿ ಗೊತ್ತಾಗುತ್ತದೆ. ಅಜಯ, ನಾನು ಮಾಲಪೀಸಾಯೇಬರೊಡನೆ ಇದೀಗ ಮಾತಾಡಿದ ಸಂಗತಿಯನ್ನು ಅವರು ಮುಂಚಿತವಾಗಿ ನಿನ್ನೆದುರಿಗೆ ತಿಳಿಸಿರುವರು. ನಾನು ಇದೇ ಯುದ್ಧದ ನಿಮಂತ್ರಣವನ್ನು ಸ್ವೀಕರಿಸಿದೆನು.'

ಫುಲಶಾಹನ ಪ್ರಭಾವವು ಅಜಯನಿಗೆ ಸಂಪೂರ್ಣವಾಗಿ ಗೊತ್ತಾಗಿದ್ದರಿಂದ ಅವನಿಗೇನೂ ಅಷ್ಟೊಂದು ಸೋಜಿಗವಾಗಲಿಲ್ಲ. ಜವಾನಸಿಂಗನೂ ಕುವರಸಿಂಹನೂ ಅವನ ಯೋಗ್ಯತೆಯ ಬಗ್ಗೆ ಚಕಿತರಾದರು. ಆ ಮೇಲೆ ಕುವರಸಿಂಹನು ಅಜಯಸಿಂಹನನ್ನು ಕುರಿತು:—

"ಅಜಯ, ಸಮರ ಯಜ್ಞದಲ್ಲಿ ದೀಕ್ಷಾಬದ್ಧನಾಗಲಿಕ್ಕೆ ನಾನೊಬ್ಬನು ನಿಮಂತ್ರಣವನ್ನು ತೆಗೆದುಕೊಂಡಿರುವೆನು. ಅಭಿನವಗೃಹಸ್ಥಾಶ್ರಮಿಯಾದ ನೀನು ಸಂಸಾರದಲ್ಲಿ ಆನಂದದಿಂದ ಕಾಲಕಳೆಯುತ್ತಿರು."

'ನೀವು ಇದೇನು ನನಗೆ ಹೇಳುತ್ತಿರುವಿರಿ? ಕ್ಷಾತ್ರವೀರರು ಯುದ್ಧಕಾರ್ಯದಲ್ಲಿ ಕೈಹಾಕದೆ, ಹೇಡಿಗಳಂತೆ ನೊಣ ಬಡಿಯುತ್ತ ಮನೆಯಲ್ಲಿ ಕುಳಿತುಕೊಳ್ಳಬೇಕೆ?"

ಅಜಯಸಿಂಹನ ಮಾತುಗಳನ್ನು ಕೇಳಿ ಕುವರಸಿಂಹನು ವಿಚಾರಕ್ಕೊಳಗಾದನು. ಸಮರಯಜ್ಞದಲ್ಲಿ ಅಜಯನು ಭಾಗ ತೆಗೆದುಕೊಳ್ಳಬಾರದೆಂದು ಅವನ ಮನೀಷೆಯಿತ್ತು. ಆಗ ಜವಾನಸಿಂಗನು ಅಜಯನ ಮನಸ್ಸನ್ನು ತಿರುಗಿಸಬೇಕೆಂಬ ಉದ್ದೇಶದಿಂದ:—

"ನೀವು ಕುವರಸಿಂಹರ ಹೇಳಿಕೆಯಂತೆ ನಡೆಯಿರಿ. ನಿಮ್ಮನ್ನು ಯುದ್ಧಕಾರ್ಯದಲ್ಲಿ ತೊಡಗಿಸುವದಕ್ಕೆ ಅವರ ಮನಸ್ಸು ಒಪ್ಪಲೊಲ್ಲದು. ವೃದ್ಧಾಪ್ಯಕಾಲದಲ್ಲಿ ಅವರ ಮನಸ್ಸನ್ನು ನೋಯಿಸುವದು ನಿಮ್ಮ ಧರ್ಮವಲ್ಲ."

"ಧರ್ಮಾಧರ್ಮವಿಚಾರಗಳು ನನಗೆ ಗೊತ್ತಿರುವವು. ರಾಷ್ಟ್ರಧರ್ಮವು

ಎಲ್ಲ ಧರ್ಮಕ್ಕಿಂತ ಮಿಗಿಲಾದದ್ದಿರುವದು. ಕ್ಷಾತ್ರಧರ್ಮೋಚಿತವಾದ ಕರ್ಮವನ್ನು ಮಾಡುವದು ನನ್ನ ಮುಖ್ಯ ಕರ್ತವ್ಯವಿರುವದು. ವಯಾತೀತರಾದ ಅವರನ್ನು ಯುದ್ಧಕ್ಕೆ ಕಳುಹಿಸಿ, ಹೆಂಗಳೆಯರಂತೆ ಮನೆ ಹಿಡಿದು ಕುಳಿತುಕೊಂಡರೆ ಅದು ಧರ್ಮವೆನಿಸುವದೇ ಹೇಗೆ?"

ಅಜಯಸಿಂಹನ ಮಾತುಗಳಿಂದ ಜವಾನಸಿಂಗನು ನಿರುತ್ತರನಾದನು; ಕುವರಸಿಂಹನಾದರೂ ನಿರುಪಾಯಗೊಂಡನು. ಆಗ ಅವನು ಬಿಸಿಯುಸಿರು ಬಿಡುತ್ತ:—

"ನೀನು ಮೊದಲೇ ಮನೆಯನ್ನು ಪ್ರವೇಶಿಸಿದ್ದರೆ ನಾನು ಸಂಗ್ರಾಮದ ನಿಮಂತ್ರಣವನ್ನೇ ತೆಗೆದುಕೊಳ್ಳುತ್ತಿರಲಿಲ್ಲ."

"ನೀವು ಸಂಗ್ರಾಮದ ನಿಮಂತ್ರಣವನ್ನು ನಿರಾಕರಿಸಿದ್ದರೆ, ನಾನು ಮನೆಯನ್ನೇ ಪ್ರವೇಶಿಸುತ್ತಿದ್ದಿಲ್ಲ!" ಎಂದು ಸ್ಪಷ್ಟಮಾತಿನಿಂದ ಅಜಯನು ನುಡಿದು: "ಅಣ್ಣಾ, ನೀವು ಹೀಗೆ ನಿರುತ್ಸಾಹಿಗಳಾಗಬೇಡಿರಿ. ಯಥಾಸ್ಥಿತವಾಗಿ ಕ್ಷಾತ್ರಧರ್ಮವನ್ನೂ ರಾಷ್ಟ್ರಧರ್ಮವನ್ನೂ ಪಾಲಿಸುತ್ತಿರುವಾಗ, ಪುಕ್ಕ ಮಾಯಾ-ಮೋಹಗಳಿಗೆ ಎಡೆಗೊಡುವದು ನಿಮ್ಮಂಥಹ ಪ್ರತಿಷ್ಠಿತ ಕ್ಷಾತ್ರಿಯರ ಕರ್ತವ್ಯವಲ್ಲ. ದೇಶವನ್ನು ಪಾರತಂತ್ರ್ಯ ಬಂಧನದಿಂದ ಮುಕ್ತಮಾಡುವದಕ್ಕಾಗಿ ಸ್ವಾತಂತ್ರ್ಯದ ರಣಕುಂಡವು ಪ್ರಜ್ವಲಿತವಾಗಿರಲು, ಇಂಥಹ ಸುಸಂಧಿಯನ್ನೂ ವ್ಯರ್ಥವಾಗಗೊಡುವದುಂಟೆ! ನೀವು ಯಾವ ಪಥದ ಆಲೋಚನೆಯನ್ನು ಮನಸ್ಸಿನಲ್ಲಿ ತಾರದೆ, ಸ್ವೀಕೃತಕಾರ್ಯ ಪ್ರವೃತ್ತರಾಗಿರಿ. ಬಹಿರಂಗವಾಗಿ ಯುದ್ಧವು ಪ್ರಾರಂಭವಾಗುವದಕ್ಕೆ ಇನ್ನೂ ವಿಲಂಬವಿರುವದು. ಗುಪ್ತಸಿದ್ಧತೆಯನ್ನು ಒಳ್ಳೆಯ ರಭಸದಿಂದ ನಡೆಯಿಸೋಣ. ನಾವು ಸ್ವಾತಂತ್ರ್ಯ ಸಂಗ್ರಾಮದಲ್ಲಿ ಸೇರುವೆವೆಂಬ ಮಾತು ಅನ್ಯರಿಗೆ ಕೆಲವು ದಿವಸಗಳ ವರೆಗೆ ಸಹಸಾ ತಿಳಿಯದಂತೆ ಜಾಗ್ರತೆಯಿಂದಿರತಕ್ಕದ್ದು."

ಹೀಗೆ ಅಜಯಸಿಂಹನು ನುಡಿಯಲು, ಅವನ ಎಲ್ಲ ಮಾತುಗಳಿಗೆ ಕುವರಸಿಂಹನು ಒಪ್ಪಿಕೊಂಡನು. ಆಗ ಅವನು:—

"ಅಜಯ, ಈ ಸಂನ್ಯಾಸಿಗಳ ಉಡುಪನ್ನು ಬಿಸುಟಿ, ಸಂಸಾರಿಗಳಿಗೆ ತಕ್ಕಂತೆ ವಸ್ತ್ರಗಳನ್ನು ಧರಿಸು."

"ಅವಶ್ಯ. ಇನ್ನು ಮೇಲೆ ನಾನು ಈ ವೇಷದಿಂದ ಇರುವುದೇಕೆ?" ಎಂದು ಅಜಯಸಿಂಹನು ಮುಗುಳು ನಗೆಯಿಂದ ನಕ್ಕು ನುಡಿದನು.

ಅಜಯನು ಗೃಹತ್ಯಾಗ ಮಾಡಿದ್ದರಿಂದ, ಅವನ ಪತ್ನಿಯಾದ ಇಂದುಮತಿ ದೇವಿಯೂ, ಇನ್ನೊಬ್ಬ ಬಂಧುವಿನ ಪತ್ನಿಯಾದ ತಾರಾದೇವಿಯೂ ಜಗದೀಶ

ಅಜಯಸಿಂಹನು ಗೃಹತ್ಯಾಗ ಮಾಡಿದ್ದರಿಂದ ಅವನ ಪತ್ನಿಯಾದ ಇಂದುಮತಿದೇವಿಯೂ, ಇನ್ನೊಬ್ಬ ಬಂಧುವಿನ ಪತ್ನಿಯಾದ ತಾರಾದೇವಿಯೂ ಜಗದೀಶಪುರದಲ್ಲಿಯೇ ವಾಸಿಸುತ್ತಿದ್ದರು. ಕುವರಸಿಂಹನು ಅವರನ್ನು ಕರೆತರುವದಕ್ಕಾಗಿ ಮೇಣೆ-ಪಲ್ಲಕ್ಕಿಗಳನ್ನು ಕಳುಹಿಸಿದನು. ಸಂನ್ಯಾಸತ್ಯಾಗವಾದ ಮೇಲೆ ಅನುಮಾನವೇಕೆ?

ವಿರಕ್ತನಾಗಿದ್ದ ಅಜಯಸಿಂಹನು ತಿರುಗಿ ಸಂಸಾರಕ್ಕೆ ತೊಡಗುವನೆಂಬ ಆನಂದದಾಯಕ ಸಂಗತಿಯಿಂದ ಕುವರಸಿಂಹನು ಉತ್ಸಾಹಗೊಂಡನು. ಕ್ಷತ್ರಿಯೋಚಿತವಾದ ಕರ್ತವ್ಯವನ್ನಾಚರಿಸುವದರಲ್ಲಿ ಅಜಯನು ತನಗಿಂತ ಮೇಲಿರುವನೆಂಬ ನಂಬಿಗೆಯು ಕುವರಸಿಂಹನಿಗಾದ್ದರಿಂದ ಅವನಲ್ಲಿ ನವ್ಯಸ್ಫೂರ್ತಿಯು ಪ್ರಾದುರ್ಭವಿಸಿತು!

## ಅಪೂರ್ವ ವಿಜಯ.

ಜಗದೀಶಪುರದಿಂದ ಇಂದುಮತಿದೇವಿ, ತಾರಾದೇವಿ ಮೊದಲಾದ ಸ್ತ್ರೀ ಪರಿವಾರವು ಆರಾಕ್ಕೆ ಬಂದಿತು. ಮಹಾಕಾಲಿಯು ಪ್ರಸಾದದಿಂದಲೂ ಘುಲಶಾಹನ ಅನುಗ್ರಹದಿಂದಲೂ ಸುದಿನವನ್ನು ಕಂಡೆನೆಂದು ಇಂದುಮತಿದೇವಿಯು ಆನಂದಬಟ್ಟಳು. ವ್ಯರ್ಥವಾಗತೊಡಗಿದ್ದ ಪ್ರಿಯಭಗಿನಿಯ ಆಯುಷ್ಯವು ಸಾರ್ಥಕವಾಗುವ ಸುವರ್ಣಸಂಧಿಯು ಲಭಿಸಿದ್ದರಿಂದ ತಾರಾದೇವಿಗೆ ಕಡು ಸಂಭ್ರಮವಾಗಿತ್ತು. ಅಜಯಸಿಂಹನಲ್ಲುಂಟಾದ ಸ್ಥಿತ್ಯಂತರವನ್ನು ನೋಡಿ, ಪುರವಾಸಿಗಳಾದರೂ ಸಂತೋಷವನ್ನು ವ್ಯಕ್ತಮಾಡಿದರು.

ಅಜಯಸಿಂಹನು ವೈರಾಗ್ಯದ ಪ್ರಥಮ ಪಾಠವನ್ನು ಇನ್ನೂ ಮರೆತಿರಲಿಲ್ಲ. 'ಸ್ತ್ರೀವ್ಯಾಮೋಹವು ಪುರುಷನಿಗೆ ಬಂಧನಕಾರಿಯಾದದ್ದು; ಮಾಯಾ-ಮೋಹಗಳನ್ನು ಹಚ್ಚಿಕೊಂಡ ಮನುಷ್ಯನು ಪಾರಲೌಕಿಕ ಸೌಖ್ಯಕ್ಕೆ ಎರವಾಗುತ್ತಾನೆ; ವೈಷಯಿಕ ವ್ಯಾಮೋಹದಿಂದ ದೂರವಾಗಿದ್ದರೆ ಮನುಷ್ಯನು ಸನ್ಮಾರ್ಗಕ್ಕೆ ಹತ್ತಿ ಜ್ಞಾನಸಂಪಾದನಗೆ ಅರ್ಹನಾಗುತ್ತಾನೆ. ಇಂದ್ರಿಯ ಲಾಲಸೆಯಿಂದ ಮನುಷ್ಯನು ಅಜ್ಞಾನತಮದಲ್ಲಿ ಸಿಲುಕುತ್ತಾನೆ.' ಇವೇ ಮೊದಲಾದ ವಿಚಾರಗಳು ಇನ್ನೂ ಅವನನ್ನು ಬಿಟ್ಟಿರಲಿಲ್ಲ. ಪತ್ನಿಯು ಸ್ವಗೃಹಕ್ಕೆ ಬಂದು ಎಷ್ಟೋ ದಿನಗಳಾಗಿದ್ದರೂ ಅವಳ ಮುಖದರ್ಶನವನ್ನು ಮಾಡಿಕೊಳ್ಳುವದಕ್ಕೆ ಸಹ ಅವನು ಹೆದರತೊಡಗಿದ್ದನು. ಅವನು ಪತ್ನಿಯ ಮುಖವನ್ನು ನೋಡಿದೆಂದರೆ ವಿವಾಹಕಾಲದಲ್ಲಿಯೇ!

ಅಜಯಸಿಂಹನ ಈ ರೀತಿಯಾದ ಅಲಿಪ್ತವ್ಯವಹಾರವು ಸ್ತ್ರೀ ವರ್ಗದ ಜನರಿಗೆ ರುಚಿಸಲಿಲ್ಲ. ನವಯೌವನಯುಕ್ತಳಾದ ರಾಣಿಯು:— ಅಜಯಸಿಂಹನ ಪತ್ನಿಯಾದ ಇಂದುಮತಿದೇವಿಯು ಪತಿಯ ದರ್ಶನಾಪೇಕ್ಷೆಗಾಗಿ ಆತುರಗೊಂಡಿದ್ದಳು; ಆದರೆ ಆ ಮಾತು ಹೇಗೆ ಸಾಧ್ಯವಾಗಬೇಕು? ಪತಿ-ಪತ್ನಿಯರ ಪ್ರೇಮಮಿಲನವಾಗಬೇಕೆಂದು ಅಜಯಸಿಂಹನ ಅಣ್ಣನಾದ ವಿಜಯಸಿಂಹನ ಪತ್ನಿ ತಾರಾದೇವಿಯೂ, ಅವನ ಭಗಿನಿಯೂ ಪ್ರಯತ್ನಿಸತೊಡಗಿದ್ದರು; ಆದರೆ ಅವರ ಪ್ರಯತ್ನವು ನಿಷ್ಫಲವಾಗತೊಡಗಿತ್ತು. ಕೈಗೆ ಬಂದ ತುತ್ತು ಬಾಯಿಗೆ ಬರದಂತೆ ಆಗುವದಲ್ಲಿಯೋ, ಎಂದು ಸರ್ವರೂ ಭಯಭೀತರಾಗಿದ್ದರು; ಆದರೂ ಭಗ್ನಮನೋರಥರಾಗದೆ ಅವನ ಮನಸ್ಸು ಪತ್ನಿಯಲ್ಲಿ ಲೀನವಾಗುವದಕ್ಕೆ ಬಗೆ ಬಗೆಯ ಹಂಚಿಕೆಗಳನ್ನು ಮಾಡತೊಡಗಿದ್ದರು.

ಜಗದೀಶಪುರದಲ್ಲಿ ಬಿಟ್ಟಿದ್ದ ಚಿಲಕತ್ತನ್ನು ಅಜಯಸಿಂಹನ ಅತ್ತಿಗೆಯು ಆರಾಕ್ಕೆ ಬರುವಾಗ ಬಳಿಯಲ್ಲಿ ತಂದಿದ್ದಳು. ಅವಳು ಅದನ್ನು ಬುದ್ಧಿಪೂರ್ವಕವಾಗಿ ತನ್ನ ಹತ್ತಿರವೇ ಇಟ್ಟುಕೊಂಡಿದ್ದಳು. ಅಜಯಸಿಂಹನು ಅದನ್ನು ತರುವದಕ್ಕೆ ಎಷ್ಟೋ ಬಾರಿ ಮನುಷ್ಯರನ್ನು ಕಳಿಸಿದ್ದರೂ ಅವಳು ಅದನ್ನು ಕೊಟ್ಟಿದ್ದಿಲ್ಲ. ಚಿಲಕತ್ತು ಬೇಕಾಗಿದ್ದರೆ ತಾನೇ ಬಂದು ಒಯ್ಯಬಹುದೆಂದು ಅವಳು ಹೇಳಿ ಕಳುಹಿಸಿದ್ದಳು. ಅತ್ತಿಗೆಯು ಹೀಗೆ ಹೇಳುತ್ತಿದ್ದುದರ ಮರ್ಮವನ್ನು ಅಜಯನು ತಿಳಿಯಲಾರದವನಾಗಿದ್ದನು. ಅವನು ಅಂತಃಪುರಕ್ಕೆ ಯಾವದೊಂದು ನಿಮಿತ್ತ್ಯದಿಂದ ಬರಬೇಕೆಂದು ಅವನ ಅತ್ತಿಗೆಯ ಇಚ್ಛೆಯಿತ್ತು. ಅವಳ ಹೇಳಿಕೆಯಂತೆ ಅವನು ತನ್ನ ಅತ್ತಿಗೆಯ ಬಳಿಗೆ ಬಂದು:—

"ಅಕ್ಕಾ, ಚಿಲಕತ್ತನ್ನು ಕೊಡಿರಿ. ನಾನು ಕಳುಹಿಸಿದ ಮನುಷ್ಯರೊಡನೆ ಅದನ್ನು ಕಳಿಸಲಿಲ್ಲವೇಕೆ?"

"ಅಜಯ, ಮಹತ್ವದ ಜೀನಸುಗಳನ್ನು ಸೇವಕ-ಸೇವಕಿಯರ ಕೈಯಲ್ಲಿ ಕೊಡುವದುಂಟೆ?"

"ನಿಮ್ಮ ಮಾತಿನಂತೆ ನಾನೇ ಬಂದಿರುವೆನಲ್ಲ? ಈಗಲಾದರೂ ಕೊಡಿರಿ."

"ಚಿಲಕತ್ತನ್ನು ಅಡಿಗೆಯ ಮನೆಯಲ್ಲಿಟ್ಟಿರುತ್ತಾರೇನು?"

"ಹಾಗಾದರೆ ಅದು ಎಲ್ಲಿ ಇರುವದು?"

"ಶಯ್ಯಾಮಂದಿರದಲ್ಲಿ!"

ಈಗ ಮಾತ್ರ ಅತ್ತಿಗೆಯ ಮಾತಿನ ಒಲವು ಅಜಯಸಿಂಹನಿಗೆ ತಿಳಿಯಿತು. ಅವನು ಅವಳ ಮುಖವನ್ನು ದಿಟ್ಟಿಸಿ ನೋಡಿದನು. ಅವಳು ಮುಗುಳು ನಗೆ ನಗುತ್ತಿರುವದನ್ನು ನೋಡಿ ಅವನ ಸಂಶಯವು ಮತ್ತಿಷ್ಟು ದೃಢವಾಯಿತು. ಅಜ

ಯನು ಪ್ರಾಪ್ತವಯಸ್ಕ ತರುಣನಿದ್ದರೂ, ಬಾಲ ಸುಲಭವಾದ ಸಂಕೋಚ ವೃತ್ತಿಯು ಇನ್ನೂ ಅವನನ್ನು ತೊಲಗಿರಲಿಲ್ಲ. ಪ್ರೇಮೋತ್ಸುಕ ಸ್ತ್ರೀಯರ ಪ್ರಣಯ ಲೀಲೆಯನ್ನೂ ಅನುರಾಗದೃಶ್ಯಗಳನ್ನೂ ಅವನು ಕಣ್ಣಾರೆ ಕಂಡಿದ್ದಿಲ್ಲ. ವೈರಾಗ್ಯದಲ್ಲಿ ಹೇಗೋ ಹಾಗೆಯೇ ಯುದ್ಧಕಾರ್ಯದಲ್ಲಿ ವಿಷಯಲಾಲಸೆಯು ತಿರಸ್ಕೃತವಾದದ್ದೆಂದು ಅವನ ಭಾವನೆಯಾಗಿತ್ತು. ಸ್ವಕೀಯರು ನಾನಾವಿಧವಾದ ಜಾಲಗಳನ್ನು ಹಾಕಿ ತನ್ನನ್ನು ಪ್ರಣಯಪಂಕದಲ್ಲಿ ಎಲ್ಲಿ ಕೆಡಹುವರೋ ಎಂದು ಅವನು ಬೆದರಿಕೊಂಡಿದ್ದನು. ಆಗ ಅವನು ಅಂಜುತ್ತಂಜುತ್ತ:—

"ಶಯ್ಯಾ ಮಂದಿರದಲ್ಲಿ ಯಾರೂ....ಇ....ಇಲ್ಲ....ವ....ವಷ್ಟೆ?"

"ಯಾರೂ ಇಲ್ಲ."

"ನಿಜವೆ?"

"ಅನ್ಯರಾರೂ ಶಯನಮಂದಿರವನ್ನು ಪ್ರವೇಶಿಸುವದಿಲ್ಲ. ಒಂದುವೇಳೆ ಇದ್ದರೆ, ಶಯನಮಂದಿರದಲ್ಲಿ ರಕ್ಷಕರೇ ಇರಬಹುದು ಅದಕ್ಕಾಗಿ ನೀನು ಈ ಪರಿಯಾಗಿ ಬೆದರುವದೇಕೆ? ಒಂದು ವೇಳೆ ಯಾರಾದರೂ ಇದ್ದರೆ, ಅವರೇನು ಹುಲಿ-ಕರಡಿಗಳ ಮುಖವನ್ನು ಕಟ್ಟಿಕೊಂಡಿರುತ್ತಾರೇನು? ಮನುಷ್ಯರಿಗೆ ಬೆದರುವವನಾದ ನಿನಗೆ ಸಂಗ್ರಾಮ ಸಿಂಹನೆಂದು ಅನ್ನುವವರು ದಡ್ಡರೇ ಸರಿ."

"ಅಕ್ಕಾ, ನಾನು ಸಂಗ್ರಾಮಸಿಂಹನಿದ್ದರೂ, ಒಂದು ವಿಷಯದಲ್ಲಿ ಗ್ರಾಮಸಿಂಹನಂತಾಗಿರುತ್ತೇನೆ!"

ಅಜಯನಿಗೆ ಚಿಲಕತ್ತನ್ನು ತೊಡುವ ಉತ್ಸುಕತೆಯು ಒಹಳವಾಗಿತ್ತು. ಆದ್ದರಿಂದ ಅವನು ಹೆ ಗಾದರೂ ಗಟ್ಟಿಮನಸ್ಸು ಮಾಡಿ ಶಯ್ಯಾಗೃಹದ ಕಡೆಗೆ ಸಾಗಿದನು. ಆಗ ಅವನ ಮನಸ್ಸಿನಲ್ಲಿ ನಾನಾವಿಧವಾದ ವಿಚಾರಗಳು ಏರತೊಡಗಿದ್ದವು. 'ಅಲ್ಲಿ ತನ್ನ ಪತ್ನಿಯಿದ್ದರೆ ಹೇಗೆ ಮಾತಾಡಬೇಕು? ಅವಳು ಮಾತನಾಡಿಸಿದರೆ ಅವಳಿಗೆ ಹೇಗೆ ಉತ್ತರ ಕೊಡಬೇಕು? ಪ್ರೇಮಾಂಧಳಾದ ಅವಳು ನನ್ನ ಎದುರಿಗೆ ಒಂದು ಅಡ್ಡಗಟ್ಟಿದರೆ ಆ ಬಂಧನವನ್ನು ಹೇಗೆ ನಿವಾರಿಸಿಕೊಳ್ಳಬೇಕು?' ಮೊದಲಾದ ವಿಚಾರಗಳಿಂದ ಅವನ ಮನಸ್ಸು ಚಾಂಚಲ್ಯವನ್ನು ಹೊಂದಿತ್ತು

ಶಯ್ಯಾಮಂದಿರದಲ್ಲಿ ಸುವರ್ಣಖಚಿತ ಮಂಚಕದ ಮೇಲೆ ರಾಣಿಯು ಕುಳಿತುಕೊಂಡಿದ್ದಳು. ಸಮ್ಮುಖದಲ್ಲಿದ್ದ ಸಮೆಗಳಲ್ಲಿ ಸುಗಂಧ ತೈಲದ ಜ್ಯೋತಿಗಳು ಪ್ರಕಾಶಿಸತೊಡಗಿದ್ದವು. ಗೋಡೆಗಳ ಮೇಲೆ ತೂಗ ಹಾಕಿದ್ದ ನಳದಮಯಂತಿ, ಸೀತಾರಾಮ, ಸಾವಿತ್ರೀಸತ್ಯವಾನ, ಅತ್ರ್ಯನಸೂಯಾ, ದುಷ್ಯಂತಶಕುಂತಲಾ, ರಾಧಾಕೃಷ್ಣ, ರಮಾಮಾಧವ ಮೊದಲಾದ ಚಿತ್ರಗಳು ಜ್ಯೋತಿ ಪ್ರಕಾಶದಿಂದ ಎದ್ದು ಕಾಣತೊಡಗಿದವು. ಇಂದುಮತಿ ಅಜಯಸಿಂಹರ ವಿವಾಹಕಾಲದ ಚಿತ್ರವು

ಚಿಲಕತ್ತು ಹಾಕಿದ ಸ್ಥಳದಲ್ಲಿಯೇ ಇತ್ತು. ಅಜಯಸಿಂಹನು ಶಯ್ಯಾಮಂದಿರವನ್ನು ಪ್ರವೇಶಿಸಿದ ಕೂಡಲೆ ರಾಣಿಯು ಮಂಚಕದಿಂದೆದ್ದು ಬದಿಗೆ ಸರಿದು ನಿಂತಳು. ಅವಳು ಮನ್ಮಥ ಸಮರೂಪವುಳ್ಳ ಪತಿಯನ್ನು ಪ್ರೇಮಳ ದೃಷ್ಟಿಯಿಂದ ಕಣ್ಣು ತುಂಬ ನೋಡಿದಳು. ಅಜಯಸಿಂಹನಿಗೆ ಅವಳು ಇನ್ನೂ ದೃಷ್ಟಿಗೆ ಬಿದ್ದಿರಲಿಲ್ಲ. ಅವನು ಶಯನ ಮಂದಿರದ ಸೊಬಗನ್ನು ನೋಡಿ ಬೆರಗಾಗಿ ಎದುರಿನಲ್ಲಿದ್ದ ಚಿಲಕತ್ತು ತೆಗೆದುಕೊಳ್ಳಬೇಕೆಂದು ಮುಂದೆ ಸಾಗಿದನು. ಅಲ್ಲಿದ್ದ ತನ್ನ ಹಾಗು ನೂತನ ಪರಿಣಿತ ಪತ್ನಿಯ ಭಾವಚಿತ್ರವನ್ನು ನೋಡಿ, ಆ ಚಿತ್ರವನ್ನು ಕೆಲವು ಹೊತ್ತಿನ ವರೆಗೆ ಎವೆಯಿಕ್ಕದೆ ನೋಡುತ್ತ ನಿಂತನು. ಆಗ ಅವನಿಗೆ ತನ್ನ ಪೂರ್ವಾಯುಷ್ಯದ ಚಿತ್ರಪಟವು ಕಣ್ಣ ಮುಂದೆ ಕಟ್ಟಿದಂತಾಯಿತು. ಅಷ್ಟರಲ್ಲಿ ಪೈಜಣದ ಧ್ವನಿಯು ಅವನ ಕಿವಿಗೆ ಬಿತ್ತು. ಕೂಡಲೆ ಅವನು ಬೆದರಿದ ಜಿಂಕೆಯಂತೆ ಹೊರಳಿ ನೋಡಿದನು! ಆಗ ಲಾವಣ್ಯಲತಿಕೆಯೋರ್ವಳು ತನ್ನ ಕಡೆಗೆ ನೋಡುತ್ತ ನಿಂತುಕೊಂಡದ್ದು ಅವನ ದೃಷ್ಟಿಗೆ ಬಿತ್ತು. ಆ ನಾರೀರತ್ನವು ತನ್ನ ಪ್ರಿಯತಮೆಯೆಂದು ಅವನು ಗ್ರಹಿಸಿಕೊಂಡನು. ಅವಳು ನಿಜವಾಗಿ ಅವನ ರಾಣಿ, ಮಂಜುಳವಾಣಿಯಾಗಿದ್ದಳು. ಅವಳನ್ನು ನೋಡಿದ ಕೂಡಲೆ ಅಜಯನ ಎದೆಯು 'ಢಕ ಢಕ' ಹಾರತೊಡಗಿತು. ಪತಿಯ ದೃಷ್ಟಿ ವಿಕ್ಷೇಪವಾದೊಡನೆಯೆ ರಾಣಿಯು ಲಜ್ಜೆಯಿಂದ ಅವನತಮುಖಿಯಾದಳು. ಲಜ್ಜಾಯುತವಾದ ಅವಳ ಸುಂದರ ಮುಖವನ್ನು ನೋಡಿ, ಅಜಯಸಿಂಹನಂತಹ ವಿರಕ್ತನು ಸಹ ''ಇವಳೇನು ಸ್ವರ್ಗಾಂಗನೆಯೋ!'' ಎಂದು ಉದ್ಗಾರ ತೆಗೆದನು.

ರಾಜರಾಜೇಶ್ವರಿಯಂತೆ ಶೋಭಿಸುತ್ತಿರುವ ಅವಳ ಸೌಂದರ್ಯ ಸಾಗರವು ಅಭಿನವ ಯೌವನಾವಸ್ಥೆಯ ಸಂಯೋಗದಿಂದ ಮೇರೆದಪ್ಪಿ ಉಕ್ಕತೊಡಗಿತ್ತು. ಗೌರವರ್ಣದ ಅಂಗಕಾಂತಿ, ಕಾಂತಿಯುತವಾದ ಚಂದ್ರಾನನ, ಆನನದಲ್ಲಿ ಸೊಬಗುವಡೆದ ಹರಿಣಾಕ್ಷ, ಅಕ್ಷಕ್ಕೆ ಮೋಹಕವಾದ ಬಾಹುಲತೆ, ಲತಾಸದೃಶವಾದ ನೈಕಟ್ಟು, ನೈಕಟ್ಟಿಗೆ ಸರಿಯಾದ ನಿಲುವಿಕೆ ಮೊದಲಾದ ಚೆನ್ನೆರಮಣಿಯರಲ್ಲಿರತಕ್ಕ ಎಲ್ಲ ಸುಲಕ್ಷಣಗಳಿಂದ ಅವಳು ಪರಿಪೂರ್ಣಳಾಗಿದ್ದಳು. ಅವಳನ್ನು ನೋಡಿ ಅಜಯನು ಬೆಚ್ಚಿದನು. ಪರಕ್ಷಣದಲ್ಲಿ ಲಜ್ಜೆಯಿಂದ ಮುಖಬಾಗಿಸಿದನು. 'ಅಹಾ ಲಾವಣ್ಯವತಿಯರಾದ ಸ್ತ್ರೀಯರ ಪ್ರಭಾವವು ಎಂತಹ ಬಲಾಢ್ಯ ಉಳ್ಳದ್ದಿರುವದಲ್ಲ! ಈ ನನ್ನ ಸಹಚಾರಿಣಿಯು ಕಲ್ಲಿಗಿಂತಲೂ ಕಲ್ಲಾಗಿದ್ದ ನನ್ನ ಮನಸ್ಸನ್ನು ಚಂಚಲಗೊಳಿಸಿಬಿಟ್ಟಳು! ಇಂತಹ ಚಂಚಲಭಾವದವನಾದ ನಾನು ವೈರಾಗ್ಯವನ್ನು ತಾಳಿ ಸಾಧುಸಂತನಾಗಬೇಕೆಂದು ಹವಣಿಸಿದ್ದೆನಲ್ಲ! ಸುಲಕ್ಷಾಹರು ಹೇಳಿದಂತೆ ನನಗೆ ಆ ಮಾರ್ಗದಲಿ ನಿಜವಾಗಿ ಯಶಸ್ಸು ದೊರೆಯು

ತ್ತಿದ್ದಿಲ್ಲ. ಈ ತರುಣಿಯು ನೇತ್ರ ಕಟಾಕ್ಷಗಳ ಕೂರ್ಗಣೆಗಳನ್ನು ನನ್ನ ಮೇಲೆ ಎಸೆದು ತೀರ ಹೈರಾಣ ಮಾಡಿಬಿಟ್ಟಳು. ಇಂತಹ ಸ್ವೈರಸಂಚಾರಿ ಮನಸ್ಸಿನವನಾದ ನಾನು ವಿರಕ್ತನಾಗಿ ಹೇಗೆ ಬಾಳುತ್ತಿದ್ದೆನು?' ಮೊದಲಾದ ವಿಚಾರಗಳಿಂದ ಅವನು ದೇಹಭಾನವಿಲ್ಲದವನಂತೆ ನಿಂತುಬಿಟ್ಟಿದ್ದನು. ಎಷ್ಟೋ ಹೊತ್ತಿನ ಮೇಲೆ ಅವನು ತನ್ನ ಹರಿದಾಡುವ ಮನಸ್ಸನ್ನು ಹಾಗೂ ಹೀಗೂ ಮಾಡಿ ಬಿಗಿಹಿಡಿದು ಚಿಲಕತ್ತನ್ನು ತೆಗೆದು ಕೈಯಲ್ಲಿ ಹಿಡಿದುಕೊಂಡನು. ಹೊರಗೆ ಹೋಗಬೇಕೆಂದು ಯತ್ನಿಸುತ್ತಿದ್ದರೂ ಅವನ ಕಾಲುಗಳು ಸ್ಥಳ ವನ್ನು ಬಿಟ್ಟು ಕಿತ್ತಲೊಲ್ಲವು. ಅವನು ತನ್ನಷ್ಟಕ್ಕೆ ತಾನೇ 'ಎಲಾ! ಇದೇ ನಾಶ್ಚರ್ಯವು!' ಎಂದು ಅಂದುಕೊಂಡನು. ಅಷ್ಟರಲ್ಲಿ ಲಾವಣ್ಯಲತಿಕೆ ಯಾದ ಆ ಸೌಂದರ್ಯವತಿಯು ಛಣ್-ಛಣ್ ಪೈಜಣದ ಸಪ್ಪಳಗೈಯುತ್ತ ಮಂದಗಮನದಿಂದ ಮುಂದೆ ಬಂದು, ಮುದ್ದಾದ ಮುಖಮಂಡಲದಿಂದ ಕಿರು ನಗೆಯನ್ನು ಹೊರಸೂಸುತ್ತ ಕೋಗಿಲೆಗಿಂತಲೂ ಕೋಮಲವಾದ ಶ್ರುತಿಮನೋ ಹರ ಸ್ವರದಿಂದ:—

"ಅಪ್ಪಣೆಯಾದರೆ ನಾನೇ ತಮಗೆ ಈ ಚಿಲಕತ್ತನ್ನು ತೊಡಿಸುವೆನು. ಪತಿ ಗಳಿಗೆ ಚಿಲಕತ್ತು ತೊಡಿಸುವದು ಕ್ಷತ್ರಿಯ ರಮಣಿಯರ ಧರ್ಮವೇ ಆಗಿರು ವದು."

ವಿವಾಹವಾದ ಮೇಲೆ ಪತ್ನಿಯ ಧ್ವನಿಯನ್ನು ಕೇಳಿದ್ದು ಅಜಯನಿಗೆ ಇದೇ ಮೊದಲನೆಯ ಬಾರಿ! ಯಾರೋ ತನ್ನ ಕರ್ಣದಲ್ಲಿ ಅಮೃತ ವೃಷ್ಟಿಯನ್ನು ಕರೆ ತ್ತಿರುವರೋ ಏನೋ, ಎಂಬಂತೆ ಅವನಿಗೆ ಭಾಸಮಾನವಾಯಿತು. ಪತ್ನಿಯ ಮಾತಿಗೆ ಪ್ರತಿಯಾಗಿ ಮಾತನಾಡುವದಕ್ಕೆ ಅವನ್ನು ಅಲ್ಲಿ ಇದ್ದೇ ಇಲ್ಲ. ಪತಿಯು ದೇಹಭಾನವಿಲ್ಲದವನಂತೆ ಸ್ವಸ್ಥವಾಗಿ ನಿಂತದ್ದನ್ನು ನೋಡಿ ರಾಣಿಗೆ ಒಂದು ವಿಧ ವಾದ ಶಂಕೆಯುಂಟಾಯಿತು. ಆಗ ಅವಳು ಆಶಾಯುಕ್ತ ಧ್ವನಿಯಿಂದ:—

"ಯಾಕೆ? ನನ್ನೊಡನೆ ಮಾತಾಡಲೇ ಬಾರದೆಂದು ಸಂಕಲ್ಪಮಾಡಿಕೊಂಡಿ ರುವಿರೇನು?"

ಇಷ್ಟರಲ್ಲಿಯೇ ಕೋಮಲ ಹೃದಯದ ರಾಣಿಯ ಕುತ್ತಿಗೆಯು ಬಿಗಿದಿತ್ತು. ನೇತ್ರಗಳು ಸಜಲವಾಗಿದ್ದವು. ಅಜಯನು ಪತ್ನಿಯ ಈ ಸ್ಥಿತಿಯನ್ನು ನೋಡಿ ಪೂರ್ಣ ಹತಾಶನಾದನು. ವಿರಕ್ತ ವೈಭವದ ಆಡಂಬರದಿಂದ ಮೆರೆಯುತ್ತಿದ್ದ ಅವನ ಮುಖವು ಸೋಲಿನ ಚಿಹ್ನದಿಂದ ಹುಚ್ಚೆದ್ದು ಹರಿಯತೊಡಗಿತು. ಅದು ಒಪ್ಪಂದದ ಪತಾಕೆಯನ್ನು ಧರಿಸಿತು. ವಿಜಯಶ್ರೀಯು ಸಾಧ್ವಿಯಾದ ರಾಣಿಗೆ ಮಾಲೆಯನ್ನು ಹಾಕಿದಳು. ಅಜಯನು ರಾಣಿಯ ಸೆರೆಯಲ್ಲಿ ಸಿಲುಕಿದನು. ಅವ

ಳಾದರೂ ತಪ್ಪುಗಾರನಾದ ಪತಿಗೆ ಯೋಗ್ಯ ಶಾಸನವನ್ನು ವಿಧಿಸಲಿಕ್ಕೆ ಸುಸಜ್ಜಿತಳೇ ಆಗಿದ್ದಳು. ಆಗ ಅಜಯನು ಪ್ರಿಯತಮೆಯನ್ನು ಕುರಿತು:

"ಕವಚವನ್ನು ತೊಡಿಸಬೇಕೆಂಬ ನಿನ್ನ ಇಚ್ಛೆಯನ್ನು ನಾನೇನೂ ಅಲ್ಲಗಳೆಯುವದಿಲ್ಲ. ನಿನ್ನ ಮನಬಂದಂತೆ ಮಾಡಲು ಪೂರ್ಣ ಅಧಿಕಾರಿಣಿಯಿರುವೆ."

ಬಿಸಿಯಾದ ಮೇಲೆ ಬೆಣ್ಣೆ ಕರಗದಿರುವದೆ? ರಾಣಿಯು ಅವನಿಗೆ ಕವಚವನ್ನು ತೊಡಿಸಿದಳು. "ಕವಚವು ತಮ್ಮ ಮೈಗೆ ಚನ್ನಾಗಿ ಹೊಂದಿಕೆಯಾಗುತ್ತದೆ." ಎಂದು ರಾಣಿಯು ನುಡಿದ ಕೂಡಲೆ, ಅಜಯನು:—

"ಇದನ್ನು ಇಂದು ತೆಗೆದಿಟ್ಟುಬಿಡು."

ರಾಣಿಯು ಅವನ ಮಾತಿನ ಮೇರೆಗೆ ಅವನ ಮೈಮೇಲಿನ ಚಿಲಕತ್ತನ್ನು ಇಳಿಸಿ, ಮೊದಲಿದ್ದ ಸ್ಥಳದಲ್ಲಿರಿಸಿದಳು. ಕೂಡಲೆ ಅವನು ದಿಗ್ಭ್ರಾಂತನಂತೆ ಹೊರಗೆ ಹೊರಡಲು ಸಾಗಿದನು. ಅಜಯಾ, ನೆರೆಯಾಳುಗಳಿಗೆ ಸ್ವಾತಂತ್ರ್ಯವಿಲ್ಲ; ತಿರುಗು!

"ಈಗಲೆ ಹೊರಟಿರಾ? ಸ್ವಲ್ಪ ಹೊತ್ತು ಕುಳಿತುಕೊಳ್ಳುವದಿಲ್ಲವೇನು? ಎಷ್ಟೋ ದಿವಸಗಳಿಂದ ತಮ್ಮ ದರ್ಶನವೇ ಇಲ್ಲ. ದಾರಿ ತಪ್ಪಿ ಬಂದಾಗೊಮ್ಮೆ ಸ್ವಲ್ಪ ಕುಳಿತು ಹಾಸ್ಯವಿನೋದಗೈದು ಹೋಗಲಿಕ್ಕಾಗುವದಿಲ್ಲವೇನು?"

ಅಜಯನ ಸ್ಥಿತಿಯು "ಮಹದಾಜ್ಞಾ" ಎಂದೆನ್ನುವಂತಾಗಿತ್ತು. ಅವನು ಪತ್ನಿಯ ಮಾತುಗಳನ್ನು ಕೇಳಿ ಅಲ್ಲಿಯೇ ಗಕ್ಕನೆ ನಿಂತನು. ರಾಣಿಯು ತನ್ನ ಕೋಮಲವಾದ ಕರದಿಂದ ಅವನ ಹಸ್ತವನ್ನು ಹಿಡಿದು ಮಂಚಕದ ಕಡೆಗೆ ಕರೆದೊಯ್ದಳು. ಅಜಯನು ನೀರಲ್ಲಿ ಕೊಡ ಬಂದಂತೆ ಅವಳ ಬೆನ್ನುಹಿಂದೆ ಹೋಗಿ ಅವಳ ವಿನಂತಿಯ ಮೇರೆಗೆ-ಆಜ್ಞೆಯ ಮೇರೆಗೆ- ಮಂಚಕದ ಮೇಲೆ ಕುಳಿತನು.

"ಇಂದಿನ ದಿವಸ ದರ್ಶನವಿತ್ತು ನನ್ನನ್ನು ಧನ್ಯಳನ್ನಾಗಿ ಮಾಡಿದಿರಿ." ಎಂದು ರಾಣಿಯು ಆನಂದೋದ್ಗಾರ ತೆಗೆದಳು.

ಇಂತಹ ಸರಳ ಹೃದಯದ ಲಾವಣ್ಯನಿಧಿ ಪ್ರಿಯತಮೆಯ ಮುಖಾವಲೋಕನವು ಪಾತಕವೆಂದು ಗೃಹಿಸಿದ್ದ ತನ್ನಂತಹ ವಿವೇಕ ಶೂನ್ಯನು ತಾನೇ ಎಂದು ಅಜಯನು ಪಶ್ಚಾತ್ತಾಪಬಡತೊಡಗಿದ್ದನು. ಆಗ ಅವನು ಪತ್ನಿಯ ಕರವನ್ನು ಹಿಡಿದು:—

"ಪ್ರಿಯೆ, ನಾನು ನಿಷ್ಠುರನು, ಕೃತಘ್ನನು. ನಿನ್ನಂತಹ ಉಚ್ಚಹೃದಯದ ಅರ್ಧಾಂಗಿಯನ್ನು ಬಹು ಪರಿಯಾಗಿ ನೋಯಿಸಿದೆನು."

"ಹಾಗಾದದ್ದು ಗೃಹಲೀಲೆ! ಎಂದೇ ತಿಳಿದುಕೊಳ್ಳತಕ್ಕದ್ದು. ಇಷ್ಟು ದಿನಗಳ ವರೆಗೆ ಅನುಭವಿಸಿದ ದುಃಖವು ಕ್ಷಣಹೊತ್ತಿನಲ್ಲಿ ಮರೆತು ಹೋಗುವ

ಅಮೃತೋಪಮ ಸಂಧಿಯು ಲಭಿಸಿದ ಮೇಲೆ ಹಿಂದಿನದನ್ನು ಏಕೆ ನೆನಿಸಬೇಕು?''

ಅಜಯನು ಕರಸ್ಪರ್ಶ ಮಾಡಿದ್ದರಿಂದ ರಾಣಿಯ ಸರ್ವಾಂಗವೂ ರೋಮ ಪುಲಕಿತವಾಯಿತು. ಮುಖವು ಸಲಜ್ಜಿತವಾಗಿ ಅವನತವಾಯಿತು. ಮುಖದಲ್ಲಿ ಘರ್ಮಬಿಂದುಗಳು ಶೋಭಿಸತೊಡಗಿದವು.

ಅಜಯನು ಪತ್ನಿಯನ್ನೊಮ್ಮೆ ಚುಂಬಿಸಿದನು. ಆಗ ಅವಳು ಮುಗುಳು ನಗೆ ನಗುತ್ತ: —''ಅಮ್ಮಯ್ಯಾ ಇದೇನು ಅಸ್ವಾಭಾವಿಕತನವು!'' ಎಂದು ಗುಣ ಗುಟ್ಟಿದಳು. ಆಗ ಅಜಯನು ನಸುನಗುತ್ತ: —

''ನಿನ್ನನ್ನು ಯಾವ ಹೆಸರಿನಿಂದ ಕರೆಯಲಿ? ನೀನು ರಾಣಿಯೋ, ಇಂದು ಮತಿಯೊ?''

''ನಾನು ರಾಣಿಯೂ ಅಲ್ಲ; ಇಂದುಮತಿಯೂ ಅಲ್ಲ. ನಿಮ್ಮ ಚರಣ ದಾಸಿಯು.'' ಎಂದು ನುಡಿದು, ರಾಣಿಯು ಅವನ ಹೆಗಲ ಮೇಲೆ ತನ್ನ ಬಾಹು ವಲ್ಲರಿಯನ್ನು ಹಾಕಿದಳು.

''ನೀನು ರಾಣಿಯಲ್ಲವೆ? ನೀನು ಮಹಾರಾಣಿಯಿರುವೆ. ನನ್ನ ಹೃದಯೇಶ್ವರಿ ಯಿರುವೆ.'' ಎಂದು ಅವನು ಅವಳನ್ನು ಮತ್ತೊಮ್ಮೆ ಚುಂಬಿಸಿದನು. ರಾಣಿಯು ಅವನ ಪೂರ್ವಾಪರಾಧವನ್ನು ಕ್ಷಮಿಸದೆ, ತನ್ನ ಬಾಹುಶೃಂಖಲೆಯಿಂದ ಬಂಧಿಸಿ ಅವಳಿಗೆ ತನ್ನ ಮುಖದ ಗಟ್ಟಿಮುಟ್ಟಾದ ಚುಂಬನದ ಬಾಯಿ ಬೀಗ ಹಾಕಿದಳು!

''ರಾಣೀ, ರಾತ್ರಿಯು ಬಹಳವಾದಂತೆ ತೋರುವದು, ಬಾಗಿಲವನ್ನು ಮುಚ್ಚು.''

ಪತಿಯಾಜ್ಞೆಯ ಮೇರೆಗೆ ರಾಣಿಯು ಎದ್ದು ಬಾಗಿಲ ಮುಚ್ಚಿದಳು. ಅಷ್ಟರಲ್ಲಿ ''ಅಪೂರ್ವ ವಿಜಯ!'' ಎಂಬ ಶಬ್ದವು ಅವಳ ಕಿವಿಗೆ ಬಿತ್ತು! ಇದ ತಾರಾದೇವಿಯ ಧ್ವನಿಯೆಂದು ತಿಳಿದು ಅವಳು ಖೊಳ್ಳನೆ ನಕ್ಕಳು. ಈ ಧ್ವನಿ ಯನ್ನು ಕೇಳಿ ಅಜಯನೂ ನಸುನಕ್ಕನು ಪರಕ್ಷಣದಲ್ಲಿ ಈರ್ವರೂ ಲಜ್ಜಿತರಾದರು. ರಾಣಿಯು ಅಜಯನು ಪವಡಿಸಿದ್ದ ಮಂಚಕವನ್ನೇರಿದಳು. ಸ್ವಲ್ಪ ಹೊತ್ತಿನಲ್ಲಿ ಈರ್ವರೂ ಸ್ವಾನಂದ ಸಾಮ್ರಾಜ್ಯದ ಅಮೃತ ವಾರಿಧಿಯಲ್ಲಿ ಲೋಲಾಡತೊಡಗಿ ದರು. ''ಅವರೀರ್ವರ ಕಿವಿಯಲ್ಲಿ ಅಪೂರ್ವ ವಿಜಯ!'' ಎಂಬ ಧ್ವನಿಯು ಗುಣ ಗುಟ್ಟತೊಡಗಿತ್ತು!

# ಕುಟಿಲ ನೀತಿ.

ಶಹಾಬಾದ ಜಿಲ್ಲೆಯ ಅಧಿಕಾರಿಯು ಆರಾದಲ್ಲಿ ವಾಸವಾಗಿದ್ದನಷ್ಟೆ? ಸುತ್ತ ಮುತ್ತು ಬಂಡಾಯದ ಬೇಗೆಯು ಹೊತ್ತಿತೊಡಗಿದ್ದು ತನ್ನ ಸೀಮೆಯಲ್ಲಿ ಮಾತ್ರ ಇನ್ನೂ ಶಾಂತತೆಯು ಉಳಿದದ್ದನ್ನು ನೋಡಿ, ತನ್ನ ಕಟ್ಟುನಿಟ್ಟಿನ ಆಳಿಕೆಯ ಪ್ರಭಾವದಿಂದಲೇ ಹೀಗಿರುವದೆಂದು ಆ ಅಧಿಕಾರಿಯು ತನ್ನಷ್ಟಕ್ಕೆ ತಾನೇ ಹಿಗ್ಗ ತೊಡಗಿದ್ದನು. ತನ್ನ ಕೈಕೆಳಗಿದ್ದ ಪ್ರದೇಶದ ವಿಷಯವಾಗಿ ನಿಶ್ಚಿಂತೆಯಿಂದಿರ ಬೇಕೆಂದು ಅವನು ಪಾಟಣಾದ ಕಮಿಶನರನಾದ ಟೇಲರಸಾಹೇಬನಿಗೆ ಆಶ್ವಾಸನೆ ಕೊಟ್ಟಿದ್ದನು. ಕಮಿಶನರನಿಗೆ ಅವನ ಮಾತಿನ ವಿಶ್ವಾಸವು ಹುಟ್ಟದ್ದರಿಂದ 'ಕಾಲವು ಸೂಕ್ಷ್ಮವಿರುವದು. ಒಳ್ಳೆಯ ಜಾಗ್ರತೆಯಿಂದ ಇರತಕ್ಕದ್ದು. ಬೂದಿ ಮುಚ್ಚಿದ ಕೆಂಡದಂತೆ ಆರಾದ ಸ್ಥಿತಿಯು ಇರುವದೆಂದು ತೋರತೊಡ ಗಿದೆ' ಎಂದು ಅವನು ಜಿಲ್ಹಾಧಿಕಾರಿಗೆ ಎಚ್ಚರಿಕೆ ಕೊಟ್ಟಿದ್ದನು. ಆರಾದ ಸಾಹೇ ಬನು ಕಮಿಶನರನ ಮನಸ್ಸಿನಲ್ಲಿ ಹುಟ್ಟಿದ ವಿಕಲ್ಪ ಭಾವನೆಯನ್ನು ನೋಡಿ ನಸು ನಕ್ಕನು. ಒಂದು ವೇಳೆ ಏನಾದರೂ ಚಲನವಲನವು ನಡೆದದ್ದಾದರೆ ಅದರ ಪರಿಮಾರ್ಜನೆ ಮಾಡುವದಕ್ಕೆ ತಾನು ಶಕ್ತನಿರುವನೆಂದು ಅವನು ಹೆಮ್ಮೆಯಿಂದ ಅಂದುಕೊಂಡನು. ಅವನು ದಿವಾಣಖಾನೆಯಲ್ಲಿ ಕುಳಿತಾಗ ಒಬ್ಬ ಮನು ಷ್ಯನು ಬಂದು ಸಾಹೇಬನಿಗೆ ಮುಜುರೆ ಮಾಡಿ ನಿಂತುಕೊಂಡನು. ಅವನ ಸರಕಾರೀ ಸೇವಕನಿದ್ದುದರಿಂದ ಅವನನ್ನು ಕುರಿತು ಸಾಹೇಬನು:—"ಯಾಕೆ ಬಂದೆ?' ಎಂದು ದರ್ಪೋಕ್ತಿಯಿಂದ ಕೇಳಿದನು. ಆಗ ಆ ಸೇವಕನು:— "ಬಾಬೂ ಕುವರಸಿಂಹನು ಬಂಡಾಯದಲ್ಲಿ ಭಾಗತೆಗೆದುಕೊಂಡ ವಾರ್ತೆಯಿರು ವದು. ಅವನು ಬಹಿರಂಗದಲ್ಲಿ ಯಾವ ಬಗೆಯ ಚಲನವಲನವನ್ನು ನಡಿಸಿರ ದಿದ್ದರೂ, ಅಂತರಂಗ ಸಿದ್ಧತೆಯು ಒಳ್ಳೆಯ ಭರದಿಂದ ನಡೆದಿರುವದಾಗಿ ತಿಳಿ ಯುತ್ತದೆ."

"ಏನು? ಕುವರಸಿಂಹನು ನಮ್ಮ ವಿರುದ್ಧವಾಗಿ ಕಾರಸ್ಥಾನವನ್ನು ನಡಿ ಸಿರುವನೆ? ನಿನ್ನ ಮುಂದೆ ಈ ಸಂಗತಿಯನ್ನು ಯಾರು ಹೇಳಿದರು!" 'ಕರ್ಣೋಪ ಕರ್ಣವಾಗಿ ತಿಳಿದಿರುವದು. ಬಂಡಾಯವು ಏಳುವ ಲಕ್ಷಣವಿರುವದರಿಂದ ತನ್ನ ಸ್ತ್ರೀಪರಿವಾರವನ್ನು ಜಗದೀಶಪುರಕ್ಕೆ ಕಳಿಸುವ ಆಲೋಚನೆಯಲ್ಲಿ ಕುವರ ಸಿಂಹನು ತೊಡಗಿರುವದಾಗಿ ಗುಪ್ತಚರರ ಮುಖಾಂತರವಾಗಿ ತಿಳಿಯಿತು ಆರಾ ದಲ್ಲಿ ಕಾರಸ್ಥಾನವು ನಡೆಯಬೇಕಾದರೆ, ಅದರಲ್ಲಿ ಪ್ರಮುಖತ್ವವನ್ನು ಕುವರ

ಸಿಂಹನು ತೆಗೆದುಕೊಂಡಿರಬಹುದೆಂದು ಸಹಜವಾಗಿ ತರ್ಕಿಸಬಹುದಾಗಿದೆ. ಜಹಾಗೀರಿಯ ಸಂಬಂಧದ ಪ್ರಕರಣದಲ್ಲಿ ಆಂಗ್ಲರ ವಿಷಯಕ್ಕೆ ಅವನು ದ್ವೇಷಭಾವನೆಯನ್ನು ತಳೆದಿರುವದರಿಂದ ಸರಕಾರದ ವಿರುದ್ಧವಾಗಿ ಸಂಚು ಪ್ರಾರಂಭಿಸಿರುವನೆಂದು ತಿಳಿಯುವದಕ್ಕೆ ಬರುವಂತಿದೆ. ಅವನ ಬಂಧುವಾದ ಅಜಯಸಿಂಹನು ಈಗ ಮನೆಯನ್ನು ಸೇರಿದ್ದರಿಂದ ಕುವರಸಿಂಹನಲ್ಲಿ ನವ್ಯಸ್ಫೂರ್ತಿಯು ಹುಟ್ಟಿದಂತೆ ಕಾಣುವದು. ಪಾಟಣಾದಿಂದ ಮೌಲವಿ ಸಾಹೇಬನು ಒಳಸಂಚಿಗಾಗಿ ಬಂದಿದ್ದನೆಂಬ ವಾರ್ತೆಯೂ ಹಬ್ಬಿದೆ. ಇವೆಲ್ಲ ಸಾಧಕ ಬಾಧಕ ಕಾರಣಗಳಿಂದ ಬಹುಶಃ ಕುವರಸಿಂಹನು ಬಂಡಾಯವೆಬ್ಬಿಸುವದಕ್ಕೆ ಸಜ್ಜಾಗುತ್ತಿರುವ ಲಕ್ಷಣವಿರುವದು. ನಡೆದ ಸಂಗತಿಯನ್ನು ಸರಕಾರಕ್ಕೆ ಅರಿಕೆ ಮಾಡಿಕೊಳ್ಳುವದು ಸೇವಕನಾದ ನನ್ನ ಕರ್ತವ್ಯವಾದ್ದರಿಂದ ಇಲ್ಲಿಗೆ ಧಾವಿಸಿ ಬಂದೆನು.''

ಈ ಮಾತುಗಳನ್ನು ಕೇಳಿ ಆರಾದ ಸಾಹೇಬನು ವಿಚಾರಕ್ಕೊಳಗಾದನು. ತನ್ನ ಬಿಗಿಯಿಂದ ಅಲ್ಲಿ ಬಂಡಾಯವೇಳುವದಿಲ್ಲವೆಂದು ಅವನು ಆತ್ಮವಿಶ್ವಾಸ ತಳೆದಿದ್ದನು. ಈ ಹೊಸ ಸುದ್ದಿಯನ್ನು ಕೇಳಿ ಅವನ ಭ್ರಮೆಯು ದೂರವಾಯಿತು. ಆ ಮೇಲೆ ಅವನು ಸೂಕ್ಷ್ಮರೀತಿಯಿಂದ ಈ ಸಂಗತಿಯ ಶೋಧವನ್ನು ನಡೆಯಿಸಿದನು. ಕುವರಸಿಂಹನು ಆಂಗ್ಲರ ವಿರುದ್ಧವಾಗಿ ಶಸ್ತ್ರವೆತ್ತುವದಕ್ಕೆ ಸಿದ್ಧನಾಗಿರುವನೆಂಬ ಸಂಗತಿಯು ಅವನಿಗೆ ವಿಶ್ವಸನೀಯವಾಗಿ ತಿಳಿಯಿತು. ಆರಾದಲ್ಲಿ ಬಂಡಾಯವೆಬ್ಬಿಸಬೇಕೆಂಬ ಉದ್ದೇಶದಿಂದ ಅವನು ಸ್ತ್ರೀ ಮಂಡಲವನ್ನು ಸುರಕ್ಷಿತವಾಗಿದ್ದ ಜಗದೀಶಪುರಕ್ಕೆ ಕಳುಹಿಸಿದ ಸಂಗತಿಯೂ ಸಾಹೇಬನಿಗೆ ಗೊತ್ತಾಯಿತು. ಕೂಡಲೆ ಅವನು ಪಾಟಣಾದ ಕಮಿಶನರನಾದ ಟೇಲರನ ಕಡೆಗೆ ನಿಜಸ್ಥಿತಿಯ ಬಗ್ಗೆ ಬರೆದು ತಿಳಿಸಿದನು.

ಟೇಲರ ಸಾಹೇಬನು ಆರಾದ ಸಾಹೇಬನ ಬರವಣಿಗೆಯನ್ನು ನೋಡಿ ಗಹನ ವಿಚಾರದಲ್ಲಿ ಮುಳುಗಿದನು. ಕುವರಸಿಂಹನು ಬಂಡುಗಾರರಲ್ಲಿ ಸೇರಿದನೆಂದರೆ ಕಠಿಣ ಪರಿಸ್ಥಿತಿಯು ಉಂಟಾಗುವದೆಂದು ಅವನು ಭಾವಿಸಿಕೊಂಡನು. ಬಿಹಾರ ಪ್ರಾಂತದಲ್ಲೆಲ್ಲ ಕುವರಸಿಂಹನ ವರ್ಚಸ್ಸವಿದ್ದುದರಿಂದ ಎಲ್ಲ ರಜಪೂತರು ಅವನನ್ನು ಕೂಡುವರೆಂದು ಅವನು ತಿಳಿದನು. ಏನಾದರೂ ಯುಕ್ತಿ ಪ್ರಯುಕ್ತಿಯನ್ನು ಮಾಡಿ ಕುವರಸಿಂಹನನ್ನು ಪಾಟಣಾಕ್ಕೆ ಕರೆತಂದು, ಅವನನ್ನು ಬಂಧನದಲ್ಲಿರಿಸಬೇಕೆಂದು ಟೇಲರ ಸಾಹೇಬನು ತಂತ್ರಮಾಡಿದನು. ಅವನು ತನ್ನ ನಂಬಿಗೆಯವನಾದ ಪ್ಯಾರೇಲಾಲನೆಂಬ ಧೂರ್ತ ಚಿಟಣೀಸನನ್ನು ಈ ಕೆಲಸಕ್ಕೆ ನಿಯಮಿಸಬೇಕೆಂದು ಗೊತ್ತುಮಾಡಿ ಅವನನ್ನು ಕರೆಯಿಸಿಕೊಂಡನು. ಆಗ ಅವನು ಪ್ಯಾರೇಲಾಲನನ್ನು ಕುರಿತು:—

'ನೀವು ಆರಾಕ್ಕೆ ಹೋಗಿ ಬಾಬೂ ಕುವರಸಿಂಹನನ್ನು ಕರೆದುಕೊಂಡು ಬರ್ರಿ. ಜಹಾಗೀರಿಯ ಸಂಬಂಧವಾಗಿ ನಿಮ್ಮ ಮನಸ್ಸಿನಂತೆ ಕಾರ್ಯ ಮಾಡುವದಕ್ಕೆ ಸಾಹೇಬರು ಸಿದ್ಧರಾಗಿರುವರೆಂಬ ಸಂಗತಿಯನ್ನು ಅವನಿಗೆ ತಿಳಿಸಿರಿ. ಯುಕ್ತಿ-ಪ್ರಯುಕ್ತಿಗಳಿಂದ ಅವನನ್ನು ಇಲ್ಲಿಯ ವರೆಗೆ ಕರೆತರುವ ಭಾರವನ್ನು ನಿಮ್ಮ ಮೇಲೆ ಹಾಕಿರುವೆನು. ನೀವು ರಾಜಕಾರಣದಲ್ಲಿ ತಜ್ಞರೂ, ಕುಶಲರೂ, ರಾಜನಿಷ್ಠರೂ ಇದ್ದುದರಿಂದ, ಈ ಕಾರ್ಯಕ್ಕಾಗಿ ನಿಮ್ಮನ್ನು ನಿಯಮಿಸಿರುವೆನು. ನೀವು ನಿಮ್ಮ ಜೊತೆಯಲ್ಲಿ ಕುವರಸಿಂಹನನ್ನು ನಿಶ್ಚಯವಾಗಿ ಕರೆತರುವಿರೆಂದು ನಾನು ವಿಶ್ವಾಸಪಟ್ಟಿರುವೆನು' ಎಂದು ನುಡಿದು ಒಂದು ಪತ್ರವನ್ನು ಅವನ ಕೈಯಲ್ಲಿ ಕೊಟ್ಟು:—"ಇದನ್ನು ಕುವರಸಿಂಹನಿಗೆ ಮುಟ್ಟಿಸಿರಿ."

"ಏನೂ ಅಡ್ಡಿಯಿಲ್ಲ. ಖಾವಿಂದ, ಈ ಕಾರ್ಯದಲ್ಲಿ ಶಕ್ತಿಮೀರಿ ಸಾಹಸ ಮಾಡುವೆನು. ಸರಕಾರದ ಸೇವೆಯನ್ನು ಮನಸ್ಸುಗೊಟ್ಟು ಮಾಡುವದು ದಾಸನಾದ ನನ್ನ ಕರ್ತವ್ಯವೇ ಆಗಿರುವದು" ಎಂದು ಪ್ಯಾರೇಲಾಲನು ನುಡಿದು, ಪತ್ರವನ್ನು ಬಳಿಯಲ್ಲಿರಿಸಿಕೊಂಡನು. ಸಾಹೇಬನ ಈ ಕಾರಸ್ಥಾನದ ಮರ್ಮವು ಪ್ಯಾರೇಲಾಲನಿಗೆ ಪೂರ್ಣವಾಗಿ ಅವಗತವಿದ್ದುದರಿಂದ, ಅವನು ಈ ವಿಷಯದಲ್ಲಿ ಹೆಚ್ಚಿನ ಯಾವ ಸಂಗತಿಯನ್ನೂ ತಿಳಿದುಕೊಳ್ಳಲಿಕ್ಕೆ ಯತ್ನಿಸಲಿಲ್ಲ. ಅವನು ಟೇಲರ ಸಾಹೇಬನಿಗೆ ಮುಜುರೆ ಮಾಡಿ ಅಲ್ಲಿಂದ ಹೊರಟು, ಆರಾದ ಮಾರ್ಗವನ್ನು ಹಿಡಿದನು.

ಕ್ರಾಂತಿಕಾರಕ ಮಂಡಲದ ಗುಪ್ತಚಾರರು ನಾಲ್ಕೂ ಕಡೆಯಲ್ಲಿ ಪಸರಿಸಿದ್ದರಿಂದ ಯಾವ ಯಾವ ಸ್ಥಳದಲ್ಲಿ ಏನು-ಏನು ಕಾರಸ್ಥಾನ ನಡೆದಿರುವದೆಂಬ ಸಂಗತಿಯು ಅವರಿಗೆ ತಿಳಿಯುವದಕ್ಕೆ ಅವಕಾಶ ಹತ್ತುತ್ತಿದ್ದಿಲ್ಲ. ಅವರು ಎಲ್ಲ ಬಗೆಯ ಸಂಗತಿಗಳನ್ನು ತಮ್ಮ ಪ್ರಮುಖರಿಗೆ ತಿಳಿಸುತ್ತಿದ್ದರು. ಪಾಟಣಾದಲ್ಲಿ ಟೇಲರ ಸಾಹೇಬನ ಸಂಚಿನ ಗಂಧವು ಕ್ರಾಂತಿಕಾರಕರ ಗುಪ್ತಚಾರರಿಗೆ ಗೊತ್ತಾದ್ದರಿಂದ ಅವರು ಈ ಸಂಗತಿಯನ್ನು ಕುವರಸಿಂಹನಿಗೆ ತಿಳಿಸಿದರು. ಕುವರಸಿಂಹನು ಇಷ್ಟರೊಳಗೆ ಸ್ತ್ರೀ ಪರಿವಾರವನ್ನು ಜಗದೀಶಪುರಕ್ಕೆ ಕಳುಹಿಸಿದ್ದನು. ಟೇಲರನ ಸಂಚಿನ ವಾರ್ತೆಯು ಅವನಿಗೆ ತಿಳಿದ ಕೂಡಲೆ ತಾನು ಇನ್ನು ಆರಾದಲ್ಲಿರುವದು ಸುರಕ್ಷಿತವಲ್ಲವೆಂದು ತಿಳಿದು, ಅಜಯಸಿಂಹನೊಡನೆ ಜಗದೀಶಪುರಕ್ಕೆ ನಡೆದನು.

ಪ್ಯಾರೇಲಾಲನು ಆರಾಕ್ಕೆ ಬಂದನು. ಅಲ್ಲಿ ಕುವರಸಿಂಹನು ಇಲ್ಲದ ಸಂಗತಿಯು ಅವನಿಗೆ ಗೊತ್ತಾಯಿತು. ಕುವರಸಿಂಹನು ಜಗದೀಶಪುರಕ್ಕೆ ಹೋಗಿರುವನೆಂಬ ವಾರ್ತೆಯಾದರೂ ಅವನಿಗೆ ತಿಳಿಯಿತು. ಅವನು ಆರಾಕ್ಕೆ ಅದೇ

ಬಂದಿದ್ದರೂ, ಕರ್ತವ್ಯಸಾಧನೆಯಾದ ಹೊರತು ವಿಶ್ರಾಂತಿಯನ್ನು ತೆಗೆದುಕೊಳ್ಳ ಬಾರದೆಂದು ತತ್ಕ್ಷಣವೇ ಜಗದೀಶಪುರಕ್ಕೆ ಹೊರಟನು.

ಅಜಯಸಿಂಹನು ಜವಾನಸಿಂಗನೊಡನೆ ದಿವಾಣಖಾನೆಯಲ್ಲಿ ಮಾತನಾ ಡುತ್ತ ಕುಳಿತಿದ್ದನು. 'ಇಂಗ್ಲಿಷರನ್ನು ಹಣ್ಣು ಮಾಡುವದಕ್ಕೆ ಯಾವ ಯಾವ ಹಂಚಿಕೆ ಮಾಡತಕ್ಕದ್ದು; ಪಾಟಣಾದಿಂದ ಕಮಿಶನರ ಸಾಹೇಬನ ಪ್ರತಿನಿಧಿಯು ಬಂದರೆ ಅವನನ್ನು ಯಾವ ಉಪಾಯದಿಂದ ತಿರುಗಿ ಕಳಿಸಬೇಕು?' ಮೊದಲಾದ ವಿಷಯಗಳ ಬಗ್ಗೆ ಅವರಲ್ಲಿ ವಿಚಾರ ವಿನಿಮಯವು ನಡೆದಿತ್ತು. ಅಷ್ಟರಲ್ಲಿ ಅವರಿಗೆ ಪ್ಯಾರೇಲಾಲನು ಬಂದಿರುವನೆಂದು ಯಾರೋ ತಿಳಿಸಿದರು. ಕೂಡಲೆ ಅಜಯ-ಜವಾನಸಿಂಹರು ಅವನನ್ನು ಸ್ವಾಗತಪೂರ್ವಕವಾಗಿ ಬರಮಾಡಿಕೊಂಡರು. ಆಗ ಪ್ಯಾರೇಲಾಲನು ಕಮಿಶನರನ ಪತ್ರವನ್ನು ಅಜಯಸಿಂಹನ ಕೈಯಲ್ಲಿ ಕೊಟ್ಟು:

"ಕುವರಸಿಂಹರು ಕಾಣುವದಿಲ್ಲವಲ್ಲ?"

"ಅವರು ಈಗ ಅಸ್ವಸ್ಥರಿರುವರು."

ಅಜಯನ ಮಾತುಗಳನ್ನು ಕೇಳಿ ಪ್ಯಾರೇಲಾಲನಿಗೆ ನೂಣತಿಂದಂತಾ ಯಿತು. ಕುವರಸಿಂಹನು ಅಸ್ವಸ್ಥತೆಯ ನಿಮಿತ್ತವನ್ನು ಮುಂದೆ ಮಾಡಿ, ಪಾಟ ಣಾಕ್ಕೆ ಹೊರಡುವದರ ಸಲುವಾಗಿ ಅಸಮ್ಮತಿಯನ್ನೆಲ್ಲಿ ವ್ಯಕ್ತಪಡಿಸುವನೋ, ಎಂದು ಅವನು ಗಾಬರಿಗೊಂಡನು. ಆಗ ಅವನು ಅಜಯನನ್ನು ಕುರಿತು: —

"ಕಮಿಶನರ ಸಾಹೇಬರವರು ಮಹಾನುಭಾವರಿರುವರು. ಜನರ ಹಿತಚಿಂತ ನೆಗಾಗಿ ಅವರು ತಮ್ಮ ಆಯುಷ್ಯವನ್ನು ವೆಚ್ಚ ಮಾಡುತ್ತಿರುವರು. ಅಂತೆಯೇ ನಿಮ್ಮ ಜಹಾಗೀರಿಯ ವಿಷಯದಲ್ಲಿ ನಿಮ್ಮ ಮನಸ್ಸಿನಲ್ಲಿದ್ದಂತೆ ಕಾರ್ಯ ಮಾಡು ವದಕ್ಕೆ ಸಿದ್ಧರಾಗಿರುವರು. ಕುವರಸಿಂಹರ ಸಮಕ್ಷ ದರ್ಶನವಿಲ್ಲದೆ ಅವರು ಈ ಕೆಲಸವನ್ನು ತಾವಾಗಿ ಹೇಗೆ ಮಾಡುವರು? ನಿಮ್ಮ ಕೆಲಸವನ್ನು ಮಾಡಿ ಕೀರ್ತಿಭಾಗಿಗಳಾಗಬೇಕೆಂದು ಅವರ ಹೆಬ್ಬಯಕೆಯಿರುವದು. ಅಂತೆಯೇ ಕುವರಸಿಂಹರ ದರ್ಶನೋತ್ಕಂಠಿತರಾಗಿ ಕುಳಿತಿರುವರು. ಅವರ ಪತ್ರವನ್ನೋದಿ ನೋಡಿರಿ. ಬಹಳ ಮಾಡಿ ಅದರಲ್ಲಿಯಾದರೂ ಇದೇ ಸಂಗತಿಯನ್ನು ಬರೆದಿರ ಬಹುದು. ಕುವರಸಿಂಹರು ಯಾವ ಕಾರಣವನ್ನೂ ಮುಂದೆ ಮಾಡದೆ, ನನ್ನ ಹಿಂದೆ ಬಂದು ಬಿಟ್ಟರೆ ನಿಜವಾಗಿ ಕಲ್ಯಾಣವಾಗುವದು."

ಪ್ಯಾರೇಲಾಲನು ಹೀಗೆ ನುಡಿದ ಕೂಡಲೆ, ಅಜಯನು ಪತ್ರವನ್ನೋದಿ ದನು. ಸಾಹೇಬನ ಹಾಗು ಪ್ಯಾರೇಲಾಲನ ಚಾಣಾಕ್ಷತನದ ಗಂಧವು ಅವನಿಗೆ ಗೊತ್ತಿದ್ದರಿಂದ, ಆ ಪ್ರತಿನಿಧಿಯ ಮಾತಿಗೆ ಎಷ್ಟು ಮಹತ್ವವನ್ನು ಕೊಡಲಿಲ್ಲ. ಆಗ ಅವನು ವಿಷಾದಭಾವನೆಯನ್ನು ತೋರಿಸಿ: —

"ಏನು ಮಾಡುವದಿದೆ? ನಮ್ಮ ಮೇಲೆ ದೇವತಾ ಕ್ಷೋಭೆಯುಂಟಾಗಿರುವದೆಂದೇ ಅನ್ನಬೇಕಾಗಿರುವದು. ದಯಾರ್ದ್ರ ಹೃದಯಿಗಳಾದ ಸಾಹೇಬರು ಹೀಗೆ ನಮ್ಮ ಹಿತಚಿಂತನೆಗೆ ತತ್ಪರರಾಗಿರುವಾಗ, ಈ ಸಂಧಿಯಲ್ಲಿ ಅದರ ಲಾಭ ಮಾಡಿಕೊಳ್ಳುವ ಯೋಗಾಯೋಗವಿಲ್ಲವೆಂದು ದುಃಖದಿಂದ ಅನ್ನಬೇಕಾಗಿರುವದು. ಅಣ್ಣಂದಿರು ಹಾಸಿಗೆ ಹಿಡಿದು ಬಿಟ್ಟಿರುವರು ಔಷಧೋಪಚಾರಗಳು ನಡೆದಿರುವವು. ಇಂತಹ ಪ್ರಸಂಗದಲ್ಲಿ ಅವರು ನಿಮ್ಮೊಡನೆ ಹೇಗೆ ಬರುವರು? ನಿರೋಗಿಗಳಾಗಿ ಸ್ವಲ್ಪ ಸಾಮರ್ಥ್ಯವು ಬಂದಿತೆಂದರೆ ಅವರು ಸಾಹೇಬರ ದರ್ಶನಕ್ಕೆ ಬರುವರು."

"ನನಗೆ ಅವರ ದರ್ಶನವಾಗಬಹುದೇನು?"

"ಅವರನ್ನು ಅವಶ್ಯವಾಗಿ ಕಾಣಬಹುದು."

ಕುವರಸಿಂಹನು ಮಲಗಿದ ಸ್ಥಳದಲ್ಲಿ ಅಜಯನೂ, ಪ್ಯಾರೇಲಾಲನೂ, ಜವಾನಸಿಂಗನೂ ಬಂದರು. ಕುವರಸಿಂಹನು ಪ್ಯಾರೇಲಾಲನನ್ನು ನೋಡಿ:—
"ಯಾರು? ಮುನ್ಷೀಸಾಹೇಬರೇನು? ಬರ್ರಿ; ಕುಳಿತುಕೊಳ್ಳಿರಿ. ನಿಮಗೆ ಸ್ವಾಗತ ಮಾಡಿ ಕುಳ್ಳಿರಿಸಿಕೊಳ್ಳುವಷ್ಟು ಸಾಮರ್ಥ್ಯವು ನನ್ನಲ್ಲಿಲ್ಲದಾಗಿದೆ ಪ್ಯಾರೇಲಾಲರೇ, ನನ್ನ ಆಯುಷ್ಯವು ಮುಗಿಯುತ್ತ ಬಂದಿರುವದೆನ್ನಬೇಕಾಗಿರುವದು" ಎಂದು ಕುವರಸಿಂಹನು ನುಡಿದನು. ಪ್ಯಾರೇಲಾಲನು ಅವನಿಗೆ ತಾನು ಬಂದ ಕಾರಣವನ್ನು ತಿಳಿಸಿದನು. ಆಗ ಕುವರಸಿಂಹನು ವಿಷಾದವ್ಯಂಜಕ ಧ್ವನಿಯಿಂದ:

"ವೇಳೆಯು ಅನುಕೂಲಿಸಿತು; ಕಾಲವು ಪ್ರತಿಕೂಲಿಸಿತು. ಪ್ಯಾರೇಲಾಲರೇ, ಕಮಿಶನರ ಸಾಹೇಬರು ಬಡವರಾದ ನಮ್ಮಲ್ಲಿ ಈ ಪರಿಯಾಗಿ ಅನುಗ್ರಹ ಮಾಡಿದ್ದರಿಂದ ನಾನು ಧನ್ಯನೂ ಉಪಕೃತನೂ ಆದೆನು. ಅವರಿಗೆ ನನ್ನ ಪ್ರೇಮಪೂರ್ವಕ ವಂದನೆಗಳನ್ನರ್ಪಿಸಿ, ರೋಗವು ವಾಸಿಯಾದ ಕೂಡಲೆ ಬರುವೆನೆಂದು ತಿಳಿಸಿರಿ. ಅವರು ನನ್ನಲ್ಲಿ ಅಕೃತ್ರಿಮ ಪ್ರೇಮವಿಟ್ಟದ್ದರಿಂದ ನಾನು ಅವರಿಗೆ ಅಕ್ಷಯ್ಯ ಋಣಿಯಾಗಿರುವೆನು. ಇದೇ ಮೇರೆಗೆ ಪ್ರೇಮಪೂರಿತರಿರಬೇಕೆಂದು ನನ್ನ ವಿನಂತಿಯನ್ನು ಅವರಿಗೆ ತಿಳಿಸಿರಿ."

ಕುವರಸಿಂಹನ ಈ ಮಾತುಗಳನ್ನು ಕೇಳಿ ಪ್ಯಾರೇಲಾಲನು ನಿರಾಶೆಗೊಂಡನು. ಅವನು ತಂತ್ರಾಗಾರನಿದ್ದುದರಿಂದ, ಹೇಗಾದರೂ ಮಾಡಿ ಅವನನ್ನು ಒಯ್ಯಬೇಕೆಂಬ ಅಭಿಲಾಷೆಯಿಂದ:—

"ಕುವರಸಿಂಹರೇ, ನಿಮ್ಮ ವ್ಯಾಧಿಯು ವಾಸಿಯಾದೊಡನೆಯೆ ಬರಲೊಲ್ಲಿರೇಕೆ. ಸಶಕ್ತರಾಗುವ ವರೆಗೆ ಕೆಲ ದಿವಸ ನಾನಾದರೂ ನಿಮ್ಮಲ್ಲಿಯೇ ಇರುವೆನು."

ಕಮಿಶನರನು ಏನು ಕಾರಸ್ಥಾನವನ್ನು ನಡೆಯಿಸಿರುವನೆಂಬದನ್ನು ಕುವರಸಿಂಹನು ಕಂಡು ಹಿಡಿದಿದ್ದನು. ಆಗ ಅವನು ಹೇಗಾದರೂ ಮಾಡಿ ಅವನನ್ನು ಗಡಿದಾಟಿಸಬೇಕೆಂದು ಆಲೋಚಿಸಹತ್ತಿದನು. ಆಗ ಅವನು:—

"ನೀವು ಕೆಲಸದವರು. ವೃಥಾ ಇಲ್ಲಿ ಕುಳಿತುಕೊಳ್ಳುವದೇಕೆ? ನಾನೇ ಅಲ್ಲಿಗೆ ಬರುತ್ತೇನೆ. ನಮ್ಮ ಕೆಲಸದ ಪರಿವೆಯು ನಮಗೆ ಇಲ್ಲವೆಂದು ನೀವು ತಿಳಿಯುತ್ತಿರುವಿರೇನು? ನೀವು ಇಲ್ಲಿರುವದು ನಿರರ್ಥಕವೆಂದು ನನಗೆ ತೋರುವದು. ನನ್ನ ಜೀವಿತದ ವಿಷಯವಾಗಿ ವೈದ್ಯರು ಸಹಿತ ಮುಗ್ಧಭಾವವನ್ನು ತಳೆದಿರುವರು. ಹೀಗಾದ ಮೇಲೆ ನಾನು ನಿಮ್ಮನ್ನು ಎಷ್ಟು ದಿನಗಳ ವರೆಗೆ ಇಲ್ಲಿ ಇಟ್ಟುಕೊಳ್ಳಬೇಕು? ಸರಕಾರದ ಮುಖ್ಯಾಂಗದಂತಿರುವ ನೀವು ಇಲ್ಲಿ ತಟಸ್ಥರಾಗಿ ಕುಳಿತುಕೊಳ್ಳುವದೇಕೆ? ಬೇನೆಯು ವಾಸಿಯಾದ ಕೂಡಲೆ ನಾನು ನಿಶ್ಚಯವಾಗಿ ಬರುತ್ತೇನೆ."

ಪ್ಯಾರೇಲಾಲನ ಬಾಣಗಳೆಲ್ಲವು ವ್ಯರ್ಥವಾದುದರಿಂದ ಅವನು ಪಶ್ಚಾತ್ತಾಪಬಟ್ಟು ಅಲ್ಲಿಂದ ಹೊರಟು ಹೋದನು. ಆಗ ಕುವರಸಿಂಹನು ಎದ್ದು ನಿಂತು ಘೋರಸ್ವರದಿಂದ:—

"ಆಂಗ್ಲರ ಕುಟಿಲ ನೀತಿಯು ಪಡಿಕಟ್ಟನ್ನು ನಾನು ಬಲ್ಲೆನು. ಇನ್ನು ಅವರ ಸ್ನೇಹ ಬಳೆಯಿಸುವದು ತೀರ ಅಶಕ್ಯವು. ಮಹಾಪವಿತ್ರ ಗಂಗಾನದಿಯು ಹಾಗು ಚಂಡಪ್ರತಾಪಿಯಾದ ಸೂರ್ಯನ ಸಾಕ್ಷಿಯಾಗಿ ಹೇಳುವದೇನಂದರೆ, ಬಿಹಾರದಲ್ಲಿ ಬಂಡಾಯದ ಬೇಗೆಯನ್ನೆಬ್ಬಿಸಿ, ಹಿಂದುಗಳ ಸ್ವಾತಂತ್ರ್ಯಸಾಧನೆ ಮಾಡುವೆನು; ಇಲ್ಲವೆ ಆತ್ಮಬಲಿದಾನ ಮಾಡುವೆನು!"

———

## ಆ ದರೋಗಾನು ಯಾರು?

ದಾನಾಪುರವು ಪಾಟಣಾದ ಪಶ್ಚಿಮಕ್ಕೆ ಮೂರು ಹರದಾರಿ ದೂರದ ಮೇಲಿತ್ತು. ಅಲ್ಲಿ ವಿದೇಶೀಯ ಹಾಗು ಏತದ್ದೇಶಿಯ ಸೈನಿಕರ ದೊಡ್ಡ ಪಾಳ್ಯವಿತ್ತು. ಎಲ್ಲ ಕಡೆಯ ಹಿಂದೂ ಸೈನಿಕರು ಬಹುತರವಾಗಿ ಬಂಡಾಯದಲ್ಲಿ ಸೇರಿದಂತೆ ಇಲ್ಲಿಯ ಸೈನಿಕರಾದರೂ ಒಡೆದು ಹೋಗುವ ಆಲೋಚನೆಯಲ್ಲಿದ್ದರು. ಬಾಬೂ ಕುವರಸಿಂಹನು ಸಮರಯಜ್ಞದಲ್ಲಿ ದೀಕ್ಷಾಬದ್ಧನಾದ ಸಂಗತಿಯು ತಿಳಿದ ಕೂಡಲೆ, ಇವರು ಅವನನ್ನು ಕೂಡಿಕೊಳ್ಳುವ ಪ್ರಯತ್ನ ನಡೆಯಿಸಿದರು. ದಾನಾಪುರದ ಸೇನಾಪತಿಯಾದ ಜನರಲ್ ಲಾಯಿಡನು ತನ್ನ ಸೈನ್ಯವು ಒಡೆಯುವದೆಂಬದನ್ನು ಕನಸು-ಮನಸ್ಸಿನಲ್ಲಿಯೂ ಭಾವಿಸಿದಿಲ್ಲ. ಇವನು ತನ್ನ ಸೈನ್ಯದ ವಿಷಯಕ್ಕೆ

ಒಳ್ಳೆಯ ಅಭಿಮಾನವನ್ನು ತಳೆದಿದ್ದನು. ಅವರ ಮೇಲೆ ಇವನ ನಂಬಿಗೆಯು ಅತಿಶಯವಾಗಿತ್ತು. ತನ್ನ ಸೈನ್ಯದಲ್ಲಿ ಬಂಡಾಯ ಉದ್ಭವಿಸುವದು ಅಶಕ್ಯವೆಂದು ಅವನು ಕಲಕತ್ತೆಗೆ ಬರೆದು ತಿಳಿಸಿದ್ದನು.

ಕೆಲವು ದಿನಗಳಲ್ಲಿ ಜನರಲ್ಲ ಲಾಯಿಡನ ಭ್ರಮೆಯು ದೂರವಾಯಿತು. ಯಾಕೆಂದರೆ, ಏತದ್ದೇಶೀಯ ಸೈನಿಕರು ಅವನ ಆಜ್ಞೆಯನ್ನು ಉಲ್ಲಂಘಿಸತೊಡಗಿದರು. ಬಂಡಾಯದ ಪೂರ್ವಚಿನ್ಹವು ಅವನ ದೃಷ್ಟಿಪಥದಲ್ಲಿ ಬರತೊಡಗಿತು. ಕೂಡಲೆ ಅವನು ಸೈನಿಕರ ಶಸ್ತ್ರಗಳನ್ನು ಕಸಿದುಕೊಳ್ಳಬೇಕೆಂದು ಸೇನೆಯೊಳಗಿನ ವರಿಷ್ಠಾಧಿಕಾರಿಗಳಿಗೆ ಆಜ್ಞೆ ಮಾಡಿದನು. ಕೂಡಲೆ ಎಲ್ಲ ಸೈನಿಕರು ನಿಃಶಸ್ತ್ರರಾದರು ಸೈನ್ಯದಲ್ಲಿ ಗುಪ್ತಸಂಚು ನಡೆಯಿತು. ಆಗ ಜನರಲ್ಲ ಲಾಯಿಡನು ಎಲ್ಲ ದೇಶೀಯ ಸೈನಿಕರು ನಿಃಶಸ್ತ್ರರಾಗಿ ಕವಾಯತಿಗೆ ಬರಬೇಕೆಂದು ಆಜ್ಞಾಪಿಸಿದನು. ಸೈನಿಕರು ಅವನ ಆಜ್ಞೆಯ ಮೇರೆಗೆ ಸಂಧ್ಯಾಕಾಲಕ್ಕೆ ಕವಾಯತಿಗೆ ಬಂದರು. ದೇಶೀಯ ಸೈನಿಕರು ಶಾಂತರೀತಿಯಿಂದ ಬಂದದ್ದನ್ನು ನೋಡಿ ಜನರಲ್‌ಸಾಹೇಬನಿಗೆ ಆನಂದವಾಯಿತು. ಕವಾಯಿತು ಮುಗಿದ ಕೂಡಲೆ ಶಿಬಿರಕ್ಕೆ ಹೋಗುವದಕ್ಕೆ ಅವರಿಗೆ ಆಜ್ಞೆಯು ದೊರೆಯಿತು. ಕೂಡಲೆ ಸೈನಿಕರು ಸ್ವನಿವಾಸಕ್ಕೆ ಹೊರಟರು ಅವರು ಹೋಗುವ ದಾರಿಯಲ್ಲಿಯೇ ಶಸ್ತ್ರಾಗಾರವಿತ್ತು. ಅವರು ಅಲ್ಲಿಗೆ ಬಂದ ಕೂಡಲೆ "ಜಯ! ಕ್ರಾಂತಿದೇವಿ!" ಎಂದು ಗರ್ಜನೆ ಮಾಡಿ ಶಸ್ತ್ರಾಗಾರವನ್ನು ನುಗ್ಗಿದರು! ಕೆಲವು ಕ್ಷಣಗಳಲ್ಲಿ ಅಲ್ಲಿಯ ಶಸ್ತ್ರಾಸ್ತ್ರಗಳೆಲ್ಲವನ್ನು ತಮ್ಮ ವಶಕ್ಕೆ ತೆಗೆದುಕೊಂಡು ವಿಜಯಗರ್ಜನೆಗೈಯುತ್ತ ಆರಾ ಪಟ್ಟಣದ ದಾರಿಯನ್ನು ಹಿಡಿದರು. ಅವರು ಶಿಬಿರವನ್ನು ಬಿಟ್ಟು ಹೋದ ಬಳಿಕ ಅವರ ಮೇಲೆ ತೋಫುಗಳನ್ನು ಹಾರಿಸಬೇಕೆಂದು ಜನರಲ್ಲ ಲಾಯಿಡನು ಆಜ್ಞೆಯಿತ್ತನು. ಕೂಡಲೆ ಆಗ್ನೇಯಾಸ್ತ್ರವರ್ಷಣಕ್ಕೆ ಪ್ರಾರಂಭವಾಯಿತು. ಆಗ ಬಂಡುಗಾರರು ಬಹಳ ದೂರ ಹೋದುದರಿಂದ ಈ ಪ್ರಯತ್ನಕ್ಕೆ ಯಶವು ದೊರೆಯಲಿಲ್ಲ. ಆಗ್ನೇಯಾಸ್ತ್ರವನ್ನು ಪ್ರಾರಂಭಿಸದೆ, ಬಂಡುಗಾರರ ಬೆನ್ನುಹತ್ತಿದ್ದರೆ ಅದರ ಪರಿಣಾಮವು ಏನಾಗುತ್ತಿತ್ತೆಂಬುದನ್ನು ಹೇಳುವದಕ್ಕೆ ಬರುವದಿಲ್ಲ. ಆರಾಕ್ಕೆ ಹೋಗುವ ಮಾರ್ಗದಲ್ಲಿ ಶೋಣನದವು ಅಡ್ಡಬರುತ್ತಿದ್ದುದರಿಂದ, ಬಂಡುಗಾರರು ಆಂಗ್ಲ ಸೈನಿಕರ ಕೈಯಲ್ಲಿ ಸಿಗುತ್ತಿದ್ದರು. ಸೇನಾಪತಿಯ ತಲೆಯಲ್ಲಿ ಈ ವಿಚಾರವು ಬಾರದ್ದರಿಂದ ಆ ಕ್ರಾಂತಿಕಾರಕ ಜನರು ನಿರಾತಂಕವಾಗಿ ಶೋಣನದವನ್ನು ದಾಟಿ ಆರಾಕ್ಕೆ ಹೋದರು.

ಬಾಬೂ ಕುಂವರಸಿಂಹನಿಗೆ ದಾನಾಪುರ ಸೈನ್ಯದ ಬಗ್ಗೆ ಶುಭಸ್ವಪ್ನವು ಬಹು ದಿನಗಳಿಂದ ಬೀಳತೊಡಗಿತ್ತು. ಅವನು ಶಿಬಿರದಿಂದ ಹೊರಟು ತನ್ನ

ಕಡೆಗೆ ಬರತೊಡಗಿರುವರೆಂಬದನ್ನಾದರೂ ಅವನು ಗುಪ್ತಚರರ ಮುಖಾಂತರವಾಗಿ ತಿಳಿದನು. ಕೂಡಲೆ ಜಿರಾದಲ್ಲಿದ್ದ ತನ್ನ ರಜಪೂತ ಸೈನಿಕರನ್ನು ತೆಗೆದುಕೊಂಡು ಅವರನ್ನು ಎದುಗೊಳ್ಳುವದಕ್ಕೆ ಮುಂದಾದನು. ಕುವರಸಿಂಹನು ಆನೆಯನ್ನೇರಿದ್ದನು. ಅಜಯಸಿಂಹನು ಅಶ್ವಾರೂಢನಾಗಿದ್ದನು. ಎಲ್ಲ ರಜಪೂತ ಸೈನಿಕರು ಕ್ರಾಂತಿಘೋಷಣೆ ಮಾಡುತ್ತ ದಾನಾಪುರದ ಸೈನ್ಯದ ಮಾರ್ಗಪ್ರತೀಕ್ಷೆ ಮಾಡತೊಡಗಿದ್ದರು. ಅಷ್ಟರಲ್ಲಿ "ಜಯ ಏಕಲಿಂಗಜೀ! ಜಯ ಕ್ರಾಂತಿದೇವಿ! ಜಯ ಭಾರತಮಾತೆ! ಬಾಬು ಕುವರಸಿಂಹಜೀ ಜಯ! ಬಾಬೂ ಅಜಯಸಿಂಹಜೀ ಜಯ!" ಎಂದು ವಿಜಯ ಧ್ವನಿಗೈಯುತ್ತ ದಾನಾಪುರದ ಸೈನ್ಯವು ಅಲ್ಲಿಗೆ ಬಂತು! ಕುವರಸಿಂಹನು ಅವರನ್ನು ಸ್ವಾಗತಪೂರ್ವಕವಾಗಿ ಪಟ್ಟಣದಲ್ಲಿ ಕರೆತಂದನು.

ಉಚ್ಛೃಂಖಲರಾದ ಸೈನಿಕರು ಪಟ್ಟಣವನ್ನು ಪ್ರವೇಶಿಸಿದ ಕೂಡಲೆ ಅವರು ಕಾರಾಗೃಹದ ಬಾಗಿಲ ತೆರೆದು ಎಲ್ಲ ಸೆರೆಯಾಳುಗಳನ್ನು ಬಂಧಮುಕ್ತ ಮಾಡಿದರು. ಅನಂತರದಲ್ಲಿ ಸರಕಾರೀ ಭಾಂಡಾರವನ್ನು ಸುಲಿದುಕೊಂಡರು. ಪಟ್ಟಣದಲ್ಲಿ ಕೋಲಾಹಲವು ನಡೆದ ಕೂಡಲೆ, ಆಂಗ್ಲ ಸೈನಿಕರೂ ಅಧಿಕಾರಿಗಳೂ ಅವರ ಕೈಕೆಳಗಿನ ಶೀಖ ಸೈನಿಕರೂ ಕೋಟೆಯನ್ನು ಸೇರಿದರು. ಬಂಡುಗಾರರು ಕೋಟೆಯನ್ನೊಡೆದು ಒಳಗಿನ ಜನರನ್ನು ನಾಶಗೊಳಿಸಬೇಕೆಂದು ನಿಶ್ಚಯಿಸಿದರು. ವಿಜಯಮದದಿಂದ ಮೈಮರೆತವರಾದ ಆ ಬಂಡುಗಾರರಿಗೆ ಕೋಟೆಯನ್ನು ಸ್ವಾಧೀನಪಡಿಸಿಕೊಳ್ಳುವ ಕಾರ್ಯವು ಮಹತ್ವದ್ದಾಗಿ ತೋರಲಿಲ್ಲ. ಅವರು ಒಳ್ಳೆಯ ಉತ್ಸಾಹದಿಂದ ಕೋಟೆಯ ಕಡೆಗೆ ಸಾಗಿದರು.

ಭವಿಷ್ಯಕಾಲೀನ ಸಂಕಟವನ್ನು ನೆನೆದು ಕೋಟೆಯೊಳಗಿನ ಜನರು ಭಯಭೀತರಾಗಿದ್ದರೂ, ಬಂದ ಗಂಡಾಂತರಕ್ಕೆ ಎದೆಗೊಟ್ಟು ನಿಲ್ಲದಿದ್ದರೆ ಗತ್ಯಂತರವಿಲ್ಲದ್ದರಿಂದ ಅವರು ಪ್ರಸಂಗಾವಧಾನದಿಂದ ಬಂಡುಗಾರರ ಪರಾಟವನ್ನು ತಡೆಯುವದಕ್ಕೆ ಸುಸಜ್ಜಿತರಾದರು. ಕೋಟೆಯಲ್ಲಿ ಆಂಗ್ಲರೂ ಶೀಖರೂ ಕೂಡಿ ನೂರು ಜನರು ಮಾತ್ರ ಇದ್ದರು. ಹೊರಗೆ ಮುತ್ತತೊಡಗಿರುವ ಅಪಾರ ಸೈನ್ಯದ ಮುಂದೆ ತಮ್ಮಿಂದ ತಡೆದು ನಿಲ್ಲುವದಾಗುವದಿಲ್ಲವೆಂದು ಅವರು ನಿಶ್ಚಯಿಸಿಕೊಂಡಿದ್ದರು. ಗಂಡಾಂತರ ಪ್ರಸಂಗದಲ್ಲಿ ಅಳ್ಳೆದೆದು ಕುಳಿತುಕೊಳ್ಳುವಂತಹ ಹೇಡಿಗಳು ಅವರಾಗದ್ದರಿಂದ ಸುತ್ತಲೂ ಮುತ್ತತೊಡಗಿದ್ದ ಬಂಡುಗಾರರ ಮೇಲೆ ಬಂದೂಕಿನ ಗುರಿಯಿಟ್ಟರು. ಏಕಕಾಲಕ್ಕೆ ನೂರಾರು ಬಂದೂಕುಗಳು ಬಂಡುಗಾರರ ಮೇಲೆ ಹಾರಿಸಲ್ಪಟ್ಟವು. ಕೂಡಲೆ ಗುಂಡಿಗೊಬ್ಬ ಮನುಷ್ಯನು ಗಾಯದಿಂದಲೂ ಗತಾಸುವಾಗಿಯೂ ಭೂಮಿಗೆ ಬಿದ್ದನು. ದುಃ

ರಕ್ಷಕರು ಬಂಡುಗಾರರ ಮೇಲೆ ಗುಂಡಿನ ಸುರಿಮಳೆಯನ್ನು ಸುರಿಸತೊಡಗಿದರು. ಕೂಡಲೆ ಬಂಡುಗಾರರು ಹಿಂದೆ ಸರಿದರು. ಸುರಂಗದ ಸಹಾಯದಿಂದ ಕೋಟೆಯ ಗೋಡೆಯನ್ನು ಒಡೆಯಬೇಕೆಂದು ಅವರು ಹವಣಿಸತೊಡಗಿದರು. ಕಡೆಗೆ ಆ ಪ್ರಯತ್ನವೂ ವ್ಯರ್ಥವಾಯಿತು. ತೋಫಿನ ಸಹಾಯದಿಂದಲಾದರೂ ಕೋಟೆಯನ್ನೊಡೆಯಬೇಕೆಂದು ಅವರು ತೋಫಿನ ಶೋಧವನ್ನು ನಡೆಯಿಸಿದರು. ಕುವರಸಿಂಹನ ಕಡೆಗೆ ಒಂದು ಹಳೆಯ ತೋಫು ಇದ್ದು ಅದು ಭೂಮಿಯಲ್ಲಿ ಹುಗಿದಿತ್ತು. ಬಂಡುಗಾರರು ಶ್ರಮಬಟ್ಟು ಅದನ್ನು ಕಡೆಗೆ ತೆಗೆದರು. ಅವರು ಅದನ್ನು ತೆಗೆದುಕೊಂಡು ಹೋಗಿ ಮದ್ದು ಗುಂಡುಗಳನ್ನು ತುಂಬಿ ಕೋಟೆಯ ಗೋಡೆಗೆ ಹೊಡೆಯತೊಡಗಿದರು. ಆ ತೋಫಿನ ಉಪಯೋಗವೇನೂ ಆಗಲಿಲ್ಲ. ಗುಂಡಿನ ಹೊಡತಕ್ಕೆ ಕೋಟೆಯ ಗೋಡೆಯ ಸ್ವಲ್ಪ ಭಾಗವು ಮಾತ್ರ ಕಳಚಿ ಬಿತ್ತು. ಅಷ್ಟರಲ್ಲಿ ಗುಂಡುಗಳೆಲ್ಲವೂ ತೀರಿದ್ದರಿಂದ ಅವರು ನಿರುಪಾಯರಾದರು.

ಕೋಟೆಯಲ್ಲಿ ಸಿಕ್ಕ ಜನರಿಗೆ ಒಂದೆರಡು ದಿನಗಳಲ್ಲಿ ಅನ್ನ ನೀರುಗಳ ಕೊರತೆಯು ಬೀಳತೊಡಗಿತು. ದಾನಾಪುರದಿಂದ ತಮ್ಮ ಮುಕ್ತತೆಗಾಗಿ ಸೈನ್ಯವು ಬಾರದ್ದರಿಂದ ಅವರು ವ್ಯಸನ ಪಡತೊಡಗಿದರು. ತಮ್ಮ ಸಹಾಯಕ್ಕೆ ಸೈನ್ಯವು ಬಾರದಿದ್ದರೆ ಅನ್ನ ನೀರುಗಳಿಲ್ಲದೆ ಸಾಯುವ ಪ್ರಸಂಗವು ಬರುವದೆಂದು ಒಳಗಿನ ಜನರಿಗೆ ಗೊತ್ತಾಗಿತ್ತು. ಕೋಟೆಯೊಳಗಿಂದ ಹೊರಬಿದ್ದು ಬಂದರೆ ಜೀವದಾನ ಕೊಡುತ್ತೇವೆಂದೂ, ನಿಮ್ಮನ್ನು ಸುರಕ್ಷಿತವಾಗಿ ದಾನಾಪುರಕ್ಕೆ ಮುಟ್ಟಿಸುತ್ತೇವೆಂದೂ ಬಂಡುಗಾರರು ಕೋಟೆಯೊಳಗಿನ ಜನರಿಗೆ ಹೇಳತೊಡಗಿದ್ದರು; ಆದರೆ ಅವರ ಮಾತನ್ನು ಕೋಟೆಯೊಳಗಿನ ಜನರು ನಂಬಲಿಲ್ಲ. ಕಾನಪುರದ ಕೊಲೆಯ ಅಮಾನುಷವಾದ ಭೀಷಣಚಿತ್ರವು ಇನ್ನೂ ಅವರ ನೇತ್ರಪಥದಲ್ಲಿ ಮೂರ್ತಿಮಂತಾಗಿ ನಿಂತಿರುವಾಗ ಅವರು ಬಂಡುಗಾರರ ಮಾತಿಗೆ ಮೋಸ ಹೋಗುವರೆ? ದಾನಾಪುರದಿಂದ ಸಹಾಯವು ಬರುವದೆಂಬ ಆಶೆಯು ಅವರಿಗಿದ್ದುದರಿಂದ, ಇನ್ನು ಎರಡು ದಿನಗಳ ವರೆಗೆ ಕೋಟೆಯಿಂದ ಹೊರಬೀಳಬಾರದೆಂದು ಸಂಕಲ್ಪ ಮಾಡಿಕೊಂಡಿದ್ದರು. ಒಳಗೆ ಇದ್ದ ಅನ್ನ-ನೀರುಗಳ ಸಂಗ್ರಹವು ತೀರುತ್ತ ಬಂದದ್ದರಿಂದ ಉಪವಾಸ ಬಿದ್ದು ಸಾಯುವದಕ್ಕಿಂತ, ಕೋಟೆಯಿಂದ ಹೊರಬಿದ್ದು ಶತ್ರುಗಳೊಡನೆ ಕಾದುತ್ತ ಮರಣ ಹೊಂದುವದೇ ಮೇಲೆಂದು ಅವರು ತಿಳಿದುಕೊಂಡರು.

ಆರಾದೊಳಗಿದ್ದ ಕೆಲವು ಅಧಿಕಾರಿಗಳೂ, ಅನುಚರರೂ ದಾರಿದೊರೆತ ಕಡೆಗೆ ಓಡಿ ಹೋದರು. ಕೆಲವರು ಶರಣಾಗತರಾದರು. ಮೊರೆಹೊಕ್ಕವರಿಗೆ ಕುವರಸಿಂಹನು ಅಭಯಕೊಟ್ಟು ತನ್ನ ಕೈಕೆಳಗೆ ತೆಗೆದುಕೊಂಡನು. ಅವನು ಪಟ್ಟಣ

ದಲ್ಲಿ ಶಾಂತತೆಯನ್ನುಂಟು ಮಾಡಿ ಪಟ್ಟಣದ ತುಂಬ ತನ್ನ ಅಧಿಕಾರವನ್ನು ನೆಲೆಗೊಳಿಸಿದನು. ಕೋಟೆಗೆ ಬಿಗಿಯಾದ ಕಾವಲಿಟ್ಟು ಒಳಗಿನ ಒಂದು ಸಿಳ್ಳೆಯಾದರೂ ಹೊರಗೆ ಬರದಂತೆ ವ್ಯವಸ್ಥೆ ಮಾಡಿದನು. ಅವನು ತನ್ನ ಶಿಬಿರದಲ್ಲಿ ಕುಳಿತುಕೊಂಡಾಗ ಒಬ್ಬ ಮನುಷ್ಯನು ಕುವರಸಿಂಹನ ಬಳಿಗೆ ಬಂದು:—

"ಧನೀಸಾಹೇಬರೆ, ಈ ಬಡವನನ್ನು ಕಾಯಬೇಕು" ಹೀಗೆ ನುಡಿದು, ಅವನು ಕುವರಸಿಂಹನ ಪಾದಗಳ ಮೇಲೆ ಮಸ್ತಕವಿಟ್ಟನು. ಆಗ ಕುವರಸಿಂಹನು ಅವನನ್ನು ಹಿಡಿದೆತ್ತಿದನು. ಅವನಿಗೆ ಆ ಮನುಷ್ಯನ ಪರಿಚಯವು ಚನ್ನಾಗಿತ್ತು. ಆರಾದಲ್ಲಿ ಆಂಗ್ಲರಾಜ್ಯಭಾರವಿದ್ದಾಗ ಅವನು ಅಲ್ಲಿ ದರೋಗಾ ಕೆಲಸವನ್ನು ಮಾಡುತ್ತಿದ್ದನು. ಅವನ ಸ್ವಭಾವವು ಸರಳವಾದದ್ದಲ್ಲೆಂಬದನ್ನು ಕುವರಸಿಂಹನು ಬಲ್ಲವನಾಗಿದ್ದನು. ಅವನು ತನ್ನ ಕಡೆಗೆ ಬಂದದ್ದನ್ನು ನೋಡಿ ಕುವರಸಿಂಹನು ಅವನನ್ನು ಕುರಿತು:—

"ನೀನು ಕೋಟೆಯಲ್ಲಿ ಸಿಕ್ಕಿಲ್ಲವೇನು? ಆಂಗ್ಲಪಕ್ಷಪಾತಿಗಳಾದ ನಿಮ್ಮಂತಹರಿಗೆ ಅನ್ನ-ನೀರುಗಳಿಲ್ಲದೆ ಸಾಯುವಂತಹ ಶಾಸನವೇ ದೊರೆಯಲಿಕ್ಕೆ ಬೇಕು. ನೀನು ಇಲ್ಲಿಗೇಕೆ ಬಂದೆ? ಹೋಗು ಎಲ್ಲಿಯಾದರೂ ಹೋಗಿ ಆಂಗ್ಲರ ಪಾದತ್ರಾಣಗಳನ್ನು ಹೊತ್ತು ಬಾಳು."

'ಒಡೆಯರೇ, ನನ್ನ ಅಪರಾಧವನ್ನು ಕ್ಷಮಿಸಿರಿ. ಅನಿವಾರ್ಹಕ್ಕಾಗಿ ಅವರ ಸೇವೆಯನ್ನು ಮಾಡುತ್ತಿದ್ದೆನು. ಗೇಣು ಹೊಟ್ಟೆಗಾಗಿ ಎಂತಹ ಕೀಳು ಕೆಲಸವನ್ನಾದರೂ ಮಾಡಬೇಕಾಗುವದು. ನಾನು ನಿಮ್ಮ ಕಲ್ಯಾಣ ಚಿಂತನೆ ಮಾಡುವವನೂ, ಆಂಗ್ಲರೊಡನೆ ವಿದ್ವೇಷ ಭಾವನೆಯುಳ್ಳವನೂ ಇರುತ್ತೇನೆ. ಕೆಲವು ದಿನಗಳ ವರೆಗಾದರೂ ನಿಮ್ಮ ಪಾದಸೇವೆಗೆ ಇಟ್ಟುಕೊಂಡು, ನನ್ನ ಸ್ವಭಾವನ್ನು ಒರೆಗೆ ಹಚ್ಚಿ ನೋಡಿರಿ."

ಕುವರಸಿಂಹನ ಮಾತಿಗೆ ಆ ಮನುಷ್ಯನು ಹೀಗೆ ನುಡಿದು, ಅವನಲ್ಲಿ ದಯೆಯು ಹುಟ್ಟುವಂತೆ ಬೇಡಿಕೊಂಡನು. ಕುವರಸಿಂಹನು ಆ ದರೋಗಾನ ವಿಷಯಕ್ಕೆ ಅಂತಃಕರಣವುಳ್ಳವನಾದನು. ಆಗ ಅವನು ಆ ದರೋಗಾನಿಗೆ ಪಟ್ಟಣದ ಕಾವಲುಗಾರರ ಮುಖ್ಯಸ್ಥನ ಅಧಿಕಾರವನ್ನು ಕೊಟ್ಟು, ಅತ್ಯಂತ ನಿಷ್ಠೆಯಿಂದ ಕರ್ತವ್ಯವನ್ನು ಮಾಡುವ ಬಗ್ಗೆ ಬೆದರಿಸಿ ಹೇಳಿದನು.

ವಾಚಕ ಮಹಾಶಯ, ಆ ದರೋಗಾನು ಯಾರಾಗಿರಬಹುದು?

## ಜಯಜಯಕಾರಕ್ಕೆ ಪ್ರತಿಯಾಗಿ ಹಾ ಹಾ ಕಾರವು!

ಬಿಹಾರ ಪ್ರಾಂತದ ಬಂಡಾಯದ ಜ್ವಾಲೆಯು ರಭಸದಿಂದ ಹಬ್ಬತೊಡಗಿತು. ಹಬ್ಬುತ್ತಿರುವ ಬೇಗೆಯನ್ನು ನೋಡಿ ಜನರಲ್ಲ ಲಾಯಿಡನು ಚನ್ನಾಗಿ ಕಣ್ಣು ತೆರೆದನು. ಪಾಟಣಾದ ಕಮಿಶನರನೂ ಇತರ ಆಂಗ್ಲ ಅಧಿಕಾರಿಗಳೂ ತಮ್ಮ ಜ್ಞಾತಿಬಂಧುಗಳ ಮುಕ್ತತೆ ಮಾಡಿಕೊಂಡು ಬರಬೇಕೆಂದು ಸೇನಾಪತಿಗೆ ಆಗ್ರಹದಿಂದ ಹೇಳತೊಡಗಿದರು. ಸೈನ್ಯವನ್ನು ಆರಾಕ್ಕೆ ಕಳಿಸುವದೂ ಕಷ್ಟ; ಬಿಡುವದೂ ಕಷ್ಟ ಎಂಬಂತೆ ಸೇನಾಪತಿಯು ಸ್ಥಿತಿಯಾಗಿತ್ತು. ಅವನ ಶಿಬಿರದಲ್ಲಿಯ ದಂಡಾಳುಗಳಲ್ಲಿದ್ದ ಏತದ್ದೇಶೀಯ ಸೈನಿಕರು ಬಹುತರವಾಗಿ ಎಲ್ಲರೂ ಒಡೆದು ಹೋಗಿದ್ದರು. ಇನ್ನುಳಿದ ಜನರಲ್ಲಿ ಕೆಲವರು ಎರಡನೆಯ ಕಡೆಯ ಬಂಡಾಯದ ಶಾಂತತೆಗಾಗಿ ಕಳಿಸಲ್ಪಟ್ಟಿದ್ದರು. ಹೀಗಾಗಿ ದಾನಾಪುರದ ಪಾಳ್ಯದಲ್ಲಿ ಸೈನ್ಯವು ಅಲ್ಪವಾಗಿತ್ತು. ಬಂಡಾಯದ ಬೇಗೆಯು ಸರ್ವತ್ರ ಹಬ್ಬಿದ್ದರಿಂದ ಆಂಗ್ಲ ಅಧಿಕಾರಿಗಳು ತಮ್ಮ ಹೆಂಡಿರು-ಮಕ್ಕಳನ್ನು ದಾನಾಪುರಕ್ಕೆ ಕಳುಹಿಸಿದ್ದರು. ಯಾಕಂದರೆ, ದಾನಾಪುರವು ಸುರಕ್ಷಿತವಾದ ಸ್ಥಳವೆಂದು ಬಹು ಜನರ ನಂಬಿಗೆಯಾಗಿತ್ತು. ಇಂತಹ ಸ್ಥಿತಿಯಲ್ಲಿ ಆರಾದಲ್ಲಿ ಬಂಧನೆಗೊಳಗಾದ ಸ್ವಜನರ ಸಹಾಯಕ್ಕೆ ಸೈನ್ಯವನ್ನು ಕಳಿಸುವದು ಸೇನಾಪತಿಗೆ ದುಸ್ತರವಾಗಿತ್ತು. ಕಳಿಸುವದನ್ನು ಬಿಟ್ಟರೆ ಆ ಜನರು ವ್ಯರ್ಥವಾಗಿ ಹತಿಸಲ್ಪಡುವರೆಂಬದು ಗೊತ್ತಾದ್ದರಿಂದ, ಇದ್ದ ಜನರಲ್ಲಿಯೇ ಕೆಲವು ಜನರನ್ನು ಕಳಿಸಬೇಕೆಂದು ಅವನು ನಿಶ್ಚಯಿಸಿಕೊಂಡನು. ಜನರಲ್ ಲಾಯಿಡನು ನಾಲ್ಕು ನೂರು ಜನರ ಒಂದು ಪಥಕವನ್ನು ಕ್ಯಾಪ್ಟನ್ ಡನಬಾರನೆಂಬ ಸೇನಾಪತಿಯ ಕೈಯಲ್ಲಿ ಕೊಟ್ಟು ಜಲಮಾರ್ಗದಿಂದ ಆರಾಕ್ಕೆ ಕಳುಹಿಸಿದನು.

ದಾನಾಪುರದಿಂದ ಆರಾಕ್ಕೆ ಹೋಗುವದಕ್ಕೆ ಎರಡು ಮಾರ್ಗಗಳಿದ್ದವು. ಮೊದಲನೆಯ ಮಾರ್ಗವು ನೆಲದ ಮೇಲಿನದು; ಎರಡನೆಯದು ಜಲಮಾರ್ಗವು; ಗಂಗಾನದಿಯಲ್ಲಿ ಕೆಲವು ದಾರಿಯನ್ನು ಕ್ರಮಿಸಿ, ಮುಂದೆ ಕೆಲವು ದಾರಿಯನ್ನು ನಡೆದು ಆರಾಕ್ಕೆ ಹೋಗಬೇಕಾಗುತ್ತಿತ್ತು. ನೆಲದ ಮಾರ್ಗಕ್ಕಿಂತಲೂ ಜಲಮಾರ್ಗವೇ ಸುರಕ್ಷಿತವಿದ್ದುದರಿಂದ, ಡನಬಾರನು ತನ್ನ ಸೈನಿಕರನ್ನು ನೌಕೆಯಲ್ಲಿ ತೆಗೆದುಕೊಂಡು ಹೊರಟನು.

ಆರಾದಲ್ಲಿ ಬಂಧನೆಗೊಳಗಾದ ಸ್ವಜ್ಞಾತೀಯ ಬಂಧುಗಳ ಬಂಧವಿಮೋಚನೆಗಾಗಿ ಹೊರಟಿದ್ದ ಡನಬಾರನ ಸೈನ್ಯಕ್ಕೆ ನಿರೂಪ ಕೊಡುವದಕ್ಕಾಗಿ, ಪಾಟಣಾ-

ದಾನಾಪುರದೊಳಗಿನ ಎಷ್ಟೋ ಆಬಾಲವೃದ್ಧ ಆಂಗ್ಲ ಸ್ತ್ರೀ ಪುರುಷರು ಬಂದಿದ್ದರು. ವಿಜಯಿಗಳಾಗಿ ಬನ್ನಿರೆಂದು ಅವರು ಆ ಸೈನಿಕರಿಗೆ ಆಶೀರ್ವಾದ ಕೊಡತೊಡಗಿದ್ದರು. ನೌಕೆಯು ಸಾಗತೊಡಗಿದ ಕೂಡಲೆ ಎಲ್ಲರೂ ತಮ್ಮ ಕರವಸ್ತ್ರಗಳನ್ನು ಬೀಸುತ್ತ 'ಹಿಪ್ ಹಿಪ್ ಹೂರೇ!' ಎಂದು ಜಯಜಯಕಾರ ಮಾಡಿದರು. ಸೈನಿಕರಾದರೂ ಆನಂದ ಸೂಚಕ ಧ್ವನಿಯಿಂದ ಕೂಗತೊಡಗಿದ್ದರು. ಅವರ ಗರ್ಜನೆಯಿಂದ ಗಂಗಾತಟಾಕವು ನಿನಾದಗೊಂಡಿತು!

ಡನಬಾರನ ಸೈನ್ಯವು ನೌಕೆಯಿಂದಿಳಿದು ಕಾಲುದಾರಿಯಿಂದ ಆರಾ ಪಟ್ಟಣಕ್ಕೆ ಹೊರಟಿತು. ಆದಷ್ಟು ಬೇಗನೆ ಇಚ್ಛಿತ ಸ್ಥಳವನ್ನು ಮುಟ್ಟಬೇಕಾಗಿತ್ತು. ದಾನಾಪುರದಿಂದ ಆರಾದವರೆಗಿರುವ ಪ್ರದೇಶದೊಳಗಿನ ಎಲ್ಲ ಜನರು ಕುವರ ಸಿಂಹನ ಕೈಯಲ್ಲಿದ್ದುದರಿಂದ, ತಾನು ಸೈನ್ಯವನ್ನು ತಕ್ಕೊಂಡು ಹೊರಟಿರುವ ಸಂಗತಿಯು ಅಲ್ಲಿಯ ಜನರ ಮುಖಾಂತರವಾಗಿ ಅವನಿಗೆ ತಿಳಿಯಬಹುದೆಂಬ ಭಯವು ಡನಬಾರನಿಗಿತ್ತು. ಅದ್ದರಿಂದ ಅವನು ತನ್ನ ಸೈನ್ಯವನ್ನು ರಭಸದಿಂದ ಸಾಗಿಸಿದ್ದನು. ಆ ಸೈನ್ಯಕ್ಕೆ ಆಹಾರ-ಉಪಹಾರಗಳನ್ನು ತೆಗೆದುಕೊಳ್ಳುವದಕ್ಕೆ ಸಹ ಅವಕಾಶವು ದೊರೆಯಲಿಲ್ಲ. ಹೋಗ ಹೋಗುತ್ತಲೆ ಉಪಹಾರವನ್ನು ತೆಗೆದುಕೊಳ್ಳತಕ್ಕದ್ದೆಂದು ಸೇನಾಪತಿಯು ಸೈನಿಕರಿಗೆ ಅಪ್ಪಣೆ ಮಾಡಿದ್ದನು. ಕುವರಸಿಂಹನ ಜನರು ದಾರಿಯಲ್ಲಿಯೇ ಎಲ್ಲಿ ಗಂಟು ಬೀಳುವರೋ? ಎಂಬ ಭಯವು ಡನಬಾರನಿಗೆ ಬಹಳವಾಗಿದ್ದುದರಿಂದ ಹೀಗೆ ವ್ಯವಸ್ಥೆ ಮಾಡಿದ್ದನು.

ಸೈನಿಕರು ನೌಕೆಯಿಂದ ಕೆಳಗಿಳಿದು ಮಾರ್ಗಕ್ರಮಣ ಮಾಡತೊಡಗಿದ ಕೂಡಲೆ ಸೂರ್ಯಾಸ್ತವಾಯಿತು. ಶುಕ್ಲಪಕ್ಷವಿದ್ದರೂ ಚತುರ್ಥಿಯ ಚಂದ್ರಮನ ಪ್ರಕಾಶವು ನಿಚ್ಚಳವಾಗಿ ಬಿದ್ದಿರಲಿಲ್ಲ. ವರ್ಷಾಕಾಲವಿದ್ದುದರಿಂದ ಆಕಾಶದಲ್ಲಿ ಅಲೆದಾಡುವ ಮೋಡಗಳು ಅಡ್ಡಬಂದರೆ ಆ ಪ್ರಕಾಶವು ಸಹ ಇಲ್ಲದಂತಾಗುತ್ತಿತ್ತು. ಸ್ವಲ್ಪ ಮಾರ್ಗವನ್ನು ಕ್ರಮಿಸಿದ ಮೇಲೆ ಎಲ್ಲ ಕಡೆಯಲ್ಲಿ ಗಾಢಾಂಧಕಾರವು ಮುಸುಕಿ, ಮಾರ್ಗಕ್ರಮಣ ಮಾಡುವದು ಸೈನಿಕರಿಗೆ ಕಠಿಣವೆನಿಸತೊಡಗಿತು. ಸರಿಯಾಗಿ ಅನ್ನ-ನೀರುಗಳಿಲ್ಲದ್ದರಿಂದ ಅವರು ಬಹಳೇ ಹೈರಾಣಾಗಿದ್ದರು. ಆಗ ಸೈನ್ಯದೊಳಗಿನ ಕೆಲವು ಅಧಿಕಾರಿಗಳು ಸೇನಾಪತಿಯ ಬಳಿಗೆ ಬಂದು: —

"ಅಂಧಕಾರವು ಮುಸುಕಿದ್ದರಿಂದ ಹಾದಿಯು ಸಾಗದಾಗಿರುವದು. ಇದಲ್ಲದೆ ಸೈನಿಕರು ಬಹಳೇ ದಣಿದಿರುವರು. ಇಂದು ರಾತ್ರಿಯನ್ನು ಇಲ್ಲಿಯೇ ಕಳೆದು, ನಾಳಿನ ಪ್ರಭಾತಕಾಲದಲ್ಲೆದ್ದು ಪಯಣ ಮಾಡುವದು ಒಳಿತೆನಿಸತೊಡಗಿರುವದು. ಇದರ ಮೇಲೆ ಖಾವಿಂದರವರ ಮನಸ್ಸು."

ಡನಬಾರನಿಗೆ ಈ ಮಾತುಗಳು ಸರಿಯಾಗಿ ತೋರಲಿಲ್ಲ. ರಾತ್ರಿಯಲ್ಲಿ

ಇಲ್ಲಿಯೇ ಉಳಿದರೆ, ಶತ್ರುಗಳಿಂದ ಆಕಸ್ಮಾತ್ತಾಗಿ ಅಪಾಯವು ತಟ್ಟಬಹುದೆಂದು ಅವನು ಭಾವಿಸಿದನು. ಇದಲ್ಲದೆ, ಬಂಧನೆಯಲ್ಲಿ ಸಿಲುಕಿದವರನ್ನು ಮುಕ್ತಗೊಳಿಸದೆ ವಿಶ್ರಾಂತಿ ಪಡೆಯುವದು ಆ ಕರ್ತವ್ಯದಕ್ಷನಿಗೆ ಯೋಗ್ಯವಾಗಿ ತೋರಲಿಲ್ಲ. ಶತ್ರುಗಳ ದವಡೆಯೊಳಗಿಂದ ಜ್ಞಾತಿ ಬಂಧುಗಳನ್ನು ಬಿಡುಗಡೆ ಮಾಡುವದಕ್ಕೆ ಬದ್ಧಕಂಕಣರಾಗಿಬಂದು, ಯಾವದೊಂದು ಕಾರಣದಿಂದ ಅಪಯಶವನ್ನು ಹೊಂದಿ ಹೋಗಬಾರದೆಂದು ಸ್ವಾಭಿಮಾನಿಯಾದ ಮನಸ್ಸು ಅವನಿಗೆ ಹೇಳತೊಡಗಿತ್ತು. ಡನಬಾರನು ಅವರ ಅಭಿಪ್ರಾಯವನ್ನು ತಿರಸ್ಕರಿಸಿ, ವಿಲಂಬಮಾಡದೆ ಮಾರ್ಗಕ್ರಮಣ ಮಾಡಬೇಕೆಂದು ಸೈನಿಕರಿಗೆ ಸೂಚನೆ ಕೊಟ್ಟು ಎಲ್ಲರಿಗಿಂತ ತಾನೇ ಮುಂದಾಗಿ ವೇಗದಿಂದ ಸಾಗಿದನು.

ಸೇನಾಪತಿಯು ಮುಂದೆ ಸಾಗಿದ ಕೂಡಲೆ ಸೈನಿಕರು ಅನಿವಾರ್ಯದಿಂದ ಅವನ ಹಿಂದೆ ನಡೆದರು. ನಿಬಿಡವಾದ ಅಂಧಃಕಾರವು ಮುಸುಕಿದ್ದರಿಂದ ಸೃಷ್ಟಿಯು ಭೀಷಣ ಸ್ವರೂಪವನ್ನು ಹೊಂದಿತ್ತು. ನಿಸ್ತಬ್ಧವಾದ ನಿಶೀಥ ಕಾಲವಾದುದರಿಂದ ಸೈನಿಕರ ಪದಾಘಾತವು ಬಳ್ಳಿಯ ಗಂಭೀರತೆಯಿಂದ ಪ್ರತಿಧ್ವನಿತಗೊಡತೊಡಗಿತ್ತು. ಸೈನ್ಯವು ಹೋಗುತ್ತಿರುವ ರಾಜಮಾರ್ಗವು ದಟ್ಟವಾಗಿ ಬೆಳೆದ ಅರಣ್ಯದಲ್ಲಿತ್ತು. ಆ ಮಾರ್ಗದ ಎರಡೂ ಬದಿಯಲ್ಲಿ ಆಳವಾದ ಕಂದಕಗಳಿದ್ದವು. ಸೈನ್ಯವು ಅತ್ತಿತ್ತ ಹೋಗದೆ, ಸರಳವಾಗಿ ಹಾದಿಯನ್ನು ಹಿಡಿದಿತ್ತು. ಡನಬಾರನು ಸೈನ್ಯಾಗ್ರದಲ್ಲಿ ಏಕಾಕಿಯಾಗಿ ತೆರಳಿದ್ದನು.

ಸೈನ್ಯವು ವೇಗದಿಂದ ನಡೆದಿರುವಾಗ ಮೊದಲು 'ಸಟ್' ಆ ಮೇಲೆ 'ಥಬ್' ಎಂಬ ಸಪ್ಪಳವಾಯಿತು. ಆ ಸಪ್ಪಳವು ಬದಿಯಲ್ಲಿದ್ದ ಕಂದಕದಿಂದಲೇ ಹೊರಟಿತು. ಅದು ತುಬಾಕಿಯ ಸಪ್ಪಳವೆಂದು ಜನರ ಮನಸ್ಸಿನಲ್ಲಿ ಆಲೋಚನೆ ಬರುವಷ್ಟರಲ್ಲಿ ಕ್ಯಾಪ್ಟನ್ ಡನಬಾರನು ಗತಾಸುವಾಗಿ ಭೂಮಿಗೆ ಬಿದ್ದಿದ್ದನು! ನಿಮಿಷಾರ್ಧ ನಿಮಿಷದಲ್ಲಿಯ ಈ ದೃಶ್ಯವನ್ನು ನೋಡಿ, ಸೈನಿಕರು ಭಯದಿಂದ ತಟಸ್ಥರಾಗಿ ನಿಂತುಬಿಟ್ಟರು!

ಪರಕ್ಷಣದಲ್ಲಿ ಕಂದಕದೊಳಗೆ ದೀವಟಿಗೆಗಳ ಪ್ರಕಾಶವು ಕಾಣತೊಡಗಿತು. ಎರಡೂ ಬದಿಯಿಂದ ಆಂಗ್ಲಸೈನಿಕರ ಮೇಲೆ ಗುಂಡಿನ ಮಳೆಯು ಸುರಿಯತೊಡಗಿತು. ಈ ಆಕಸ್ಮಿಕ ದಾಳಿಯಿಂದ ಆಂಗ್ಲಸೈನ್ಯವು ದಿಗ್ಭ್ರಾಂತವಾಯಿತು. ಕೂಡಲೆ ಆ ಸೈನಿಕರು ದಾರಿ ದೊರೆತ ಕಡೆಗೆ ಓಡುವದಕ್ಕೆ ಪ್ರಾರಂಭಿಸಿದರು. ಭಗ್ನೋತ್ಸಾಹಿಗಳಾದ ಅವರು ಸದ್ಯಃಸ್ಥಿತಿಯಲ್ಲಿ ಯಾರ ಆಶ್ವಾಸನವನ್ನೂ ಕೇಳುವಂತಹರಿದ್ದಿಲ್ಲ. ಆಂಗ್ಲರು ಪರಾಕ್ರಮಿಗಳೂ, ದೀರ್ಘಸಾಹಸಿಗಳೂ, ನಿಶ್ಚಲವೃತ್ತಿಯವರೂ ಇರುವದೇನೋ ನಿಜ; ಆದರೆ ಒಮ್ಮೆ ಬೆದರಿದರೆಂದರೆ, ಅವರನ್ನು

ತಡೆಯುವದು ದುಸ್ತರವಾಗುವದು. ಸೇನಾಪತಿಯು ಆಕಸ್ಮಿಕ ಮರಣದಿಂದ ಆಂಗ್ಲಸೈನ್ಯದ ಸ್ಥಿತಿಯು ತೀರ ಕೆಟ್ಟು ಹೋಯಿತು. ಎಷ್ಟೋ ಸೈನಿಕರು ಗಿಡದ ಮರೆಯಲ್ಲಿ ಅಡಗಿದರು; ಕೆಲವರು ಓಡತೊಡಗಿದರು; ಎಷ್ಟೋ ಜನರು ದೇವಾಲಯದಲ್ಲಿ ಮರೆಯಾದರು. ಹೀಗೆ ಕ್ಷಣಾರ್ಧದಲ್ಲಿ ಆ ಸ್ಥಳವು ನಿರ್ಜನವಾಯಿತು. ಬಂಡುಗಾರರು ಕಂದಕದಲ್ಲಿ ಕುಳಿತು ಪಲಾಯನ ಮಾಡುತ್ತಿರುವ ಸೈನಿಕರ ಮೇಲೆ ಗುಂಡು ಹಾರಿಸತೊಡಗಿದ್ದರು. ಎರಡೂ ಬದಿಯಿಂದ ಬರುವ ಗುಂಡುಗಳ ಹೊಡತಕ್ಕೆ ಆಂಗ್ಲಸೈನ್ಯವು ಹತಾಶವಾಯಿತು. ಆ ಸೈನ್ಯವು ತಮ್ಮ ಕೈಯೊಳಗಿನ ತುಬಾಕಿಗಳಿಂದ ಮನಬಂದತ್ತ ಗುಂಡು ಹೊಡೆಯತೊಡಗಿತು. ಬುದ್ಧಿಭ್ರಂಶವಾದಂತಾದ ಆ ಜನರ ಗುಂಡುಗಳು ಬಂಡುಗಾರರಿಗೆ ತಗಲುತ್ತಿರಲಿಲ್ಲ. ಅವು ತಮ್ಮ ತಮ್ಮ ಜನರಿಗೇ ಬಡಿಯತೊಡಗಿದ್ದವು, ಜ್ಞಾನಶೂನ್ಯರಾದ ಆ ಜನರಿಗೆ ತಮ್ಮ ಗುಂಡುಗಳು ತಮಗೇ ಮುಳುವಾಗುವವೆಂಬದರ ಪರಿವೆಯೇ ಇದ್ದಿಲ್ಲ.

ಆಂಗ್ಲಸೈನ್ಯದಲ್ಲಿಯ ಶೀಖಜನರು ಬಂಡುಗಾರರ ಹೊಡತಕ್ಕೆ ಅಳ್ಳೊಡೆಯದೆ ಎದೆಗೊಟ್ಟು ನಿಂತರು. ಕೆಲವು ಆಂಗ್ಲ ಸಮರಪಟುಗಳು ಓಡಿಹೋದ ಸ್ವಸೈನಿಕರನ್ನು ಒಟ್ಟುಗೂಡಿಸಿ ಅವರಿಗೆ ಧೈರ್ಯಕೊಡುತ್ತ ಶೀಖಸೈನಿಕರಿದ್ದ ಸ್ಥಳಕ್ಕೆ ಕರೆತಂದರು. ಅನಂತರದಲ್ಲಿ ಅವರು ಮಾರ್ಗಕ್ರಮಣ ಮಾಡತೊಡಗಿದರು. ಬಂಡುಗಾರರು ಇನ್ನೂ ಅವರ ಬೆನ್ನು ಬಿಟ್ಟಿರಲಿಲ್ಲ. ಮತ್ತೊಮ್ಮೆ ಅವರು ಆಂಗ್ಲಸೈನ್ಯದ ಮೇಲೆ ವೇಗದಿಂದ ಬಿದ್ದರು. ಆಗ ಮಾತ್ರ ಆಂಗ್ಲಸೈನಿಕರು ಪೂರ್ಣ ಹಣ್ಣಾದರು; ಅವರು ಮತ್ತೆ ಪಲಾಯನಸೂಕ್ತವನ್ನು ಪಠಿಸಿದರು. ಬಂಡುಗಾರರು ಓಡುವ ಸೈನಿಕರ ಬೆನ್ನುಹತ್ತಿದರು. ಓಡುವದರಿಂದಲೂ ಜೀವವು ಉಳಿಯುವದಿಲ್ಲವೆಂದು ಆಂಗ್ಲಸೈನಿಕರಿಗೆ ಗೊತ್ತಾಯಿತು. ಅವರು ಸಮೀಪದಲ್ಲಿರುವ ಒಂದು ಹಳ್ಳಿಯನ್ನು ಹೊಕ್ಕರು.

ದುರ್ದೈವಿಗಳಾದ ಆಂಗ್ಲ ಸೈನಿಕರಿಗೆ ಅಲ್ಲಿಯೂ ಆಶ್ರಯವು ದೊರೆಯಲಿಲ್ಲ. ಊರ ಜನರು ಅವರಿಗೆ ಬಡಿಗೆಯ ಏಟು ಕೊಟ್ಟು ಹೊರಗೆ ಹಾಕಿದರು. ಹೆಣ್ಣುಮಕ್ಕಳು ಸಹ ಅವರಿಗೆ ಒನಿಕೆಯ ಪೆಟ್ಟು ಹಾಕಿದರು! ಅವರು ಭ್ರಾಂತಿಷ್ಟರಂತೆ ನದೀತಟಾಕದ ಬಳಿಗೆ ಹೊರಟರು. ನಾಲ್ಕುನೂರು ಜನರಲ್ಲಿ ನೂರು ಜನರು ಮಾತ್ರ ಜೀವದಿಂದುಳಿದು ಬಂದರು; ಆ ಜನರಲ್ಲಿ ಐವತ್ತು ಜನರು ಗಾಯಹೊಂದಿದವರೇ ಇದ್ದರು.

ಶೀಖಸೈನಿಕರೂ, ಆಂಗ್ಲಸೈನಿಕರೂ ನೌಕೆಯಲ್ಲಿ ಕುಳಿತರು. ನೌಕಾವಾಹಕನು ವೇಗದಿಂದ ನೌಕೆಯನ್ನು ಸಾಗಿಸತೊಡಗಿದನು. ಎಲ್ಲರ ಮೋರೆ

ಗಳು ಕಪ್ಪಿಟ್ಟಿದ್ದವು. ಸರ್ವರೂ ನಿರುತ್ಸಾಹಗೊಂಡಿದ್ದರು. ದಾನಾಪುರದಲ್ಲಿ ಸ್ವಜನರಿಗೆ ಅಪಯಶ ಕಲಂಕಿತವಾದ ಮುಖವನ್ನು ಹೇಗೆ ತೋರಿಸಬೇಕೆಂದು ಅವರು ಖೇದಗೊಂಡಿದ್ದರು.

ನೌಕೆಯು ದಾನಾಪುರಕ್ಕೆ ತಲುಪಿತು. ವಿಜಯಿ ಸೈನಿಕರ ಅಭಿನಂದನ ಮಾಡುವದಕ್ಕಾಗಿ ಅಲ್ಲಿ ಎಷ್ಟೋ ಸ್ತ್ರೀ ಪುರುಷರು ನೆರೆದಿದ್ದರು! 'ಆರಾದಲ್ಲಿಯ ಜನರನ್ನು ಬಿಡಿಸಿಕೊಂಡು ಕ್ಯಾಪ್ಟನ್ ಡನಬಾರ ಸೇನಾಪತಿಗಳು ನೌಕೆಯಲ್ಲಿ ಹೇಗೆ ಬರುತ್ತಿರುವರು ನೋಡಿದೆಂರಾ?' ಎಂದು ಜನರು ತಮ್ಮ ತಮ್ಮೊಳಗೆ ಆನಂದೋದ್ಗಾರ ತೆಗೆಯ ತೊಡಗಿದ್ದರು. ಅವನು ಆಕಾಶನೌಕೆಯಲ್ಲಿ ಕುಳಿತದ್ದನ್ನು ಪೌರವಾಸಿಗಳೇನು ಬಲ್ಲರು? ನೌಕೆಯು ಸಮೀಪದಲ್ಲಿ ಬಂತು. ತಟಾಕದಲ್ಲಿಯ ಜನರು ಇನ್ನು ಮೇಲೆ ಜಯಜಯಕಾರ ಮಾಡತಕ್ಕವರು; ಅಷ್ಟರಲ್ಲಿ ನೌಕೆಯಿಂದ ಹಾಹಾಕಾರ ಧ್ವನಿಯು ಕೇಳಬಂದಿತು. ಗಾಯಾಳುಗಳಾದ ಜನರ ಆರ್ತಧ್ವನಿಯಿಂದ ಎಲ್ಲ ಜನರ ಹೃದಯಕ್ಕೆ ವಜ್ರಾಘಾತವಾದಂತಾಗಿ, ಅವರ ಮುಖಗಳು ಕಪ್ಪಿಟ್ಟವು. ಅವರು ಭೋರಿಟ್ಟು ಆಕ್ರಂದನ ಮಾಡತೊಡಗಿದರು ಆಗಿನ ಶೋಚನೀಯ ದೃಶ್ಯವನ್ನು ನೋಡಿದರೆ ಎಂತಹ ಕಲ್ಲೆದೆಯಾದರೂ ಕರಗಿ ನೀರಾಗುತ್ತಿತ್ತು. ಎತ್ತ ನೋಡಿದತ್ತ ಹಾ ಹಾಕಾರ ಧ್ವನಿಯೇ ಎದ್ದಿತ್ತು!

ಜಯಜಯಕಾರ ಮಾಡುವದಕ್ಕೆ ಬಂದ ಜನರ ಮುಖದಿಂದ ಹಾಹಾಕಾರ ಧ್ವನಿಯು ಹೊರಟದ್ದನ್ನು ನೋಡಿದರೆ, ವಿಧಿಘಟನೆಯು ವಿಚಿತ್ರವಾದದೆಂದು ದೃಗ್ಗೋಚರವಾಗುತ್ತದೆ.

---

## ರಾಮಶರಣ ದರೋಗಾ!

"ರಾಣೀ, ನೀನು ಇತ್ತೀಚೆಗೆ ಬಹಳೇ ನಿರುತ್ಸಾಹಿಯಾಗಿರುವೆ. ಮುಖವು ಯಾವಾಗಲೂ ವಿಷಣ್ಣವಾಗಿರುವದು. ಯಾವಾಗಲೂ ನಗುತ್ತ ಕೆಲೆಯುತ್ತ ಆನಂದದಿಂದ ಕಾಲಕಳೆಯುವ ನೀನು ಹೀಗೆ ದುಃಖಿತಳಾಗಿರುವ ಕಾರಣವೇನು?"

"ಅಕ್ಕಾ ತಾರಾದೇವಿ, ನಾನು ನಿನ್ನೆದುರಿನಲ್ಲಿ ಯಾವದನ್ನೂ ಬಚ್ಚಿಡಲಾರೆನು. ಆರಾದ ಸಂಗ್ರಾಮದಲ್ಲಿ ಅವರಿಗೆ ಯಾವ ಬಗೆಯ ಅಪಾಯವಾದರೂ ತಟ್ಟಿರಬಹುದೆಂದು ನನ್ನ ಮನಸ್ಸಿನಲ್ಲಿ ಒಂದು ವಿಧವಾದ ಭೀತಿಯುತ್ಪನ್ನವಾಗಿರುವದು. ಹಾಗಿಲ್ಲವಿದ್ದರೆ ಇಷ್ಟು ದಿನಗಳ ಅವಧಿಯಲ್ಲಿ ಒಮ್ಮೆಯಾದರೂ ಒಂದು

ಹೋಗುತ್ತಿದ್ದರು. ಬಹಳ ದಿನಗಳ ವರೆಗೆ ದುಃಖವನ್ನು ಭೋಗಿಸಿ, ಇದೀಗ ಸೌಖ್ಯದಿಂದ ಸಂಸಾರ ಮಾಡಿಕೊಂಡಿದ್ದ ನಮ್ಮ ಮೇಲೆಯೇ ಯುದ್ಧದ ಪೀಡೆಯು ಬರಬೇಕೆ? ಇದೇನು ಗೃಹಲೀಲೆಯೋ ಹೇಗೆ? ಆಂಗ್ಲ ಸೇನಾಪತಿಯು ಯುದ್ಧದಲ್ಲಿ ಮಡಿದನೆಂದೂ, ಅವನ ಸೈನಿಕರು ಪಲಾಯನ ಮಾಡಿದರೆಂದೂ ವರ್ತಮಾನವು ಬಂದಿರುವದು. ಹೀಗೆ ಅನುವು ದೊರೆತಿದ್ದರೂ ಅವರು ಇತ್ತ ಬರಬಾರದೇಕೆ? ಸ್ವಾರಿಯು ಆಗಮನವಾಗದ್ದರಿಂದ ಮನಸ್ಸಿನಲ್ಲಿ ಇಲ್ಲದ ಶಂಕೆಗಳು ಬರತೊಡಗಿವೆ.''

'ನೀನು ವ್ಯರ್ಥವಾದ ಆಲೋಚನೆಯನ್ನು ಮಾಡುವೆ. ಅಜಯಸಿಂಹರಿಗೆ ಈಗ ಮೈತುಂಬ ಕೆಲಸಗಳು ಬಿದ್ದಿರುವವು. ಒಬ್ಬ ಸೇನಾಪತಿಯು ಮಡಿದಿದ್ದರೂ ಮತ್ತೊಬ್ಬನು ಬಂದು ಆರಾಕ್ಕೆ ಮುತ್ತಿಗೆ ಹಾಕುವ ಭಯವುಂಟು; ಹಾಗು ಪಟ್ಟಣದಲ್ಲಿ ಶಾಂತತೆಯನ್ನು ಕಾಯುವ ಕೆಲಸವು ಅವರ ಮೇಲೆಯೇ ಇರುವದು. ವೃದ್ಧರಾದ ಕುವರಸಿಂಹರಿಗೆ ಅಜಯಸಿಂಹರು ಬಲಗೈಯಾಗಿರುವರು. ಸ್ವಲ್ಪ ಅನುವು ದೊರೆತೊಡನೆಯೆ ಬಂದಾರು. ಅದಕ್ಕೇಕೆ ಇಷ್ಟು ಯೋಚನೆಯು?''

ರಾಣಿ ಹಾಗು ತಾರಾದೇವಿಯರು ಈ ಬಗೆಯಾಗಿ ಮಾತನಾಡುತ್ತ, ಜಗದೀಶಪುರದಲ್ಲಿಯ ತಮ್ಮ ಅರಮನೆಯಲ್ಲಿ ಕುಳಿತಿದ್ದರು. ಅಜಯಸಿಂಹನು ಬಹಳ ದಿನಗಳಿಂದ ಅಲ್ಲಿಗೆ ಬಾರದ್ದರಿಂದ ರಾಣಿಗೆ ಕಡು ದುಃಖವಾಗಿತ್ತು. ತಾರಾದೇವಿಯು ಅವಳನ್ನು ಸಾಂತ್ವನಗೊಳಿಸ ತೊಡಗಿದ್ದಳು. ಅಷ್ಟರಲ್ಲಿ ಒಬ್ಬ ದೂತನು ಒಳಗೆ ಬಂದು ಮುಜುರೆ ಮಾಡಿ:—

''ಧನಿಯರು ತಮ್ಮನ್ನು ಕರೆದುಕೊಂಡು ಬರುವದಕ್ಕಾಗಿ ಮೇಣೆಯನ್ನು ಕಳುಹಿಸಿರುವರು.''

ರಾಣಿಯ ಕರ್ಣದಲ್ಲಿ ಈ ಮಾತುಗಳು ಅಮೃತವೃಷ್ಟಿಗರೆದವು. ಆಗಲವಳು ಆನಂದದಿಂದ:—

''ಆರಾದಲ್ಲಿ ಎಲ್ಲರೂ ಸುಖರೂಪರಾಗಿರುವರೆ? ಯುದ್ಧವು ಶಾಂತವಾಯಿತೆ?''

''ಎಲ್ಲರೂ ಒಳಿತಾಗಿರುವರು. ನಮ್ಮ ಒಡೆಯರಿಬ್ಬರೂ ಪರಾಕ್ರಮಿಗಳಿರುವರು. ಅವರ ಶೂರತನಕ್ಕೆ ಆ ಬಿಳೀ ಮೋತಿಯ ಜನರು ಈಡಾಗುವರೆ? ಮೊನ್ನೆ ದಂಡೆತ್ತಿ ಬಂದ ಫಿರಂಗಿಗಳನ್ನು ಧನೀ ಸಾಹೇಬರು ಹಣ್ಣುಗಾಯಿ-ನೀರುಗಾಯಿ ಮಾಡಿಬಿಟ್ಟರು. ಸತ್ತ ಸುದ್ದಿ ಹೇಳುವದಕ್ಕೆ ದಿಕ್ಕಿಲ್ಲದಂತೆ ಅವರ ಸ್ಥಿತಿಯಾಯಿತು!''

''ನೋಡವ್ವಾ, ಎಷ್ಟು ಗಾಬರಿಯಾಗಿದ್ದಿ? ಈಗಲಾದರೂ ನಿನ್ನ ಮನಸ್ಸು

ಸಮಾಧಾನಗೊಂಡಿತೆ? ' ಎಂದು ತಾರಾದೇವಿಯು ನಗುತ್ತ ನುಡಿದಳು.

"ಬೇಗನೆ ಹೊರಡಿರಮ್ಮಾ, ಸುಮ್ಮನೆ ವೇಳೆಗಳೆಯಬೇಡಿರಿ." ಎಂದು ಆ ಚರನು ರಾಣಿಗೂ ತಾರಾಬಾಯಿಗೂ ಸೂಚನೆಯಿತ್ತನು. ಕೂಡಲೆ ಅವರೀ ವ್ವರೂ ಮೇಣೆಯನ್ನು ಹತ್ತಿದರು. ಬೋವಿಗಳು ಅದನ್ನು ಹೊತ್ತುಕೊಂಡು ಮುಂದೆ ಸಾಗಿದರು. ಸುಮಾರು ಮೂರು ಹರದಾರಿಗಳನ್ನು ಕ್ರಮಿಸಿದ ಮೇಲೆ ಒಂದು ನಿಬಿಡವಾದ ಅರಣ್ಯವು ಬಂದಿತು. ಆ ಅರಣ್ಯಮಧ್ಯದಲ್ಲಿ ಇಟ್ಟಂಗಿ ಯಿಂದ ಕಟ್ಟಲ್ಪಟ್ಟ ಒಂದು ಮನೆಯು ಇತ್ತು. ಬೋವಿಗಳು ಆ ಮನೆಯ ಬಳಿಯಲ್ಲಿ ಮೇಣೆಯನ್ನು ಇಳಿಸಿದರು. ಕೂಡಲೆ ರಾಣಿಯು ಭಯಚಕಿತಳಾಗಿ:—

"ಮೇಣೆಯನ್ನು ಇಲ್ಲಿಯೇಕೆ ಇಳಿಸಿದಿರಿ?"

"ರಾಣಿಯವರೆ, ಸದ್ಯದ ಸ್ಥಿತಿಯಲ್ಲಿ ಪುರವಾಸಕ್ಕಿಂತಲೂ ವನವಾಸವೇ ಸುರಕ್ಷಿತವು. ಬಂಡಾಯದ ಬೇಗೆಯಿಂದ ಹುರುಪಳಿಸತೊಡಗಿರುವ ಪಟ್ಟಣಗಳ ಲ್ಲಿದ್ದು ವೃಥಾ ಗಂಡಾಂತರವನ್ನೇಕೆ ತಂದುಕೊಳ್ಳಬೇಕು? ಇನ್ನು ಪುರದಾಶೆ ಯನ್ನು ಬಿಡಿರಿ. ಈ ಅರಣ್ಯಮಂದಿರದಲ್ಲಿ ಲೋಲಾಡುತ್ತ ಕಾಲಹರಣ ಮಾಡು ವದು ಸ್ವರ್ಗತುಲ್ಯ ಸೌಖ್ಯವೆಂಬದು ನಿಮಗೆ ಸ್ವಲ್ಪ ದಿನಗಳಲ್ಲೇ ಅನುಭವಕ್ಕೆ ಬರುವದು.

ಈ ಮಾತುಗಳನ್ನು ಕೇಳಿ ರಾಣಿಯೂ ತಾರಾದೇವಿಯೂ ಭಯಕಂಪಿತ ರಾದರು. ತಾವು ಮೋಸದ ಜಾಲದಲ್ಲಿ ತೊಡಕಿರುವೆವೆಂಬದು ಆಗ ಅವರಿಗೆ ಹೊಳೆಯಿತು. ಅವರು ಆಪಾದ-ಮಸ್ತಕದ ವರೆಗೂ ಥರಥರನೆ ನಡುಗತೊಡಗಿ ದರು. ಅಲ್ಪಾವಕಾಶದಲ್ಲಿ ರಾಣಿಯು ಕ್ರೋಧಸಂತಪ್ತಳಾದಳು. ಕೂಡಲೆ ಅವಳು ಆವೇಶದಿಂದ:—

"ರಾಮಶರಣಾ, ನಾನು ಯಾರೆಂಬದನ್ನು ನೀನು ತಿಳಿದಿರುವೆಯಷ್ಟೆ?"

"ಓಹೋ! ಚನ್ನಾಗಿ ತಿಳಿದಿರುವೆನು. ನೀನು ರಾಣಿಯೆಂಬದನ್ನು, ಅದ ರಲ್ಲಿಯೂ ನನ್ನ ರಾಣಿಯೆಂಬದನ್ನು ನಾನು ಚೆನ್ನಾಗಿ ತಿಳಿದಿರುವೆನು."

ರಾಣಿಯು ಈ ಮಾತುಗಳನ್ನು ಕೇಳಿ ಮತ್ತಿಷ್ಟು ಸಂತಪ್ತಳಾದಳು. ಆಗ ಲವಳು ರೋಷಾವೇಶದಿಂದ:—

"ನೀಚಾ, ಕುಲಾಂಗಾರಾ, ಅನ್ನದಾತರ ಮೇಲೆ ಕೈ ಮಾಡುವದಕ್ಕೆ ಪ್ರವೃತ್ತನಾದೆಯಾ? ಜೋಕೆ! ನಿನ್ನಲ್ಲಿ ಕಟುಭಾಷಣಗಳಾಗಲಿ, ದುಷ್ಟ ಆಚ ರಣೆಯಾಗಲಿ ಕಂಡದ್ದಾದರೆ, ಘೋರ ಶಾಸನವನ್ನು ಅನುಭವಿಸಬೇಕಾಗುವದೆಂಬ ದನ್ನು ಚನ್ನಾಗಿ ಲಕ್ಷ್ಯದಲ್ಲಿಡು."

"ಓಹೊ-ಹೊ-ಹೊ! ಹೂ ಹೂ ಹೂ ಹೂ!!" ಎಂದು ವಿಕಟಹಾಸ್ಯ

ದಿಂದ ನಕ್ಕು ರಾಮಶರಣನು:—ನಿನ್ನಿಂದ ಶಾಸನವನ್ನು ಹೊಂದಬೇಕೆಂದೇ ಈ ಬಗೆಯ ಕಾರಸ್ಥಾನವನ್ನು ರಚಿಸಿರುವೆನು. ನನಗೆ ನೀನು ಯಾವ ಬಗೆಯ ಶಾಸನವನ್ನು ವಿಧಿಸುವೆ? ಕಡಿಯುವೆಯೊ, ಬಿಗಿಯುವೆಯೊ? ತುಟಿಗಳಿಂದ ಬೇಕಾದ ಹಾಗೆ ಕಡಿ! ಬಾಹುಪಾಶದಿಂದ ಮನಸ್ವೀಯಾಗಿ ಬಿಗಿ!"

ನಿರ್ಲಜ್ಜ ರಾಮಶರಣನ ಈ ವಿಷಸದೃಶ ಭಾಷಣಗಳಿಂದ ರಾಣಿಯ ಕ್ರೋಧವು ಅನಿವಾರವಾಯಿತು. ತಾರಾದೇವಿಯಾದವರೂ ಕ್ರುದ್ಧಳಾಗಿ ಹಲ್ಲು ತಿನ್ನತೊಡಗಿದಳು. ಎಷ್ಟಾದರೂ ಅಬಲೆಯರು ಅಬಲೆಯರೇ!

ವಾಚಕ ಮಹಾಶಯ, ರಾಮಶರಣನು ಯಾರೆಂಬದನ್ನು ತಿಳಿದುಕೊಳ್ಳುವದಕ್ಕೆ ತಾವು ಉತ್ಕಂಠಿತರಾಗಿರಬಹುದಲ್ಲವೆ? ಅವನ ಸಚ್ಚರಿತ್ರವನ್ನು ಹೇಳಿಯೇ ಮುಂದಿನ ಕಥಾನಕದ ಕಡೆಗೆ ತೆರಳುವಾ.

ಲಾಲಾ ರಾಮಶರಣಲಾಲ ದರೋಗಾ ಇವನ ತಂದೆಯು ದೂತವೃತ್ತಿಯಿಂದ ಉಪಜೀವಿಕೆ ಮಾಡಿಕೊಂಡು ಆರಾದಲ್ಲಿರುತ್ತಿದ್ದನು. ಇವನಿಗೆ ತನ್ನ ಮಗನು ಘನವಿದ್ವಾಂಸನಾಗಬೇಕೆಂಬ ಹವ್ಯಾಸವು ಬಹಳವಾಗಿತ್ತು. ಶುದ್ಧ ಟೊಣಪನಾದ ತಂದೆಯ ಮುಂದೆ ನಾಲ್ಕು ಅಕ್ಷರಗಳನ್ನು ಕಲಿತ ರಾಮಶರಣನು ಘನವಿದ್ವಾಂಸನಂತೆ ಕಾಣತೊಡಗಿದನು. ಆಂಗ್ಲವಿದ್ಯೆಯನ್ನು ಕಲಿತ ಅವನಿಗೆ ಸರಕಾರಿಯ ದೊಡ್ಡ ಸಂಬಳದ ಕೆಲಸವು ದೊರೆಯುವದೆಂದು ಆನಂದಪಟ್ಟಿದ್ದನು. ಕೆಲಸವು ದೊರೆಯಬೇಕೆಂದು ಅವನು ದೊಡ್ಡ ದೊಡ್ಡ ಸಾಹೇಬರಿಗೆ ಹೇಳಿಕೊಳ್ಳತೊಡಗಿದನು. ಬಹು ದಿವಸ ಶ್ರಮಪಟ್ಟ ಮೇಲೆ ರಾಮಶರಣನಿಗೆ ದರೋಗಾ ಕೆಲಸವು ದೊರೆಯಿತು. ಆಗ ರಾಮಶರಣನ ತಂದೆಗೆ ಅತ್ಯಾನಂದವಾಯಿತು. ಜಾಣಮಗನು ಹುಟ್ಟಿ ಮನೆತನವನ್ನು ಮುಂದೆ ತಂದನೆಂದು ಅವನು ಗ್ರಹಿಸಿದನು.

ರಾಮಶರಣನು ಮಹಾ ಕಪಟಿಯು; ನೀಚಸ್ವಾರ್ಥಿಯು; ಕುಶಾಗ್ರಬುದ್ಧಿಯವನು; ಧೂರ್ತನು; ವಿಷಯಾಂಧನು. ಸ್ವಾರ್ಥಕ್ಕಾಗಿ ಇವನು ಎಂತಹ ಕ್ರೂರತನವನ್ನಾದರೂ ಮಾಡುತ್ತಿದ್ದನು. ಆಸುರೀ ವಿಷಯಲಾಲಸೆಯುಳ್ಳವನಾದ ಇವನು ಲಖನೌ, ದಿಲ್ಲಿ, ಕಾಶಿ ಮೊದಲಾದ ಕಡೆಯ ಸುಪ್ರಸಿದ್ಧ ನರ್ತಕಿಯರನ್ನು ಕರೆಯಿಸಿ, ತನ್ನ ಸ್ವಚ್ಛಂದವೃತ್ತಿಯನ್ನು ಸಮಾಧಾನಪಡಿಸುತ್ತಿದ್ದನು. ದರೋಗಾನ ಮನೆಯಲ್ಲಿ ಯಾವಾಗಲೂ ನೃತ್ಯ-ಗೀತಗಳು ನಡೆದೇ ಇರುತ್ತಿದ್ದವು. ಕೇವಲ ಇಷ್ಟರಿಂದಲೇ ರಾಮಶರಣನು ತುಷ್ಟನಾಗುವಂತಹನಿರಲ್ಲ. ಕುಲಸ್ತ್ರೀಯರಾದರೂ ಒಮ್ಮೊಮ್ಮೆ ಇವನ ಮನೆಯನ್ನು ಭೂಷಣಗೊಳಿಸುತ್ತಿದ್ದರು! ಇವನ ಕೈಕೆಳಗಿನ ಜನರು ಕುಶಲತೆಯಿಂದಲೂ, ಧನ ಮತ್ತು ಅಲಂಕಾರಗಳ ಲೋಭವನ್ನು ತೋರಿಸುತ್ತಲೂ, ಮೋಸದಿಂದಲೂ ಅನೇಕ ಕುಲವಧುಗಳನ್ನು

ತಂದು ದರೋಗಾನ ಮನೆಯನ್ನು ತುಂಬುತ್ತಿದ್ದರು. ಸತ್ಕುಲಜಾತರಾದ ಎಷ್ಟೋ ಕುಲಯುವತಿಯರು ರಾಮಶರಣನ ವಾಮಮಾರ್ಗೀಯ ಪ್ರಯೋಗದಿಂದಲೇ ಭ್ರಷ್ಟಾಕಾರ ಹೊಂದಿದ್ದರು.

ರಾಮಶರಣನು ಮೊದಲು ಆಂಗ್ಲರ ಬಾಲ ಒಡೆಯುವದರಲ್ಲಿ ಅಗ್ರೇಸರನಾಗಿದ್ದನು. ಇಂತಹನು ಆಂಬಾದಲ್ಲಿ ಕುವರಸಿಂಹನ ಆಧಿಪತ್ಯವು ಪ್ರಾರಂಭವಾದೊಡನೆಯೆ ಅವನನ್ನು ಪ್ರಾರ್ಥಿಸಿ ಕೆಲಸ ದೊರಕಿಸಿಕೊಂಡನು. ವಂಚಕತನದಿಂದ ಕಾರ್ಯಸಾಧನೆ ಮಾಡಿಕೊಳ್ಳುವದರಲ್ಲಿ ಇವನು ಅತ್ಯಂತ ಪ್ರವೀಣನಾಗಿದ್ದನು. ಯಾವದೊಂದು ಕೆಲಸದಿಂದ ಪ್ರಾಪ್ತಿಯಾಗುವಂತಿದ್ದರೆ ಅದು ಉಚ್ಚವಿರಲಿ, ನೀಚವಿರಲಿ; ಬೇಕಾದ ಹಾಗಿದ್ದರೂ ಅದನ್ನು ಮಾಡುವದಕ್ಕೆ ರಾಮಶರಣನು ಅನುಮಾನಿಸುತ್ತಿರಲಿಲ್ಲ. ಕುವರಸಿಂಹನು ಬಂಡಾಯದಲ್ಲಿ ತೊಡಗಿದ ಸಂಗತಿಯು ಇವನಿಗೆ ತಿಳಿಯಿತು. ಈ ಸಂಗತಿಯನ್ನು ಆಂಗ್ಲ ಅಧಿಕಾರಿಗಳಿಗೆ ತಿಳಿಸಿ ಅವರ ಪ್ರೇಮ ಸಂಪಾದನೆ ಮಾಡಿಕೊಳ್ಳಬೇಕೆಂದು ಯತ್ನಿಸಿ, ಆರಾದ ಜಿಲ್ಹಾಧಿಕಾರಿಯ ಒಳಗೆ ಹೋಗಿ ಎಲ್ಲ ವಾರ್ತೆಯನ್ನು ಅರುಹಿದನು. ಆರಾದ ಅಧಿಕಾರಿಯ ಒಳಿಯಲ್ಲಿ ಒಬ್ಬ ಮನುಷ್ಯನು ಬಂದು, ಅವನಿಗೆ ಕುವರಸಿಂಹನ ವಿಷಯದ ಸಂಗತಿಯನ್ನು ತಿಳಿಸಿದ್ದು ವಾಚಕ ಮಹಾಶಯರ ಸ್ಮರಣೆಯಲ್ಲಿರಬಹುದಲ್ಲವೆ? ಆ ಮನುಷ್ಯನು ಮತ್ತಾರೂ ಆಗಿರದೆ, ಇದೇ ಮಹಾಶಯನಾದ ರಾಮಶರಣ ದರೋಗಾನು!

ಕುವರಸಿಂಹನಲ್ಲಿ ಕೆಲಸವು ದೊರೆತ ಕೂಡಲೆ ಇವನು ಮತ್ತೆ ತನ್ನ ವಾಮಮಾರ್ಗೀಯ ವ್ಯವಸಾಯಕ್ಕೆ ಪ್ರಾರಂಭಿಸಿದನು. ರಾಣಿ-ತಾರಾದೇವಿಯರ ಸೌಂದರ್ಯಾತಿಶಯವನ್ನು ನೋಡಿ, ಈ ಪಾತಕಿಯ ಮನಸ್ಸು ಕಲುಷಿತವಾಗಿತ್ತು. ಅವರೀರ್ವರೂ ಹೇಗೆ ತನ್ನ ಕೈವಶರಾಗಬಹುದೆಂದು ಅವನು ಹಗಲಿರುಳೂ ಕಾಯತೊಡಗಿದ್ದನು. ಸಾಮಾನ್ಯ ತರಗತಿಯವನಾದ ಅವನು ಉಳಿದ ಸ್ತ್ರೀಯರ ಮೇಲೆ ಕಾರಸ್ಥಾನ ನಡೆಯಿಸಿದಂತೆ ರಾಣಿ ತಾರಾದೇವಿಯರ ಮೇಲೆ ನಡೆಯಿಸುವದು ಅಸಾಧ್ಯವಾಗಿತ್ತು. ಅಂತೆಯೇ ಅವನು ಯೋಗ್ಯ ಸಂಧಿಯನ್ನು ಎದುರು ನೋಡತೊಡಗಿದ್ದನು.

ರಾಣಿ-ತಾರಾದೇವಿಯರ ಪ್ರೇಮಜಲಕ್ಕಾಗಿ ತೃಷಿತವಾದ ಮನಸ್ಸನ್ನು ಬೇಕಾದಂತಹ ಸಾಹಸವನ್ನು ಮಾಡಿಯೂ ತೃಪ್ತಿಗೊಳಿಸಬೇಕೆಂದು ಆ ನರಾಧಮನು ಯೋಚಿಸಿಕೊಂಡಿದ್ದನು. ಜಗತ್ಸುಂದರಿಯಾದ ಆ ರಮಣಿರಾಣಿಯ ಧ್ಯಾನದಲ್ಲಿ ಮಗ್ನನಾಗಿ ಅವನು ಭ್ರಮಿಷ್ಟನಂತಾಗಿದ್ದನು. ಅವಳನ್ನು ಹೇಗೆ ವಶಮಾಡಿಕೊಳ್ಳಬೇಕೆಂಬ ಬಗ್ಗೆ ನಾನಾ ವಿಧವಾಗಿ ವಿಚಾರಿಸತೊಡಗಿದ್ದನು. ಸಾಮಾನ್ಯ

ಸ್ತ್ರೀಯರಂತೆ ದ್ರವ್ಯಲಾಲಸೆಯಿಂದಾಗಲಿ, ಅಧಿಕಾರ ಬಲದಿಂದಾಗಲಿ ವಶವಾಗುವಂತಹಳು ಅವಳಾಗದ್ದರಿಂದ, ರಾಮಶರಣನು ಬಹು ಚಿಂತಾಕ್ರಾಂತನಾಗಿದ್ದನು. ಎಷ್ಟೋ ದಿನಗಳ ವರೆಗೆ ಹೀಗೆ ಹೊಂಚು ಹಾಕಿಕೊಂಡು ಕುಳಿತಿರುವಾಗ ಅನುಕೂಲ ಕಾಲವು ಬಂದೊದಗಿತು. ಅವನ ಕುಶಾಗ್ರಬುದ್ಧಿಗೆ ಒಂದು ಉತ್ತಮವಾದ ಆಲೋಚನೆಯು ಹೊಳೆಯಿತು. ಮೇಣೆಯನ್ನು ತೆಗೆದುಕೊಂಡು ಜಗದೀಶಪುರಕ್ಕೆ ಹೋಗಿ, ಅಜಯಸಿಂಹರ ಆಜ್ಞೆಯ ಮೇರೆಗೆ ಕರೆಯ ಬಂದಿರುವೆನೆಂದು ತಿಳಿಸಬೇಕೆಂದು ಆ ನೀಚನು ಹಂಚಿಕೆ ಮಾಡಿದನು. ಅವನ ಈ ಹೊಂಚುಗಾರಿಕೆಯು ಹೇಗೆ ಸಾಧ್ಯವಾಯಿತೆಂಬುದನ್ನೂ, ರಾಣಿಯೂ ತಾರಾದೇವಿಯೂ ಹೇಗೆ ಗಂಡಾಂತರದಲ್ಲಿ ಸಿಲುಕಿದರೆಂಬುದನ್ನೂ ಹಿಂದೆ ವರ್ಣಿಸಿದೆ.

ನೀಚಬುದ್ಧಿಯ ರಾಮಶರಣನು ಈಗ ಒಳ್ಳೆಯ ಆನಂದಸಾಗರದಲ್ಲಿ ಮುಳುಗಿದ್ದನು. ಅವನಿಗೆ ಆಕಾಶವು ಮೂರೇ ಬೆರಳು ಉಳಿದಂತೆ ಕಾಣತೊಡಗಿತ್ತು. ಇನ್ನು ರಾಣಿಯೂ ತಾರಾದೇವಿಯೂ ತನ್ನ ವಶರಾದರೆಂದು ಆ ಕಪಟಿಯು ಯೋಚಿಸಿಕೊಂಡನು. ಅವನು ತನ್ನ ಪ್ರಾಕ್ತನವನ್ನು ಯಥೇಷ್ಟವಾಗಿ ಹೊಗಳಿಕೊಳ್ಳತೊಡಗಿದನು. ಒಂದಕ್ಕಿಂತ ಮತ್ತೊಂದು ಶ್ರೇಷ್ಠವಾದ ಅದ್ವಿತೀಯ ರತ್ನಗಳು ಕೈವಶವಾದುದರಿಂದ, ತನ್ನ ಜೀವನವು ಸಾರ್ಥಕವಾಯಿತೆಂದು ಅವನು ಭಾವಿಸಿದನು. ಜಾಜ್ವಲ್ಯಮಾನವಾದ ಅಗ್ನಿಯೊಡನೆ ಆಟವಾಡತೊಡಗಿರುವೆನೆಂಬ ಮಾತು ಆಗ ಆ ವಿಷಯಾಂಧನಿಗೆ ಹೇಗೆ ಗೊತ್ತಾಗಬೇಕು?

— — —

## ಸುಣ್ಣ ತಿಂದ ಮಂಗ!

ಜಗದೀಶಪುರದ ಬಳಿಯಲ್ಲಿರುವ ಅರಣ್ಯಮಾರ್ಗದಿಂದ ಒಬ್ಬ ಫಕೀರನು ಹೊರಟಿದ್ದನು. ಯಾವದೋ ಒಂದು ಅವಸರದ ಕೆಲಸಕ್ಕಾಗಿ ಅವನು ತೆರಳಿರುವನೆಂಬುದು ಅವನ ಮುಖಚಿಹ್ನದ ಮೇಲಿಂದ ಕಂಡು ಬರುತ್ತಿತ್ತು. ಅಲ್ಲಿ ದಟ್ಟವಾಗಿ ವೃಕ್ಷಗಳು ಬೆಳೆದದ್ದರಿಂದ, ಸೂರ್ಯಪ್ರಕಾಶಕ್ಕೆ ಸಹ ಅನುವು ಇರಲಿಲ್ಲ. ಅನೇಕ ಹಿಂಸ್ರಪಶುಗಳು ಅಲ್ಲಿ ವಾಸವಾಗಿದ್ದುದರಿಂದ, ಅಳ್ಳೆದೆಯವರು ಅಲ್ಲಿ ಹೋಗುವದಕ್ಕೆ ಧೈರ್ಯ ತಾಳುತ್ತಿದ್ದಿಲ್ಲ. ಇಂತಹ ಕಟ್ಟಡವಿಯಲ್ಲಿ ಆ ಫಕೀರನು ಏಕಾಕಿಯಾಗಿ ಏಕೆ ಹೊರಟಿರಬಹುದು?

ಆ ಫಕೀರನು ಕೆಲವು ದಾರಿಯನ್ನು ನಡೆದು ಹೋದ ಮೇಲೆ ಅವನ ಕಿವಿಗೆ ಮನೋಹರವಾದ ಕೊಳಲಿನ ಸಪ್ಪಳವು ಕೇಳತೊಡಗಿತು. ಕೂಡಲೆ ಅವನು

ಅಲ್ಲಿಯೇ ತಟಸ್ಥನಾಗಿ ನಿಂತನು. ಕೆಲವು ಹೊತ್ತಿನ ವರೆಗೆ ಅಲ್ಲಿ ನಿಂತು, ಅನಂತರದಲ್ಲಿ ಆ ಧ್ವನಿಯು ಬರುತ್ತಿರುವ ದಿಕ್ಕಿಗೆ ಹೋಗತೊಡಗಿದನು. ಕೆಲ ದಾರಿಯನ್ನು ಕ್ರಮಿಸಿದ ಮೇಲೆ ಅವನಿಗೊಂದು ಪರ್ಣಶಾಲೆಯು ಕಂಡಿತು. ಅಲ್ಲಿಂದಲೇ ಕೊಳಲಿನ ಧ್ವನಿಯು ಬರುತ್ತಿರುವದನ್ನು ಮನಗಂಡು ಆ ಪರ್ಣಶಾಲೆಯ ಒಳಗೆ ಹೋದನು. ಅವನು ಕರ್ಣಾನಂದಕರವಾದ ವೇಣುವಾದನವನ್ನು ಕೇಳುತ್ತ ಬಹಳ ಹೊತ್ತಿನ ವರೆಗೆ ನಿಂತುಕೊಂಡಿದ್ದನು. ಶ್ರುತಿಮನೋಹರವಾದ ಮುರಲೀರವದಿಂದ ಆ ಫಕೀರನು ಭಾವಸಮಾವಿಷ್ಟನಾಗಿ ನಿಂತುಕೊಂಡಿದ್ದನು. ಆಗ ಅವನು ತನ್ನನ್ನು ತಾನೇ ಮರೆತುಬಿಟ್ಟಿದ್ದನು. ಬಹಳ ಹೊತ್ತಿನ ಮೇಲೆ ವೇಣುಧ್ವನಿಯು ಕಬ್ಬಾಯಿತು. ಕೂಡಲೆ ಅವನು ಆ ಕುಟೀರದಲ್ಲಿ ಹೊಕ್ಕನು. ಅವನು ಒಳಗೆ ಹೋದವನೇ:—

"ಕೊಳಲಸ್ವಾಮಿಗಳಿಗೆ ನಮಸ್ಕಾರವು"

"ಯಾರು? ಫುಲಶಾಹರೇನು? ನಮೋನಮಸ್ತೆ. ಬನ್ನಿರಿ; ಕುಳಿತುಕೊಳ್ಳಿರಿ. ಬಹಳ ದಿನಗಳಿಂದ ತಮ್ಮ ದರ್ಶನವೇ ಇಲ್ಲ. ಬಡವರ ಮೇಲೆ ಹೀಗೆ ನಿರ್ದಯರಾಗುವದು ಮಹಾನುಭಾವರಾದ ತಮ್ಮಂಥವರಿಗೆ ಉಚಿತವೆ?" ಎಂದು ಕೊಳಲಸ್ವಾಮಿಯು ಫುಲಶಾಹನನ್ನು ವಿಚಾರಿಸಿದನು.

"ಸ್ವಾಮಿಗಳೇ, ದೇಶದಲ್ಲಿ ಯಾವ ಬಗೆಯ ವಾತಾವರಣವು ಉಪಸ್ಥಿತವಾಗಿರುವದೆಂಬದು ನಿಮಗೆ ಕೇಳಲಿಲ್ಲದೇನು? ನಿಮಗೆ ಕೊಳಲಿನ ಹೊರತು ಮತ್ತಾವ ವಿಷಯವೂ ಬೇಕಾಗುವದಿಲ್ಲ ಜನರು ನಿಮಗೆ ಕೊಳಲಸ್ವಾಮಿಯೆಂಬ ಅನ್ವರ್ಥಕವಾದ ಹೆಸರನ್ನಿಟ್ಟದ್ದು ಅವಾಸ್ತವವೆಂದು ಹೇಳಲಾಗದು."

'ಫುಲಶಾಹರೆ, ದೇಶದಲ್ಲಿ ಅನರ್ಥೋತ್ಪಾತವು ನಡೆದಿರುವದೆಂಬದನ್ನು ನಾನು ತಿಳಿದಿರುವೆನು. ನಮ್ಮಂತಹ ಅರಣ್ಯವಾಸಿಗಳಿಂದ ಯುದ್ಧಕಾರ್ಯದಲಿ ಉಪಯೋಗವೇನಾಗುವದು?"

"ಉಪಯೋಗವಾಗದೇನು? ಯುದ್ಧ ಪ್ರಸಂಗದಲ್ಲಿ ನಾವು ಮಾಡತಕ್ಕ ಕಾರ್ಯಗಳಾದರೂ ಅನೇಕವಿರುವವು ಅನಾಥರನ್ನೂ ಅಬಲೆಯರನ್ನೂ ಸಂಕಟದಿಂದ ಪಾರು ಮಾಡುವದಕ್ಕೆ ಪ್ರಯತ್ನಿಸುವದು, ಗಾಯಾಳುಗಳನ್ನು ಉಪಚರಿಸುವದು ಮೊದಲಾದ ಅನೇಕ ಕೆಲಸಗಳು ನಮ್ಮಂತಹರಿಂದ ನೀಗುವಂಥವುಗಳಿರುವವು. ಸದ್ಯದ ಸ್ಥಿತಿಯಲ್ಲಿ ದೇವತಾರಾಧನೆಗಿಂತಲೂ ಲೋಕಾರಾಧನೆ ಮಾಡುವದು ಶೀಘ್ರಫಲದಾಯಕವೂ ಇಹ ಪರಗಳಲ್ಲಿ ಸೌಖ್ಯಪ್ರದವೂ ಆಗಿದೆ."

ಫುಲಶಾಹನ ಈ ಮಾತುಗಳು ಕೊಳಲಸ್ವಾಮಿಯ ಮನಸ್ಸಿಗೆ ಸಮಾಧಾನವೆನಿಸಿದವು. ಆಗ ಅವನು ಫುಲಶಾಹನನ್ನು ಕುರಿತು:—

"ಘಲಶಾಹರೆ, ಭಾರತದಲ್ಲಿ ಪ್ರಜ್ವಲಿತವಾಗಿರುವ ಸ್ವಾತಂತ್ರ್ಯದ ರಣಕುಂಡವು ಭಾರತೀಯರಿಗೆ ಸುಖದಾಯಕವಾಗಿ ಘಟಿಸಬಹುದೆ? ಈ ವಿಷಯದಲ್ಲಿ ನನ್ನ ಮನಸ್ಸು ತರಹರಗೊಳ್ಳತೊಡಗಿರುವದು. ಭವಿಷ್ಯಕಾಲೀನ ಭಾರತವು ಪಾರತಂತ್ರ್ಯ ದುಃಖಗರ್ತದಲ್ಲಿ ಬಿದ್ದು, ತಳಮಳಗೊಳ್ಳತೊಡಗುವದೆಂದು ಭಾಸಮಾನವಾಗುತ್ತಿರುವದು."

ಕೊಳಲಸ್ವಾಮಿಯು ಮಾತುಗಳನ್ನು ಕೇಳಿ ಘುಲಶಾಹನು ದೀರ್ಘವಾದ ನಿಟ್ಟುಸಿರ ಬಿಟ್ಟನು. ಅವನ ನೇತ್ರಗಳಲ್ಲಿ ಕಂಬನಿಗಳು ತುಂಬಿದವು. ಸಾಧು ಹೃದಯವು ಸಾಧುವಾಗಿಯೇ ಆಗಿರುವದೆಂದು ಘುಲಶಾಹನನ್ನು ನೋಡಿದರೆ ನಂಬಿಗೆಯಾಗದೆ ಇರಲಾರದು. ಕೊಳಲಸ್ವಾಮಿಯನ್ನು ಕುರಿತು ಘುಲಶಾಹನ :-

"ಹಿಂದುಗಳು ಅವಸಾನಘಾತಕರಿರುವರು. ಸಂಘಟನೆಯಿಂದ ಕಾರ್ಯ ಮಾಡುವದು ಇವರಿಗೆ ಗೊತ್ತೇ ಇರುವದಿಲ್ಲ. ಪಾರತಂತ್ರ್ಯಶೃಂಖಲೆಯಿಂದ ಪಾರಾಗುವ ಉಚ್ಚತಮವಾದ ಉದ್ದೇಶದಿಂದ ರಾಷ್ಟ್ರದಲ್ಲಿ ಸ್ವಾತಂತ್ರ್ಯದ ರಣಕುಂಡವು ಪ್ರಜ್ವಲಿತವಾಗಿರುವದು ನಿಜವು. ಕ್ರಾಂತಿಕಾರಕ ಮುಂದಾಳುಗಳಲ್ಲಿ ಸಹನಶೀಲತೆಯಿಲ್ಲ. ಸೈನಿಕರಲ್ಲಿ ಆಜ್ಞಾಧಾರಕತ್ವವೂ ಐಕ್ಯಬುದ್ಧಿಯೂ ಇರುವದಿಲ್ಲ. ಕೆಲವು ಜನ ಬಂಡಗಾರರಂತೂ ಕೇವಲ ಸ್ವಾರ್ಥಕ್ಕಾಗಿ ಗೊಂದಲವನ್ನೆಬ್ಬಿಸತೊಡಗಿರುವರು. ಅವರಲ್ಲಿ ಸ್ವದೇಶಾಭಿಮಾನದಂತಹ ಉಚ್ಚಭಾವನೆಯು ಇಲ್ಲವೆಂಬದಿಷ್ಟೇ ಅಲ್ಲ; ಪ್ರಸಂಗವಶಾತ್ ಅವರು ಸ್ವಜನದ್ರೋಹಚಿಂತನೆಗೆ ಸಹ ಹಿಂದುಮುಂದು ನೋಡುವದಿಲ್ಲ. ಭರತಖಂಡವು ಒಕ್ಕಟ್ಟಿನಿಂದ ಕಾದತೊಡಗಿದರೆ ತ್ರೈಲೋಕ್ಯಸತ್ವವನ್ನು ಸಹ ಭಂಗಗೊಳಿಸುವದರಲ್ಲಿ ಸಂದೇಹವಿಲ್ಲ; ಆದರೆ ಪರಮಾತ್ಮನ ಇಚ್ಛೆಯು ಬೇರೆ ಬಗೆಯಾಗಿದ್ದಂತೆ ತೋರುವದು. ಅಂತೆಯೇ ನೋಡಿದತ್ತ ಸ್ವಾರ್ಥಿಗಳೂ ದೇಶವಿಘಾತಕಿಗಳೂ ಆದವರ ಸಂಖ್ಯೆಯು ಬೆಳೆಯುತೊಡಗಿದೆ. ಈಶ ಸಂಕೇತಕ್ಕೆ ಯಾರು ಮಾಡುವದೇನು?'

"ಪರಮಾತ್ಮನು ಕರ್ಮಕ್ಕೆ ತಕ್ಕ ಫಲವನ್ನು ಕೊಡುತ್ತಿರುತ್ತಾನೆ ಅವನು ಮುಂಚೆಯೆ ಯಾವದೊಂದು ಕಾರ್ಯದ ಫಲಿತವನ್ನು ನಿರ್ಣಯಿಸಿರುತ್ತಾನೆ. ರಾಷ್ಟ್ರದ್ರೋಹಿಗಳಾಗಿ ನಡೆದರೆ ಅದರ ಫಲವನ್ನುಣ್ಣುವ ಸಮಯವು ಬಂದೊದಗುವದು!'

"ಒಬ್ಬನ ತಪ್ಪಿಗಾಗಿ ಇಡಿ ದೇಶವೇ ಗಂಡಾಂತರದಲ್ಲಿ ಮುಳುಗುವ ಪ್ರಸಂಗ ಒದಗುವದರಿಂದ, ಇಂತಹ ದೇಶಘಾತಕಿಗಳ ಬಗ್ಗೆ ಸಂತಾಪವು ಹುಟ್ಟುವದು. ಪರಮಾತ್ಮನು ಕರ್ಮಕ್ಕೆ ತಕ್ಕ ಫಲವನ್ನು ಕೊಡುತ್ತಿರುವದು ನಿಜವು; ಆದರೆ ಭರತಭೂಮಿಯಲ್ಲಿ ಇಂತಹ ದುಷ್ಕರ್ಮಿಗಳ ಸಂಖ್ಯೆಯು ಬೆಳೆಯಬೇಕಾ

ದರೆ, ದೈವೀ ಸಂಕೇತವೆನ್ನದೆ ಮತ್ತೇನು ಅನ್ನಬೇಕು?''

'ಫುಲಶಾಹರೆ, ಈಗಿನ ಪ್ರಸಂಗದಲ್ಲಿ ನಾವು ಮಾಡತಕ್ಕ ಕರ್ತವ್ಯವೇನು?'

''ನೀವು ಕೆಲವು ದಿನಗಳ ವರೆಗೆ ಕೊಳಲಿನ ಹವ್ಯಾಸ ಬಿಡಬೇಕಾಗುವದು. ನಾವು ಯುದ್ಧವಾಗುವ ಸ್ಥಳಗಳಲ್ಲಿ ಹೋಗಿ ಗಾಯ ಹೊಂದಿದ ಜನರ ಉಪಚಾರ ಮಾಡುವದಕ್ಕೆ ನಿಂತುಕೊಳ್ಳೋಣ. ಲೋಕೋಪಕಾರವು ಮುಕ್ತಿಸಾಧನೆಯ ಶಿಖರವಾಗಿರುವದೆಂಬುದನ್ನು ಸಂತಜನರಾದ ನಿಮಗೆ ಹೊಸದಾಗಿ ಹೇಳುವ ಕಾರಣವಿಲ್ಲ''

''ನೀವು ಹೇಳಿದ ಮೇರೆಗೆ ಅವಶ್ಯವಾಗಿ ನಡೆಯುವೆನು. ದೇವತಾರಾಧನೆಗಿಂತಲೂ ಲೋಕಾರಾಧನೆಯು ಶ್ರೇಷ್ಠವಾದದ್ದಿರುವದರಿಂದ, ನಾವು ಲೋಕಸೇವೆಯನ್ನು ಕೈಕೊಂಡರೆ ಅದರಲ್ಲಿಯೇ ಬ್ರಹ್ಮಾನಂದವು ಲಭಿಸುವದು.''

ಕೊಳಲಸ್ವಾಮಿಯು ಫುಲಶಾಹನಿಗೆ ಈ ಮೇರೆಗೆ ಉತ್ತರವನ್ನಿತ್ತನು. ಅವನು ತನ್ನ ಮಾತಿಗೆ ಒಪ್ಪಿದ್ದರಿಂದ, ಫುಲಶಾಹನಿಗೆ ಆನಂದವಾಯಿತು. ಆಗ ಅವನಿಗೆ ಸ್ವೀಕೃತ ಕಾರ್ಯವು ಸ್ಮರಣೆಯಲ್ಲಿ ಬರಲು, ಅಲ್ಲಿಂದ ಹೊರಟು ಆ ಕಟ್ಟಡವಿಯಲ್ಲಿ ಅತ್ತಿತ್ತ ಶೋಧಿಸುತ್ತ ಮಾರ್ಗಕ್ರಮಣ ಮಾಡತೊಡಗಿದನು.

ಅವನು ರಾಣಿ-ತಾರಾದೇವಿಯರನ್ನು ಹುಡುಕುವದಕ್ಕಾಗಿ ಈ ಅರಣ್ಯಕ್ಕೆ ಬಂದಿದ್ದನು. ತಾಸೆರಡು ತಾಸಿನ ವರೆಗೆ ಹುಡುಕುತ್ತ ನಡೆದಿರಲು, ಅವನಿಗೆ ಒಂದು ಮನೆಯು ಕಂಡಿತು. ಕೂಡಲೆ ಅವನು ಆ ಮನೆಯ ಕಡೆಗೆ ವೇಗದಿಂದ ಸಾಗಿದನು. ರಾಮಶರಣನು ಈ ಅರಣ್ಯಮಂದಿರದಲ್ಲಿಯೇ ರಾಣಿ-ತಾರಾದೇವಿಯರನ್ನು ಬಂಧಿಸಿಟ್ಟಿದ್ದನು.

ರಾಮಶರಣನು ರಾಣಿಯ ಮನಸ್ಸನ್ನು ಒಲಿಸಿಕೊಳ್ಳುವದಕ್ಕಾಗಿ ನಾನಾವಿಧವಾಗಿ ಪ್ರಯತ್ನಿಸತೊಡಗಿದ್ದನು. ಸಾಮೋಪಾಯದಿಂದ ಮೊದಲು ಪ್ರಯತ್ನಿಸಿ ನೋಡಬೇಕೆಂದೂ, ಅದರಿಂದ ಕಾರ್ಯವು ಸಿದ್ಧಿಸದಿದ್ದರೆ ದಂಡೋಪಾಯವನ್ನು ಕೈಕೊಳ್ಳಬೇಕೆಂದೂ ಅವನು ನಿರ್ಧರಿಸಿಕೊಂಡಿದ್ದನು. ಮದ್ಯಪಾನದಿಂದ ಉನ್ಮತ್ತನಾದ ಅವನು ವಿಕಟಹಾಸ್ಯಗೈಯುತ್ತ ಪ್ರೇಮಭಾಷಣಗಳನ್ನಾಡತೊಡಗಿದ್ದನು. ರಾಣಿಯು ತಿರಸ್ಕಾರವ್ಯಂಜಕ ಶಬ್ದಗಳಿಂದ ಅವನನ್ನು ಹಳಿಯತೊಡಗಿದ್ದಳು. ರಾಣಿಯ ಕಟುಭಾಷಣವು ಅವನಿಗೆ ಸುಖಕರವೆನಿಸತೊಡಗಿತ್ತು. ಯಾವ ಬಗೆಯಿಂದಲಾದರೂ ಅವಳನ್ನು ಕೈವಶ ಮಾಡಿಕೊಳ್ಳಬೇಕೆಂದು ಅವನು ದೀರ್ಘ ಸಾಹಸ ನಡೆಯಿಸಿದ್ದನು. ತನ್ನ ಕಪಟಜಾಲದಲ್ಲಿ ಸಿಲುಕಿದ ಮೇಲೆ ಬೇಕಾದಂತಹ ಪ್ರಯತ್ನ ಮಾಡಿದರೂ ದಾಟಿ ಹೋಗಲಾರರೆಂಬ ನಂಬಿಗೆಯು ಅವನಿಗೆ ಬಹಳವಾಗಿತ್ತು. ರಾಮಶರಣನ ರಾಕ್ಷಸೀವೃತ್ತಿಯನ್ನೂ ಮದಾಂಧತನವನ್ನೂ

ನೋಡಿ ರಾಣಿಯು ಭಯಕಂಪಿತಳಾದಳು. ತಾರಾದೇವಿಯಂತೂ ದಿಙ್ಮೂಢಳಾಗಿ ಹೋಗಿದ್ದಳು. ರಾಣಿಯು ಮಾತ್ರ ಭಯಗೊಂಡ ಬಗ್ಗೆ ಯಾವ ವಿಕಾರವನ್ನೂ ವ್ಯಕ್ತಪಡಿಸದೆ, ದರ್ಪೋಕ್ತಿಯಿಂದ:—

"ರಾಮಶರಣಾ, ನೀನು ಉಂಡ ಮನೆಯ ಗಳಗಳನ್ನೆಣಿಸುವವನಾಗಿರುವೆ. ಆಂಗ್ಲರ ಆಧಿಪತ್ಯವು ಆರಾದಲ್ಲಿ ನಾಶವಾದ ಮೇಲೆ ಕುವರಸಿಂಹರಿಗೆ ಪ್ರಾರ್ಥಿಸಿ ಅವರಲ್ಲಿ ಕೆಲಸವನ್ನು ಸಂಪಾದಿಸಿದೆ ಈಗ ನೀನು ಸೇವಾಧರ್ಮವನ್ನು ಮರೆತು ಅನ್ನದಾತರ ಮೇಲೆ ಹೀಗೆ ನೀಚವೃತ್ತಿಯನ್ನು ಮಾಡಲುಪಕ್ರಮಿಸಿದೆ. ನಿನ್ನೀ ಕೃತಿಯು ಮಾನವೀ ಶೀಲಕ್ಕೆ ಶೋಭಿಸುವಂತಹದಲ್ಲ. ನಿನ್ನ ಯಾವ ಸಾಹಸದಿಂದಲೂ ಮನೋಬಯಕೆಯು ಈಡೇರದೆ, ನಿನಗೆ ಪಶ್ಚಾತ್ತಾಪದ ಫಲವು ಮಾತ್ರ ಲಭಿಸುವದು. ಕ್ಷತ್ರಿಯ ರಮಣಿಯರು ತಮ್ಮ ಶೀಲರಕ್ಷಣೆ ಮಾಡಿಕೊಳ್ಳುವದಕ್ಕೆ ಯೋಗ್ಯತೆಯುಳ್ಳವರಾಗಿರುತ್ತಾರೆ. ನಿನ್ನಲ್ಲಿ ಇಂತಹ ದುರ್ಬುದ್ಧಿಯು ಹುಟ್ಟಿದ್ದನ್ನು ನೋಡಿದರೆ, ನಿನ್ನ ಆಯುಷ್ಯವು ಮುಗಿಯುತ್ತ ಬಂದಿರುವದೆಂದು ಹೇಳಬೇಕಾಗಿರುವದು!"

"ರಜಪೂತ ರಮಣಿಯರು ತಮ್ಮ ಪಾತಿವ್ರತ್ಯದ ಆಡಂಬರವನ್ನು ತೋರಿಸುವದರಲ್ಲಿ ಬಹು ನಿಪುಣರಿರುತ್ತಾರೆ. ನೀನಾದರೂ ಈ ಮಾತಿಗೆ ಹೇಗೆ ಹೊರತಾಗಿರುವೆ? ನೀನು ಯಾರ ಧೈರ್ಯದಿಂದ ಹೀಗೆ ಮಾತನಾಡತೊಡಗಿರುವೆ? ನಿನ್ನ ಬಂಧವಿಮೋಚನೆಗೆ ಯಾರೂ ಮುಂದೆ ಬರುವಂತಿಲ್ಲ. ಕುವರಸಿಂಹನು ಅಪಜಯ ಹೊಂದಿ, ಜೀವಗಳ್ಳನಾಗಿ ಎತ್ತಲೋ ಹೊರಟು ಹೋಗಿರುವನು. ಅಜಯನಾದರೂ ನಿನ್ನಿನ ಯುದ್ಧದಲ್ಲಿ ಮರಣ ಹೊಂದಿದನೆಂಬ ದಟ್ಟವಾರ್ತೆಯಿರುವದು. ಪರಮಾತ್ಮನು ಯೋಗ್ಯ ವೇಳೆಯಲ್ಲಿ ನಿನಗೆ ನನ್ನ ಆಶ್ರಯವನ್ನು ದೊರಕಿಸಿ ಕೊಟ್ಟನೆಂದು ತಿಳಿದುಕೋ. ನಿನ್ನ ದೈವವು ಚನ್ನಾಗಿದ್ದುದರಿಂದ ಅನಾಥಳಾಗುವಸ್ಥರಲ್ಲಿಯೆ ಸನಾಥಳಾಗುವ ಸುಯೋಗವು ನಿನಗೆ ಲಭಿಸಿತು!"

ರಾಮಶರಣನ ಈ ಅರುಚಿಕಾರಕ ಭಾಷಣದಿಂದ ರಾಣಿಗೆ ಅನಿವಾರವಾದ ಸಂತಾಪವಾಯಿತು. ತನ್ನ ಪತಿಯ ಮರಣದ ವಾರ್ತೆಯನ್ನು ಕಲ್ಪಿಸಿಕೊಂಡು ಹೇಳುತ್ತಿರುವನೆಂಬದು ಅವಳಿಗೆ ಕೂಡಲೆ ಹೊಳೆಯಿತು. ಅವಳು ಅತಿಶಯವಾಗಿ ಸಂತಾಪಗೊಂಡಿದ್ದರಿಂದ ನೇತ್ರಗಳು ಆರಕ್ತವಾಗಿದ್ದವು; ತುಟಿಗಳು ಸ್ಫುರಣ ಹೊಂದತೊಡಗಿದ್ದವು. ಆಗ ಅವಳು ರೋಷದಿಂದ:—

"ನರಾಧಮಾ, ಪಾತಕಿಯಾದ ನಿನಗೆ ಯೋಗ್ಯಶಾಸನವನ್ನು ವಿಧಿಸುವದಕ್ಕೆ ಅಜಯಸಿಂಹರು ಜೀವಿಸಿರುವರು. ನಿನ್ನ ಕೀಳು ಕೃತಿಗೆ ದುರ್ಮರಣವೇ ಪಾರಿತೋಷಕವಾಗಿ ದೊರೆಯುವದೆಂದು ನೆರಗಿಗೆ ಗಂಟು ಹೊಡೆದುಕೋ!"

"ನನಗೆ ಆಜಯನು ಅಮೌಲ್ಯವಾದ ಕಾಣಿಕೆಯನ್ನಿತ್ತಿರುವನು. ನನಗಿನ್ನು ಎರಡನೆಯ ಸಂಭಾವನೆಯು ಬೇಕೇ ಆಗಿಲ್ಲ." ಎಂದು ನುಡಿದು, ರಾಮಶರಣನು ತಾರಾದೇವಿಯನ್ನು ಕುರಿತು:—

"ತಾರೇ, ವೈಧವ್ಯಪಂಕದಲ್ಲಿ ತೊಳಲುತ್ತಿದ್ದ ನೀನು ಇನ್ನು ಮೇಲೆ ನಿಶ್ಚಿಂತಳಾಗು. ಈ ರಾಮಶರಣನ ಕೃಪಾಛತ್ರದಲ್ಲಿ ವಿದವೆಯರೂ ಅಖಂಡ ಸೌಭಾಗ್ಯವತಿಯರಾಗುವರು. ಅಂತೆಯೇ ಈ ಧೀರೋದಾತ್ತ ರಾಮಶರಣನ ಧವಲಕೀರ್ತಿಯು ಸರ್ವತ್ರದಲ್ಲಿಯೂ ವ್ಯಾಪಿಸಿದೆ."

"ಭ್ರಷ್ಟಾ, ಬಾಯಿ ಮುಚ್ಚು! ಸಾಧ್ವೀಸ್ತ್ರೀಯರ ಪವಿತ್ರತೆಗೆ ಭಂಗ ತರುವಂತಹ ಮಾತುಗಳನ್ನಾಡಿದೆಯೆಂದರೆ ವ್ಯರ್ಥವಾಗಿ ಪ್ರಾಣಕ್ಕೆರವಾಗುವೆ."

'ರಾಣಿಯು ಹೀಗೆ ಮಾತನಾಡಿದ ಕೂಡಲೆ, ಸುರಾಪಾನದಿಂದ ಉನ್ಮತ್ತನಾದ ರಾಮಶರಣನು ಗಹಗಹಿಸಿ ನಕ್ಕನು. ಪರಕ್ಷಣದಲ್ಲಿ ಅವನು ಭ್ರಾಂತಿಷ್ಠನಂತೆ "ರಾಣೀ, ಎನ್ನ ರಾಣೀ, ಎನ್ನ ಹೃದಯದ ಮಹಾರಾಣೀ! ನೀನು ಆಡಿದ ಮಾತುಗಳು ಅವ್ಯಕೋಪಮವಾಗಿ ಆನಂದದಾಯಿಯಾಗಿರುವವು. ಬಾ, ಎನ್ನ ಮುದ್ದು ಚಿನ್ನವೇ, ಮುಂದೆ ಬಾ! ಒಮ್ಮೆ ಗಟ್ಟಿಯಾಗಿ ಬಿಗಿದಪ್ಪಿ ಸ್ವರ್ಗೀಯ ಆನಂದವನ್ನು ಕೊಡು!" ಎಂದು ನುಡಿದು, ಅವಳ ಕೈಯನ್ನು ಹಿಡಿಯುವದಕ್ಕೆ ಮುಂದಕ್ಕೆ ಸಾಗಿದನು.

ಕೂಡಲೆ ರಾಣಿಯ ಕರದಲ್ಲಿ ತೀಕ್ಷ್ಣಧಾರೆಯ ಕೈಗತ್ತಿಯು ಝಳಪಿಸ ತೊಡಗಿತು. ಅವಳು ಪ್ರಳಯಕಾಲದ ಆದಿಶಕ್ತಿಯಂತೆ ರಾಮಶರಣನ ಮೈಮೇಲೇರಿ ಹೋಗಿ:—"ಮೂರ್ಖಾ, ನರಪಿಶಾಚಿಯೆ! ಮುಂದಕ್ಕೆ ಒಂದು ಹೆಜ್ಜೆಯನ್ನಿಟ್ಟಿಯಾದರೆ, ಇದೇ ಶಸ್ತ್ರವು ನಿನ್ನ ಪಂಚಪ್ರಾಣಗಳನ್ನು ಹೀರುವದೆಂದು ನಿಶ್ಚಯವಾಗಿ ತಿಳಿದುಕೋ!'

ರಾಣಿಯ ಉಗ್ರವಾದ ಮೂರ್ತಿಯನ್ನು ನೋಡಿ ಕ್ರೂರಹೃದಯದ ರಾಮಶರಣನು ಅಳ್ಳೊಡೆದನು. ಅವನು ಭೀತಿಯಿಂದ ನಾಲ್ಕು ಹೆಜ್ಜೆ ಹಿಂದೆ ಸರಿದನು. ಅಷ್ಟರಲ್ಲಿ ಯಾರೋ ಬಾಗಿಲವನ್ನು ಒಡಿಸುವ ಸಪ್ಪಳವು ಕೇಳತೊಡಗಿತು. ರಾಮಶರಣನು ಮತ್ತಿಷ್ಟು ಗಾಬರಿಯಾಗಿ ಕಕ್ಕಾವಿಕ್ಕಿಯಾಗಿ ನೋಡತೊಡಗಿದನು. ಅಷ್ಟರಲ್ಲಿ ಬಾಗಿಲವನ್ನು ಮುರಿದು ಒಬ್ಬ ಫಕೀರನು ಹಠಾತ್ತಾಗಿ ಅವನ ಸಮ್ಮುಖದಲ್ಲಿ ಒಂದು ನಿಂತುಕೊಂಡನು. ಅಲ್ಲಿಯ ದೃಶ್ಯವನ್ನು ನೋಡಿ, ಫಕೀರನು ಕ್ರುದ್ಧನಾಗಿ:—

"ಕುಲಾಂಗಾರಾ, ನೀನು ಹಿಂದುವಲ್ಲವೆ? ನೀಚಾ, ಇಂತಹ ಕೃತಿಯನ್ನಾಚರಿಸುವದಕ್ಕೆ ನಿನ್ನ ಮನಸ್ಸು ಹೇಗೆ ಸಿದ್ಧವಾಯಿತು? ಈ ಪಾಪದ ಫಲವನ್ನು

ಬೇಗನೆ ಅನುಭವಿಸುವೆ!'' ಎಂದು ಅವನು ನುಡಿದು, ರಾಣಿ ಹಾಗು ತಾರಾದೇವಿಯರನ್ನು ಕುರಿತು:—''ನೀವು ಈಗಲೆ ಹೊರಗೆ ನಡೆಯಿರಿ. ಬಾಗಿಲ ಬಳಿಯಲ್ಲಿ ಮೇಣೆಯು ಸಿದ್ಧವಿರುವದು.''

ರಾಣಿಯು ಆ ಫಕೀರನ ಗುರತು ಹಿಡಿದು, ಪಾದಗೆರಗಿದಳು; ತಾರಾದೇವಿಯೂ ಅತ್ಯಂತ ಭಕ್ತಿಯಿಂದ ಆ ಮಹಾತ್ಮನನ್ನು ವಂದಿಸಿದಳು. ರಾಣಿಯು ಕೃತಜ್ಞತೆಯಿಂದಲೂ ಪೂಜ್ಯಭಾವದಿಂದಲೂ:—' ಮಹಾಶಯರೆ, ನಮ್ಮಿರ್ವರ ಶೀಲವನ್ನು ಕಾಯುವದಕ್ಕಾಗಿ ಪರಮಾತ್ಮನೇ ನಿಮ್ಮನ್ನು ಇಲ್ಲಿಗೆ ಕಳುಹಿಸಿ ಕೊಟ್ಟಿರುವನು.''

ರಾಣಿಯ ಹಾಗು ತಾರಾದೇವಿಯವರ ಬಂಧವಿಮೋಚನೆ ಮಾಡಿದವನು ದೀನಪಾಲನಾದ ಫುಲಶಾಹನಾಗಿದ್ದನು. ಅವನ ಅಪ್ಪಣೆಯ ಮೇರೆಗೆ ಆ ಯುವತಿಯರೀರ್ವರೂ ಮೇಣೆಯಲ್ಲಿ ಕುಳಿತರು. ಕೂಡಲೆ ಬೋವಿಗಳು ಅದನ್ನು ಹೊತ್ತುಕೊಂಡು ಜಗದೀಶಪುರದ ದಾರಿಯನ್ನು ಹಿಡಿದರು, ರಾಮಶರಣ ದರೋಗಾನು ಸುಣ್ಣ ತಿಂದ ಮಂಗನಂತೆ ಹಲ್ಲು ಕಿರಿಯುತ್ತ ಕುಳಿತನು!

---

# ರಾಷ್ಟ್ರಧರ್ಮ.

ಬಾಬೂ ಅಜಯಸಿಂಹನು ಅಶ್ವಾರೋಹಿಯಾಗಿ ಜಗದೀಶಪುರದ ಕಡೆಗೆ ಹೊರಟಿದ್ದನು. ಇಷ್ಟು ದಿನಗಳ ವರೆಗೆ ಯುದ್ಧದ ಗೊಂದಲದಲ್ಲಿ ದಣಿದವನಾದ ಅವನು ಎರಡು ದಿನಗಳ ವರೆಗೆ ವಿಶ್ರಾಂತಿಯನ್ನು ಹೊಂದಬೇಕೆಂಬ ಮನೀಷೆಯುಳ್ಳವನಾಗಿದ್ದನು. ಅವನು ಅದೇ ಅಭಿನವ ಗೃಹಸ್ಥಾಶ್ರಮದಲ್ಲಿ ಹೆಜ್ಜೆಯಿಟ್ಟಿದ್ದನು. ಆಕಸ್ಮಿಕವಾಗಿ ಯುದ್ಧವು ಪ್ರಾರಂಭವಾದುದರಿಂದ, ಅಜಯನು ಪತ್ನಿಯ ಮನೋಭಂಗ ಮಾಡಿ ಯುದ್ಧ ಕಾರ್ಯದಲ್ಲಿ ತೊಡಗಿದ್ದನು. ಕ್ಯಾಪ್ಟನ್ ಡನಬಾರನೂ ಅವನ ಸೈನ್ಯವೂ ನಿರ್ನಾಮವಾದ ಕೂಡಲೆ ಅವನಿಗೆ ಅತ್ತಿತ್ತ ಹೋಗುವದಕ್ಕೆ ಅನುಕೂಲವು ದೊರೆಯಿತು. ಇದೇ ಸಂಧಿಯಲ್ಲಿ ಎರಡು ದಿನ ಜಗದೀಶಪುರಕ್ಕೆ ಹೋಗಿಬರಬೇಕೆಂದು, ತನ್ನ ಪ್ರೀತಿಯ ಕುದುರೆಯಾದ ''ಜುಬಿಲಿ''ಯನ್ನೇರಿ ಬಳ್ಳಿಯ ರಭಸದಿಂದ ಹೊರಟಿದ್ದನು.

ಹೋಗ ಹೋಗುತ್ತಲೆ ಜುಬಿಲಿಯು ಮುಗ್ಗಿತು. ಅದು ಮುಂದೆ ಹೆಜ್ಜೆಯಿಡುವದಕ್ಕೆ ಸಿದ್ಧವಾಗದಾಯಿತು. ಕೂಡಲೆ ಅಜಯನು ಅದನ್ನು ಚಪ್ಪರಿಸುತ್ತ: ''ಜುಬಿಲಿ, ಇಂದು ಹೀಗೇಕೆ ಮಾಡುವೆ? ಜಗದೀಶಪುರವು ಸಮೀಪದಲ್ಲೇ ಬಂದಿರುವದು, ಬೇಗ ನಡೆ'' ಎಂದು ನುಡಿದನು. ಅದು ಮುಗ್ಗಿದರೂ ಮುಂದೆ

ಹೆಜ್ಜೆಯಿಡದೆ ಆತಂಕ ಮಾಡಿದ್ದೂ ಅವನ ಮನಸ್ಸಿಗೆ ಒಂದು ವಿಧವಾದ ಅಪ ಶಕುನಗಳಾಗಿ ತೋರಿದವು. ಇಂತಹ ವಿಚಾರಗಳನ್ನು ಹಚ್ಚಿಕೊಂಡು ಕೈಕಾಲು ಗಟ್ಟಿ ಕುಳಿತುಕೊಳ್ಳುವ ಅಳ್ಳೆದೆಯುವನಾಗದ್ದರಿಂದ, ಅವನು ಆಗ್ರಹದಿಂದ ತನ್ನ ಕುದುರೆಯನ್ನು ಮುಂದೆ ದೂಡಿದನು. ರಾಣಿಯ ದರ್ಶನಕ್ಕಾಗಿ ಉತ್ಕಂಠಿತನಾದ ಅವನು ಒಳ್ಳೆಯ ಉತ್ಸಾಹದಿಂದ ಅರಮನೆಗೆ ಬಂದನು. ಅವನು ಬಂದೊಡನೆಯೆ ಸೇವಕರು ಅವನ ಕುದುರೆಯ ಲಗಾಮನ್ನು ಹಿಡಿದರು. ಅಜಯನು ಕುದುರೆ ಯಿಂದಿಳಿದು ಅಂತಃಪುರದ ಕಡೆಗೆ ನಡೆದನು. ಕೂಡಲೆ ಆ ಸೇವಕರು ಆ ಕುದುರೆ ಯನ್ನು ತೆಗೆದುಕೊಂಡು ಹೋಗಿ ಅಶ್ವಶಾಲೆಯಲ್ಲಿ ಕಟ್ಟಿದರು.

ಅಜಯನು ಅಂತಃಪುರದಲ್ಲಿ ಹೊಕ್ಕು ನೋಡುತ್ತಾನೆ; ಎಲ್ಲ ಕಡೆಯಲ್ಲಿಯೂ ಶೂನ್ಯವತ್ತಾಗಿ ಕಾಣತೊಡಗಿತು. ಕೂಡಲೆ ಅವನು ಗಾಬರಿಗೊಂಡನು. ಅವನು ಅರಮನೆಯ ಸೇವಕ-ಸೇವಕಿಯರನ್ನು ಕುರಿತು:—

"ರಾಣಿಯೆಲ್ಲಿ? ತಾರಾದೇವಿಯೂ ಕಾಣುವದಿಲ್ಲವಲ್ಲ?" ಎಂದು ಉತ್ಕಂಠೆ ಯಿಂದಲೂ ಗಾಬರಿಯಿಂದಲೂ ಕೇಳಿದನು.

"ನಿನ್ನೆಯ ದಿನವೇ ಅವರು ಆರಾಕ್ಕೆ ಹೋದರು. ಬಾಬೂಸಾಹೇಬರು ಅವರನ್ನು ಕರೆದುಕೊಂಡು ಬರುವದಕ್ಕಾಗಿ ಮೇಣೆಯನ್ನು ಕಳುಹಿಸಿದ್ದರು. ಇಂದು ತಾವು ಎಲ್ಲಿಂದ ಬಂದಿರಿ?"

"ಆರಾದಿಂದಲೇ ಬಂದೆನು. ನಿನ್ನೆಯೇ ಹೊರಟವರು ಆರಾಕ್ಕೆ ಬಂದಿಲ್ಲ ವೇಕೆ?" ಎಂದು ಅಜಯನು ಸೇವಕರನ್ನು ಕುರಿತು ನುಡಿದನು. ಈ ವಿಷಯ ದಲ್ಲಿ ಅವರಿಗೆ ಏನೂ ತೋಚದಾಯಿತು. ಏನೋ ಘಾತವಾಗಿರುವದೆಂದು ಅಜ ಯನ ಮನವರಿಕೆಯಾಯಿತು. ಅಷ್ಟರಲ್ಲಿ ಹಾದಿಯಲ್ಲಾದ ಅಪಶಕುನವು ಜ್ಞಾಪ ಕಕ್ಕೆ ಬಂದು ಅವನು ಮತ್ತಿಷ್ಟು ಭಯವಿಹ್ವಲನಾದನು. ಆಗ ಅವನು ಸೇವಕ ರನ್ನು ಕುರಿತು;—

"ಮೇಣೆಯನ್ನು ಯಾರು ತಂದಿದ್ದರು?"

"ಅವರ ಪರಿಚಯವು ನಮಗಿಲ್ಲ. ರಾಣಿಯವರು ಮಾತ್ರ ಆ ಜನರಲ್ಲಿಯ ಮುಖ್ಯನಿಗೆ ರಾಮಶರಣನೆಂದು ಸಂಬೋಧಿಸುತಲಿದ್ದರು."

"ಏನು? ರಾಮಶರಣ ದರೋಗಾನು ಬಂದಿದ್ದನೆ?"

ರಾಮಶರಣನು ಬಂದಿದ್ದನೆಂಬದನ್ನು ಕೇಳಿ ಅಜಯನು ಬಹಳವಾಗಿ ಅಂಜಿ ದನು. ಯಾಕಂದರೆ ರಾಮಶರಣನು ನೀಚ ಮನೋವೃತ್ತಿಯುವನೆಂಬದನ್ನು ಅವನು ತಿಳಿದಿದ್ದನು. ಆರಾದಲ್ಲಿ ಇನ್ನೂ ಬಂಡಾಯದ ಬೇಗೆಯು ಇದ್ದುದರಿಂದ ಇಂತಹ ವಿಷಮ ಪರಿಸ್ಥಿತಿಯಲ್ಲಿ ಕುವರಸಿಂಹರಾದರೂ ಸ್ತ್ರೀಪರಿವಾರವನ್ನು

ಏಕೆ ಕರೆಯಿಸಿ-ವರು? ಎಂದು ಅವನು ವಿಚಾರ ಮಾಡತೊಡಗಿದನು. ಕಡೆಗೆ ರಾಮಶರಣನು ವಿಶ್ವಾಸಘಾತ ಮಾಡಿದನೆಂದು ಅವನ ಮನವರಿಕೆಯಾಯಿತು. ಅವನು ಉದ್ವಿಗ್ನಮನಸ್ಕನಾಗಿ ಕೆಲವು ಹೊತ್ತಿನ ವರೆಗೆ ಸ್ತಬ್ಧನಾಗಿ ಕುಳಿತನು.

ಅಜಯಸಿಂಹನ ಮನಸ್ಸಿನಲ್ಲಿ ಮತ್ತೊಂದು ವಿಚಾರವು ಬಂದಿತು. ಅವನಾದರೂ ಮುಂಚಿನ ದಿನವೇ ಆರಾ ಪಟ್ಟಣವನ್ನು ಬಿಟ್ಟಿದ್ದನು. ತಾನು ಹೊರಟ ಮೇಲೆ ರಾಣಿಯೂ ತಾರಾದೇವಿಯೂ ಅಲ್ಲಿಗೆ ಹೋಗಿರಬಹುದೆಂದು ಅವನು ಭಾವಿಸಿದನು. ಕೂಡಲೆ ಅವನು ತನ್ನ ಸೇವಕರನ್ನು ಕುರಿತು:— "ಜುಬಿಲಿಗೆ ಜೀನು ಹಾಕು" ಎಂದು ಆಜ್ಞಾಪಿಸಿದನು. ಎರಡನೆಯ ಕ್ಷಣದಲ್ಲಿ ಕುದುರೆಯು ಸುಸಜ್ಜಿತವಾಯಿತು. ಕೂಡಲೆ ಅವನು ವಾಯುವೇಗದಿಂದ ಆರಾದ ದಾರಿಯನ್ನು ಹಿಡಿದನು. ಹೋಗ-ಹೋಗುತ್ತ ಅವನ ಮನಸ್ಸಿನಲ್ಲಿ ಸಹಸ್ರಾವಧಿ ವಿಚಾರ ತರಂಗಗಳು ತಾಕಲಾಡತೊಡಗಿದ್ದವು. ಮೂಕ ಪ್ರಾಣಿಯಾಗಿದ್ದರೂ ಸೂಜ್ಞಜಾತಿಯ ಜುಬಿಲಿಯು ಆರಾದ ಕಡೆಗೆ ಧಾವಿಸಿ ನಡೆದಿತ್ತು. ಸ್ವಲ್ಪ ವೇಳೆಯಲ್ಲಿ ಅದು ಆರಾ ಪಟ್ಟಣವನ್ನು ಪ್ರವೇಶಿಸಿತು. ಅಜಯನು ಕುದುರೆಯಿಂದ ಇಳಿದು ಕುವರಸಿಂಹನ ಬಳಿಗೆ ಹೋದನು.

"ಜಗದೀಶಪುರದಿಂದ ರಾಣಿಯೂ ತಾರಾದೇವಿಯೂ ಬಂದಿರುವರೇನು?" ಅಜಯನು ಉತ್ಕಂಠೆಯಿಂದ ಕೇಳಿದನು. ಕೂಡಲೆ ಕುವರಸಿಂಹನಿಗೆ ವಿಸ್ಮಯವಾಯಿತು. ಆಗ ಅವನು:—"ಅವರು ಇಲ್ಲಿಗೇಕೆ ಬರುವರು? ಇಂತಹ ಬಿಕ್ಕಟ್ಟಿನ ಪ್ರಸಂಗದಲ್ಲಿ ಸ್ತ್ರೀಪರಿವಾರವು ಇಲ್ಲಿರುವದು ಘಾತುಕವೆಂದೇ ಅವರನ್ನು ಜಗದೀಶಪುರಕ್ಕೆ ಕಳುಹಿಸಿರುವೆನು. ಸ್ವಲ್ಪ ಶಾಂತವಾದ ಮೇಲೆ ಕರೆಯಿಸೋಣ."

ಅಜಯನು ಈ ಮಾತುಗಳನ್ನು ಕೇಳಿ ಭ್ರಮಿಷ್ಠನಂತಾದನು. ಇದೆಲ್ಲವೂ ರಾಮಶರಣನ ಕುಟಿಲತಂತ್ರವೆಂದು ಅವನು ತಿಳಿದನು. ಆಗ ಅವನು ಕುವರಸಿಂಹನನ್ನು ಕುರಿತು:—"ರಾಣಿಯೂ ತಾರಾದೇವಿಯೂ ಜಗದೀಶಪುರದಲ್ಲಿಲ್ಲ. ನಿಮ್ಮ ನಿರೂಪದ ಮೇರೆಗೆ ರಾಮಶರಣನು ಬಂದು ಅವರನ್ನು ಆರಾಕ್ಕೆ ಕರೆದುಕೊಂಡು ಹೋದನೆಂದು ಸೇವಕರು ಹೇಳಿದರು." ಎಂದು ಅಜಯನು ನುಡಿದ ಕೂಡಲೆ ಕುವರಸಿಂಹನು ವಿಸ್ಮಿತನಾದನು. ರಾಮಶರಣನು ನೀಚತನ ಮಾಡಿರುವನೆಂದು ಅವನಿಗೆ ನಂಬಿಗೆಯಾಯಿತು. ತನ್ನ ಆಶ್ರಯದಲ್ಲಿದ್ದವನು ಇಂತಹ ಅವೇಳೆಯಲ್ಲಿ ಕೃತಘ್ನನಾಗಿ, ತನ್ನ ಮನೆತನದ ಮರ್ಯಾದೆಯ ಸುಲಿಗೆ ಮಾಡುವನೆಂದು ಕುವರಸಿಂಹನು ಸ್ವಪ್ನದಲ್ಲಿಯೂ ಭಾವಿಸಿದ್ದಿಲ್ಲ. ಅವನು ಸಂತಾಪಾತಿರೇಕದಿಂದ ದೇಹಭಾನವಿಲ್ಲದವನಾದನು. ಕುಳಿತ ಸ್ಥಳದಿಂದ ಚಟ್ಟನೆ ಎದ್ದು:— "ಆ ವಂಚಕನಾದ ರಾಮಶರಣನ ಪಾರುಪತ್ಯವನ್ನು ಕಂಡೇ ಬಿಡುವೆನು"ಎಂದು

ನುಡಿದು, ಅಲ್ಲಿಂದ ಹೊರಡಲುದ್ಯುಕ್ತನಾದನು. ಆಗ ಅಜಯಸಿಂಹನು ಅವನನ್ನು ತಡೆದು:— "ಈ ಕಾರ್ಯಕ್ಕೆ ನೀವು ಹೋಗುವ ಅವಶ್ಯಕತೆಯಿಲ್ಲ. ನೀವು ಹೋದಿರೆಂದರೆ ಇಲ್ಲಿಯ ಸೈನ್ಯದಲ್ಲಿ ಅವ್ಯವಸ್ಥೆಯುಂಟಾಗುವದು; ಮತ್ತು ಪ್ರತಿಬಂಧಿತರಾದ ಆಂಗ್ಲರ ಬಿಡುಗಡೆ ಮಾಡುವದಕ್ಕಾಗಿ ಇಂತಹ ಸಮಯದಲ್ಲಿಯೇ ಸೈನ್ಯವು ಬರುವದೆಂಬದನ್ನು ಹೇಳಲಿಕ್ಕಾಗುವದಿಲ್ಲ. ಕ್ಯಾಪ್ಟನ್ ಡನಬಾರನು ಮಡಿದುದರಿಂದ, ಆಂಗ್ಲ ಕರ್ಮಚಾರಿಗಳು ಅತ್ಯಂತ ಕ್ರುದ್ಧರಾಗಿರುವದರಿಂದ, ಅವರು ಬೇಗನೆ ಸೈನ್ಯವನ್ನು ಕಳುಹಿಸುವ ಲಕ್ಷಣವಿದೆ. ಸ್ವಾತಂತ್ರ್ಯದ ರಣಕುಂಡವನ್ನು ಬಿಹಾರದಲ್ಲಿ ಪ್ರಜ್ವಲಿತ ಮಾಡಿದ ದೀಕ್ಷಾಬದ್ಧರು ನೀವಿರುವದರಿಂದ, ಕೆಲವು ದಿನಗಳ ವರೆಗೆ ಇಲ್ಲಿಯೇ ಇರುವದು ನಿಮಗೆ ಅತ್ಯಂತ ಅಗತ್ಯವಾಗಿರುವದು. ರಾಣಿ-ತಾರಾದೇವಿಯರ ಶೋಧನೆಗಾಗಿ ನಾನೂ ಜವಾನಸಿಂಹರೂ ಹೊರಡುವೆವು."

ಅಜಯಸಿಂಹನ ಮಾತುಗಳು ಕುವರಸಿಂಹನಿಗೆ ಸಮರ್ಪಕವಾಗಿ ತೋರಿದವು. ಅವನು ಜವಾನಸಿಂಹನನ್ನು ಕರೆಯಿಸಿ ರಾಣಿಯ ಹಾಗು ತಾರಾದೇವಿಯ ಶೋಧಕ್ಕಾಗಿ ಕೆಲವು ಜನರನ್ನು ತೆಗೆದುಕೊಂಡು ಹೋಗುವದಕ್ಕೆ ಆಜ್ಞಾಪಿಸಿದನು. ಜವಾನಸಿಂಗನಾದರೂ ಅವನ ಮಾತಿನಂತೆ ಹೊರಡಲಿಕ್ಕೆ ಸಿದ್ಧನಾದನು. ಆಗ ಕುವರಸಿಂಹನು ಅವನನ್ನು ತಡೆದು:—

"ಜವಾನಸಿಂಗ, ಆ ನೀಚ ರಾಮಶರಣನ ಮನೆಯಲ್ಲಿ ಯಾರಾಯರೂ ಇರುವರೇನು?"

"ಕುವರಸಿಂಹನು ಹೀಗೆ ಏಕೆ ಕೇಳಿದನೆಂಬದರ ಮರ್ಮವು ಜವಾನಸಿಂಗನಿಗೆ ತಿಳಿಯಲಿಲ್ಲ. ಅಜಯಸಿಂಹನು ಮಾತ್ರ ಅವನ ಮನೋಗತವನ್ನು ಕೂಡಲೆ ಕಂಡು ಹಿಡಿದನು. ಆಗ ಅವನು ಕುವರಸಿಂಹನನ್ನು ಕುರಿತು:— "ಹೀಗೇಕೆ ವಿಚಾರಿಸುವಿರಿ? ಅವನ ಮನೆಯ ಜನರನ್ನು ತೆಗೆದುಕೊಂಡು ಮಾಡಬೇಕಾದುದಾದರೂ ಏನು?"

"ಆ ಚಾಂಡಾಲನ ಮನೆಯ ಜನರನ್ನು ಹಿಡಿದು ಕಾರಾಗೃಹದಲ್ಲಿ ಹಾಕಿದರೆ, ಅವನ ನೀಚತನಕ್ಕೆ ತಕ್ಕ ಪ್ರತಿಫಲವನ್ನು ಕೊಟ್ಟಂತಾಗುತ್ತದೆ. ನೀನು ಆ ಕುಲಾಂಗಾರನನ್ನು ಶೋಧಿಸಿ ಯೋಗ್ಯ ಶಾಸನವನ್ನು ವಿಧಿಸು."

"ಅಣ್ಣಾ, ರಾಮಶರಣನು ಮಾಡಿದ ಅಪರಾಧಕ್ಕೆ ಅವನ ಮನೆಯ ಜನರು ಹೊಣೆಗಾರರಲ್ಲ. ನಿಮ್ಮ ಮಾತು ರಜಪೂತರ ದೊಡ್ಡಿಸ್ತಿಕೆಗೆ ಶೋಭಿಸುವಂತಹದಲ್ಲ. ಪವಿತ್ರ ಕುಲಸಂಭೂತರಾದ ಕ್ಷತ್ರಿಯರು ಇಂತಹ ಅನ್ಯಾಯಗಳನ್ನು ಮಾಡುವದಕ್ಕೆ ಪ್ರವೃತ್ತರಾಗಬಾರದು. ರಾಮಶರಣನ ಮನೆಯ ಸ್ತ್ರೀಯರನ್ನು

ಅಪಮಾನಗೊಳಿಸಿದರೆ ಇಲ್ಲವೆ ಅವರನ್ನು ಕಾರಾಗೃಹದಲ್ಲಿರಿಸಿದರೆ ಅಥವಾ ಅವರ ಕೊಲೆಯನ್ನು ಮಾಡಿಸಿದರೆ ಹೆಚ್ಚಿನ ಪುರುಷಾರ್ಥವನ್ನು ಮಾಡಿದಂತಾಗುವದಿಲ್ಲ. ನಿಜವಾದ ಅಪರಾಧಿಗೆ ಶಾಸನವು ವಿಧಿಸಲ್ಪಡಬೇಕೇ ಹೊರತು, ನಿರಪರಾಧಿಗಳಿಗೆ ತೊಂದರೆ ಕೊಡುವವರು ಜಾತಿವಂತ ಕ್ಷತ್ರಿಯರೇ ಅಲ್ಲ. ತಾವು ಇಂತಹ ಕಟು ಕರ್ತವ್ಯವನ್ನು ಮಾಡುವದಕ್ಕೆ ಮನವೊಳಿಸಬಾರದೆಂದು ಬೇಡಿಕೊಳ್ಳುವೆನು.''

ಅಜಯಸಿಂಹನ ಮಾತುಗಳನ್ನು ಕೇಳಿ ಕುವರಸಿಂಹನು ಸ್ತಬ್ಧನಾದನು. ಅವನ ಮಾತುಗಳು ಜವಾನಸಿಂಗನಿಗಾದರೂ ಸಮಂಜಸವಾಗಿ ತೋರಿದವು. ಆಗ ಅವನು ಕುವರಸಿಂಹನನ್ನು ಕುರಿತು:—

''ರಾಮಶರಣನು ಇಂತಹ ನೀಚನಿದ್ದರೂ ಅವನ ಪತ್ನಿಯಾದ ಪ್ಯಾರಿಯು ಪರಮಸಾಧ್ವಿಯಿರುವಳು. ಅಂತಹ ರಮಣೀಮಣಿಗಾ ಚಾಂಡಾಲಪತಿಯು ದೊರೆಯಬಾರದಾಗಿತ್ತು; ಆದರೆ ಅವಳ ಭವಿತವ್ಯವನ್ನು ಯಾರು ತಪ್ಪಿಸುವರು? ರಾಮಶರಣನ ಮೇಲಿನ ಸೇಡನ್ನು ಅವಳ ಮೇಲೆ ಹಾಕುವದು ಉಚಿತವಲ್ಲ. ನಿಷ್ಕಾರಣವಾಗಿ ಆ ಕುಲಯುವತಿಯ ಮನಸ್ಸನ್ನು ನೋಯಿಸಿದರೆ, ಅದರಿಂದ ಕಲ್ಯಾಣವಾಗಲಿಕ್ಕಿಲ್ಲ. ನಾವು ಈಗಲೇ ರಾಮಶರಣನ ಶೋಧಾರ್ಥವಾಗಿ ಹೊರಡುವೆವು. ಆದರ್ಶ ಆರ್ಯಾಂಗನೆಯರಾದ ರಾಣಿಯವರೂ, ತಾರಾದೇವಿಯವರೂ ತಮ್ಮ ಪಾವಿತ್ರ್ಯವನ್ನು ಕಾಯ್ದುಕೊಳ್ಳುವದಕ್ಕೆ ಸಮರ್ಥರಿರುವರು.'' ಎಂದು ನುಡಿದು ಜವಾನಸಿಂಹನು ಅಲ್ಲಿಂದ ಎದ್ದು ಕುದುರೆಯನ್ನೇರಿದನು. ಅಷ್ಟರಲ್ಲಿ ಅಜಯನೂ ಅಶ್ವಾರೋಹಿಯಾಗಿದ್ದನು. ಜವಾನಸಿಂಹನು ಒಂದು ಕಡೆಗೆ ಕುದುರೆಯನ್ನು ನೂಕಿದೊಡನೆಯೆ, ಅಜಯಸಿಂಹನು ಮತ್ತೊಂದು ನಿಟ್ಟಿಗೆ ತನ್ನ ಜುಬಿಲಿಯನ್ನು ಸಾಗಿಸಿದನು.

ಅಜಯಸಿಂಹನು ತನಗೆ ಸಂಶಯವಿದ್ದ ಸ್ಥಳಗಳಲ್ಲಿ ರಾಮಶರಣನನ್ನು ಶೋಧಿಸತೊಡಗಿದ್ದನು. ಸಾಯಂಕಾಲದ ವರೆಗೆ ಹುಡುಕಿದರೂ ನಿಷ್ಫಲವಾಯಿತು. ಆಗ ಅವನು ಚಿಂತಾಮಗ್ನನಾದನು ಹೃದಯದಲ್ಲಿ ನಿರಾಶೆಯುತ್ಪನ್ನವಾಯಿತು. ಆದರೂ ಅವನು ಕರ್ತವ್ಯ ಪರಾಙ್ಮುಖನಾಗದೆ ಮುಂದೆ ಸಾಗಿದನು. ಅವನ ಚಪಲಾಶ್ವವು ಧೃತಗತಿಯಿಂದ ಸಾಗಿತ್ತು.

ಆರಾದ ಪಶ್ಚಿಮಕ್ಕೆ ನಾಲ್ಕು ಹರದಾರಿಯ ಮೇಲಿರುವ ಬಿಬೀಗಂಜ ಎಂಬ ಸ್ಥಳಕ್ಕೆ ಅಜಯಸಿಂಹನು ಬಂದನು. ಅವನ ಅನುಚರರು ರಾಮಶರಣನ ಶೋಧಕ್ಕಾಗಿ ನಾಲ್ಕೂ ಕಡೆಗೆ ತೆರಳಿದ್ದರು. ಅವನಾದರೂ ಮುಂದೆ ಸಾಗಬೇಕೆನ್ನುವ ಯೋಚನೆಯಲ್ಲಿದ್ದನು. ಅಷ್ಟರಲ್ಲಿ ತುಬಾಕಿಗಳ ಸಪ್ಪಳವು ಅವನ ಕಿವಿಗೆ ಬಿತ್ತು. ಕೂಡಲೆ ಅವನ ಕಿವಿಗಳು ನೆಟ್ಟಗಾದವು. ಬಾಹುಗಳು ಸ್ಫುರಣಹೊಂದತೊಡಗಿ

ದವು. ಯುದ್ಧೋತ್ಸಾಹಿಯಾದ ಅವನ ಮನಸ್ಸು ಕರ್ತವ್ಯವನ್ನು ಮರೆಯಿಸಿತು. ಬುಬಿಲಿಯು ಹೂಂಕರಿಸುತ್ತ, ತುಬಾಕಿಗಳ ಸಪ್ಪಳವು ಕೇಳುವ ದಿಸೆಗೇ ಮುಖ ವನ್ನು ತಿರುಗಿಸಿ ಕಾಲು ಕೆದರತೊಡಗಿತು. ಸಂಕುಚಿತವಾದ ಗೃಹಕರ್ತವ್ಯದಲ್ಲಿ ತೊಡಗಿ, ರಾಷ್ಟ್ರಕಾರ್ಯ ವಿಮುಖನಾಗುವದು ಯೋಗ್ಯವಲ್ಲೆಂದು ತಿಳಿದು, ಅವನು ರಣಭೂಮಿಯ ಕಡೆಗೆ ಕುದುರೆಯನ್ನು ಸಾಗಿಸಿದನು. ದೇಶಾಭಿಮಾನಿ ಗಳಿಗೆ ರಾಷ್ಟ್ರಧರ್ಮಕ್ಕಿಂತ ಹೆಚ್ಚಿನ ಧರ್ಮವು ಮತ್ತಾವದಿರುವದು?

## ಕರ್ಮಫಲ!

ದಾನಾಪುರದ ಸೈನ್ಯವು ಪರಾಭವ ಹೊಂದಿ ಕ್ಯಾಪ್ಟನ್ ಡನಬಾರನು ರಣದಲ್ಲಿ ಮಡಿದ ಸಂಗತಿಯು ಹಾ-ಹಾ ಅನ್ನುವಷ್ಟರಲ್ಲಿ ನಾಲ್ಕೂ ಕಡೆಗೆ ಪಸರಿಸಿತು. ಕೂಡಲೆ ಬಿಹಾರದ ಸ್ವಾತಂತ್ರ್ಯದ ರಣಕುಂಡವು ಮತ್ತಿಷ್ಟು ಜಾಜ್ವಲ್ಯಮಾನ ವಾಯಿತು. ಎಲ್ಲ ಆಂಗ್ಲ ಜನರ ಮುಖಗಳು ಕಪ್ಪಿಟ್ಟವು. ಕ್ರಾಂತಿಕಾರಕರು ನವೋತ್ಸಾಹದಿಂದ ಕರ್ತವ್ಯಪಾಲನೆಗಾಗಿ ಸಿದ್ಧರಾಗತೊಡಗಿದರು. ಆರಾದ ಕೋಟೆ ಯಲ್ಲಿ ಬಂಧಿಸಲ್ಪಟ್ಟ ಜನರು ತಮ್ಮ ಭವಿಷ್ಯಕಾಲದ ಭೀಷಣಚಿತ್ರವನ್ನು ಕಲ್ಪಿಸಿ ಕೊಳ್ಳತೊಡಗಿದರು. ಶರಣು ಬಂದರೆ ಜೀವದಾನ ಕೊಡುವೆವೆಂದು ಬಂಡು ಗಾರರು ಅವರಿಗೆ ಆಶ್ವಾಸನ ಕೊಡತೊಡಗಿದ್ದರು. ಬಂಡುಗಾರರ ಕೈಯಲ್ಲಿ ಸಿಕ್ಕರೆ ತಮ್ಮ ಆಯುಷ್ಯವು ಮುಗಿಯುವದೆಂದು ತಿಳಿದುಕೊಂಡದ್ದರಿಂದ, ಅವರು ಕೋಟೆಯೊಳಗಿಂದ ಹೊರಗೆ ಬೀಳಲಾರದವರಾಗಿದ್ದರು.

ಮೇಜರ ಆಯರನೆಂಬ ಸೇನಾಪತಿಯು ತನ್ನ ದಳದೊಂದಿಗೆ ಗಾಜೀಪುರದ ಕಡೆಗೆ ಸಾಗಿದ್ದನು. ಆರಾದಲ್ಲಿ ಆಂಗ್ಲರು ಹಾಗು ಶೀಖಜನರು ಕೋಟೆಯಲ್ಲಿ ಬಂಧಿಸಲ್ಪಟ್ಟಿರುವರೆಂದೂ, ಅವರ ಸಹಾಯಕ್ಕಾಗಿ ಹೊರಟ ಕ್ಯಾಪ್ಟನ್ ಡನ ಬಾರನು ಸೈನ್ಯ ಸಹಿತವಾಗಿ ನಾಶ ಹೊಂದಿದನೆಂದೂ ಅವನಿಗೆ ಬಕ್ಸಾರದ ಬಳಿ ಯಲ್ಲಿ ತಿಳಿಯಿತು. ಕೂಡಲೆ ಅವನು ಗಾಜೀಪುರಕ್ಕೆ ಹೋಗುವದನ್ನು ನಿಲ್ಲಿಸಿ, ತನ್ನ ಸೈನ್ಯವನ್ನು ಆರಾದ ಕಡೆಗೆ ತಿರುಗಿಸಿದನು. ಅವನ ಸೈನ್ಯವು ಆರಾದಿಂದ ನಾಲ್ಕು ಹರದಾರಿಯ ಮೇಲಿರುವ ಬಿಬೀಗಂಜಕ್ಕೆ ಬಂದ ಕೂಡಲೆ ಅವನಿಗೆ ಬಂಡುಗಾರರು ಗಂಟುಬಿದ್ದರು.

ಮೇಜರ ಆಯರನು ಬಕ್ಸಾರದಿಂದ ಆರಾಕ್ಕೆ ಹೊರಟ ಸುದ್ದಿಯನ್ನು ಬಂಡುಗಾರರು ಕೇಳಿ, ಅವನು ಹೋಗುವ ದಾರಿಯಲ್ಲಿದ್ದ ಅರಣ್ಯದಲ್ಲಿ ಅಡಗಿ ಕೊಂಡು ಕುಳಿತಿದ್ದರು. ಆಯರನ ಸೈನ್ಯವು ಅಲ್ಲಿಗೆ ಬಂದ ಕೂಡಲೆ ಹಠಾ

ತ್ತಾಗಿ ಅದರ ಮೇಲೆ ಬೀಳಬೇಕೆಂದು ಅವರ ಸಂಕಲ್ಪವಿದ್ದಿತು. ಅವರ ಇಚ್ಛೆಯಂತೆ ಕಾರ್ಯವು ಸಾಧಿಸಿದ್ದರೆ, ಡನಬಾರನಂತೆಯೇ ಆಯುರನ ಅವಸ್ಥೆಯೂ ಆಗುತ್ತಿತ್ತು; ಆದರೆ ಅವನ ಭಾಗ್ಯದೇವತೆಯು ಬಲವಂತಳಿದ್ದಳು. ಕ್ರಾಂತಿಕಾರಕ ಜನರು ಅಡಗಿದ್ದ ಅರಣ್ಯದ ಒಳಗೆ ಅವನ ಸೈನ್ಯವು ಹೋದ ಕೂಡಲೆ ಭೇರಿನಿನಾದವಾಗತೊಡಗಿತು. ಈ ಭೇರಿರವವೇ ಆಯುರನನ್ನು ಸಾವಧಗೊಳಿಸಿತೆನ್ನಬಹುದು. ಅವನಿಗೆ ಬಂಡುಗಾರರ ಸುಳಿವು ತಿಳಿದದ್ದರಿಂದ, ಮುಂದಕ್ಕಿಟ್ಟ ಹೆಜ್ಜೆಯನ್ನು ಹಿಂದೆ ತೆಗೆದನು. ಆಯುರನು ಆ ಅರಣ್ಯವನ್ನು ಪ್ರವೇಶಿಸಿದ್ದರೆ, ಮೃತ್ಯುಮುಖದಲ್ಲಿಯೇ ಪ್ರವೇಶ ಮಾಡಿದಂತಾಗುತ್ತಿತ್ತು. ಅವನು ತನ್ನ ಸೈನ್ಯವನ್ನು ಎರಡು ಭಾಗ ಮಾಡಿ, ಒಂದನ್ನು ತನ್ನ ಕೈಯಲ್ಲಿ ತೆಗೆದುಕೊಂಡನು; ಮತ್ತೊಂದನ್ನು ತನ್ನ ಕೈಕೆಳಗಿನ ಅಧಿಕಾರಿಯ ಕೈಯಲ್ಲಿ ಕೊಟ್ಟು ಅವನನ್ನು ಆ ಅರಣ್ಯದ ಬಳಿಯಲ್ಲಿರಿಸಿದನು. ಅಷ್ಟರಲ್ಲಿ ಆ ಅರಣ್ಯಮಧ್ಯದಿಂದ ಗುಂಡುಗಳು ಬರತೊಡಗಿದವು. ಕೂಡಲೆ ಆಂಗ್ಲ ಸೈನಿಕರು ಗತಾಸುಗಳಾಗಿ ಭೂಮಿಗೆ ಬೀಳತೊಡಗಿದರು. ಅವರಿಗೆ ಆತ್ಮರಕ್ಷಣೆ ಮಾಡಿಕೊಳ್ಳುವದು ಅಸಾಧ್ಯವಾಗತೊಡಗಿತು. ಕ್ರಾಂತಿಕಾರಕ ಜನರು ದ್ವಿಗುಣಿತ ಉತ್ಸಾಹದಿಂದ ಕಾದತೊಡಗಿದರು. ವಿಜಯಾವೇಶದಿಂದ ಅವರು ದೇಹದ ಪರಿವೆಯಿಲ್ಲದವರಾದರು. ಆಯುರನು ಈ ಸ್ಥಿತಿಯನ್ನು ನೋಡಿ, ಮೆಲ್ಲಮೆಲ್ಲನೆ ಹಿಂದೆ ಸರಿಯುವಂತೆ ಆ ಸೈನಿಕರಿಗೆ ಸೂಚನೆ ಮಾಡಿದನು. ಅವನ ಆಜ್ಞೆಯ ಮೇರೆಗೆ ಆ ಸೈನಿಕರು ಹಿಂದ ಸರಿಯತೊಡಗಿದರು. ಆಂಗ್ಲರು ಹಣ್ಣಾಗಿ ಹಿಮ್ಮುಖರಾದರೆಂದು ತಿಳಿದು ಬಂಡುಗಾರರು ಅಡಗಿದ್ದ ಅಡವಿಯಿಂದ ಹೊರಬಿದ್ದು, ಆ ಸೈನ್ಯದ ಮೇಲೆ ಸಾಗಿದರು. ಅವರು ದೇಹಭಾನವಿಲ್ಲದೆ ಹೊರಬಿದ್ದ ಸಂಧಿಯನ್ನು ಸಾಧಿಸಿ, ಆಯುರನು ತನ್ನ ಸೈನ್ಯವನ್ನು ಅವರ ಹಿಂದೆ ತಂದನು. ನಾಮಾಂಕಿತ ಯೋಧನಾದ ಆಯುರನ ಈ ವ್ಯೂಹವು ಯಶಸ್ವಿತೆಯನ್ನು ಹೊಂದಿತು! ಬಂಡುಗಾರರು ಮಧ್ಯದಲ್ಲಿ ಸಿಲುಕಿದರು. ಸುತ್ತಮುತ್ತು ಬರುವ ಗುಂಡುಗಳ ಹೊಡತದಿಂದ ಅವರು ನುಗ್ಗುನುಗ್ಗಾದರು. ಅರಣ್ಯವನ್ನು ಬಿಟ್ಟು ಬೈಲಿಗೆ ಬಂದದ್ದಕ್ಕೆ ಅವರು ಪಶ್ಚಾತ್ತಾಪಬಡತೊಡಗಿದರು. ಬಂಡುಗಾರರು ಯುದ್ಧಕಲೆಯಲ್ಲಿ ಅತ್ಯಂತ ನಿಪುಣರಿದ್ದರೆ, ಅವರು ತಮ್ಮ ಮುಖ್ಯನ ಆಜ್ಞಾಧಾರಕರಾಗಿರುತ್ತಿದ್ದರೆ, ಅವರ ಮುಖ್ಯರು ಐಕ್ಯಭಾವದಿಂದಲೂ ಧೂರ್ತತನದಿಂದಲೂ ಇರುತ್ತಿದ್ದರೆ, ಸ್ವಾತಂತ್ರ್ಯದ ರಣಕುಂಡದ ಜಾಜ್ವಲ್ಯಮಾನವಾದ ಅಗ್ನಿಯು ನಿರರ್ಥಕವಾಗುತ್ತಿದ್ದಿಲ್ಲ.

ಆಂಗ್ಲಸೈನಿಕರ ಹೊಡತಕ್ಕೆ ಬಂಡುಗಾರರು ಬೆದರಿ ಪಲಾಯನ ಮಾಡತೊಡಗಿದರು. ಆಯುರನ ಸೈನ್ಯವು ಬಂಡುಗಾರರನ್ನು ಬೆನ್ನುಹತ್ತಲಿಲ್ಲ. ಅವನು

ಮೊದಲು ಆರಾಪಟ್ಟಣವನ್ನು ಸೇರಬೇಕಾಗಿತ್ತು. ಅವನು ಆರಾಕ್ಕೆ ಹೋಗಬೇಕೆನ್ನುವಷ್ಟರಲ್ಲಿ ಕೃಷ್ಣಾಶ್ವಾರೂಢನಾದ ಒಬ್ಬ ವೀರನು ಕವಚಧಾರಿಯಾಗಿ, ಕೈಯಲ್ಲಿ ತೀಕ್ಷ್ಣಧಾರೆಯ ನಗ್ನಖಡ್ಗವನ್ನು ಹಿಡಿದು, ಆಂಗ್ಲ ಸೇನಾಂಬುಧಿಯನ್ನು ಪ್ರವೇಶಿಸಿದನು. ಅವನು ಪ್ರಳಯಕಾಲದ ಯಮನಂತೆ ಆಂಗ್ಲಸೇನೆಯನ್ನು ಸಂಹರಿಸತೊಡಗಿದನು. ಕ್ರಾಂತಿಕಾರಕ ಜನರು ಇದುವರೆಗೆ ತಡೆದು ನಿಂತಿದ್ದರೆ ಅವರಿಗೆ ಎಂದೂ ಅಪಜಯವೊದಗುತ್ತಿದ್ದಿಲ್ಲ ಅವನ ಯುದ್ಧಚಾಪಲ್ಯವನ್ನೂ, ಅದ್ವಿತೀಯ ಸಾಹಸವನ್ನೂ, ಅನುಪಮೇಯ ಧೈರ್ಯವನ್ನೂ ನೋಡಿ, ಹೆಸರುವಾಸಿಯಾದ ಆಯರನಂತಹ ಸೇನಾಪತಿಯು ಸಹ ಬೆರಳು ಕಚ್ಚಿದನು.

ಮಹಾಶಯ, ಈ ವೀರನು ಯಾರೆಂಬದನ್ನು ಗುರತಿಸಿರುವಿರೇನು? ತನ್ನ ಪರಿವಾರದ ಶೋಧಕ್ಕಾಗಿ ಹೊರಟ ಅಜಯಸಿಂಹನಿಗೆ ಬಿಬೀಗಂಜದ ಬಳಿಯಲ್ಲಿ ತುಬಾಕಿಯ ಧ್ವನಿಯು ಕೇಳಿದ ಕೂಡಲೆ ಅವನು ತನ್ನ ಗೃಹಕರ್ತವ್ಯವನ್ನು ಬದಿಗಿರಿಸಿ, ರಾಷ್ಟ್ರಧರ್ಮವನ್ನು ಪಾಲಿಸುವದಕ್ಕೆ ಹೊರಟನೆಂಬದನ್ನು ಹಿಂದೆ ನೋಡಿರುವಿರಷ್ಟೇ? ಆ ಅಜಯಸಿಂಹನೇ ಈಗ ಆಂಗ್ಲಸೈನ್ಯಕ್ಕೆ ಕರಾಲಸ್ವರೂಪನಾಗಿ ಬಂದಂತಹ ವೀರಾಗ್ರಣಿಯು!

ಸೇನಾಂಬುಧಿಯಲ್ಲಿ ಏಕಾಕಿಯಾಗಿ ಕಾದುವ ವೀರಾಗ್ರಣಿಯನ್ನು ನೋಡಿ ಆಯರ ಸಾಹೇಬನು ವಿಸ್ಮಯಚಕಿತನಾದನು. ಅವನು ತನ್ನ ಕೈಯೊಳಗಿನ ಕೈ-ತುಬಾಕಿಯನ್ನು ಅವನ ಮೇಲೆ ಹಾರಿಸಿದನು! ಆದರೆ ಅಭೇದ್ಯ ಕವಚಧಾರಿಯಾದ ಆ ಸಂಗ್ರಾಮಸಿಂಹನಿಗೆ ಏನೂ ಅಪಾಯವಾಗಲಿಲ್ಲ. ಇಂತಹ ರಣಧೀರನು ಹೀಗೆ ಪರಾಕ್ರಮವನ್ನು ತೋರಿಸತೊಡಗಿದ್ದರೂ, ರಣಪರಾಙ್ಮುಖರಾದ ಕ್ರಾಂತಿಕಾರಕರಿಗೆ ತಿರುಗಿ ನಿಲ್ಲುವ ಧೈರ್ಯವಾಗಲಿಲ್ಲ. ಅವರು ಓಡತೊಡಗಿದವರು ಕಡೆಗೆ ಓಡಿಯೇ ಬಿಟ್ಟರು. ಅಷ್ಟರಲ್ಲಿ ಆಂಗ್ಲಸೈನಿಕರು ಮಂಡಲಾಕಾರವಾಗಿ ಅವನನ್ನು ಸುತ್ತತೊಡಗಿದರು. ಅವರು ಅವನನ್ನು ಸುತ್ತುಗಟ್ಟುತ್ತ ತುಬಾಕಿಗಳನ್ನು ಅವನ ಕಡೆಗೆ ಹಿಡಿದರು. ಕೂಡಲೆ ಅಜಯನು ವಿದ್ಯುದ್ವೇಗದಿಂದ ಜಾರಿ ಹೋದನು!

ಇನ್ನು ತಮ್ಮ ಮಾರ್ಗವು ನಿಷ್ಕಂಟಕವಾಯಿತೆಂದು ಆಯರನು ತನ್ನ ಸೇನೆಯನ್ನು ಮುಂದೆ ಸಾಗಿಸಿದನು. ಬಿಬೀಗಂಜದಿಂದ ಸ್ವಲ್ಪ ದೂರ ಹೋಗುವಷ್ಟರಲ್ಲಿ ಅವನಿಗೆ ನದಿಯು ಅಡ್ಡವಾಯಿತು. ಅಷ್ಟರಲ್ಲಿ ಒಬ್ಬ ಮನುಷ್ಯನು ಬಂದು:

"ಇಲ್ಲಿದ್ದ ಸೇತುವೆಯನ್ನು ಬಂಡುಗಾರರು ಮುರಿದಿರುವರು. ಸ್ವಲ್ಪ ದೂರದಲ್ಲಿ ಮತ್ತೊಂದು ಧರಣವಿರುವದು. ಅಲ್ಲಿಗೆ ಹೋದರೆ ನೀವು ಪೈಲತೀರವನ್ನು ಕಾಣುವಿರಿ!"

"ನೀನು ಯಾರು?" ಆಯುರ ಸಾಹೇಬನು ಕೃತಜ್ಞತೆಯಿಂದ ನುಡಿದ ಕೂಡಲೆ ಅವನು:—"ನಾನು ರಾಮಶರಣಲಾಲ ದರೋಗಾ ಎಂಬವನು. ಇಷ್ಟು ದಿನ ಆಂಗ್ಲ ರಾಜ್ಯದಲ್ಲಿ ಸೇವೆಮಾಡಿಕೊಂಡಿದ್ದೆನು. ಆರಾ ಪಟ್ಟಣವು ಬಂಡು ಗಾರರ ವಶವಾದದ್ದರಿಂದ ನಾನು ನಿರಾಧಾರಿಯಾದೆನು."

"ಏನೂ ಚಿಂತೆಯಿಲ್ಲ; ನೀನು ಮಾಡಿದ ಉಪಕಾರಕ್ಕಾಗಿ ಆಂಗ್ಲ ರಾಜ್ಯ ದಲ್ಲಿಯೇ ನಿನಗೆ ಕೆಲಸವು ದೊರೆಯುವದು." ಎಂದು ಆಯುರನು ಕೃತಜ್ಞತೆ ಯಿಂದ ನುಡಿದು:—"ಈಗ ಬಂದ ಕವಚಧಾರಿಯಾದ ವೀರಾಗ್ರಣಿಯನ್ನು ನೀನು ಬಲ್ಲೆಯಾ?"

"ಓಹೋ! ಬಲ್ಲೆನು. ಅವನು ಬಾಬೂ ಕುವರಸಿಂಹನ ಅನುಜನಾದ ಅಜಯಸಿಂಹನು!"

"ಏನು? ಆ ಅಜಯಸಿಂಹನು ಇವನೇ ಏನು?" ವಿಸ್ಮಿತನಾಗಿ ಆಯುರನು ಕೇಳಿದನು.

'ಹೌದು; ಇವನೀಗ ಬಂಡುಗಾರರ ಸೇನಾಧಿಪತ್ಯವನ್ನು ವಹಿಸಿರುವನು.

ಆಯುರನು ಕ್ಷಣಹೊತ್ತು ದಂಗು ಬಡೆದು ಕುಳಿತನು. ಆ ಮೇಲೆ ತನ್ನ ಸೈನ್ಯವನ್ನು ತೆಗೆದುಕೊಂಡು ಆರಾದ ದಾರಿಯನ್ನು ಹಿಡಿದನು.

ಬಂಡುಗಾರರಲ್ಲಿ ಸಂಘಟಿತ ಶಕ್ತಿಯಿಲ್ಲದ್ದರಿಂದ ಆರಾದ ಸಂಗ್ರಾಮದಲ್ಲಿ ಮೇಜರ ಆಯುರನಿಗೆ ಕುವರಸಿಂಹನು ಬೆನ್ನು ತೋರಿಸುವ ಪ್ರಸಂಗವೊದಗಿತು. ಆಯುರನು ಜಯಶೀಲನಾಗಿ ಆರಾದಲ್ಲಿ ತನ್ನ ವರ್ಚಸ್ಸವನ್ನು ಸ್ಥಾಪಿಸಿದನು. ಅವನು ಬಂಧನೆಯಲ್ಲಿ ಸಿಲುಕಿದ ಸ್ವಜನರನ್ನೂ ಶೀಖರನ್ನೂ ಮುಕ್ತ ಮಾಡಿದನು. ಮೇಜರ ಸಾಹೇಬನ ಸಾಹಸದಿಂದ ಬಿಡುಗಡೆ ಹೊಂದಿದ್ದರಿಂದ, ಅವರು ಅವ ನನ್ನು ಬಹಳವಾಗಿ ಕೊಂಡಾಡಿದರು. ಜೀವದ ಆಶೆಯನ್ನೇ ಬಿಟ್ಟಿದ್ದ ಅವರಿಗೆ ಪುನರ್ಜನ್ಮವಾದಂತಾಗಿತ್ತು. ಆಯುರ ಸಾಹೇಬನು ಬಂಡುಗಾರರಿಗೆ ಶಾಸನ ವನ್ನು ವಿಧಿಸುವದಕ್ಕಾಗಿಯೂ, ತನ್ನ ಅಧಿಕಾರವು ಪ್ರಸ್ಥಾಪಿಸುವದಕ್ಕಾಗಿಯೂ ಉಗ್ರಸ್ವರೂಪವನ್ನು ಧರಿಸಿದ್ದನು. ಅವನು ಅನೇಕ ಬಂಡುಗಾರರನ್ನು ಗಿಡಕ್ಕೆ ತೂಗ ಹಾಕಿ ಗಲ್ಲಿಗೇರಿಸಿದನು; ಅನೇಕರನ್ನು ಯಾತನೆಗೊಳಿಸಿ ಕೊಲೆ ಮಾಡಿ ಸಿದನು. ಆಂಗ್ಲ ಸೈನಿಕರ ಅತ್ಯಾಚಾರವನ್ನು ಸಹಿಸಲಾರದೆ ಎಷ್ಟೋ ನಗರ ವಾಸಿಗಳು ಮನೆ-ಮಾರುಗಳನ್ನು ತೊರೆದು ಗ್ರಾಮತ್ಯಾಗ ಮಾಡಿದರು. ಮೇಜರ ಸಾಹೇಬನ ಅತ್ಯಾಚಾರಕ್ಕಾಗಿ ನೋಡಿದತ್ತೆಲ್ಲ ಹೃದಯವಿದಾರಕವಾದ ಹಾ-ಹಾ ಕಾರವು ಕೇಳತೊಡಗಿತ್ತು.

ಆರಾದಲ್ಲಿ ಶಾಂತತೆಯು ಉಂಟಾಗಲಿಕ್ಕೆ ಒಂದು ವಾರವು ಹಿಡಿಯಿತು.

ಅಜಯಸಿಂಹನೂ ಕುವರಸಿಂಹನೂ ತನ್ನ ಪರಿವಾರದೊಂದಿಗೆ ಜಗದೀಶಪುರಕ್ಕೆ ಹೋದ ಸಂಗತಿಯು ಮೇಜರ ಸಾಹೇಬನಿಗೆ ತಿಳಿದ ಕೂಡಲೆ, ಅವನು ಅಲ್ಲಿಗೆ ದಂಡೆತ್ತಿ ಹೋಗುವ ಸಿದ್ಧತೆಯಲ್ಲಿ ತೊಡಗಿದನು.

ಕಾಮಾಂಧನಾದ ರಾಮಶರಣನು ತನ್ನ ಕೃಷ್ಣಕೃತಿಯು ವ್ಯರ್ಥವಾದ ದ್ದಕ್ಕೆ ಖೇದಬಡತೊಡಗಿದ್ದನು. ತನ್ನ ಸುಖಸರ್ವಸ್ವಕ್ಕೆ ಘುಲಶಾಹನೇ ವಿಘ್ನಕಾರಿ ಯಾದನೆಂದು ರಾಮಶರಣನು ಅವನನ್ನು ಮನಸೋಕ್ತವಾಗಿ ನಿಂದಿಸತೊಡಗಿ ದ್ದನು. ಪ್ರಸಂಗವ್ಪೊದಗಿದರೆ ಅವನ ಮೇಲಿನ ಸೇಡನ್ನು ತೀರಿಸಿಕೊಳ್ಳಬೇಕೆಂದು ಅವನು ಹೊಂಚು ಹಾಕಿದ್ದನು. ತನ್ನ ದುಷ್ಕೃತಿಗೆ ಫಲವು ಲಭಿಸದೆ, ನಿರಾಕಾರ ಣವಾಗಿ ಅಜಯಸಿಂಹ-ಕುವರಸಿಂಹರ ದ್ವೇಷ ವಿವೃದ್ಧಿ ಮಾಡಿಕೊಂಡಂತಾಯಿ ತೆಂದು ಅವನು ಮನದಲ್ಲಿ ಮರುಗತೊಡಗಿದ್ದನು. ಆರಾದಲ್ಲಿ ಆಂಗ್ಲ ವರ್ಚ ಸ್ವವು ನೆಲೆಗೊಂಡದ್ದರಿಂದ, ಅವರ ಬಾಲ ಒಡೆದು ತನ್ನ ಕೆಲಸವನ್ನು ದೊರಕಿಸಿ ಕೊಳ್ಳಬೇಕೆಂದು ಅವನು ಹವಣಿಸಿದ್ದನು. ಮೇಜರ ಸಾಹೇಬನಿಗೆ ತಾನು ಉಪ ಕಾರ ಮಾಡಿದ್ದರಿಂದ, ಅವನನ್ನು ಕಂಡರೆ ಯೋಗ್ಯ ಕೆಲಸವು ದೊರೆಯದಿರ ದೆಂದು ಅವನು ಸಂಕಲ್ಪ ಮಾಡಿಕೊಂಡಿದ್ದನು. ಆಗ ಅವನು ಮೇಜರನ ಬಳಿಗೆ ಹೋಗಿ ನೆಲ ಮುಟ್ಟಿ ಮೂರು ಮೂರು ಬಾರಿ ನಮಸ್ಕರಿಸಿದನು. ಆಗ ಸಾಹೇ ಬನು ಅವನನ್ನು ಕುರಿತು:—"ನೀನು ಯಾರು?" ಎಂದು ಕೇಳಿದನು.

"ಖುದಾವಂತ, ನಾನು ಇಲ್ಲಿಯ ದರೋಗಾ ರಾಮಶರಣನು. ಬಿಬೀ ಗಂಜದ ಯುದ್ಧವಾದ ಮೇಲೆ ನದೀ ಪಾರುವಾಗುವದಕ್ಕಾಗಿ ಮಾರ್ಗದರ್ಶಕ ನಾದವನು ನಾನೇ! ನಾನು ಆಂಗ್ಲರಲ್ಲಿ ಭಕ್ತಿಯುಳ್ಳವನಿರುವೆನು. ನನ್ನ ಕೆಲಸವು ನನಗೆ ತಿರುಗಿ ದೊರೆಯಬೇಕೆಂದು ಪ್ರಾರ್ಥಿಸುವೆನು."

ಆರಾದ ಸಾಹೇಬನೊಬ್ಬನು ರಾಮಶರಣನ ಸ್ವಭಾವ ಪರಿಚಯವುಳ್ಳವನಿ ದ್ದನು. ಅವನು ಇಷ್ಟು ದಿನಗಳ ವರೆಗೆ ಕೋಟೆಯಲ್ಲಿ ಸಿಲುಕಿದ್ದರಿಂದಲೂ, ರಾಮಶರಣನನ್ನು ಕಾಣದೆ ಇದ್ದುದರಿಂದಲೂ ಅವನ ಸಚ್ಚಾರಿತ್ರವನ್ನು ಮೇಜರನ ಎದುರಿನಲ್ಲಿ ಹೇಳುವದಕ್ಕೆ ಸಾಧ್ಯವಾಗಿರಲಿಲ್ಲ. ಅವನು ರಾಮಶರಣನ ಮಾತು ಗಳನ್ನು ಕೇಳಿ ಕ್ರುದ್ಧನಾದನು. ಆಗ ಅವನು ತ್ವೇಷದಿಂದ:—

"ನೀನು ಕುವರಸಿಂಹನ ಕೈಕೆಳಗಿನ ಸೇವಕನಲ್ಲವೆ?"

"ಅಲ್ಲ; ನಾನು ಆಂಗ್ಲರಾಜ್ಯಕರ್ತರ ದಾಸಾನುದಾಸನು. ಕೇವಲ ಹೊ- ಟ್ಟೆಯ ಸಲುವಾಗಿ ಅನಿವಾರ್ಯದಿಂದ ಅವನಲ್ಲಿ ಸೇವಾವೃತ್ತಿಯನ್ನು ಕೈಕೊಂಡಿ ದ್ದೆನು. ಇನ್ನು ಮೇಲೆ ಕುವರಸಿಂಹನನ್ನು ಯಾರು ಕೇಳಬೇಕು?" ಎಂದು ತತ್ತರಿಸುತ್ತ ರಾಮಶರಣನು ನುಡಿದನು. ಆಗ ಆರಾದ ಸಾಹೇಬನು ಮೇಜರ

ಆಯುರನನ್ನು ಕುರಿತು:—

"ಇವನು ಕುವರಸಿಂಹನ ಹಸ್ತಕನಿರುವನು. ಇವನಿಗೆ ಯೋಗ್ಯ ಶಾಸನ ವನ್ನು ವಿಧಿಸಲಿಕ್ಕೇಬೇಕು. ಇಂತಹ ವಂಚಕರು ನಮ್ಮ ಮೇಲೆಯೂ ತಿರುಗಿ ಬೀಳುವದಕ್ಕೆ ಹಿಂದೆ ಮುಂದೆ ನೋಡುವದಿಲ್ಲ."

ಆಯುರ ಸಾಹೇಬನಿಗೆ ಈ ಮಾತುಗಳು ಸರಿದೋರಿದ್ದರಿಂದ, ರಾಮಶರಣ ನನ್ನು ಕಾರಾಗೃಹದಲ್ಲಿಡಬೇಕೆಂದು ಕೈಕೆಳಗಿನ ಅಧಿಕಾರಿಗಳಿಗೆ ಆಜ್ಞೆ ಮಾಡಿದನು. ಅವನು ಕೃತಕರ್ಮದ ಪ್ರಾಯಶ್ಚಿತ್ತವನ್ನು ಹೊಂದುವದಕ್ಕೆ ಕತ್ತಲೆಯ ಕೋಣೆ ಯನ್ನು ಸೇರಿದನು!

ಕರ್ಮಕ್ಕೆ ತಕ್ಕ ಫಲವನ್ನು ಅನುಭವಿಸದಿದ್ದರೆ ಹೇಗೆ?

## ವಜ್ರಾಘಾತ!

ಆರಾ ಸಂಗ್ರಾಮದಲ್ಲಿ ಬಾಬೂ ಕುವರಸಿಂಹನು ಪರಾಭೂತನಾಗಿ ತನ್ನ ಸೈನಿಕ ರೊಡನೆ ಜಗದೀಶಪುರವನ್ನು ಸೇರಿದನು. ಜಗದೀಶಪುರದ ಕೋಟೆಯು ದುರ್ಭೇ ದ್ಯವಿದ್ದುದರಿಂದ, ಅಲ್ಲಿ ತನಗೆ ಯಶವು ದೊರೆಯುವದೆಂದು ಅವನು ತಿಳಿದು ಕೊಂಡನು. ಅಜಯಸಿಂಹ, ಜವಾನಸಿಂಗ, ರಣದಲನಸಿಂಹ, ಹರಿಕಿಸನಸಿಂಹ ಮೊದಲಾದ ಸಂಗ್ರಾಮಪಟುಗಳ ಸಹಾಯದಿಂದ ಅವನು ಮತ್ತೆ ಹೊಸ ಸೈನ್ಯ ವನ್ನು ಕೂಡಿಸಿದನು. ಅವನು ತನ್ನ ಸೈನಿಕರಿಗೆ ಸ್ಫೂರ್ತಿದಾಯಕವಾದ ಉಪ ದೇಶ ಮಾಡಿ ಅವರಲ್ಲಿ ಹೊಸ ಉತ್ಸಾಹವನ್ನು ಹುಟ್ಟಿಸಿದನು. ಅವನು ಎಂಬತ್ತು ವರ್ಷದ ಮುದುಕನಾಗಿದ್ದರೂ, ಬಿಹಾರ ಪ್ರಾಂತದ ಸ್ವಾತಂತ್ರ್ಯಯಜ್ಞದ ಅಧ್ವರ್ಯುವಾದ್ದರಿಂದ, ಭಾವೀ ಸಂಗ್ರಾಮದಲ್ಲಿ ತಾನೇ ಸೇನಾಧಿಪತ್ಯವನ್ನು ವಹಿಸಬೇಕೆಂದು ಆ ನರಶಾರ್ದೂಲನು ನಿರ್ಧರಿಸಿಕೊಂಡಿದ್ದನು.

ಸ್ವಾತಂತ್ರ್ಯದ ರಣಕುಂಡದಲ್ಲಿ ದೀಕ್ಷಾಬದ್ಧನಾಗಿದ್ದ ಕುವರಸಿಂಹನ ಪಾರಿಪತ್ಯ ಮಾಡದಿದ್ದರೆ, ಬಿಹಾರ ಪ್ರಾಂತದಲ್ಲಿಯ ಬಂಡಾಯದ ಬೇಗೆಯು ನೊಂದಲಾರದೆಂದು ಆಯುರ ಸಾಹೇಬನ ನಂಬಿಗೆಯಿತ್ತು. ಆದ್ದರಿಂದ ಅವನು ತನ್ನ ಸೈನ್ಯವನ್ನು ಜಗದೀಶಪುರದ ಕಡೆಗೆ ಸಾಗಿಸಿದನು. ಕುವರಸಿಂಹನು ನಾ- ಮಾಂಕಿತ ಕಲಿಯಾಗಿದ್ದುದರಿಂದ, ಅವನನ್ನು ಪರಾಭವಗೊಳಿಸುವದು ಸಾಮಾನ್ಯ ತರದ ಕೆಲಸವಾಗದ್ದರಿಂದ, ಮೇಜರ ಸಾಹೇಬನು ನುರಿತಂಥ ಜನರನ್ನೇ ಆರಿಸಿ ಕೊಂಡು ಜಗದೀಶಪುರದ ಕಡೆಗೆ ಪಯಣ ಮಾಡಿದನು. ಕುವರಸಿಂಹನ ಹೆಸ ರನ್ನು ಕೇಳಿದೊಡನೆಯೇ ಆಂಗ್ಲರ ಕೆಚ್ಚೆದೆಯು ಥರಥರನೆ ನಡುಗುತ್ತಿತ್ತು.

ಅವನ ಪರಾಕ್ರಮದ ವಿಷಯಕ್ಕೆ ವ್ಹಾಯಿಸರಾಯನಾದ ಲಾರ್ಡ ಕ್ಯಾನಿಂಗನು ತೆಗೆದ ಉದ್ಗಾರವು ಇನ್ನೂ ಮೇಜರ ಸಾಹೇಬನ ತಲೆಯಲ್ಲಿ ಉಳಿದದ್ದರಿಂದ, ಅವನು ತನ್ನ ಜೊತೆಗೆ ಹೆಸರುವಾಸಿಗಳಾದ ಸೈನಿಕರನ್ನೇ ತೆಗೆದುಕೊಂಡಿದ್ದನು.

ಆಂಗ್ಲಸೈನ್ಯವು ಜಗದೀಶಪುರವನ್ನು ಮುತ್ತುವದಕ್ಕಾಗಿ ಒಳ್ಳೆಯ ರಭಸದಿಂದ ಹೊರಟಿರುವದೆಂಬ ಸಂಗತಿಯು ಕುವರಸಿಂಹನಿಗೆ ತಿಳಿಯಿತು. ಕೂಡಲೆ ಅವನು ತನ್ನ ಸೈನ್ಯದಲ್ಲಿ ಎರಡು ಭಾಗ ಮಾಡಿ, ಒಂದು ಭಾಗವನ್ನು ಕೋಟೆಯ ರಕ್ಷಣೆಗಾಗಿ ಬಿಟ್ಟನು; ಮತ್ತೊಂದು ಭಾಗವನ್ನು ಆಂಗ್ಲಸೈನ್ಯವು ಬರುವ ದಾರಿಯಲ್ಲಿ ಅದಕ್ಕೆ ಅಡ್ಡಿ ಮಾಡುವದಕ್ಕಾಗಿ ನಿಯಮಿಸಿದನು. ಅಷ್ಟರಲ್ಲಿ ಮೇಜರ ಸಾಹೇಬನ ಸೈನ್ಯವು ಅಲ್ಲಿಗೆ ಬಂದೇ ಬಿಟ್ಟಿತು. ಕೂಡಲೆ ಬಂಡುಗಾರರು ಅವನ ಸೈನ್ಯವನ್ನು ತಡೆದರು. ಎರಡೂ ಸೈನ್ಯದ ನಡುವೆ ತುಮುಲವಾದ ಯುದ್ಧವು ಪ್ರಾರಂಭವಾಯಿತು.

ಆ ಕಾಲವು ಆಂಗ್ಲರ ಸತ್ವಪರೀಕ್ಷೆಯ ಹಾಗು ದೈವ ಪರೀಕ್ಷೆಯ ಕಾಲವಾಗಿತ್ತು. ತಮ್ಮ ಉಚ್ಚಾಟನೆಗಾಗಿಯೇ ಸ್ವಾತಂತ್ರ್ಯದ ರಣಕುಂಡವು ಪ್ರಜ್ವಲಿತವಾಗಿರುವದೆಂಬದು ಅವರಿಗೆ ಪೂರ್ಣವಾಗಿ ಗೊತ್ತಿತ್ತು. ಇದರಲ್ಲಿ ಅಪಜಯವೊದಗಿದರೆ, ತಮ್ಮ ಪರಿಣಾಮವೇನಾಗುವದೆಂಬ ಮಾತು ಅವರ ದೃಷ್ಟಿಪಥದಲ್ಲಿ ಮೂರ್ತಿಮಂತಾಗಿ ನಿಂತುಕೊಂಡಿತ್ತು. ಅಂತೆಯೇ ಅವರು ಪ್ರತಿಯೊಂದು ಸಂಗ್ರಾಮದಲ್ಲಿ ಜೀವದ ಹಂಗುದೊರೆದು ಹೋರಾಡಿದರು. ಇದಕ್ಕೆ ವಿರುದ್ಧವಾಗಿ ಏತದ್ದೇಶೀಯ ಸೈನಿಕರ ಸ್ಥಿತಿಯಾಗಿತ್ತು. ಅವರೆಲ್ಲರೂ ಬಹುತರವಾಗಿ ಸ್ವದೇಶಾನುರಾಗದಿಂದಲೇ ಕಾದುತ್ತಿದ್ದರೆಂದು ಹೇಳಲಿಕ್ಕೆ ಬರುವಂತಿದ್ದಿಲ್ಲ. ಕೊಲೆ ಸುಲಿಗೆ ಮೊದಲಾದ ಕ್ರೂರ ಕೃತ್ಯ ಮಾಡುವದಕ್ಕೂ, ಸಂಕುಚಿತ ಸ್ವಾರ್ಥ ಸಾಧನೆಗಾಗಿಯೂ ಕೆಲವರು ಸಾಹಸ ಮಾಡತೊಡಗಿದರು. ಅವರು ಯುದ್ಧಧರ್ಮವನ್ನು ಯೋಗ್ಯ ರೀತಿಯಿಂದ ಪಾಲನೆ ಮಾಡಲಿಲ್ಲ. ಅವರಲ್ಲಿ ಐಕ್ಯಭಾವನೆಯಿದ್ದಿಲ್ಲ. ತಮ್ಮ ನಾಯಕನ ಆಜ್ಞೆಯಂತೆಯೇ ವರ್ತಿಸುವದಕ್ಕಾಗಿ ಅವರು ಬದ್ಧಕಂಕಣರಾಗಿರಲಿಲ್ಲ. ಬಹುತರವಾಗಿ ಅವರೆಲ್ಲರೂ ಸ್ವೇಚ್ಛಾಪ್ರವೃತ್ತಿಗಳು. ಪ್ರಸಂಗ ಬಂದಾಗ ಅವರು ದೇಶಬಾಂಧವರ ಮೇಲಾದರೂ ಖಡ್ಗವನ್ನೆತ್ತಲು ಹಿಂದೆ ಮುಂದೆ ನೋಡಲಿಲ್ಲ. ಆಂಗ್ಲಸ್ತ್ರೀಯರ ಹಾಗು ಬಾಲಕರ ಮೇಲೆ ಅವರು ನಿಷ್ಕಾರಣವಾಗಿ ಶಸ್ತ್ರವೆತ್ತುತ್ತಿದ್ದರು. ಆಗ ಶೀಖ ಮೊದಲಾದ ಎಷ್ಟೋ ಜನಾಂಗಗಳು ಆಂಗ್ಲರ ಕೈಯಲ್ಲಿದ್ದವು. ಎಷ್ಟೋ ರಾಜರೂ, ಸಂಸ್ಥಾನಿಕರೂ, ಮುಖಂಡ ವರ್ಗವೂ ಅವರನ್ನು ಬಿಟ್ಟಿರಲಿಲ್ಲ

ಕ್ರಾಂತಿಕಾರಕ ಜನರಲ್ಲಿ ಆಂಗ್ಲರ ಅತ್ಯಾಚಾರದಿಂದ ಬೆಂದು ಬಸವಳಿದ

ಅರಸರೂ, ಜಹಾಗೀರದಾರರೂ, ಪ್ರಜಾಜನರೂ, ಸೈನಿಕರೂ ಎಷ್ಟೋ ಜನರಿದ್ದರು. ಅವರ ಉದ್ದೇಶವು ಉದಾತ್ತವಾಗಿತ್ತು. ಸ್ವಗೃಹದಲ್ಲಿ ಚಲನ-ವಲನ ಮಾಡುವದಕ್ಕೆ ಬಂದ ಆಂಗ್ಲ ಜನರಿಂದ ಸ್ವಾತಂತ್ರ್ಯವನ್ನು ದೊರಕಿಸಬೇಕೆಂದು ಎಷ್ಟೋ ಜನರು ಟೊಂಕ ಕಟ್ಟಿದ್ದರು. ವೇಳೆಯು ಬಂದಿತ್ತು; ಕಾಲವು ಮಾತ್ರ ಬಂದಿರಲಿಲ್ಲ. ಸಂಘಟಿತ ಶಕ್ತಿಯು ಆ ಜನರಲ್ಲಿದ್ದರೆ ಭವಿಷ್ಯಕಾಲದ ಸ್ಥಿತಿಯು ಬೇರೆ ವಿಧವಾಗುತ್ತಿತ್ತು.

ಕುವರಸಿಂಹನು ತನ್ನ ಸೈನ್ಯವನ್ನು ವಿಭಾಗಿಸಿದ್ದು ಯೋಗ್ಯವಾಗಲಿಲ್ಲ. ಈ ಕೃತಿಯು ಆಂಗ್ಲರಿಗೆ ಅನುಕೂಲವಾಗಿಯೇ ಪರಿಣಮಿಸಿತು. ಆಯುರನು ತನ್ನ ಸೈನ್ಯಕ್ಕೆ ಅಡ್ಡ ಬಂದ ಸೈನಿಕರನ್ನು ನಾಶಗೊಳಿಸಿ ಕೋಟೆಯನ್ನು ಮುತ್ತಿದನು. ಅರ್ಧ ಸೈನ್ಯವು ಮೊದಲೇ ನಾಶವಾದದ್ದರಿಂದ ಕುವರಸಿಂಹ, ಅಜಯಸಿಂಹ ಮೊದಲಾದ ವೀರಾಗ್ರಣಿಗಳು ಎಷ್ಟು ಸಾಹಸದಿಂದ ಕಾದಿದರೂ ಜಯ ಸಂಪಾದನೆಯಾಗುವ ಲಕ್ಷಣವು ತೋರಲಿಲ್ಲ. ಅವರೀರ್ವರೂ ತಮ್ಮ ಸೈನಿಕರಿಗೆ ಪ್ರೋತ್ಸಾಹನೆ ಕೊಡತೊಡಗಿದರು. ಆಂಗ್ಲಸೈನ್ಯದ ಹೊಡತಕ್ಕೆ ಹಿಂದೂ ಸೈನ್ಯವು ಹೈರಾಣಾಯಿತು. ಅವರು ಕೋಟೆಯನ್ನು ಬಿಟ್ಟು ಪಲಾಯನ ಮಾಡದಿದ್ದರೆ, ಜೀವದ ಮೇಲೆ ಗಂಡಾಂತರವನ್ನು ತಂದುಕೊಂಡಂತಾಗುತ್ತಿತ್ತು; ಅದ್ದರಿಂದ ಅವರು ಕೋಟೆಯ ಹಿಂದಿನ ಬಾಗಿಲಿಂದ ಓಡತೊಡಗಿದರು. ಕುವರಸಿಂಹನೂ ಅಜಯಸಿಂಹನೂ ಸೈನ್ಯವನ್ನು ತಡೆಯುವದಕ್ಕೆ ಮಾಡಿದ ಪ್ರಯತ್ನಗಳೆಲ್ಲ ನಿಷ್ಫಲವಾದವು. ಕಡೆಗೆ ಅವರಾದರೂ ತಮ್ಮ ಪರಿವಾರದೊಡನೆ ಪ್ರಾಣಕ್ಕಿಂತಲೂ ಹೆಚ್ಚಿನದಾದ ಜನ್ಮಗ್ರಾಮವನ್ನು ಶತ್ರುಗಳ ವಶ ಮಾಡಿ ತೆರಳಬೇಕಾಯಿತು! ಆಗ ಕುವರಸಿಂಹ ಹಾಗು ಅಜಯಸಿಂಹರ ಮನಸ್ಸಿನ ಸ್ಥಿತಿಯು ಹೇಗಾಗಿರಬಹುದೆಂಬದನ್ನು ಈಗ ಯಾರು ಹೇಳಬೇಕು?

ಮೇಜರ ಸಾಹೇಬನು ಜಗದೀಶಪುರವನ್ನು ಸ್ವಾಧೀನ ಪಡಿಸಿಕೊಂಡನು. ಅವನ ಸೈನಿಕರು ಮನಬಂದಂತೆ ಸುಲಿಗೆ ಮಾಡತೊಡಗಿದರು. ತಲೆ ತಿರುಗಿದ ಆಂಗ್ಲಸೈನಿಕರು ಕೆಲವು ತಾಸುಗಳಲ್ಲಿ ಜಗದೀಶಪುರವನ್ನು ಉಧ್ವಸ್ತಮಾಡಿದರು.

ಅನಂತರದಲ್ಲಿ ಅವರು ಕೋಟೆಯನ್ನೂ ಅರಮನೆಯನ್ನೂ ನಾಶಗೊಳಸುವದಕ್ಕಾಗಿ ಪ್ರಾರಂಭಿಸಿದರು. ಅವರು ಗೋಡೆಗಳಲ್ಲಿ ಸುರಂಗ ಹಾಕಿದರು. ಕೋಟೆಯ ಹಾಗು ಅರಮನೆಯ ವಿಧ್ವಂಸಕ್ಕಾಗಿ ಹಾಕಿದ ಸುರಂಗಗಳನ್ನು ಒಮ್ಮೆಲೆ ಹೊತ್ತಿಸುವ ವ್ಯವಸ್ಥೆಯಾಗಿತ್ತು.

ಅಪಯಶದಿಂದ ಜರ್ಜರನಾದ ಕುವರಸಿಂಹನು ಜಗದೀಶಪುರದ ಬಳಿಯಲ್ಲಿರುವ ಅರಣ್ಯದಲ್ಲಿ ಅಡಗಿದ್ದನು. ಕೆಲವು ಜನ ಸೈನಿಕರಾದರೂ ಅವನ ಬಳಿ

ಯಲ್ಲಿಯೇ ಇದ್ದರು. ಈ ಅಪಜಯದಿಂದ ಅಭಿಮಾನಿಯಾದ ಅಜಯಸಿಂಹನ ಹೃದಯಕ್ಕೆ ಒಲವಾದ ಆಘಾತವಾಗಿತ್ತು. ಕುವರಸಿಂಹನು ಎಲ್ಲ ಸೈನಿಕರನ್ನೂ ಸ್ವಜನರನ್ನೂ ಮುಖ್ಯ ಮನುಷ್ಯರನ್ನೂ ಕೂಡಿಸಿ, ಅವರಿಗೆ ಎರಡು ಉಪದೇಶ ಪರವಾದ ಮಾತುಗಳನ್ನು ಹೇಳತೊಡಗಿದನು:

"ಭವಿಷ್ಯಕಾಲದಲ್ಲಿ ಭರತಭೂಮಿಗೆ ಅಭಿನವ ಸ್ವರೂಪವು ಪ್ರಾಪ್ತವಾಗ ಬೇಕೆಂದು ಇಡಿ ಭರತ ಭೂಮಿಯಲ್ಲಿ ಸ್ವಾತಂತ್ರ್ಯದ ರಣಕುಂಡವು ಪ್ರಜ್ವಲಿತ ವಾಗಿರುವದಷ್ಟೆ? ದೇಶದ ಪಾರತಂತ್ರ್ಯ ಬಂಧನಗಳನ್ನು ಕಡಿದೊಗೆಯಬೇಕೆಂಬ ಕುತೂಹಲದಿಂದ ನನ್ನಂತಹ ವೃದ್ಧನು ಸಹ ಸ್ವಾತಂತ್ರ್ಯದ ರಣಕುಂಡದಲ್ಲಿ ಆತ್ಮ ಬಲಿದಾನ ಮಾಡಲಿಕ್ಕೆ ಸಿದ್ಧನಾದೆನು. ನಾನು ಜಯ-ಪರಾಜಯಗಳಿಗೆ ವಿಶೇಷ ಮಹತ್ವ ಕೊಡುವದಿಲ್ಲ. ಎರಡು ಬಣಗಳು ಕಾದ ತೊಡಗಿದಾಗ ಯಾವದೊಂದು ಪಕ್ಷಕ್ಕೆ ಜಯವೂ, ಮತ್ತೊಂದು ಪಕ್ಷಕ್ಕೆ ಅಪಜಯವೂ ಒದಗತಕ್ಕವುಗಳೇ. ಜಯಾಪಜಯಗಳು ದೈವಾಧೀನವೆಂಬದನ್ನು ನಾನು ಅರಿತಿರುವೆನು. ನಮ್ಮ ಹಾಗು ಆಂಗ್ಲರ ಶಕ್ತಿಯ ಬಗ್ಗೆ ವಿಚಾರ ಮಾಡಿದರೆ ಅಜ-ಗಜ ನ್ಯಾಯವಿರುವದು. ಇಂತಹ ಪ್ರಸಂಗದಲ್ಲಿ ನಾವು ಅಪಜಯ ಹೊಂದುವದೆಂದರೆ ಎಂತಹ ಹಾಸ್ಯಾ ಸ್ಪದವು! ಇಡಿಯ ಭರತಖಂಡವು ಅವರ ಮೇಲೆ ಮುಗಿಬಿದ್ದರೂ ಅಲ್ಪ ಸಂಖ್ಯಾ ಕರಾದ ಅವರಿಗೆ ವಿಜಯವು ದೊರೆಯತೊಡಗಿದ್ದನ್ನು ನೋಡಿ ಏನೆನ್ನಬೇಕು? ಅವರ ಭಾಗ್ಯವು ಬಲವತ್ತರವಾದದ್ದೆಂದು ಅಂದುಕೊಂಡು ಸಮಾಧಾನಬಡದೆ ಗತ್ಯಂತರವಿಲ್ಲ. ಇತ್ತೀಚೆಗೆ ಸಮರಯಜ್ಞದಲ್ಲಿ ನಮಗೆ ಯಶವು ದೊರೆಯದಿರು ವದಕ್ಕೆ ಪ್ರಬಲವಾದ ಕಾರಣವಿರುವದು. ನಮ್ಮ ಸೈನಿಕರು ದೃಢನಿಶ್ಚಯವಿಲ್ಲ ದವರಾಗಿರುವರು. ಎಷ್ಟೋ ಜನರು ಮೈಗೊಟ್ಟು ಯುದ್ಧ ಮಾಡಲಾರದಂತಹ ರಿರುವರು. ಸಂಘಶಕ್ತಿಯು ಪ್ರಸ್ಥಾಪಿತವಾಗುವ ವರೆಗೆ ನಮಗೆ ಯಶವು ದೊರೆ ಯಲಾರದು. ಎಲ್ಲಿಯಾದರೂ ಹೋಗಿ ನಾಲ್ಕಾರು ಯುರೋಪಿಯರನ್ನು ವಧಿಸಿ ದರೆ ಇಲ್ಲವೆ ಅವರ ನಿವಾಸಗಳನ್ನು ಸುಟ್ಟರೆ ಪುರುಷಾರ್ಥ ಮಾಡಿದಂತಾಗಲಿಲ್ಲ. ಐಕ್ಯದಿಂದ ಎದುರಾಗಿ ಕಾದಿ ಜಯಸಂಪಾದನೆ ಮಾಡಿಕೊಂಡರೆ, ನಿಜವಾದ ಪುರುಷಾರ್ಥವೆನಿಸುವದು."

ಅಣ್ಣನಾಡಿದ ಮಾತುಗಳನ್ನು ಕೇಳಿ ಅಜಯನು:— "ನೀವು ನಿರುತ್ಸಾಹಿ ಗಳಾಗಬೇಡಿರಿ. ಇಷ್ಟು ದಿನಗಳ ವರೆಗೆ ಯುದ್ಧ ಮಾಡಿ ದಣಿದ ನೀವು ನಮಗೆ ಮಾರ್ಗದರ್ಶಕರಾಗುತ್ತ ವಿಶ್ರಾಂತಿ ಪಡೆಯಿರಿ. ನಾನೂ, ರಣದಲನಸಿಂಹನೂ, ಹರಿಕಿಸನಸಿಂಹನೂ ಸ್ವಾತಂತ್ರ್ಯದ ರಣಕುಂಡದಲ್ಲಿ ಹಾರುವದಕ್ಕೆ ಸುಸಜ್ಜಿತ ರಾಗಿಯೇ ಇರುವೆವು. ಸೈನ್ಯದ ಹಾಗು ಶಸ್ತ್ರಾಸ್ತ್ರಗಳ ಸಿದ್ಧತೆಯನ್ನು ಚನ್ನಾಗಿ

ಮಾಡಿಕೊಂಡು ಶತ್ರುಗಳ ಪಾರಿಪತ್ಯ ಮಾಡೋಣ. ಒಂದೆರಡು ಯುದ್ಧದಲ್ಲಿ ಅಪಜಯುವಾದದ್ದಕ್ಕೆ ತಾವು ನಿರುತ್ಸಾಹಿಗಳಾಗಬಾರದು.''

ಅಜಯುಸಿಂಹನ ಮಾತುಗಳನ್ನು ಕೇಳಿ ಕುವರಸಿಂಹನು ಸಂತೋಷಭರಿತನಾದನು. ಅವನ ಶೂರತನದ ವಿಷಯುವಾಗಿ ಕುವರಸಿಂಹನಿಗೆ ನಂಬಿಗೆಯಾಗಿತ್ತು. ಅವನು ವೀರೋಚಿತವಾದ ಕರ್ತವ್ಯಕರ್ಮವನ್ನು ಮಾಡುವದರಲ್ಲಿ ಎಷ್ಟು ಹಿಂಜರಿಯುವದಿಲ್ಲವೆಂದು ಮನಗಂಡಿದ್ದನು. ಗುಪ್ತರೀತಿಯಿಂದ ಸೈನ್ಯ ಸಿದ್ಧತೆ ಮಾಡಿ, ಶತ್ರುಗಳ ಮೇಲೆ ಬೀಳಬೇಕೆಂದು ಎಲ್ಲರೂ ನಿರ್ಧರಿಸಿಕೊಂಡರು.

ಆಂಗ್ಲಸೈನಿಕರು ಕೋಟೆ-ಅರಮನೆಗಳಗೋಡೆಗಳಲ್ಲಿಯೂ ಸುರಂಗವನ್ನು ತುಂಬಿ ಬತ್ತಿಯನ್ನು ಕೊಟ್ಟಿದ್ದರು. ಅವುಗಳಿಗೆ ಕೊಳ್ಳಿಯನ್ನು ಕೊಡಬೇಕೆಂದು ಸೇನಾಪತಿಯಾದ ಮೇಜರ ಆಯುರನು ಸೂಚಿಸಿದ ಕೂಡಲೆ ಸೈನಿಕರು ಆ ಎಲ್ಲ ಸುರಂಗಗಳಿಗೆ ಒಮ್ಮೆಲೆ ಕೊಳ್ಳಿಯಿಕ್ಕಿದರು. ಪರಕ್ಷಣದಲ್ಲಿ ಸಹಸ್ರಾವಧಿ ವಿದ್ಯುತ್ಪಾತವಾದಂತೆ ಭಯುಂಕರ ಗರ್ಜನೆಯಾಯಿತು! ಆ ಧ್ವನಿಯಿಂದ ಭೂಮಿಯು ಅದುರಿತು; ಸರ್ವರೂ ಬೆಟ್ಟಿ ಬಿದ್ದರು; ಇದೇನು ಧರಾ ಸ್ಫೋಟವೋ-ಏನೋ ಎಂದು ಭಯವಿಸ್ಮಯಚಕಿತರಾದರು! ಅಷ್ಟರಲ್ಲಿ ಒಬ್ಬ ಸೇವಕನು ಕುವರಸಿಂಹನ ಬಳಿಗೆ ಬಂದು:—

''ಧನಿಯರೇ, ಫಿರಂಗಿಗಳು ಕೋಟೆಯನ್ನೂ ಅರಮನೆಯನ್ನೂ ಸುರಂಗದ ಸಹಾಯದಿಂದ ವಿಧ್ವಂಸ ಮಾಡಿದರು. ಈಗ ಆದಂಥ ಗರ್ಜನೆಯು ಆ ಸುರಂಗದ್ದೇ! ಎಲ್ಲ ಕಟ್ಟಡಗಳೂ ಗೋಡೆಗಳೂ ನೆಲಸಮವಾಗಿ ಹೋದವು!''

ಈ ಮಾತುಗಳನ್ನು ಕೇಳಿ ಕುವರಸಿಂಹನ ಹೃದಯಕ್ಕೆ ವಜ್ರಾಘಾತವಾದಂತಾಯಿತು. ''ಪೂರ್ವಜರ ಜಹಾಗೀರಿಯು ಹೋದ ಮೇಲೆ ಕೋಟೆಯೂ ಅರಮನೆಯೂ ಏಕೆ ಉಳಿಯಬೇಕು!'' ಎಂದು ಅವನು ದುಃಖೋದ್ಗಾರ ತೆಗೆದನು.

---

## ಪಾಷಾಣ ಹೃದಯ!

ಆರಾ ಪಟ್ಟಣವು ಆಂಗ್ಲರ ವಶವಾದ ಕೂಡಲೆ ಅಲ್ಲಿಯ ಸೈನಿಕರಿಗೆ ಅತ್ಯಾಚಾರವನ್ನು ನಡೆಯಿಸುವದಕ್ಕೆ ಮುಕ್ತದ್ವಾರವಾಯಿತು. ಅಪ್ಪದ ದೊರೆತರೆ ಅವರು ಸ್ತ್ರೀಯರ ಮೇಲೆ ಸಹ ಅತ್ಯಾಚಾರವನ್ನು ಮಾಡುತ್ತಿದ್ದರು. ರಾಮಶರಣನು ಕಾರಾಗೃಹದಲ್ಲಿ ಸಿಲುಕಿದ್ದರಿಂದ, ಅವನ ಮನೆಯು ಅನಾಯಕವಾದಂತಾಗಿತ್ತು. ಅಲ್ಲಿಯ ಸೇವಕ-ಸೇವಕಿಯರು ಗೃಹತ್ಯಾಗ ಮಾಡಿ ಹೋಗಿಬಿಟ್ಟಿದ್ದರು. ಅವನ ಮನೆಯಲ್ಲಿ ಅವನ ಪತ್ನಿಯಾದ ಪ್ಯಾರಿಯೊಬ್ಬಳೇ ನಿರಾಶ್ರಿತ

ಳಾಗಿ ವಾಸವಾಗಿದ್ದಳು. ಆಂಗ್ಲ ಸೈನಿಕರು ಈ ಸಂಧಿಯಲ್ಲಿ ವಿನೋದ ಮಾಡ ಬೇಕೆಂದು ಅಲ್ಲಿಗೆ ಬಂದರು. ಆಗ ಮನೆಯ ಬಾಗಿಲವು ಮುಚ್ಚಲ್ಪಟ್ಟಿತ್ತು. ಒಬ್ಬ ಸೈನಿಕನು ಅದನ್ನು ಮುರಿದನು. ಕೂಡಲೆ ಈರ್ವರು ಒಳಗೆ ಹೋಗಿ ಎಲ್ಲ ಕಡೆಯಲ್ಲಿಯೂ ಶೋಧಿಸತೊಡಗಿದರು. ಅವರಿಗೆ ತಮ್ಮ ಇಚ್ಛಿತ ವಸ್ತುವು ದೊರೆಯದ್ದರಿಂದ ಉದಾಸೀನರಾದರು. ಬಳಿಕ ಒಬ್ಬನು ಆ ಮನೆಯ ಒಂದು ಬದಿಯಲ್ಲಿದ್ದ ಕೋಣೆಯನ್ನು ಹೊಕ್ಕನು. ಅಲ್ಲಿ ಒಬ್ಬ ಯುವತಿಯು ತನ್ನ ಎರಡೂ ಕೈಗಳಿಂದ ಕಣ್ಣು ಮುಚ್ಚಿಕೊಂಡು 'ಥರಥರ'ನೆ ನಡುಗುತ್ತ ಕುಳಿತಿದ್ದಳು. ಕೋಣೆಯೊಳಕ್ಕೆ ಹೋದ ಸೈನಿಕನು ಆ ನವಯುವತಿಯನ್ನು ನೋಡಿ: "ವಾ! ಬಹುತ ಅಚ್ಛಾ ಹೈ!" ಎಂದು ಉದ್ಗಾರ ತೆಗೆದನು. ಅಷ್ಟರಲ್ಲಿ ಮತ್ತೊಬ್ಬನು ಒಳಗೆ ಹೋಗಿ:—"ಏನು ನೋಡುವೆಯೊ, ಇವಳನ್ನು ಹೊರಗೆ ಎಳೆ!" ಎಂದು ನುಡಿದು, ಅವಳ ಮೈಮೇಲೆ ಸಾಗಿದನು. ಆಗ ಆ ಯುವತಿಯು ಭಯ ಕಂಪಿತಸ್ವರದಿಂದ:—

"ಧರ್ಮವಂತರೆ! ಈ ಅಭಾಗಿನಿಯ ಮೇಲೆ ಕೈ ನೀಡಬೇಡಿರಿ. ಕುಲಸ್ತ್ರೀಯರ ಪಾವಿತ್ರ್ಯ ಭಂಗಗೊಳಿಸುವದು ಎಂದೂ ತಾರಕವೆನಿಸಲಾರದು. ನನ್ನ ಮನೆಯೊಳಗಿನ ಬೇಕಾದ ವಸ್ತು-ಒಡವೆಗಳನ್ನು ತೆಗೆದುಕೊಂಡು ಹೋಗಿರಿ; ಆದರೆ ನನ್ನನ್ನು ಮಾತ್ರ ಧರ್ಮಸೆರೆ ಬಿಡಬೇಕೆಂದು ಸೆರಗೊಡ್ಡಿ ಪ್ರಾರ್ಥಿಸುವೆನು."

ಪ್ಯಾರಿಯ ದೀನಸ್ವರದ ಕಡೆಗೆ ಪಾಷಾಣಸದೃಶರಾದ ಆ ಸೈನಿಕರ ಲಕ್ಷ್ಯವೆಲ್ಲಿ? ಅವರು ಅವಳ ಅಂಗಸ್ಪರ್ಶ ಸುಖವನ್ನು ಅನುಭವಿಸುವದಕ್ಕಾಗಿ ಆತುರಗೊಂಡಿದ್ದರು.

"ಸಾಧ್ವಿಯರಂತೆ ಆಡಂಬರವನ್ನು ಮಾಡುವ ನಿನ್ನ ಬಣ್ಣವನ್ನು ನಾವು ಬಲ್ಲೆವು. ನೀನು ಕುಲಸ್ತ್ರೀಯಿರುವೆಯೆಂಬದನ್ನು ನಾವರಿಯೆವು. ಸ್ತ್ರೀಯರ ಕುಲದವಳೆಂಬದು ಮಾತ್ರ ನಿದರ್ಶನಕ್ಕೆ ಬಂದುದರಿಂದ ಇಷ್ಟು ಸಾಹಸ ಮಾಡಿದೆವು. ಒಳ್ಳೆಯ ಮಾತಿನಿಂದ ಅನುಕೂಲಳಾಗುವೆಯೊ, ಶಕ್ತಿಯನ್ನು ಉಪಯೋಗಿಸಬೇಕೊ?" ಎಂದು ನುಡಿದು, ಒಬ್ಬ ಸೈನಿಕನು ಅವಳ ಕೈಯನ್ನು ಹಿಡಿಯ ಹೋದನು. ಕೂಡಲೆ ಹಿಂದಿನಿಂದ ಒಬ್ಬ ಫಕೀರನು ಅವರೀರ್ವರನ್ನೂ ಹಿಡಿದು ಹೊರಗೆ ಎಳೆತಂದು:—

"ನೀಚರಿರಾ! ಪತಿವ್ರತೆಯರ ಮೇಲೆ ಬಲಾತ್ಕಾರ ನಡೆಸಿಸುವಿರಾ?" ಎಂದು ಗರ್ಜಿಸಿ, ಅವರೀರ್ವರ ಕುತ್ತಿಗೆಯನ್ನೂ ಹಿಡಿದು ಹೊರದೂಡಿದನು. ಆ ಫಕೀರನ ಈ ಅದ್ಭುತ ಶಕ್ತಿಯನ್ನು ನೋಡಿ ಆ ಸೈನಿಕರು ಬೆರಗಾದರು. ಎರಡನೆಯ ಕ್ಷಣದಲ್ಲಿ ಅವರು ಆ ಫಕೀರನ ವಿಷಯಕ್ಕೆ ಸಂತಾಪಗೊಂಡರು. ಅವ

ರೀವರ್ತರು ಆ ಫಕೀರನ ಸೇಡು ತೀರಿಸಿಕೊಳ್ಳಬೇಕೆಂದು ಅವನ ಮೈಮೇಲೆ ಏರಿ ಹೋದರು. ಅಷ್ಟರಲ್ಲಿ ಶೀಖಸೈನಿಕರು ಅವರ ಗದ್ದಲವನ್ನು ಕೇಳಿ ಅಲ್ಲಿಗೆ ಬಂದರು. ಆಗ ಆ ಫಕೀರನು ಅವರನ್ನು ಕುರಿತು:—

"ಇವರು ಒಬ್ಬ ಅಬಲೆಯ ಮಾನಭಂಗ ಮಾಡಲುದ್ಯುಕ್ತರಾಗಿದ್ದರು. ವೇಳೆಗೆ ಸರಿಯಾಗಿ ನಾನು ಇಲ್ಲಿಗೆ ಬರದಿದ್ದರೆ, ಇಷ್ಟು ಹೊತ್ತಿಗೆ ಆ ಸಾಧ್ವಿಯ ಶೀಲವು ಸೂರೆ ಮಾಡಲ್ಪಡುತ್ತಿತ್ತು. ಈ ಉನ್ಮಾದಮರನ್ನು ತೆಗೆದುಕೊಂಡು ಹೋಗಿ ನಿಮ್ಮ ಮಂಸ್ಥ ಅಧಿಕಾರಿಗಳ ಮುಂದೆ ನಿಲ್ಲಿಸಿರಿ."

ಶೀಖ ಜನರು ಸ್ತ್ರೀಯರ ಮೇಲೆ ಎಂದೂ ಕೈಮಾಡುತ್ತಿದ್ದಿಲ್ಲ. ಅವರಿಗೆ ಆಂಗ್ಲ ಸೈನಿಕರ ಈ ವರ್ತನವು ಅಸಹ್ಯವೆನಿಸಿತು. ಪ್ರಸಂಗಾವಧಾನದಿಂದ ಆ ಸಾಧ್ವಿಯ ಮಾನರಕ್ಷಣೆ ಮಾಡಿದ ಆ ಫಕೀರನಿಗೆ ಅವರು ವಿನಯದಿಂದ ಮುಜುರೆ ಮಾಡಿ, ಆಂಗ್ಲ ಸೈನಿಕರನ್ನು ತಮ್ಮ ಸಂಗಡ ತೆಗೆದುಕೊಂಡು ಹೋದರು. ಅವರು ಹೋದ ಮೇಲೆ ಆ ಫಕೀರನು ಪ್ಯಾರಿಯ ಬಳಿಗೆ ಬಂದು, ವಿನಯದಿಂದ:-

"ಅಮ್ಮಾ, ನೀವು ಬೇಗನೆ ಈ ಸ್ಥಳವನ್ನು ಬಿಡಿರಿ. ಅಸಹಾಯ್ಯಸ್ಥಿತಿಯವರಾದ ನೀವು ಇಲ್ಲಿರುವದು ಘಾತುಕವಾಗಿರುವದು. ನೀವು ನನ್ನ ಸಂಗಡ ಬರಲೊಪ್ಪಿದರೆ, ನಿಮ್ಮನ್ನು ಸುರಕ್ಷಿತವಾದ ಸ್ಥಳಕ್ಕೆ ಕಳುಹಿಸುವೆನು."

ರಾಮಶರಣನ ಪತ್ನಿಯಾದ ಪ್ಯಾರಿಯು ಆ ಫಕೀರನನ್ನು ಚನ್ನಾಗಿ ಗುರತಿಸಿದಳು. ಅವಳು ಆ ಫಕೀರನ ಚರಣಗಳಿಗೆ ನಮಿಸಿ:—

"ಘುಲಶಾಹರೆ, ತಾವು ಈ ವೇಳೆಯಲ್ಲಿ ಬಾರದಿದ್ದರೆ ನನ್ನ ಪರಿಣಾಮವು ಒಳಿತಾಗುತ್ತಿದ್ದಿಲ್ಲ ನನ್ನ ಮೇಲೆ ತಮ್ಮ ಉಪಕಾರವು ಬಹಳವಾಯಿತು."

ಪ್ಯಾರಿಯನ್ನು ಗಂಡಾಂತರದಿಂದ ದಾಟಿಸಿದ ಫಕೀರನು ಘುಲಶಾಹನಾಗಿದ್ದನು. ಅವನು ಪ್ಯಾರಿಯ ಮಾತುಗಳನ್ನು ಕೇಳಿ ನಿರಭಿಮಾನದಿಂದ:—

"ದೇವಿ, ಲೋಕಸೇವೆಯೇ ನನ್ನ ಮುಖ್ಯ ಕರ್ತವ್ಯವಾಗಿರುವದು. ನನ್ನ ಕೆಲಸವನ್ನು ನಾನು ಮಾಡಿದೆನು. ಇದರಲ್ಲಿ ಉಪಕಾರವೇತರದು? ' ಎಂದು ಘುಲಶಾಹನು ನುಡಿದು, ಅವಳನ್ನು ಸಂಗಡ ಕರೆದುಕೊಂಡು ಪಟ್ಟಣದಿಂದ ಹೊರಬಿದ್ದನು. ಕೆಲವು ಹೊತ್ತಿನ ವರೆಗೆ ಮಾರ್ಗಕ್ರಮಣ ಮಾಡಿದ ಬಳಿಕ ಒಂದು ದೇವಾಲಯವು ಅವರ ದೃಷ್ಟಿಗೆ ಬಿತ್ತು. ಆಗ ಘುಲಶಾಹನು ಅವಳನ್ನು ಕುರಿತು:-

"ತಾಯಿ, ನೀವು ಈ ದೇವಸ್ಥಾನದಲ್ಲಿ ಕೆಲವು ದಿನಗಳ ವರೆಗೆ ಇರಬೇಕು ಕಂಡಿರಾ; ಈಗ ಎಲ್ಲಿ ನೋಡಿದಲ್ಲಿ ಅವಿಂಧರ ಉಪಟಳವು ಹೆಚ್ಚಾಗಿರುವದು. ಸುಸಮಯವು ಒದಗುವ ವರೆಗೆ ಇಲ್ಲಿಯೇ ಕಾಲಹರಣ ಮಾಡಿರಿ; ಈ ದೇವಸ್ಥಾನದ ಅರ್ಚಕನು ಪರಮ ಧಾರ್ಮಿಕನಿರುವನು. ಅವನು ನಿಮಗೆ ಯೋಗ್ಯ

ರೀತಿಯಿಂದ ಸಹಾಯ ಮಾಡುವನು. ನೀವು ನಿರಾತಂಕವಾಗಿ ಇಲ್ಲಿಯೇ ಕೆಲವು ದಿವಸಗಳ ವರೆಗೆ ಇದ್ದು ಬಿಡಿರಿ. ಮುಂದೆ ಅನುಕೂಲ ಕಾಲವು ಪ್ರಾಪ್ತವಾಯಿತೆಂದರೆ ಮನಸ್ಸಿಂದ ಕಡೆಗೆ ಹೋಗಿರಿ.'

ಘುಲಶಾಹನು ಹೀಗೆ ನುಡಿದು ಅಲ್ಲಿಂದ ಹೊರಡಲುದ್ಯುಕ್ತನಾದನು. ಆಗ ಪ್ಯಾರಿಯು ಅವನನ್ನು ಕುರಿತು:—''ಮಹಾಶಯರೆ, ನನ್ನ ಸೌಭಾಗ್ಯದೇವತೆಗಳು ಕಾರಾಗೃಹದಲ್ಲಿದ್ದು, ಅವರನ್ನು ಬಿಡುಗಡೆ ಮಾಡಿಸಿದರೆ ನನಗೆ ಮಾಂಗಲ್ಯ ದಾನ ಮಾಡಿದ ಶ್ರೇಯವು ತಮಗೆ ಲಭಿಸುವದು.' ಎಂದು ನುಡಿದು, ಅವಳು ಘುಲಶಾಹನ ಪಾದಗಳನ್ನು ಹಿಡಿದಳು. ಅವನು ಪ್ಯಾರಿಯನ್ನು ಹಿಡಿದೆತ್ತಿ:—''ಆ ನೀಚನಿಗೆ ಉಪಕಾರ ಮಾಡುವದಕ್ಕೆ ನನ್ನ ಮನಸ್ಸು ಒಪ್ಪಲೊಲ್ಲದು. ದುಷ್ಟ ಜನರು ತಮ್ಮ ಕರ್ಮಕ್ಕೆ ತಕ್ಕ ಫಲವನ್ನು ಅನುಭವಿಸುವರು. ಅಂಥವರಿಗೆ ಉಪಕಾರ ಮಾಡಹೋಗುವದರಲ್ಲಿ ಏನೂ ಸ್ವಾರಸ್ಯವಿಲ್ಲ. ಆ ಕುಲಾಂಗಾರನು ನಿನ್ನಲ್ಲಿ ಪ್ರೇಮವುಳ್ಳವನಾಗಿರುವದೂ ಅಷ್ಟರಲ್ಲಿಯೇ ಇರುವದು. ಹೀಗಿದ್ದು, ನೀನು ಅವನ ಮುಕ್ತತೆಗಾಗಿ ಹವಣಿಸುವ ಕಾರಣವೇನು?'

''ಮಹಾತ್ಮರೇ; ಅವರು ಹೇಗಿದ್ದರೂ ನನ್ನ ಕುಂಕುಮದೊಡೆಯರು. ಸ್ತ್ರೀಯರಿಗೆ ಪತಿಗಳ ಹೊರತು ಅನ್ಯ ಗತಿಯೇನಿರುವದು? ದಯಮಾಡಿ ನನ್ನ ಕಡೆಗೆ ದೃಷ್ಟಿಯನ್ನಿಟ್ಟಾದರೂ ಅವರ ಬಂಧವಿಮೋಚನೆಗೊಳಿಸಿರಿ.''

''ಅಮ್ಮಾ, ಆಂಗ್ಲರ ಕಾರಾಗೃಹದಲ್ಲಿದ್ದ ಅವನ ಮುಕ್ತತೆಯನ್ನು ಮಾಡುವದು ಹೇಗೆ ಸಾಧ್ಯವಾಗುವದು?'

''ನೀವು ಮನಸ್ಸಿನ ಮೇಲೆ ತೆಗೆದುಕೊಂಡರೆ ಅಸಾಧ್ಯವಾದದ್ದು ಯಾವದೂ ಇರುವದಿಲ್ಲ. ನಿಮ್ಮ ಪ್ರಭಾವವನ್ನು ನಾನು ಬಲ್ಲವಳಾಗಿರುವೆನು. ಮಹಾನುಭಾವರೆ, ನೀವು ನನ್ನನ್ನು ದುಃಖಿಸದೆ ನನ್ನ ನಾಥರನ್ನು ಬಿಡಿಸಿ ಈ ಅಬಲೆಯನ್ನು ಸುಖಿಯನ್ನಾಗಿ ಮಾಡಬೇಕೆಂದು ಸೆರಗೊಡ್ಡಿ ಬೇಡಿಕೊಳ್ಳುವೆನು.''

ಪ್ಯಾರಿಯ ಮಾತಿಗೆ ಒಪ್ಪಿಕೊಂಡು ಘುಲಶಾಹನು ಅಲ್ಲಿಂದ ಹೊರಟು ಹೋದನು. ಮುಂದೆ ಸ್ವಲ್ಪ ಹೊತ್ತಿನ ಮೇಲೆ ಒಬ್ಬ ಮನುಷ್ಯನು ರಾಮಶರಣನನ್ನು ಕರೆದುಕೊಂಡು ಬಂದು ಪ್ಯಾರಿಯ ಬಳಿಯಲ್ಲಿ ಬಿಟ್ಟು ಹೋದನು. ಘುಲಶಾಹನ ಈ ಕರ್ತುಮ ಕರ್ತುಮನ್ಯಥಾ ಕರ್ತುಂ ಶಕ್ತಿಯನ್ನು ನೋಡಿ ಅವಳಿಗೆ ಬಹಳೇ ಸೋಜಿಗವೆನಿಸಿತು. ಪತಿಯ ಆಗಮನದಿಂದ ಆ ಸಾಧ್ವಿಯು ಆನಂದಗಿರಿಯ ಮೇಲೇರಿ ಕುಳಿತಳು. ರಾಮಶರಣನು ಪತ್ನಿಯ ಬಳಿಗೆ ಹೋಗಿ:—

''ಪ್ಯಾರಿ, ನೀನು ಇಲ್ಲಿಗೆ ಹೇಗೆ ಬಂದೆ?'' ಎಂದು ವಾತ್ಸಲ್ಯದಿಂದ ನುಡಿದನು, ಅವಳ ಕರವನ್ನು ಹಿಡಿದು ಬಳಿಯಲ್ಲಿ ಕುಳ್ಳಿರಿಸಿಕೊಂಡು, ಗಲ್ಲವನ್ನು ಹಿಡಿದನು.

ಪ್ಯಾರಿಯು ಅತ್ಯಂತ ಸುಂದರ ಯುವತಿಯು. ಉಶ್ಶೃಂಖಲವೃತ್ತಿಯುವನಾದ ರಾಮಶರಣನಿಗೆ ತನ್ನ ಪತ್ನಿಯ ಮುಖಾವಲೋಕನವನ್ನು ಮಾಡುವದಕ್ಕೆ ಸಹ ಅನುವು ದೊರೆತಿದ್ದಿಲ್ಲವೆನ್ನಬಹುದು! ಯಾವಾಗಲೂ ಅನ್ಯ ಯುವತಿಯರ ಸಂಗದಲ್ಲಿಯೇ ವಿನೋದಗೈಯುತ್ತಿರುವ ವಿಲಾಸಿಗಳಿಗೆ ಸ್ವಸ್ತ್ರೀಯಳ ನೆನಪು ಹೇಗಾಗಬೇಕು? ಪತಿಯು ತನ್ನ ವಿಷಯಕ್ಕೆ ಈ ರೀತಿಯಾಗಿ ನಿರ್ವ್ಯಾಜ ಪ್ರೇಮವನ್ನು ತೋರಿಸಿದ್ದರಿಂದ, ಅವಳ ಆನಂದವು ಹೃದಯಾಕಾಶವನ್ನು ತುಂಬಿ ಹೊರಸೂಸತೊಡಗಿತು. ಅವಳು ಪ್ರೇಮಲಾಲಸಾಪೂರ್ಣ ಅಂತಃಕರಣದಿಂದ ಅವನ ಮುಖವನ್ನು ನಿರೀಕ್ಷಿಸತೊಡಗಿದಳು. ಅವಳ ನೇತ್ರಗಳು ಆನಂದಾಶ್ರುಗಳಿಂದ ತುಂಬಿಕೊಂಡಿದ್ದವು. ಹರ್ಷಾತಿರೇಕದಿಂದ ಕಂಠವು ಬಿಗಿದಿತ್ತು. ಪತಿ ಪ್ರೇಮದಿಂದ ಪತ್ನಿಗೆ ಸ್ವರ್ಗೀಯವಾದ ಆನಂದವುಂಟಾಗುವದು ಸ್ವಾಭಾವಿಕವಲ್ಲವೆ?

ಅವಳು ತಾನು ಇಲ್ಲಿಗೆ ಹೇಗೆ ಬಂದೆನೆಂಬ ಸಂಗತಿಯನ್ನು ವಿಶದೀಕರಿಸಿ, ಘುಲಶಾಹನ ಉಪಕಾರವನ್ನು ಮನಃಪೂರ್ವಕವಾಗಿ ಸ್ಮರಿಸತೊಡಗಿದಳು. ಘುಲಶಾಹನಿಂದ ತನ್ನ ಪತ್ನಿಯು ಮುಕ್ತಳಾದಳೆಂಬ ಸಂಗತಿಯು ಗೊತ್ತಾದ ಕೂಡಲೆ ರಾಮಶರಣನು ಕ್ರೋಧಾಯಮಾನನಾದನು. ಆಗ ಅವನು ಪ್ಯಾರಿಯನ್ನು ದೂರ ದಬ್ಬಿ, ಒಮ್ಮೆ ಪಾದದಿಂದ ತಾಡನೆ ಮಾಡಿ:—

"ಗೈಯಾಳಿ! ಫಿರಂಗಿಗಳಿಗೆ ಅನುಕೂಲೆಯಾಗಿ ನಡೆದಿದ್ದರೆ ನಿಮ್ಮಪ್ಪನ ಮನೆಯು ಗಂಟು ಹೋಗುತ್ತಿತ್ತೇನು? ಆ ಮೂರ್ಖ ಘುಲಶಾಹನಿಂದ ಬಿಡುಗಡೆ ಮಾಡಿಸಿಕೊಳ್ಳುವದಕ್ಕಿಂತ ವಿಲಾಸಿಗಳಾದ ಫಿರಂಗಿಗಳ ಸಹವಾಸದಲ್ಲಿರುವದು ಮೇಲೆಂದು ನಿನಗೆ ಏಕೆ ತಿಳಿಯಲಿಲ್ಲ? ಆ ನೀಚ ಫಕೀರನು ನನ್ನ ಸರ್ವನಾಶ ಮಾಡಿರುವನು. ನೀನು ಈ ರೀತಿಯಿಂದ ಇಲ್ಲಿಗೆ ಬರುವದಕ್ಕಿಂತ ಆಂಗ್ಲ ಸೈನಿಕರ ಬಳಿಯಲ್ಲಿದ್ದರೆ ನನಗೆ ಅತ್ಯಾನಂದವಾಗುತ್ತಿತ್ತು!" ಎಂದು ಭ್ರಷ್ಟ ಹೃದಯದವನಾದ ರಾಮಶರಣನು ನುಡಿದು, ಸಂತಾಪದಿಂದ ಉರಿದೇಳತೊಡಗಿದನು. ಅವನ ಆ ಅವಸ್ಥೆಯನ್ನು ನೋಡಿ ಪ್ಯಾರಿಯು ವಿಸ್ಮಯಗೊಂಡಳು. ಮರುಕ್ಷಣದಲ್ಲಿ ಅವಳ ಕೋಮಲ ಹೃದಯವು ದುಃಖದಿಂದ ಕಮರತೊಡಗಿತು. ಆಗ ಅವಳು ನಮ್ರತೆಯಿಂದ:-"ಸಂಕಟ ಸಮಯದಲ್ಲಿ ದೇವರಂತೆ ಬಂದು ಮರ್ಯಾದೆಯನ್ನು ಕಾಯ್ದ ಮಹಾತ್ಮನನ್ನು ಹೀಗೆ ತಿರಸ್ಕರಿಸಬಹುದೆ? ಘುಲಶಾಹರಿಗಿಂತಲೂ ನಿಮಗೆ ಆ ಫಿರಂಗಿಗಳು ಬೇಕಾದವರಾದರೇನು? ಪತ್ನಿಯ ಮಾನರಕ್ಷಣೆ ಮಾಡಿದವರಿಗಿಂತ, ಅವಳ ಶೀಲವನ್ನು ಸೂರೆಗೈದವರೇ ಶ್ರೇಷ್ಠರೆಂದು ನಿಮ್ಮ ಅಭಿಪ್ರಾಯವಿದ್ದಂತಾಯಿತು."

"ಹೌದು! ನಾನು ಹಾಗೆಯೇ ಅನ್ನುವವನು. ನನ್ನ ಸೌಖ್ಯವನ್ನು ಸೂರೆ

ಮಾಡಿದವನ ಕೈಯೊಳಗಿನ ಅಮೃತವನ್ನು ಸಹ ನೀನು ಸ್ವೀಕರಿಸಬಾರದಾಗಿತ್ತು.''

"ಅವರು ನಿಮ್ಮ ಹಾನಿಯನ್ನೇನು ಮಾಡಿರುವರು? ಒಂದು ವೇಳೆ ಹಾಗಾಗಿದ್ದರೆ ಆ ಸಂಗತಿಯು ನನಗೆ ಹೇಗೆ ಗೊತ್ತಾಗಬೇಕು? ಆ ಮಾತು ಹಾಗಿರಲಿ; ಒಮ್ಮೆ ಹಾನಿಮಾಡುವವರು ಮತ್ತೊಮ್ಮೆ ಉಪಕಾರ ಮಾಡಬಂದರೆ ಅವರನ್ನು ನಾವೇಕೆ ತಿರಸ್ಕರಿಸಬೇಕು? ನಿಮ್ಮನ್ನು ಕಾರಾಗೃಹದಿಂದ ಬಿಡಿಸಿದವರು ಯಾರೆಂದು ತಿಳಿದಿರುವಿರಿ? ಫುಲಶಾಹನ ಅನುಗ್ರಹದಿಂದಲೆ ನೀವು ಬಿಡುಗಡೆ ಹೊಂದಿರುವಿರಿ; ನೀವು ಆ ಮಹಾಶಯರನ್ನು ಈ ರೀತಿಯಾಗಿ ತಿರಸ್ಕರಿಸುತ್ತಿದ್ದರೆ ಮತ್ತೆ ಹೋಗಿ ಕಾರಾಗೃಹದಲ್ಲಿ ಸೇರಬೇಕಾಗುವದು. ವೈರಿಯ ಕೈಯಿಂದ ಉಪಕಾರ ಮಾಡಿಸಿಕೊಳ್ಳುವದಕ್ಕೆ ನೀವು ಸಿದ್ಧರಿರದಿದ್ದರೆ ಈಗಲೆ ಹೋಗಿ ಸೆರೆಮನೆ ಸೇರಿರಿ.''

ಪ್ಯಾರಿಯು ತಿರಸ್ಕಾರದಿಂದಲೂ ಕ್ರೋಧದಿಂದಲೂ ಹೀಗೆ ನುಡಿದ ಕೂಡಲೆ ರಾಮಶರಣನ ಸಂತಾಪವು ದ್ವಿಗುಣಿತವಾಯಿತು. ತನ್ನನ್ನಾದರೂ ಫುಲಶಾಹನೇ ಬಿಡುಗಡೆಮಾಡಿರುವನೆಂಬ ಮಾತು ಅವನಿಗೆ ರುಚಿಸಲಿಲ್ಲ. ಆಗ ಅವನು ಕ್ರೋಧೋನ್ಮತ್ತನಾಗಿ:—

"ನಿನ್ನ ವಿನಂತಿಯ ಮೇರೆಗೆ ಫುಲಶಾಹನು ನನ್ನ ಬಂಧವಿಮೋಚನೆ ಮಾಡಿರುವದಾಗಿ ಕಾಣುವದು. ಅಂತೂ ಫಕೀರನು ನಿನ್ನ ಕೈಯೊಳಗಿನ ಸೂತ್ರದ ಗೊಂಬೆಯಾಗಿರುವನೆಂದೆಂತಾಯಿತು. ಫಿರಂಗಿಗಳ ಕೈಯಿಂದ ಬಿಡಿಸಿಕೊಂಡು ನಿನ್ನನ್ನು ತನ್ನ ಆಶ್ರಯಕ್ಕಾಗಿ ಇಲ್ಲಿ ಬಿಟ್ಟಿರುವನೆಂದು ತೋರುವದು. ಫಕೀರನ ಸಹವಾಸದಲ್ಲಿರುವದಕ್ಕಿಂತ, ಆ ವಿಲಾಸಿಗಳಾದ ಫಿರಂಗಿಗಳ ಮನಸ್ಸನ್ನು ಸಂತುಷ್ಟಗೊಳಿಸಿದ್ದರೆ ನಿನಗೆ ಹೆಚ್ಚಿನ ಸೌಖ್ಯವಾಗುತ್ತಿದ್ದಿಲ್ಲವೆ? ಹಾಗಾಗಿದ್ದರೆ ನನಗೆ ಇಷ್ಟು ದುಃಖವಾಗುತ್ತಿದ್ದಿಲ್ಲ.''

"ಆ ಮಹಾತ್ಮನ ಬಗ್ಗೆ ಅನುದಾರತನದ ಮಾತನಾಡುವಿರಾದರೆ ನಿಶ್ಚಯವಾಗಿಯೂ ನಿಮ್ಮ ಘಾತವಾಗುವದು ನಿಮ್ಮಲ್ಲಿ ಮನುಷ್ಯತ್ವವು ತಿಲಾಂಶವಾದರೂ ಇದ್ದಂತೆ ಕಾಣುವದಿಲ್ಲ. ಸಾಧ್ವಿಯರಾದ ಸತಿಯರ ಮೇಲೆ ಮಿಥ್ಯಾರೋಪಹೊರಿಸುವದು ಒಳಿತಲ್ಲ.''

"ನಿನ್ನಂತಹರು ಸಾಧ್ವಿಯರಂತೆ ಆಡಂಬರವನ್ನು ತೋರಿಸುತ್ತ, ಪತಿಗಳನ್ನು ಮೋಸಗೊಳಿಸುವದಕ್ಕೆ ತತ್ಪರರಾಗಿರುತ್ತಾರೆ. ನೂರಾರು ಜನ ಸಾಧ್ವಿಯರನ್ನು ನಾನು ಕಾಲಬುಡದಲ್ಲಿ ಹಾಕಿರುವೆನು. ನನ್ನೆದುರಿನಲ್ಲಿ ನೀನು ಸಾಧ್ವೀತ್ವದ ಸಡಗರವನ್ನು ತೋರಿಸಬೇಡ.''

ಪ್ಯಾರಿಯು ದೀನಮುದ್ರೆಯುಳ್ಳವಳಾದಳು. ಪತಿಯು ಎಂತಹ ದುರ್ಮಾರ್ಗಿಯಾಯಿದ್ದರೂ, ಸತಿಯು ಅವನ ನಿಂದೆ ಮಾಡುವದು ಯೋಗ್ಯವಲ್ಲವೆಂದು ತಿಳಿದು

ಸವಿಮಾತಿನಿಂದ ಅವನ ಮನಸ್ಸನ್ನು ಒಲಿಸಿಕೊಳ್ಳಬೇಕೆಂದು ಯೋಚಿಸಿದಳು.

"ನಾಥರೇ, ನಿಮ್ಮ ಚರಣಸಾಕ್ಷಿಯಾಗಿ ನಾನು ಕಾಯಾ-ವಾಚಾ ಮನಸ್ಸಿನಿಂದ ಪವಿತ್ರಳಿರುವೆನು ಇಲ್ಲದ ಆಕ್ಷೇಪಣೆಯನ್ನು ತೆಗೆದುಕೊಂಡು ನನ್ನ ಮೇಲೆ ಸಂತಾಪಗೊಳ್ಳಬೇಡಿರಿ. ಈ ದೀನ ಸತಿಗೆ ತಮ್ಮ ಪಾದಸೇವೆಯು ಹೊರತು ಮತ್ತೊಂದು ಸೌಖ್ಯವು ಬೇಕಾಗಿಲ್ಲ. ನೀವು ನನ್ನನ್ನು ತಿರಸ್ಕರಿಸದೆ ಚರಣಸೇವೆಗಾಗಿ ಹಚ್ಚಿಕೊಳ್ಳಿರಿ."

ಪ್ಯಾರಿಯು ಗದ್ಗದಸ್ವರದಿಂದ ಕಲ್ಲು ಕರಗುವಂತೆ ಹೀಗೆ ಪ್ರಾರ್ಥಿಸಿದಳು. ರಾಮಶರಣನ ಹೃದಯವು ಕಲ್ಲಿಗಿಂತಲೂ ಕಲ್ಲಾಗಿತ್ತಾದ್ದರಿಂದ, ಅವನು ಅವಳ ಪ್ರಾರ್ಥನೆಯನ್ನು ಲಕ್ಷಿಸದೆ ಪಾದದಿಂದ ಚನ್ನಾಗಿ ತಾಡನ ಮಾಡಿದನು. ಪಾಪ! ಆ ಸಾಧ್ವಿಯು ಪದಾಘಾತದಿಂದ ದೊಪ್ಪನೆ ಭೂಮಿಗೆ ಬಿದ್ದಳು ಕೂಡಲೆ ಅವನು ಅಲ್ಲಿಂದ ಬೇರೆ ಕಡೆಗೆ ಹೊರಟು ಹೋದನು.

ನೋಡಿದಿರಾ, ರಾಮಶರಣನ ಪಾಷಾಣ ಹೃದಯವನ್ನು!

---

## ಪುನಶ್ಚ ಹರಿಃ ಓಂ।

ಕುವರಸಿಂಹನು ತನ್ನ ಪರಿವಾರ ಸಹಿತವಾಗಿ ಸಸರಾಮಿನ ಬೆಟ್ಟದಲ್ಲಿ ವಾಸವಾಗಿದ್ದನು. ಸಸರಾಮಿನ ಬೆಟ್ಟವೆಂದರೆ ಅದೊಂದು ಅಭೇದ್ಯವಾದ ನೈಸರ್ಗಿಕ ದುರ್ಗವೇ ಆಗಿತ್ತು. ಅಲ್ಲಿ ಗುಡ್ಡಗಳ ಅನೇಕ ಸಾಲುಗಳು ಬಹಳ ಎತ್ತರವಾಗಿ ಹಬ್ಬಿದ್ದವು. ಪರ್ವತದಲ್ಲೆಲ್ಲ ಗಗನ ಚುಂಬಿತ ವೃಕ್ಷಗಳು ನಿಬಿಡವಾಗಿ ಬೆಳೆದಿದ್ದವು. ಕುವರಸಿಂಹನಿಗೂ ಅವನ ಅನುಯಾಯಿಗಳಿಗೂ ಆ ಪರ್ವತದೊಳಗಿನ ಮಾರ್ಗಗಳು ಗೊತ್ತಿದ್ದವು. ಶತ್ರುಗಳಿಗೆ ಅಲ್ಲಿ ಹೆಜ್ಜೆಯನ್ನಿಡುವದು ಅಸಾಧ್ಯವೇ ಆಗಿತ್ತು. ಅಂತೆಯೇ ಕುವರಸಿಂಹನು ಸುಸಂರಕ್ಷಿತವಾದ ಈ ಪರ್ವತದಲ್ಲಿ ಆಶ್ರಯ ಹೊಂದಿದ್ದನು. ಅವನು ಅಲ್ಲಿಯೇ ಸಮರ ಸನ್ನಾಹವನ್ನು ನಡೆಯಿಸಿದ್ದನು. ಸಂಗ್ರಾಮದ ಪೂರ್ಣ ಸಿದ್ಧತೆಯಾಗುವ ವರೆಗೆ ಆ ಬೆಟ್ಟದಲ್ಲಿ ಅವನು ಅಜ್ಞಾತವಾಸವನ್ನು ಭೋಗಿಸಬೇಕಾಗಿತ್ತು.

ಕುವರಸಿಂಹನು ಗುಪ್ತ ಸಿದ್ಧತೆಯನ್ನು ನಡೆಸಿದಾಗ ಅಜಯನು ಸೋಣಬಡಿಯುತ್ತ ಸ್ವಸ್ಥವಾಗಿ ಕುಳಿತುಕೊಳ್ಳುತ್ತಿರಲಿಲ್ಲ. ಅವನು ತನ್ನ ಅನುಯಾಯಿಗಳೊಡನೆ ಹೊರಟು ಆಕಸ್ಮಿಕವಾಗಿ ಆಂಗ್ಲ ಸೈನಿಕರ ಮೇಲೆ ಬಿದ್ದು ಅವರನ್ನು 'ತ್ರಾಹಿಭಗವನ್' ಎಂದೆನಿಸಿ ಬಿಡುತ್ತಿದ್ದನು. ಅವನೀಗ ತಂತ್ರಯುದ್ಧ (ಗನಿಮಿ ಕಾವಾ) ಪದ್ಧತಿಯಿಂದ ಹೋರಾಡುತ್ತಿದ್ದನು. ಮೊದಲಿನಂತೆ ಯುದ್ಧದ

ಗೊಂದಲವು ಇದ್ದಿಲ್ಲವಾದ್ದರಿಂದ ಅವನಿಗೆ ತನ್ನ ಪ್ರಿಯತಮೆಯೊಡನೆ ಸರಸ ಸಲ್ಲಾಪಗಳನ್ನಾಡಲಿಕ್ಕೆ ಅವಕಾಶವು ದೊರೆತಂತಾಗಿತ್ತು. ಅವನು ಕೆಲವು ದಿನ ಯುದ್ಧದಲ್ಲಿ, ಕೆಲ ದಿನ ರಾಣಿಯ ಸಹವಾಸದಲ್ಲಿ ಇರತ್ತಿದ್ದನು.

ರಾಣಿಗೆ ಪುರವಾಸಕ್ಕಿಂತಲೂ ವನವಾಸವೇ ಸೌಖ್ಯಕರವಾಗಿತ್ತು. ರಾಜ ಮಂದಿರಕ್ಕಿಂತ ಪರ್ವತಮಂದಿರವೇ ಅವಳಿಗೆ ಮನೋಹರವಾಗಿ ಕಾಣತೊಡಗಿತ್ತು. ಅಜಯಸಿಂಹನಿಲ್ಲದ ವೇಳೆಯಲ್ಲಿ ರಾಣಿಯೂ ತಾರಾದೇವಿಯೂ ತಮ್ಮ ನಿವಾಸದ ಬಳಿಯ ಪರ್ವತ ಪ್ರದೇಶದಲ್ಲಿ ತಿರುಗಾಡುತ್ತ ಆನಂದದಿಂದ ಕಾಲ ಹರಣ ಮಾಡುತ್ತಿದ್ದರು. ಪತಿಯು ಬೆಟ್ಟವನ್ನಿಳಿದು ಹೋಗಿದ್ದರೆ, ಅವಳು ನಿತ್ಯದಲ್ಲಿಯೂ ಎತ್ತರವಾದ ಕೋಡುಗಲ್ಲನ್ನೇರಿ ಅವನ ಮಾರ್ಗನಿರೀಕ್ಷಣೆ ಮಾಡುತ್ತಿದ್ದಳು. ಅವನು ಬರುವದನ್ನು ಕಂಡರೆ ರಾಣಿಯು ಎದಿಗೊಂಡು, ಅವನ ಕೈಯನ್ನು ಹಿಡಿದು ಕರೆದುಕೊಂಡು ತನ್ನ ನಿವಾಸಕ್ಕೆ ತೆರಳುತ್ತಿದ್ದಳು. ಅವನು ತೊಟ್ಟ ಕವಚವನ್ನು ರಾಣಿಯು ತನ್ನ ಕೈಯಿಂದಲೇ ತೆಗೆದಿಡುತ್ತಿದ್ದಳು; ಮತ್ತೆ ಯುದ್ಧಕ್ಕೆ ಹೊರಟ ಕೂಡಲೆ, ತಾನೇ ಅದನ್ನು ತೊಡಿಸುತ್ತಿದ್ದಳು. ಅವಳು ಆ ಚಿಲಕತ್ತನ್ನು ಅತಿಶಯವಾಗಿ ಪ್ರೀತಿಸುತ್ತಿದ್ದಳು. ಆ ಕವಚದಿಂದಲೇ ತನಗೆ ಪತಿಸೌಖ್ಯವು ದೊರೆಯುತ್ತೆಂದು ಅವಳು ಭಾವಿಸಿದ್ದಳು.

ಅಜಯಸಿಂಹನು ಬೆಟ್ಟದಿಂದಿಳಿದು ಹೋಗಿ ಎಂಟು ದಿನಗಳಾಗಿದ್ದರೂ ಅವನು ಬಾರದಿದ್ದುದರಿಂದ ರಾಣಿಯು ಚಿಂತಾಕ್ರಾಂತಳಾಗಿದ್ದಳು. ಅವಳು ನಿತ್ಯವೂ ಅವನು ಬರುವ ದಾರಿಯನ್ನು ಕುತೂಹಲದಿಂದ ನೋಡತೊಡಗಿದ್ದಳು. ಸೂರ್ಯಾಸ್ತದ ವರೆಗೆ ಮಾರ್ಗಪ್ರತೀಕ್ಷೆ ಮಾಡಿ, ಅವನು ಬಾರದಿರಲು ವಿಷಣ್ಣವದನೆಯಾಗಿ ತನ್ನ ನಿವಾಸಕ್ಕೆ ತೆರಳುತ್ತಿದ್ದಳು. ರಾಣಿಯು ದುಃಖಿತಳಾದದ್ದನ್ನು ನೋಡಿ ತಾರಾದೇವಿಯೂ ಕ್ಲೇಶಗೊಳ್ಳುತ್ತಿದ್ದಳು.

ರಾಣಿಯು ಸಂಧ್ಯಾಕಾಲದಲ್ಲಿ ಪತಿಯು ಬರುವ ಪಥವನ್ನು ನೋಡುತ್ತ ಒಂದು ಎತ್ತರವಾದ ಮರಡಿಯನ್ನೇರಿ ನಿಂತಿದ್ದಳು. ತಾರಾದೇವಿಯಾದರೂ ಅವಳ ಬಳಿಯಲ್ಲಿಯೇ ಇದ್ದಳು. ಕೆಲವು ವೇಳೆಯ ವರೆಗೆ ಅವರೀರ್ವರೂ ಆ ಮರಡಿಯ ಮೇಲೆ ನಿಂತಿರಲು, ದೂರದಲ್ಲಿ ಅಜಯಸಿಂಹನೂ ಅವನ ಅನುಯಾಯಿಗಳೂ ಬರುವದನ್ನು ಅವರು ಕಂಡರು. ಕೂಡಲೆ ರಾಣಿಯ ಆನಂದಕ್ಕೆ ಪಾರಾವಾರವಿಲ್ಲದಾಯಿತು. ಅವಳು ಆನಂದದ ಭರದಲ್ಲಿ: "ಅವ್ವಯ್ಯಾ! ಅವರು ಬಂದೇ ಬಿಟ್ಟರು!" ಎಂದು ಉದ್ಗಾರ ತೆಗೆದಳು. ಕೂಡಲೆ ಅವಳು ತಾರಾದೇವಿಯನ್ನು ಸಂಗಡ ಕರೆದುಕೊಂಡು ಪತಿಯ ಎದುರಿಗೆ ಹೊರಟಳು. ರಾಣಿಯು ತನ್ನ ಎದುರಿಗೆ ಬಂದದ್ದನ್ನು ನೋಡಿದ ಕೂಡಲೆ ಅಜಯಸಿಂಹನ ಯುದ್ಧಶ್ರಮವು

ನಿವಾರಣೆಯಾಗಿ ಹೋಯಿತು. ಅವಳ ನಗೆಮೊಗವನ್ನು ನೋಡಿದೊಡನೆಯೆ ಅವನಲ್ಲಿ ಉತ್ಸಾಹವೂ ಆನಂದವೂ ಶತಗುಣಿತವಾದವು. ಅವನು ತನ್ನ ಪತ್ನಿಯ ಕೈ ಹಿಡಿದು ಕರೆದುಕೊಂಡು ವಾಸಸ್ಥಳಕ್ಕೆ ಹೋದನು.

ಮಂದಿರವನ್ನು ಪ್ರವೇಶಿಸಿದ ಕೂಡಲೆ ರಾಣಿಯು ಪತಿಯ ಕವಚವನ್ನು ತನ್ನ ಕೈಮುಟ್ಟಿ ತೆಗೆದಳು. ಆಗ ಅದರೊಳಗಿಂದ ಎರಡು ಗುಂಡುಗಳು ಉದುರಿ ನೆಲಕ್ಕೆ ಬಿದ್ದವು. ಅವಳು ಅವುಗಳನ್ನು ಕೈಯಲ್ಲಿ ತೆಗೆದುಕೊಂಡು, ಭಯದಿಂದ:-

"ಇವು ತುಬಾಕಿಯ ಗುಂಡುಗಳಲ್ಲವೆ?"

"ಅಹುದು. ಇವುಗಳನ್ನು ನೋಡಿ ನೀನಿಷ್ಟು ಭಯಪಡುವದೇಕೆ?"

ಅಜಯಸಿಂಹನು ತನ್ನ ಪತ್ನಿಗೆ ಧೈರ್ಯ ಹುಟ್ಟುವದಕ್ಕಾಗಿ ಹೀಗೆ ನುಡಿದನು. ಆ ಗುಂಡುಗಳನ್ನು ನೋಡಿ ರಾಣಿಯ ಸರ್ವಾಂಗವು ಕಂಪಿಸಲು, ಅವಳು:-

"ಇವುಗಳಲ್ಲಿ ಒಂದಾದರೂ ನಿಮ್ಮ ದೇಹಕ್ಕೆ ತಗಲಿದ್ದರೆ........"

"ಹಾಗಾಗಿದ್ದರೆ ನಿನ್ನ ದರ್ಶನಕ್ಕಾಗಿ ಇಲ್ಲಿಗೆ ಬರುತ್ತಿದ್ದಿಲ್ಲ. ಕ್ಷಾತ್ರವೀರರು ಮರಣಕ್ಕೆ ಅಂಜುವರೆ? ಧಾರಾತೀರ್ಥದಲ್ಲಿ ಮರಣಹೊಂದುವದು ಅವರಿಗೆ ಭೂಷಣಾವಹವಿರುವದು. ಪ್ರಿಯೆ, ನೀನಾದರೂ ವೀರಪತ್ನಿಯಿರುವೆ; ಆದರ್ಶ ಕ್ಷತ್ರಿಯ ಕುಮಾರಿಯಿರುವೆ. ಹೀಗಿದ್ದು ಇಂತಹ ಮಾತುಗಳನ್ನಾಡಬಹುದೆ?"

"ಪ್ರಿಯಕರಾ! ತಮ್ಮ ಚರಣಸೇವೆಯ ಅಮೃತಸಂಧಿಯು ದೊರೆತು ಬಹಳ ದಿನಗಳಾಗಿಲ್ಲ. ತಮ್ಮ ಮನೋಹರ ರೂಪವನ್ನು ಸಹ ಇನ್ನೂ ಕಣ್ಣು ತುಂಬ ನೋಡಿಲ್ಲ. ಮಧ್ಯಂತರದಲ್ಲಿ ಯುದ್ಧದ ಗೊಂದಲವೆದ್ದುದರಿಂದ ತಮ್ಮೊಡನೆ ನಾಲ್ಕು ಪ್ರೇಮದ ಭಾಷಣಗಳನ್ನಾದರೂ ಚನ್ನಾಗಿ ಆಡಿರುವದಿಲ್ಲ. ಅಂತೆಯೇ ಹೀಗೆ ಮನಸ್ಸು ವಿಹ್ವಲಗೊಳ್ಳುತ್ತಿದೆ. ಆದ್ದರಿಂದಲೇ ನನ್ನ ಮುಖದಿಂದ ಇಂತಹ ಮಾತುಗಳು ಹೊಡುವವು. ಇದರಲ್ಲಿ ನನ್ನ ತಪ್ಪೇನು?"

ರಾಣಿಯು ಹೀಗೆ ನುಡಿದ ಕೂಡಲೆ ಅಜಯನು ಪ್ರೇಮನಿರ್ಭರನಾಗಿ ಅವಳನ್ನು ಗಟ್ಟಿಯಾಗಿ ಅಪ್ಪಿದನು. ಪ್ರಣಯಲೀಲೆಗಾಗಿ ಹಸಿದ ಪ್ರಸನ್ನವದನೆಯಾದ ಆ ಚಂದ್ರಮುಖಿಯ ಮುಖಚಂದ್ರವನ್ನು ಕಣ್ಣುತುಂಬಾ ನೋಡಿ ಒಮ್ಮೆ ಮೆಲ್ಲಗೆ ಚುಂಬಿಸಿದನು. ಪ್ರಿಯಕರನ ಅಂಗಸ್ಪರ್ಶದಿಂದ ಸ್ವರ್ಗತುಲ್ಯ ಆನಂದವನ್ನು ಹೊಂದಿ ಅರ್ಧೋನ್ಮೀಲಿತ ನೇತ್ರಿಯಾದ ಆ ಪ್ರಣಯಿನಿಯು ದೇಹಭಾನವಿಲ್ಲದವಳಾದಳು. ಅವಳು ಅರ್ಧಜಾಗ್ರತಾವಸ್ಥೆಯಲ್ಲಿ:-"ನಾಥಾ! ಇನ್ನು ನನ್ನನ್ನು ತೊಲಗಿ ಎಲ್ಲಿಯೂ ಹೋಗಬೇಡಿರಿ!" ಎಂದು ನುಡಿದಳು. ಅಜಯನಾದರೂ ತಾನೇ ತಾನಾಗಿ ಹೋಗಿದ್ದನು. ಆ ಮನೋಹರೆಯ ಮಾತುಗಳು ಅವನ ಕಿವಿಗೆ ಬಿದ್ದವೋ-ಇಲ್ಲವೋ ಹೇಗೆ ಗೊತ್ತಾಗಬೇಕು? ಆ ಪ್ರೇಮಪುತ್ಥಳಿಗಳು ಆನಂದಮಯರಾದಾಗ,

"ಅಜಯನೆಲ್ಲಿ?" ಎಂದು ಕುವರಸಿಂಹನು ತಾರೆಯನ್ನು ಕೇಳಿದನು.

"ರಾಣಿಯೊಡನೆ ಮಾತನಾಡುತ್ತ ಒಳಗೆ ಕುಳಿತಿರುವರು" ಎಂದು ತಾರಾ ದೇವಿಯು ಅವನಿಗೆ ಉತ್ತರವಿತ್ತಳು. ಈ ಮಾತುಗಳನ್ನು ಕೇಳಿದ ಕೂಡಲೆ ಆ ಆ ಪ್ರಣಯಿಗಳ ಪ್ರೇಮಾನಂದ ಸಮಾಧಿಗೆ ಭಂಗವುಂಟಾಯಿತು. ರಾಣಿಯು ಪತಿಯ ಬಾಹುಬಂಧನದಿಂದ ಹಾಗೂ-ಹೀಗೂ ಮಾಡಿ ಪಾರಾದಳು. ಅಜಯನು ಆಗ ಎಚ್ಚತ್ತು:—

"ಹೃದಯೇಶ್ವರೀ, ದೂರೇಕೆ ಕುಳಿತೆ?" ಎಂದು ರಾಣಿಯನ್ನು ಕೇಳಿದನು.

"ಕುವರಸಿಂಹರು ನಿಮ್ಮನ್ನು ಕೇಳುತಲಿರುವರು."

ರಾಣಿಯು ಹೀಗೆ ನುಡಿದ ಕೂಡಲೆ ಅವನು ಚಟ್ಟನೆ ಎದ್ದು ಹೊರಗೆ ಬಂದನು. ಆಗ ಕುವರಸಿಂಹನು ಅಜಯಸಿಂಹನನ್ನು ಕುರಿತು: — "ವಿಶ್ರಾಂತಿ ತೆಗೆದುಕೊಳ್ಳತೊಡಗಿದ್ದೆಯೆಂಬಂತೆ ಕಾಣುತ್ತದೆ. ಇಷ್ಟು ಅವಸರದಿಂದ ಎದ್ದು ಬರುವ ಕಾರಣವಿದ್ದಿಲ್ಲ."

ಅಣ್ಣನ ಮಾತಿನ ಭಾವವನ್ನು ಅಜಯನು ಗುರುತಿಸಿದನು. ಆಗ ಅವನು ವಿನಯದಿಂದ:—"ಇಂದು ನನ್ನಿಂದ ಅಂತಹ ಶ್ರಮದ ಕಾರ್ಯಗಳೇನೂ ಘಟಿಸಿಲ್ಲ. ಕೆಲಸವಿಲ್ಲದ್ದರಿಂದ ರಾಣಿಯೊಡನೆ ಮಾತನಾಡುತ್ತ ಕುಳಿತಿದ್ದೆನು" ಎಂದು ಅಜಯನು ನುಡಿದು: "ಮತ್ತೇನು ವಿಶೇಷ ಸಂಗತಿಯು ನಡೆದಿರುವದು?"

"ಅಜಯ, ಇನ್ನು ಅಜ್ಞಾತವಾಸವು ಸಾಕು. ಹೀಗೆ ನೊಣ ಬಡಿಯುತ್ತ ಕುಳಿತುಕೊಳ್ಳುವದು ನನ್ನಿಂದಾಗದು. ಆಂಗ್ಲ ಕರ್ಮಚಾರಿಗಳ ಕಣ್ಣುಗಳು ನೆತ್ತಿಯ ಮೇಲೆ ಬಂದಿವೆ. ಅವರಿಗೆ ಈ ಬಿಹಾರದ ಭೀಮನ ಕೈಯನ್ನು ಚನ್ನಾಗಿ ತೋರಿಸಬೇಕಾಗಿದೆ. ಈಗ ತಕ್ಕಮಟ್ಟಿಗೆ ಸೈನ್ಯದ ಸಿದ್ಧತೆಯಾದರೂ ಆಗಿರುವದು. ನಾವು ಆಂಗ್ಲರಿಗೆ ಹೆದರಿ ಈ ಪರಿಯಾಗಿ ಕಳ್ಳತನದಿಂದ ಬಾಳುವದರಿಂದ ಫಲ ವೇನಿರುವದು? ನಮ್ಮ ಸರ್ವಸ್ವವು ಮುಂಚಿತವಾಗಿಯೇ ನಾಶವಾಗಿರುವದು. ಇನ್ನು ಸದ್ಯಕ್ಕೆ ಉಳಿದದ್ದೆಂದರೆ ಜೀವವೊಂದೇ! ನಾವು ಹೀಗೆ ಜೀವಗಳ್ಳರಾಗಿ ಕಡೆತನಕ ಕುಳಿತುಬಿಟ್ಟರೆ, ನಮ್ಮಿಂದ ಯಾವ ಪುರುಷಾರ್ಥವು ಸಾಧಿಸಿದಂತಾಗು ವದು? ಹೇಡಿಗಳಂತೆ ಸಮರಕ್ಕೆ ಬೆದರಿ ಕುಳಿತರೆ ನಮ್ಮನ್ನು ಕ್ಷಾತ್ರವಂಶಸಂಭೂ ತರೆಂದು ಜನರು ಸಂಬೋಧಿಸುವರೇಕೆ? ಸ್ವಾತಂತ್ರ್ಯದ ರಣಕುಂಡದಲ್ಲಿ ದುಮು ಕಿದ ಮೇಲೆ ಹೊಡೆದಾಗಲಿ, ಬಡಿದಾಗಲಿ ಕೀರ್ತಿಯನ್ನು ಗಳಿಸದಿದ್ದರೆ, ನಾವು ಈ ಭಾರತಮಾತೆಯ ಉದರದಲ್ಲಿ ಹುಟ್ಟಿ ಪ್ರಯೋಜನವೇನು? ನಾವು ಕರ್ತವ್ಯ ಚ್ಯುತರಾದೆವೆಂದರೆ, ಮಾತೃದ್ರೋಹವೆಸಗಿದಂತಾಗಿ, ಆಚಂದ್ರಾರ್ಕವಾಗಿ ನರಕ ಭಾಜನರಾಗಬೇಕಾಗುವದಲ್ಲವೆ?"

"ಅಣ್ಣಾ, ನಾನಂತೂ ಸಮರಕ್ಕೆ ಸಿದ್ಧನಿರುವೆನು. ಚನ್ನಾಗಿ ಸಂಗ್ರಾಮ ಸಿದ್ಧತೆಯಾಗುವ ವರೆಗೆ ಅಜ್ಞಾತವಾಸ ಮಾಡಬೇಕೆಂದು ನನ್ನ ಅಭಿಪ್ರಾಯವಿತ್ತು. ಈಗ ತಕ್ಕಷ್ಟು ಸೇನಾಸಂಗ್ರಹವಾಗಿದೆ. ಸ್ವಾತಂತ್ರ್ಯ ಸಂಗ್ರಾಮಕ್ಕೆ ಮತ್ತೆ ಅಣಿಯಾಗುವದಕ್ಕೆ ಏನೂ ಅಡ್ಡಿಯಿಲ್ಲ. ಹರಿಕಿಸನಸಿಂಹರೂ, ಜವಾನಸಿಂಹರೂ, ರಣದಲನಸಿಂಹರೂ ಅತ್ಯಂತ ಸಮರೋತ್ಸಾಹಿಗಳಾಗಿ ಕುಳಿತಿರುವರು."

ಅಜಯನ ಮಾತುಗಳನ್ನು ಕೇಳಿ ಕುವರಸಿಂಹನಿಗೆ ಸಂಭ್ರಮವಾಯಿತು. ಆಗ ಅವನು:— "ನೀನು ಸದ್ಯಕ್ಕೆ ಯುದ್ಧಕ್ಕೆ ಹೊರಡುವ ಅವಶ್ಯಕತೆಯಿಲ್ಲ. ನನ್ನ ದೇಹದಲ್ಲಿ ಪ್ರಾಣವಾಯುವು ಸಂಚರಿಸುವ ವರೆಗೆ ನೀನು ಸಂಗ್ರಾಮ ಕಾರ್ಯದಲ್ಲಿ ಕೈ ಹಾಕಬೇಡ."

"ವೃದ್ಧಾಪ್ಯದಿಂದ ಹಣ್ಣಾದ ನಿಮ್ಮನ್ನು ರಣಭೂಮಿಗೆ ಕಳಿಸಿ, ನಾನು ಮನೆಯಲ್ಲಿ ಸುಖೋಪಭೋಗಗಳನ್ನು ಹೊಂದುತ್ತ ಕಾಲಕಳೆಯುವದು ಧರ್ಮವೆನಿಸುವದೆ? '

"ನನಗೆ ಆನಂದವನ್ನುಂಟು ಮಾಡಬೇಕೆಂದು ನಿನ್ನ ಮನಸ್ಸಿನಲ್ಲಿದ್ದರೆ ನಾನು ಹೇಳಿದಂತೆ ಕೇಳು. ಇಲ್ಲಿ ಸ್ತ್ರೀಪರಿವಾರವನ್ನು ಕಾಯುವದಕ್ಕೆ ಒಬ್ಬರು ಇರಬೇಕಷ್ಟೇ? ಇಂತಹ ಮಹತ್ವದ ಭಾರವನ್ನು ನೀನು ನನ್ನ ಮೇಲೆ ಹೊರಿಸಬೇಡ. ನನಗೆ ಮುದುಕನೆಂದು ಅದಾರು ಹೇಳುವರು? ನೀನು ಇಲ್ಲಿಯೇ ಇದ್ದು, ಆಂಗ್ಲರ ಚಲನ ವಲನವನ್ನು ನಿರೀಕ್ಷಿಸುತ್ತಿರು. ನಾನು ಹೇಳಿ ಕಳುಹಿದಾಗ ಮಾತ್ರ ನೀನು ನಿಲ್ಲದೆ ಹೊರಟು ಬಾ. ಈಗ ಕಠಿಣ ಪರಿಸ್ಥಿತಿಯಿದ್ದುದರಿಂದ, ಸ್ತ್ರೀಪರಿವಾರವನ್ನು ಬಿಟ್ಟು ಬಹು ದಿವಸಗಳ ವರೆಗೆ ಬೇರೆ ಸ್ಥಳದಲ್ಲಿರಬೇಡ. ಆಂಗ್ಲರು ಧೂರ್ತರಿರುವದರಿಂದ, ಕಾದುವ ಪ್ರಸಂಗ ಒಂದಲ್ಲಿ ಪೂರ್ಣವಾಗಿ ಜಾಗ್ರತೆಯಿಂದ ವರ್ತಿಸು." ಹೀಗೆ ಅಜಯಸಿಂಹನಿಗೆ ಕುವರಸಿಂಹನು ಉಪದೇಶಿಸುವಷ್ಟರಲ್ಲಿ ಜವಾನಸಿಂಹನು ಅಲ್ಲಿಗೆ ಒಂದು ಕುವರಸಿಂಹನನ್ನು ಕುರಿತು:

"ನಿಮ್ಮ ಶಿರಸ್ಸನ್ನು ತಂದುಕೊಟ್ಟವರಿಗೆ ಐವತ್ತು ಸಾವಿರ ರೂಪಾಯಿಗಳ ಪಾರಿತೋಷಕ ಕೊಡುತ್ತೇವೆಂದು ಆಂಗ್ಲ ಅಧಿಕಾರಿಗಳು ಪ್ರಸಿದ್ಧಿಸಿರುವರಂತೆ!"

ಜವಾನಸಿಂಹನು ಹೀಗೆ ನುಡಿದ ಕೂಡಲೆ ಕುವರಸಿಂಹನು ಆಪಾದ-ಮಸ್ತಕಪರ್ಯಂತವಾಗಿ ಉರಿಯತೊಡಗಿದನು. ಅವನ ನೇತ್ರಗಳು ಬೆಂಕಿಯನ್ನು ಕಾರುತ್ತಿರುವಂತೆ ಕಂಡವು. ಇವನೇನು ಲೋಕಕ್ಷಯಕರ್ತನಾದ ಕಾಲನೋ, ವೀರಭದ್ರೋದ್ಭವ ಮಾಡುತ್ತಿರುವ ರುದ್ರನೋ ಎಂಬಂತೆ ಭಯಂಕರನಾಗಿ ತೋರತೊಡಗಿದನು.

"ಆಂಗ್ಲರು ನನ್ನ ಶಿರಸ್ಸನ್ನು ತಂದವರಿಗೆ ಬಹುಮಾನ ಕೊಡುವರೆ?

ಏನೂ ಸಂದೇಹವಿಲ್ಲ! ಅಜಯ, ನಾನೀಗಲೆ ಸೈನ್ಯವನ್ನು ತೆಗೆದುಕೊಂಡು ಅಜ ಮುಗಡದ ಕಡೆಗೆ ತೆರಳುವೆನು. ಭೀಮಪರಾಕ್ರಮಿಯಾದ ಕುವರಸಿಂಹನ ಕ್ಷಾತ್ರ ಹಸ್ತವನ್ನು ಆಂಗ್ಲರಿಗೆ ಚನ್ನಾಗಿ ತೋರಿಸುವೆನು. ಇಂದು, ನಾಳೆ ಎಂದು ಕಾಲ ಹರಣ ಮಾಡುತ್ತಿದ್ದ ನನ್ನನ್ನು ಅವರು ಚನ್ನಾಗಿ ಜಾಗ್ರತೆಗೊಳಿಸಿದರು. ಅವರು ನನ್ನನ್ನು ಎಚ್ಚರಗೊಳಿಸಿದ್ದರಿಂದಲೇ 'ಪುನಶ್ಚ ಹರಿಃ ಓಂ!' ಎಂದು ಮತ್ತೆ ಸ್ವಾ-ತಂತ್ರ್ಯದ ರಣಕುಂಡದಲ್ಲಿ ದುಮುಕಲಿಕ್ಕೆ ನಾನು ಟೊಂಕ ಕಟ್ಟಿದೆನು.''

ಕುವರಸಿಂಹನು ಹೀಗೆ ನುಡಿದವನೇ ತನ್ನ ಸೈನಿಕರನ್ನು ಸಂಗಡ ತೆಗೆದು ಕೊಂಡು ಸಸರಾಮನ ಬೆಟ್ಟದಿಂದಿಳಿದು, ವಾಯುವೇಗದಿಂದ ಅಜಮುಗಡದ ಕಡೆಗೆ ತೆರಳಿದನು.

---

## ಲಿಲಿಯೊ,-ಲೀಲೆಯೊ?

ದೇಶದಲ್ಲಿ ನೋಡಿದತ್ತ ಬಂಡಾಯದ ಬೇಗೆಯು ಹಬ್ಬಿದ್ದರಿಂದ, ಅಲ್ಲಲ್ಲಿ ಅನಾಯಕತ್ವವುಂಟಾಗಿತ್ತು. ಕೊಲೆಸುಲಿಗೆ, ಕೊಳ್ಳೆಯಿಕ್ಕುವದು ಮೊದಲಾದ ದುಷ್ಕೃತ್ಯಗಳು ಬಹಳವಾಗಿ ನಡೆದಿದ್ದವು. ಉಚ್ಛೃಂಖಲ ತರುಣರು ಇದೇ ಸಂಧಿಯಲ್ಲಿ ತಮ್ಮ ವಿಲಾಸೀ ಮನೋವೃತ್ತಿಯನ್ನು ತುಷ್ಟಗೊಳಿಸಬೇಕೆಂದು ಸಾಹಸ ನಡೆಯಿಸಿದ್ದರು. ರಾಮಶರಣನಂತಹ ಜಾತಿವಂತ ಭ್ರಷ್ಟರಿಗೆ ಈ ಬಂಡಾಯದ ಕಾಲವು ಒಳ್ಳೆಯ ಸೌಖ್ಯಪ್ರದವಾಗಿತ್ತು. ಎಲ್ಲಿಯಾದರೂ ಸುಂದರ ಯುವತಿಯರು ಅವರ ಕಣ್ಣಿಗೆ ಬಿದ್ದರೆ, ಅವರ ಪಾತಿವ್ರತ್ಯದ ಪುಣ್ಯವು ಅಂದಿಗೆ ಮುಗಿಯಿತೆಂದೇ ತಿಳಿಯತಕ್ಕದ್ದು.

ಪ್ರಭಾತ ಸಮಯವಾಗಿತ್ತು. ಒಬ್ಬ ಆಂಗ್ಲ ಯುವತಿಯು ತನ್ನ ಮೈತ್ರಿಣಿಯ ಮನೆಯ ಕಡೆಗೆ ಹೊರಟಿದ್ದಳು. ಅವಳ ನಿವಾಸದ ಬಳಿಯಲ್ಲಿ ಇನ್ನೂ ಎರಡು ಆಂಗ್ಲರ ಗೃಹಗಳಿದ್ದವು. ಅಲ್ಲಿ ಬಂಡುಗಾರರ ತೊಂದರೆಯು ಬಹಳವಾಗಿ ಇದ್ದಿಲ್ಲವಾದ್ದರಿಂದ ಅವರು ಅಲ್ಲಿಯೇ ವಾಸವಾಗಿದ್ದರು. ಆ ಆಂಗ್ಲ ರಮಣಿಯು ಸ್ವಲ್ಪ ದೂರ ಹೋದ ಮೇಲೆ ತನ್ನ ಎದುರಿಗೆ ನಾಲ್ಕಾರು ಜನ ಸಶಸ್ತ್ರ ಸೈನಿಕರು ಬರುತ್ತಿರುವದನ್ನು ನೋಡಿದಳು. ಆ ಹಿಂದೂಸೈನಿಕರನ್ನು ನೋಡಿದ ಕೂಡಲೆ ಆ ಸ್ತ್ರೀಯ ಕೈಕಾಲೇ ಹೋದವು. ಅವರು ಬಂಡುಗಾರರೆಂದು ಅವಳು ಮನಸ್ಸಿನಲ್ಲಿ ನಿರ್ಧರಿಸಿಕೊಂಡಳು. ಭಯದಿಂದ ಅವಳ ಸರ್ವಾಂಗವು ಕಂಪಿಸ ತೊಡಗಿತು. ಕೂಡಲೆ ಅವಳು ಆ ಸೈನಿಕರ ಕೈಯಿಂದ ತಪ್ಪಿಸಿಕೊಳ್ಳಬೇಕೆಂದು ದಾರಿಯನ್ನು ಬಿಟ್ಟು ಬೇರೆ ಕಡೆಗೆ ನಡೆದಳು. ಆಗ ಆ ಬಂಡುಗಾರರು ರಭಸ

ದಿಂದ ಅವಳ ಬಳಿಗೆ ಬಂದು: -"ಏ ಪೋರಿ!" ಎಂದು ಕೂಗಿದರು. ಈ ಧ್ವನಿಯನ್ನು ಕೇಳಿ ಆ ವನಿತೆಯ ಪ್ರಾಣವೇ ಹೋದಂತಾಯಿತು. ಅಷ್ಟರಲ್ಲೊಬ್ಬನು ಅವಳ ಎದುರಿಗೆ ಹೋಗಿ ಕೈ ಹಿಡಿದು: —

"ಮೇಮಸಾಹೇಬರೆ, ಸವಾರಿಯು ಎತ್ತ ಹೊರಟಿರುವದು? ತಮ್ಮ ರಥವು ಇಲ್ಲಿಗೇ ನಿಲ್ಲಲಿ! ನಿಂತುಕೊಂಡು ಎರಡು ಪ್ರೇಮಭಾಷಣಗಳನ್ನಾಡುವದು ಬಿಟ್ಟು ಹೀಗೆ ಕಾತ್ಯದಿಂದ ಹೋಗುವವರುಂಟೆ? ನೀನು ಹೆಣ್ಣಿನ ಜಾತಿಯುವಳಿದ್ದು, ಇಷ್ಟೇಕೆ ಅರಸಿಕಳಿರುವೆ? ನಿನಗಿನ್ನೂ ಪುರುಷ ಸಹವಾಸಸೌಖ್ಯವು ಗೊತ್ತಿದ್ದಂತೆ ಕಾಣುವದಿಲ್ಲ." ಎಂದು ಆ ಸೈನಿಕನು ನಿರ್ಲಜ್ಜೆಯಿಂದ ಹಲ್ಲು ತೆಗೆದು ನುಡಿದು, ಅವಳ ಎದೆಯ ಮೇಲಿನ ಅರಿವೆಗೆ ಕೈ ಹಾಕಿದನು.

ಆ ತರುಣಿಯು ಆ ಸೈನಿಕರ ಪೈಶಾಚಿಕವೃತ್ತಿಯನ್ನು ನೋಡಿ ಕ್ರೋಧಸಂತಪ್ತಳಾದಳು. ಅವಳು ತನ್ನಲ್ಲಿಯ ಶಕ್ತಿಯನ್ನೆಲ್ಲ ಒಟ್ಟುಗೂಡಿಸಿ ತನ್ನ ಕೈಯನ್ನು ಬಿಡಿಸಿಕೊಂಡು ದೂರ ಸರಿದು ನಿಂತಳು. ಈ ಬಡಿದಾಟದಲ್ಲಿ ಅವಳ ಕಂಚುಕವು ಹರಿದು ಹೋಗಿ ಉರಪ್ರದೇಶವು ಬೈಲಿಗೆ ಬಿತ್ತು. ಕ್ರೋಧ, ಲಜ್ಜೆ ಮೊದಲಾದ ಮನೋವಿಕಾರಗಳಿಂದ ಅವಳ ಮುಖವು ಆರಕ್ತ ವರ್ಣವನ್ನು ಹೊಂದಿತು. ಅವಳ ಅನಾವೃತ ಹೃದಯವನ್ನು ನೋಡಿ ಆ ಸೈನಿಕನು ಗಹಗಹಿಸಿ ನಗತೊಡಗಿದನು. ಆ ಗೌರಕಾಯದ ವನಿತೆಯ ಮೈಸೊಬಗನ್ನು ನೋಡಿ, ಆ ಸೈನಿಕನು ವಿಕಾರ ವಶನಾಗಿ ಅವಳ ಉರಪ್ರದೇಶಕ್ಕೆ ಕೈ ಹಾಕಿದನು. ಆಗ ಆ ತರುಣಿಯು ಅತ್ಯಂತ ದೈನ್ಯದಿಂದ ಚಿಟ್ಟನೆ ಚೀರಿದಳು. ಅಷ್ಟರಲ್ಲಿ ಕವಚಧಾರಿಯಾದ ಒಬ್ಬ ರಜಪೂತನು ಅಲ್ಲಿಗೆ ಬಂದು, ಆಂಗ್ಲಯುವತಿಯ ಮೇಲೆ ಅತ್ಯಾಚಾರ ನಡೆಯಿಸತೊಡಗಿರುವ ಸೈನಿಕನಿಗೆ ಚನ್ನಾಗಿ ಹೊಡತ ಹಾಕಿ ಹಿಂದಕ್ಕೆ ದೂಡಿದನು. ಅವನ ಕರಾಘಾತದಿಂದ ಆ ಸೈನಿಕನು ಭೂಮಿಗೆ ಬಿದ್ದನು. ಪರಕ್ಷಣದಲ್ಲಿ ಸಾವರಿಸಿಕೊಂಡು ಎದ್ದು, ತನ್ನ ಖಡ್ಗವನ್ನು ಕೈಯಲ್ಲಿ ತೆಗೆದುಕೊಂಡು ಆ ರಜಪೂತವೀರನ ಮೇಲೆ ಏರಿ ಹೋದನು. ಕೂಡಲೆ ಉಳಿದ ಸೈನಿಕರೂ ಅವನ ಮೇಲೆ ಬೀಳುವದಕ್ಕೆ ಮುಂದಾದರು. ಆಗ ಆ ರಜಪೂತ ತರುಣನು ಆಂಗ್ಲಯುವತಿಯ ಮೇಲೆ ಕೈಮಾಡಿದ ಸೈನಿಕನನ್ನು ಕುರಿತು: "ಕುಲಾಂಗಾರಾ! ನಿನ್ನಲ್ಲಿ ಮನುಷ್ಯತ್ವವಿರುವದೋ?" ಎಂದು ಸಂತಪ್ತನಾಗಿ ನುಡಿದು, "ಕುಲಯುವತಿಯರ ಶೀಲಭ್ರಷ್ಟಗೊಳಿಸುವದಕ್ಕಾಗಿ ಮುಂದುವರೆದ ಕೈಯನ್ನು ದೇಹದಿಂದ ಬೇರೆ ಮಾಡುವೆನು." ಹೀಗೆಂದು ಆ ರಜಪೂತನು ತನ್ನ ಕೈಯೊಳಗಿನ ನಗ್ನಖಡ್ಗದಿಂದ ಅವನ ಬಾಹು ಛೇದನ ಮಾಡಿದನು! ಖಡ್ಗದ ಪ್ರಚಂಡವಾದ ಆಘಾತದಿಂದ ಭೇದಿಸಲ್ಪಟ್ಟ ಬಾಹುವು ಸಿಡಿದು ಬಹಳ ದೂರದಲ್ಲಿ ಬಿತ್ತು!

ಛಿನ್ನ ಪಾಣಿಯಾದ ಆ ಸೈನಿಕನು ದೊಡ್ಡ ಧ್ವನಿಯಿಂದ ಒದರುತ್ತ ಭೂಮಿಗೆ ಬಿದ್ದು ನರಳತೊಡಗಿದನು. ಆಗ ಆ ರಜಪೂತವೀರನು:—

"ನೀವು ಆ ನೀಚ ರಾಮಶರಣನ ಪರಿಚಾರಕರೆಂಬಂತೆ ತೋರುವದು; ಕೆಲವು ದಿನಗಳ ಹಿಂದೆ ರಾಬಟ್‌ನ ಹಾಗು ಅವನ ಹೆಂಡಿರ-ಮಕ್ಕಳ ಮೇಲೆ ಅತ್ಯಾಚಾರ ಮಾಡತೊಡಗಿದವರು ನೀವೇ! ಅಲ್ಲವೆ? ನಿಮ್ಮ ಒಡೆಯನು ಕುಲ ಸ್ತ್ರೀಯರನ್ನು ಸ್ವಾಧೀನಪಡಿಸಿಕೊಳ್ಳುವ ಸತ್ರವನ್ನೇ ಪ್ರಾರಂಭಿಸಿದಂತೆ ತೋರುವದು. ಆ ಕುಲಾಂಗಾರನು ಒಮ್ಮೆ ನನ್ನ ದೃಷ್ಟಿಗೆ ಬಿದ್ದನೆಂದರೆ, ಅವನನ್ನು ಯಮಸದನಕ್ಕೇ ಕಳುಹಿಸುವೆನು. ನರಪಿಶಾಚಿಗಳೇ, ಕುಲೀನ ಯುವತಿಯರು ದಾರಿಯ ಮೇಲೆ ಬಿದ್ದವರೆಂದು ನಿಮ್ಮ ಕಲ್ಪನೆಯಿರುವದೇನು? ಪಾಪಕೃತಿಗೆ ಪ್ರಾಯಶ್ಚಿತ್ತವು ಒಮ್ಮಿಲ್ಲೊಮ್ಮೆಯಾದರೂ ದೊರೆಯುವದೆಂದು ನಿಮಗೆ ಇಂದು ಚನ್ನಾಗಿ ಮನವರಿಕೆಯಾಯಿತಷ್ಟೆ?"

ಹೀಗೆ ಆ ರಜಪೂತನು ನುಡಿಯುತ್ತಿರಲು, ಅವನ ಹಿಂದೆ ಒಬ್ಬ ಸೈನಿಕನು ಬಂದು, ಅವನನ್ನು ತನ್ನ ಖಡ್ಗದಿಂದ ಹೊಡೆಯುವ ಸಾಹಸದಲ್ಲಿದ್ದನು. ಆಂಗ್ಲ ತರುಣಿಯು ಅವನ ಪ್ರಯತ್ನವೇನಿರುವದೆಂಬದನ್ನು ತಿಳಿದು ಗಾಬರಿಯಿಂದ ಚೀರಿದಳು. ಕೂಡಲೆ ಆ ರಜಪೂತವೀರನು ಹಿಂದೆ ತಿರುಗಿದನು. ಆ ಸೈನಿಕನು ಒಳ್ಳೆಯ ಶಕ್ತಿಯಿಂದ ಅವನ ಮೇಲೆ ಶಸ್ತ್ರವನ್ನೆಸೆದನು. ಆ ರಜಪೂತನು ಸಾವಧಗೊಳ್ಳದಿದ್ದರೆ ಅವನ ರುಂಡವು ದೇಹದಿಂದ ಬೇರೆಯಾಗುತ್ತಿತ್ತು. ಅವನು ಚಪಲತನದಿಂದ ಶಿರವನ್ನು ಉಳಿಸಿಕೊಂಡರೂ ಆ ಹೊಡತವು ಸ್ಕಂಧಪ್ರದೇಶಕ್ಕೆ ಬಲವಾಗಿ ಬಿತ್ತು! ಕೂಡಲೆ ದೇಹದಿಂದ ರುಧಿರಪ್ರವಾಹವು ಹರಿಯತೊಡಗಿತು. ಆ ಸೈನಿಕನ ಈ ಕೃತಿಯನ್ನು ನೋಡಿ ರಜಪೂತ ವೀರನು ಕ್ರೋಧಾಯಮಾನನಾಗಿ, ಕೈಯೊಳಗಿನ ಕರಾಲಖಡ್ಗದಿಂದ ತನ್ನನ್ನು ಘಾತಿಸುವದಕ್ಕೆ ಬಂದ ಸೈನಿಕನ ಶಿರಚ್ಛೇದನ ಮಾಡಿದನು! ಶಸ್ತ್ರಾಘಾತದಿಂದ ಅವನ ರುಂಡವು ಪುಟಿದು ಹೋಗಲು, ಮುಂಡವು ದೊಪ್ಪನೆ ಭೂಮಿಗೆ ಬಿತ್ತು! ಉಳಿದ ಸೈನಿಕರು ಈ ದೃಶ್ಯವನ್ನು ನೋಡಿ, ಇನ್ನು ತಮ್ಮ ಅವಸ್ಥೆಯಾದರೂ ಹೀಗೆಯೇ ಆಗುವದೆಂದು ಅಂಜಿ ಅಲ್ಲಿಂದ ಪಲಾಯನ ಮಾಡಿದರು.

ಆ ರಜಪೂತವೀರನ ಗಾಯದೊಳಗಿಂದ ರುಧಿರಪ್ರವಾಹವು ಒತ್ತರದಿಂದ ಹರಿಯತೊಡಗಿತ್ತು. ದೇಹದೊಳಗಿನ ರಕ್ತವು ಬಹಳವಾಗಿ ಹರಿದು ಹೋದದ್ದರಿಂದ, ಅವನಿಗೆ ಗ್ಲಾನಿಯು ಬರತೊಡಗಿತ್ತು. ಅವನು ನಿಂತ ಸ್ಥಳದಲ್ಲಿಯೇ ಕಣ್ಣು ಮುಚ್ಚಿಕೊಂಡು ಸ್ವಲ್ಪ ವೇಳೆಯ ವರೆಗೆ ಸ್ವಸ್ಥವಾಗಿ ಕುಳಿತನು. ತನ್ನ ಸಲುವಾಗಿ ಜೀವವನ್ನು ಗಂಡಾಂತರದಲ್ಲಿ ತೊಡಗಿಸಿದ ಹಿಂದುವೀರನನ್ನು ಆ

ಆಂಗ್ಲ ಸ್ತ್ರೀಯು ಪ್ರೇಮದಿಂದಲೂ ಸಹಾನುಭೂತಿಯಿಂದಲೂ ನೋಡಹತ್ತಿದಳು.

"ಮಹಾನುಭಾವರೇ, ಆಂಗ್ಲರನ್ನು ಹಿಂದುಗಳು ಕಾಕದೃಷ್ಟಿಯಿಂದ ನೋಡತೊಡಗಿರುವ ಸದ್ಯದ ಕ್ರಾಂತಿಕಾಲದಲ್ಲಿ ನೀವು ದೊಡ್ಡ ಮನಸ್ಸಿನಿಂದ ನನ್ನ ಮಾನ-ಪ್ರಾಣಗಳನ್ನು ರಕ್ಷಿಸಿದಿರಿ. ನನ್ನ ಮೇಲೆ ನಿಮ್ಮ ಉಪಕಾರವು ಬಹಳವಾಯಿತು. ನನ್ನ ರಕ್ಷಣೆ ಮಾಡುವಾಗ ನಿಮ್ಮ ಮೇಲೆ ಗಂಡಾಂತರವೊದಗಿತು. ನಿಮಗೆ ಗಾಯವು ಬಲವಾಗಿ ಆದಂತೆ ಕಾಣುವದು."

"ತಾಯಿ, ನನ್ನ ಸಲುವಾಗಿ ನೀವು ಚಿಂತಿಸಬೇಡಿರಿ. ನಿಮ್ಮ ರಕ್ಷಣೆಯ ಬಗ್ಗೆ ನನಗೆ ಆನಂದವೆನಿಸಿದೆ. ನಿಜವಾದ ಹಿಂದುಗಳು ಜ್ಞಾತಿವೈರ ಬೆಳಿಯಿಸುವದಿಲ್ಲ. ಅವರು ತತ್ವಕ್ಕಾಗಿ ಒಡೆದಾಡುವರು. ಯುದ್ಧಭೂಮಿಯಲ್ಲಿ ಮಾತ್ರ ಆಂಗ್ಲರು ನಮಗೆ ವೈರಿಗಳು. ನಿಃಶಸ್ತ್ರ ಆಂಗ್ಲರ ಮೇಲೆಯೂ, ಅವರ ಹೆಂಡಿರು ಮಕ್ಕಳ ಮೇಲೆಯೂ ಶಸ್ತ್ರವೆತ್ತುವವನು ನಿಜವಾದ ಕ್ಷತ್ರಿಯನಲ್ಲವೆಂಬದಿಷ್ಟೇ ಅಲ್ಲ; ಅವನು ಮನುಷ್ಯನೇ ಅಲ್ಲ. ನೀವು ನುಡಿದ ಮೇರೆಗೆ ಸದ್ಯದಲ್ಲಿ ಕೆಲವು ಜನರ ಓಘವು ಇಂತಹ ಪಾಶವೀವೃತ್ತಿಯ ಕಡೆಗೆ ಹೊರಟಿರುವದನ್ನು ನೋಡಿದರೆ ನನಗೆ ಅತ್ಯಂತ ಖೇದವೆನಿಸುತ್ತಿರುವದು. ಎಷ್ಟೋ ಸ್ವಾರ್ಥಿಗಳು ಈಗಿನ ಕ್ರಾಂತಿಕಾಲದಲ್ಲಿ ತಮ್ಮ ನೀಚ ಮನೋವೃತ್ತಿಯನ್ನು ತೃಪ್ತಿಗೊಳಿಸಿಕೊಳ್ಳುವದಕ್ಕೆ ಹಾತೊರೆಯತೊಡಗಿರುವ ಸಂಗತಿಯು ನಿಜವು; ಆದರೆ ನಾನು ಅಂತಹ ಜನರಿಗೆ ಪೂರ್ಣವಾಗಿ ವಿರೋಧಿಯಾಗಿರುವೆನು. ಸ್ವಾತಂತ್ರ್ಯದ ರಣಕುಂಡವು ಯಾವ ಉದ್ದೇಶದಿಂದ ಪ್ರಜ್ವಲಿತವಾಗಿರುವದೆಂಬದನ್ನು ಚನ್ನಾಗಿ ಲಕ್ಷ್ಯಕ್ಕೆ ತಂದು, ಅದರಂತೆ ಯತ್ನಿಸುವ ಜನರನ್ನು ಮಾತ್ರ ನಾನು ಪ್ರೀತಿಸುತ್ತಿರುವೆನು." ಎಂದು ಆ ಕ್ಷತ್ರಿಯವೀರನು ನುಡಿದ ಕೂಡಲೆ, ಅವನ ದೊಡ್ಡ ಮನಸ್ಸನ್ನು ನೋಡಿ, ಆ ಸ್ತ್ರೀಯು ಚಕಿತಳಾದಳು!

ಗಾಯದಿಂದ ರಕ್ತಸ್ರಾವವು ಬಹಳವಾದದ್ದರಿಂದ, ಆ ರಜಪೂತವೀರನು ನಿರ್ವಿಣ್ಣನಾಗತೊಡಗಿದ್ದನು. ತನ್ನಷ್ಟಕ್ಕೆ ತಾನೇ ನಡೆದು ಹೋಗುವ ಸಾಮರ್ಥ್ಯವು ಅವನಲ್ಲಿ ಉಳಿದಿದ್ದಿಲ್ಲ. ಆಗ ಆ ಆಂಗ್ಲಯುವತಿಯು:—

"ನಿಮ್ಮನ್ನು ಕೈ ಹಿಡಿದು ಕರೆದುಕೊಂಡು ಹೋಗುವೆನು. ನೀವು ನಮ್ಮ ಮನೆಯಲ್ಲಿ ಎರಡು ದಿನವಿದ್ದು, ಸ್ವಲ್ಪ ವಿಶ್ರಾಂತಿ ಹೊರಕಿದ ಮೇಲೆ ಹೋಗಿರಿ."

ಅವಳು ವಿನಯದಿಂದ ಹೀಗೆ ನುಡಿಯುವಷ್ಟರಲ್ಲಿ ಒಬ್ಬ ಸಾಧುವು ಅಲ್ಲಿಗೆ ಬಂದು:—

"ಇನ್ನೆಲ್ಲಿಯ ಮನೆಯು? ಇನ್ನು ಒಂದು ಗಳಿಗೆಯಲ್ಲಿ ಇಲ್ಲಿಗೆ ಬಂಡುಗಾರರು ಬರುವರು, ಅವರು ನಿನ್ನ ಆ ಮನೆಯನ್ನು ವಿಧ್ವಂಸ ಮಾಡುವರಲ್ಲದೆ,

ಅಲ್ಲಿದ್ದ ಜನರನ್ನು ಸಹ ಕೊಲೆ ಮಾಡುವರು.'' ಎಂದು ನುಡಿದು, ಆ ರಜಪೂತವೀರನನ್ನು ಕುರಿತು:—''ಅಜಯಾ, ಗಾಯವು ಬಲವಾಗಿರುವದೇನು?''

ಈ ಧ್ವನಿಯನ್ನು ಕೇಳಿ ಆ ರಜಪೂತವೀರನು ತಿರುಗಿ ನೋಡಿ, ವಿಸ್ಮಯದಿಂದ:—''ಯಾರು? ಕೊಳಲಸ್ವಾಮಿಗಳೇನು!'' ಎಂದು ನುಡಿದು, ಅವರ ಚರಣಕ್ಕೆ ಶಿರಬಾಗಿದನು. ಆ ಸಾಧುವು ಅವನನ್ನು ಹಿಡಿದೆತ್ತಿ:—''ಇನ್ನು ಸ್ವಲ್ಪ ವೇಳೆಯಲ್ಲಿಯೇ ಬಂಡುಗಾರರು ಬರುವರು. ಇಲ್ಲಿಯೇ ಸಮೀಪದಲ್ಲಿದ್ದ ಅರಣ್ಯದಲ್ಲಿಯ ಗುಹೆಯಲ್ಲಿ ನಾನು ವಾಸಿಸಿರುವೆನು. ನೀವೀರ್ವರೂ ಅಲ್ಲಿಗೆ ನಡೆಯಿರಿ. ನಿನಗಾದ ಗಾಯವು ಬಹಳ ದೊಡ್ಡದಿರುವದರಿಂದ, ಅದು ಮಾಯುವವರೆಗೆ ನನ್ನ ಬಳಿಯಲ್ಲಿಯೇ ಇರು.''

ಆ ರಜಪೂತವೀರನು ವೀರಾಗ್ರಣಿಯಾದ ಅಜಯಸಿಂಹನೇ ಆಗಿದ್ದನು. ಬಿಹಾರದ ಕ್ರಾಂತಿಕಾರಕರ ಮುಖ್ಯನಾದ ಕುವರಸಿಂಹನ ಪರಾಕ್ರಮಿ ಅನುಜನು ಇದೇ ಅಜಯಸಿಂಹನೆಂಬದು ಆ ಆಂಗ್ಲ ತರುಣಿಗೆ ಗೊತ್ತಾಯಿತು. ಆಗ ಅವಳು ಅಜಯಸಿಂಹನನ್ನು ಮತ್ತಿಷ್ಟು ಭಯಭಕ್ತಿಯಿಂದ ನೋಡತೊಡಗಿದಳು. ಕೊಳಲಸ್ವಾಮಿಯ ಹೇಳಿಕೆಯಂತೆ ಅವನ ಸಂಗಡ ಹೋಗುವದಕ್ಕೆ ಆ ತರುಣಿಯ ಮನಸ್ಸು ಹಿಂಜರಿಯ ಹತ್ತಿತು. ಇದನ್ನು ತಿಳಿದ ಅಜಯಸಿಂಹನು ಅವಳಿಗೆ ತಿಳಿಸಿ ಹೇಳಿ, ತನ್ನ ಸಂಗಡ ಬರುವದಕ್ಕೆ ಒಪ್ಪಿಗೆ ಮಾಡಿಸಿದನು.

ಕೊಳಲಸ್ವಾಮಿಯು ಅವರೀರ್ವರನ್ನು ತನ್ನ ಗುಹೆಗೆ ಕರೆದುಕೊಂಡು ಹೋದನು. ಆಂಗ್ಲ ತರುಣಿಗೆ ಹಿಂದುಸ್ತ್ರೀಯರ ಉಡಿಗೆ-ತೊಡಿಗೆಗಳನ್ನು ಕೊಟ್ಟನು. ಆಗಿನ ಕಠಿಣ ಪ್ರಸಂಗದಲ್ಲಿ ಯಾರಾದರೂ ಬಂಡುಗಾರರು ನೋಡಿದರೆ, ಅಪಾಯ ತಟ್ಟೀತೆಂದು ಕೊಳಲಸ್ವಾಮಿಯು ಅವಳಿಗೆ ಆರ್ಯಸ್ತ್ರೀಯರ ವಸ್ತ್ರಾಲಂಕಾರಗಳನ್ನು ಕೊಟ್ಟನು. ಅತ್ಯಂತ ಲಾವಣ್ಯವತಿಯಾದ ಆ ರಮಣಿಯು ಹಿಂದೂಪದ್ಧತಿಯ ಉಡಿಗೆ-ತೊಡಿಗೆಗಳಿಂದ ಮತ್ತಿಷ್ಟು ಸೊಬಗುವಡೆದು ಕಾಣತೊಡಗಿದಳು. ಆಗ ಅಜಯನು ಅವಳನ್ನು ಕುರಿತು:—

''ನಿನ್ನ ಹೆಸರೇನು?'' ''ನನಗೆ ಲಿಲಿ ಎನ್ನುವರು.''

''ಲಿಲಿಯೋ,-ಲೀಲೆಯೊ? ನೀನು ಲಿಲಿಯಲ್ಲ; ಲೀಲೆಯೂ ಅಲ್ಲ. ನಿನ್ನನ್ನು ಲೀಲಾವತಿ ಎಂದು ಕರೆಯುವದು ಭೂಷಣಾಸ್ಪದವು!''

ಅಜಯನು ಹೀಗೆ ನುಡಿದು ಖೊಳ್ಳನೆ ನಕ್ಕನು. ಲಿಲಿಯೂ ನಗತೊಡಗಿದಳು. ಆ ಆಂಗ್ಲತರುಣಿಗೆ ಅವನು ಅಂದಿನಿಂದ ಲೀಲಾವತಿಯೆಂದೇ ಕರೆಯತೊಡಗಿದನು.

ಗಾಯಾಳುವಾದ ಅಜಯಸಿಂಹನು ಬಹಳೇ ಅಶಕ್ತನಾದನು. ಅವನ ಮೈಯಲ್ಲಿ ಜ್ವರಗಳು ಹುಟ್ಟಿದವು. ಒಂದೆರಡು ದಿನಗಳಲ್ಲಿ ಜ್ವರವು ಹೆಚ್ಚಾಗಿ

ಅವನು ದೇಹಭಾನವಿಲ್ಲದವನಾದನು. ಕೊಳಲ ಸ್ವಾಮಿಯು ಅವನಿಗೆ ಔಷಧ ಕೊಡತೊಡಗಿದ್ದನು. ಲೀಲಾವತಿಯು ಅವನ ಉಪಚಾರವನ್ನು ಮನಮುಟ್ಟಿ ಮಾಡತೊಡಗಿದ್ದಳು. ತನ್ನ ಮಾನರಕ್ಷಕನಾದ ಅಜಯಸಿಂಹನು ಭಯಂಕರವಾದ ಬೇನೆಯಿಂದ ಬಳಲುವದನ್ನು ನೋಡಿ ಕೋಮಲ ಹೃದಯದ ಲೀಲಾವತಿಯು ಮರಮರನೆ ಮರುಗತೊಡಗಿದಳು ಅವಳ ಕಣ್ಣುಗಳು ಯಾವಾಗಲೂ ದುಃಖಾಶ್ರುಗಳಿಂದ ತುಂಬಿರುತ್ತಿದ್ದವು. ಕೊಳಲ ಸ್ವಾಮಿಯು ಅವಳಿಗೆ ಧೈರ್ಯ ಹೇಳತೊಡಗಿದ್ದನು.

## ಸಂಶಯ ಪಿಶಾಚಿ!

ಅಜಯಸಿಂಹನ ಸ್ಥಿತಿಯು ದಿನದಿನಕ್ಕೆ ಚಿಂತಾಜನಕವಾಗುತ್ತ ನಡೆಯಿತು. ಈಗ ಅವನು ಪೂರ್ಣವಾಗಿ ಸ್ಮೃತಿಹೀನನಾಗಿದ್ದನು. ಅಜಾಗ್ರತಾವಸ್ಥೆಯಲ್ಲಿ ಅವನು 'ರಾಣೀ' ಎಂದು ಒದರಿ ಕೈ ಮುಂದಕ್ಕೆ ಚಾಚುತ್ತಿದ್ದನು. ಆಂಗ್ಲ ಯುವತಿಯಾದ ಲೀಲಾವತಿಯು ತನ್ನ ಮಾನರಕ್ಷಣೆ ಮಾಡಿದ ಅಜಯಸಿಂಹನು ಬೇಗನೆ ವಾಸಿಯಾಗಬೇಕೆಂದು ಬಗೆಬಗೆಯಿಂದ ಉಪಚರಿಸ ತೊಡಗಿದ್ದಳು. ಅಜಯಸಿಂಹನು ತನ್ನ ಆಪ್ತಕೋಟಿಯೊಳಗಿನವನೆಂದು ಅವಳ ಭಾವನೆಯಾಗಿತ್ತು. ಕೊಳಲ ಸ್ವಾಮಿಯು ಅವಳನ್ನು ಸಂತೈಸತೊಡಗಿದ್ದನು.

ಲೀಲಾವತಿಯು ಅಜಯಸಿಂಹನ ಬಳಿಯಲ್ಲಿ ಮ್ಲಾನವದನೆಯಾಗಿ ಕುಳಿತುಕೊಂಡಿದ್ದಳು. ಅವನು ಮೇಲಿಂದಮೇಲೆ 'ರಾಣೀ' ಎಂದು ಬಡಬಡಿಸುತ್ತಿದ್ದುದನ್ನು ಕಂಡು ಅವಳು ಆಲೋಚನೆಗೊಳಗಾದಳು. ಅವನು ಮೇಲಿಂದ ಮೇಲೆ ಹೀಗೇಕೆ ಒದರುತ್ತಿರಬಹುದು? ಅವನಿಂದ ಸಂಬೋಧಿಸಲ್ಪಡುವ ರಾಣಿ ಯಾರಾಗಿರಬಹುದು? ಎಂದು ಅವಳು ನಾನಾ ವಿಧವಾಗಿ ಆಲೋಚಿಸುತ್ತ ಕುಳಿತಿದ್ದಳು.

ಲೀಲಾವತಿಯು ಅಜಯಸಿಂಹನ ಚೆನ್ನಾದ ಮೊಗವನ್ನು ಕಣ್ಣುತುಂಬ ನೋಡುತ್ತ ಕುಳಿತಿದ್ದಳು. ಅವನ ದೇಹಯಷ್ಟಿಯನ್ನೂ ಸುರೂಪವನ್ನೂ ನೋಡಿ ಅವಳು ದಿಙ್ಮೂಢಳಾದಳು. ಆಹಾ! ಎಂತಹ ವೀರೋಚಿತವಾದ ಮೈಕಟ್ಟಿದು! ಇಂತಹ ಶೂರ ಪುರುಷನು ಆಂಗ್ಲರ ಬಳಿಯಲ್ಲಿರುತ್ತಿದ್ದರೆ ಇಷ್ಟು ಹೊತ್ತಿಗೆ ಇಡಿಯ ಭರತ ಭೂಮಿಯೇ ಅವರ ಸ್ವಾಧೀನವಾಗುತ್ತಿತ್ತು, ಎಂದು ಆಲೋಚಿಸುತ್ತ ಅವಳು ಅವನ ಬಳಿಯಲ್ಲಿ ಕುಳಿತಿದ್ದಳು. ಆಗ ಅಜಯನ ತಲೆಯನ್ನು ಅವಳು ತನ್ನ ತೊಡೆಯ ಮೇಲಿಟ್ಟುಕೊಂಡಿದ್ದಳು. ಅವನ ಮುಖ ಸೌಂದರ್ಯವನ್ನು ಆ ಕುಮಾರಿಯು ಎವೆಯಿಕ್ಕದೆ ಕಣ್ಣುತುಂಬ ನೋಡತೊಡಗಿದ್ದಳು.

ಅಷ್ಟರಲ್ಲಿ ಅಜಯನು 'ರಾಣೀ! ರಾಣೀ!' ಎಂದು ತನ್ನ ಎರಡೂ ಬಾಹುಗಳನ್ನು ಮೇಲಕ್ಕೆತ್ತಿದನು. ಕೂಡಲೆ ಅವನ ಬಾಹುಗಳಲ್ಲಿ ಆ ತರುಣಿಯು ತಲೆಯು ಸಿಲುಕಿತು. ಅವನು ಅಸಾವಧ ಸ್ಥಿತಿಯಲ್ಲಿಯೇ ಅವಳ ಮುಖವನ್ನು ತನ್ನ ಮುಖದ ಕಡೆಗೆ ಎಳೆದುಕೊಂಡನು. ಆಗ ಪರಸ್ಪರರ ಓಷ್ಠಸ್ಪರ್ಶವಾಗಲು ಲೀಲಾವತಿಯ ಮೈಯು ಜುಮ್ಮೆಂದಿತು! ಅವಳ ಸರ್ವಾಂಗದಲ್ಲಿ ವಿದ್ಯುತ್ಸಂಚಾರ ವಾದಂತಾಯಿತು. ಅವಳ ಮನೋಭೂಮಿಕೆಯಲ್ಲಿ ಯಾವದೋ ಒಂದು ಅಜ್ಞಾತ ವಿಕಾರವು ಉದಯಿಸಿ ಆ ತರುಣಿಯ ಚಿತ್ತವನ್ನು ಚಂಚಲಗೊಳಿಸಿತು. ಅವಳು ತನ್ನ ಮುಖವನ್ನು ಅವನ ಮುಖದಿಂದ ಕಿತ್ತುಕೊಳ್ಳುವದಕ್ಕೆ ಅಸಮರ್ಥಳಾಗಿ ಎಷ್ಟೋ ಹೊತ್ತಿನ ವರೆಗೆ ಹಾಗೇ ಕುಳಿತುಬಿಟ್ಟಳು. ಅಷ್ಟರಲ್ಲಿ:—

"ಲೀಲಾವತೀ" ಎಂದು ಕೂಗುತ್ತ ಕೊಳಲಸ್ವಾಮಿಯು ಅಲ್ಲಿಗೆ ಬಂದನು. ಅವನ ಧ್ವನಿಯಾಗುತ್ತಲೆ ಅವಳು ಬಲಾತ್ಕಾರದಿಂದ ತನ್ನ ಮುಖವನ್ನು ಎತ್ತಿಕೊಂಡಳು. ಆಗ ಕೊಳಲಸ್ವಾಮಿಯು:—

"ಈಗ ಅಜಯನ ಸ್ಥಿತಿಯು ಹೇಗಿರುವದು?"

"ಮೊದಲಿನಂತೆಯೇ ಇರುವದು. ಇವರ ಪ್ರಕೃತಿಯಲ್ಲಿ ಇದು ವರೆಗೆ ಯಾವ ಬಗೆಯ ಅಭ್ಯಂತರವೂ ಉಂಟಾದಂತೆ ಕಾಣಲೊಲ್ಲದು."

ಲೀಲಾವತಿಯು ಹೀಗೆ ನುಡಿದ ಕೂಡಲೆ ಕೊಳಲಸ್ವಾಮಿಯು ಅವನ ಹಸ್ತವನ್ನು ತನ್ನ ಕೈಯಲ್ಲಿ ತೆಗೆದುಕೊಂಡು ನಾಡಿಯನ್ನು ಹಿಡಿದು ನೋಡಿದನು. ಆಗ ಅವನು ಸಂತೋಷದಿಂದ:—

"ಲೀಲೇ, ನೀನು ಚಿಂತಿಸಬೇಡ. ಅಜಯನ ನಾಡಿಗಳು ಚನ್ನಾಗಿರುವವು. ಅವನಲ್ಲಿ ಈಗ ಅಲ್ಪ-ಸ್ವಲ್ಪ ಪ್ರಜ್ಞೆಯೂ ಉಂಟಾಗಿದೆ."

ಕೊಳಲಸ್ವಾಮಿಯ ಮಾತುಗಳನ್ನು ಕೇಳಿ ಲೀಲಾವತಿಗೆ ಜೀವದಲ್ಲಿ ಜೀವವು ಬಂದಂತಾಯಿತು. ಆಗ ಅವಳು:—

"ಅಜಯಸಿಂಹರು ಯಾವಾಗಲೂ 'ರಾಣಿ-ರಾಣಿ' ಎಂದು ಬಡಬಡಿಸುತ್ತಿರುವರು. ರಾಣಿಯೆಂದರೆ ಅವರಾರು?"

"ರಾಣಿಯು ಅಜಯನ ಧರ್ಮಪತ್ನಿಯು. ಅವಳ ಹೆಸರು ಇಂದುಮತಿ ದೇವಿಯು. ಅವಳಿಗೆ ಸರ್ವರೂ ರಾಣಿಯೆಂದೇ ಸಂಬೋಧಿಸುವರು." ಎಂದು ನುಡಿದು ಕೊಳಲಸ್ವಾಮಿಯು ಅವನ ಮುಖದಲ್ಲಿ ಒಂದು ಬಗೆಯ ವನಸ್ಪತಿಯ ರಸವನ್ನು ಹಿಂಡಿದನು. ಆ ವನಸ್ಪತಿಯ ಪ್ರಭಾವದಿಂದ ಸ್ವಲ್ಪ ಹೊತ್ತಿನ ಮೇಲೆ ಅಜಯನು ಕಣ್ಣು ತೆರೆದು, ಲೀಲಾವತಿಯನ್ನು ಕುರಿತು:—

"ರಾಣೀ, ಬಂದೆಯಾ! ನನಗೆ ಅಸ್ವಸ್ಥತೆಯುಂಟಾದ ಸಂಗತಿಯನ್ನು ನಿನಗೆ

ಕೊಳಲಸ್ವಾಮಿಗಳು ತಿಳಿಸಿದರೇನು? ಲೀಲಾವತಿಯೆಲ್ಲಿ? ಅವಳು ತನ್ನ ಮನೆಗೆ ಹೊರಟು ಹೋಗಿರಬಹುದು. ಪಾಪ! ಆ ಬಡಪ್ರಾಣಿಯು ಅಂದಿನ ದಿವಸ ಗಂಡಾಂತರದಿಂದ ಮುಕ್ತಳಾದದ್ದು ದೇವತಾನುಗ್ರಹದಿಂದಲೇ!''

ಕೊಳಲಸ್ವಾಮಿಯು ಸಂಜ್ಞೆ ಮಾಡಿದ್ದರಿಂದ ಲೀಲಾವತಿಯು ಉತ್ತರವೀಯಲಿಲ್ಲ. ಅವಳು ಟಕಮಕ ನೋಡುತ್ತ ಕುಳಿತಿದ್ದಳು. ಇವನ ರಾಣಿಯು ನನ್ನಂತೆಯೇ ಇರಬಹುದೇನು? ಎಂದು ಅವಳು ಆಲೋಚಿಸತೊಡಗಿದಳು.

ಬರಬರುತ್ತ ಅಜಯಸಿಂಹನಿಗೆ ಗುಣಮುಖವಾಗತೊಡಗಿತು; ಆದರೆ ಎದ್ದು ತಿರುಗಾಡುವಷ್ಟು ಶಕ್ತಿಯು ಇನ್ನೂ ಬಂದಿದ್ದಿಲ್ಲ. ತನ್ನ ಆರೈಕೆ ಮಾಡುತ್ತಿರುವ ಯುವತಿಯು ರಾಣಿಯೆಂದು ತಿಳಿದು, ಅವನು ಯಾವಾಗಲೂ ಅವಳಿಗೆ ರಾಣಿ ಎಂದೇ ಸಂಬೋಧಿಸುತ್ತಿದ್ದನು. ಒಂದು ದಿವಸ ಅವನು ಲೀಲಾವತಿಯ ತೊಡೆಯ ಮೇಲೆ ತನ್ನ ಮಸ್ತಕವನ್ನು ಇಟ್ಟು ಮಲಗಿರಲು, ಆವಳ ಮುಖದ ಕಡೆಗೆ ಸಹಜವಾಗಿ ಆತನ ದೃಷ್ಟಿಯು ಹೊರಳಿತು. ಕೂಡಲೆ ಅವನು ಪ್ರೇಮಲಧ್ವನಿಯಿಂದ:

''ರಾಣೀ, ಕೊಳಲಸ್ವಾಮಿಗಳು ನನ್ನ ಸಲುವಾಗಿ ಬಹು ಶ್ರಮ ತೆಗೆದುಕೊಂಡರು; ನೀನಾದರೂ ನನ್ನ ಆರೈಕೆ ಮಾಡುವಾಗ ವಿಶೇಷವಾಗಿ ದಣಿದೆ.''

''ಕೊಳಲಸ್ವಾಮಿಗಳ ಪರೋಪಕಾರ ಬುದ್ಧಿಯು ಅವರ್ಣನೀಯವಿರುವದು. ನಾನು ತಮ್ಮ ಸೇವೆ ಮಾಡಿದ್ದೇನೂ ಅಷ್ಟೊಂದು ದೊಡ್ಡ ಮಾತಲ್ಲ. ನೀವು ನನಗೆ ಪುನರ್ಜನ್ಮವಿತ್ತವರಾಗಿರಲು, ನಾನು ಅಲ್ಪ ಸೇವೆ ಮಾಡಿದ್ದಕ್ಕೆ ಅಷ್ಟೊಂದು ಮಹತ್ವ ಕೊಡಬಾರದು.''

''ರಾಣೀ, ನಿನ್ನ ಮಾತಿನ ಅರ್ಥವು ಚನ್ನಾಗಿ ಆಗಲೊಲ್ಲದು.''

''ನಾನು ರಾಣಿಯಲ್ಲ; ಲಿಲಿಯು! ಅಲ್ಲಲ್ಲ, ಲೀಲಾವತಿಯು!''

ಅಜಯಸಿಂಹನು ಅವಳ ಈ ಮಾತನ್ನು ಕೇಳಿದ ಕೂಡಲೆ ವಿಸ್ಮಯಗೊಂಡನು. ಅವನು ಅವಳ ಮುಖವನ್ನು ಮತ್ತೊಮ್ಮೆ ಲಕ್ಷ್ಯವಿಟ್ಟು ನೋಡಲು, ಅವನಿಗೆ ಲೀಲಾವತಿಯ ಗುರುತು ಹತ್ತಿ, ಮೊದಲಿನ ಎಲ್ಲ ಸಂಗತಿಗಳೂ ಅವನ ಜ್ಞಾಪಕದಲ್ಲಿ ಬಂದವು. ಕೂಡಲೆ ಅವನು ತನ್ನ ಮಸ್ತಕವನ್ನು ಅವಳ ತೊಡೆಯ ಮೇಲಿಂದ ತೆಗೆದುಕೊಂಡು: —

''ಲೀಲಾವತಿ, ಪರವನಿತೆಯರಾದ ನಿಮಗೆ ನನ್ನಿಂದ ಬಹಳವಾಗಿ ತೊಂದರೆಯಾಯಿತು. ಸ್ವಾಮಿಗಳಂತೆ ನೀವಾದರೂ ನನಗೆ ಉಪಕಾರಕರ್ತರೇ ಇರುವಿರಿ.''

''ಅಜಯಸಿಂಹರೆ, ನಿಮಗೆ ನಾನು ಯಾವ ಉಪಕಾರ ಮಾಡಿರುವೆನು! ಬೇನೆ ಬಿದ್ದು ಅಸಹಾಯಸ್ಥಿತಿಯಲ್ಲಿರುವವರ ಆರೈಕೆ ಮಾಡುವದು, ಅದರಲ್ಲಿಯೂ ನಿಮ್ಮಂತಹ ಉಪಕಾರಕರ್ತರ ಆರೈಕೆ ಮಾಡುವದು ದೊಡ್ಡ ಉಪಕಾರದ ಮಾ-

ತೆಂದು ನಾನು ತಿಳಿದುಕೊಳ್ಳಲಾರೆನು'' ಎಂದು ನುಡಿಯುವಷ್ಟರಲ್ಲಿ ಕೊಳಲ ಸ್ವಾಮಿಗಳು ಅಲ್ಲಿಗೆ ಬಂದರು. ಆಗ ಅಜಯನು ಅವರನ್ನು ಕುರಿತು:—
''ಸಸರಾಮನ ಬೆಟ್ಟಕ್ಕೆ ನಾನು ಬೇನೆ ಬಿದ್ದ ಸಂಗತಿಯನ್ನು ತಿಳಿಸಿರುವಿರೇನು?''

''ನಿನ್ನೆ ಘುಲಶಾಹರು ನನಗೆ ಭೆಟ್ಟಿಯಾಗಿದ್ದರು. ಅವರು ಈ ಸಂಗತಿಯನ್ನು ರಾಣಿಗೆ ತಿಳಿಸುವದಕ್ಕೆ ಒಪ್ಪಿಕೊಂಡಿರುವರು. ಇಷ್ಟರೊಳಗೇ ತಿಳಿಸಬೇಕಾಗಿತ್ತು; ಆದರೆ ರಾಣಿಯು ಗಾಬರಿಗೊಂಡು ಹೊರಟು ಬರಬಹುದೆಂಬ ಭೀತಿಯಿಂದ ಸುಮ್ಮನಿದ್ದೆನು. ಇನ್ನೆರಡು ದಿನಗಳಲ್ಲಿ ನಿನ್ನನ್ನು ಕಳಿಸಿಕೊಡುವೆನೆಂದು ಹೇಳಿಕಳುಹಿಸಿರುವೆನು.''

ಕೊಳಲಸ್ವಾಮಿಯ ಮಾತುಗಳನ್ನು ಕೇಳಿ, ಅಜಯನು ಶಾಂತಮನಸ್ಕನಾದನು. ಅಷ್ಟರಲ್ಲಿ ಗುಹೆಯ ಹೊರಗೆ ಜನರ ಧ್ವನಿಯು ಕೇಳಹತ್ತಲು, ಕೊಳಲಸ್ವಾಮಿಯು ಹೊರಗೆ ಹೋದನು. ಸಸರಾಮನ ಬೆಟ್ಟದಿಂದ ರಾಣಿಯು ಅಜಯಸಿಂಹನನ್ನು ಕರೆಯುವದಕ್ಕಾಗಿ ಮೇಣೆಯನ್ನು ಕಳುಹಿಸಿದ್ದಳು. ಆಗ ಕೊಳಲಸ್ವಾಮಿಯು ರಾಣಿಯ ಪರಿಚಾರಕರನ್ನು ಕುರಿತು:—

''ರಾಣಿಯವರು ಬಹಳ ಅವಸರ ಮಾಡಿದರು; ಅಜಯನಲ್ಲಿಯ ಅಶಕ್ತತೆಯು ಇನ್ನೂ ಪೂರ್ಣವಾಗಿ ಹೋಗಿಲ್ಲ. ಇನ್ನೆರಡು ದಿವಸಗಳಲ್ಲಿ ನಾನೇ ಅವನನ್ನು ಬೆಟ್ಟಕ್ಕೆ ಕಳಿಸಿ ಕೊಡುತ್ತಿದ್ದೆನು.'' ಎಂದು ನುಡಿದು, ಅವನು ಅಜಯನ ಬಳಿಗೆ ಹೋಗಿ: - ''ಸಸರಾಮನ ಬೆಟ್ಟದಿಂದ ನಿನ್ನನ್ನು ಕರೆಯುವದಕ್ಕೆ ಪರಿಚಾರಕರು ಬಂದಿರುವರು.''

''ಮೇಣೆಯು ಬಂದಿರುವದೊ, ಕುದುರೆಯನ್ನು ಕಳಿಸಿರುವರೋ?''

''ಮೇಣೆಯನ್ನೇ ಕಳುಹಿಸಿರುವರು ''

' ರಾಣಿಯು ಧೋರಣವುಳ್ಳವಳಿರುವಳು. ಮೇಣೆಯನ್ನು ಕಳುಹಿಸಿದ್ದು ಒಳಿತಾಯಿತು. ಕುದುರೆಯನ್ನೇರುವ ಶಕ್ತಿಯು ನನ್ನಲ್ಲಿರುವದಿಲ್ಲ.''

''ಇನ್ನೂ ಎರಡು-ಮೂರು ದಿವಸ ಬಿಟ್ಟಿದ್ದರೆ ನೆಟ್ಟಗಾಗುತ್ತಿತ್ತು.''

''ನಾನು ಮನೆಯನ್ನು ಬಿಟ್ಟು ಬಹಳ ದಿನಗಳಾದವು. ಆದುದರಿಂದ ನನ್ನ ಮನಸ್ಸು ಬಹಳೇ ಹರಿಯತೊಡಗಿದೆ. ನಾಳೆ ಪ್ರಾತಃಕಾಲಕ್ಕೆ ನನಗೆ ಹೊರಡಲಿಕ್ಕೆ ನಿರೂಪ ಕೊಡಿರಿ'' ಎಂದು ಅಜಯನು ಕೊಳಲಸ್ವಾಮಿಗೆ ಪ್ರಾರ್ಥಿಸಿದನು.

ಮಾರನೆಯ ದಿವಸ ಅಜಯಸಿಂಹನು ಕೊಳಲಸ್ವಾಮಿಗಳ ಅಪ್ಪಣೆ ಪಡೆದು ಸಸರಾಮನ ಬೆಟ್ಟಕ್ಕೆ ತೆರಳಿದನು. ಅವನು ಲೀಲಾವತಿಯನ್ನು ತನ್ನ ಸಂಗಡವೇ ಕರೆದುಕೊಂಡು ಹೊರಟಿದ್ದನು. ಮಾರ್ಗದಲ್ಲಿ ಅವರು ಅತ್ಯಂತ ಸ್ನೇಹದಿಂದ ಮಾತನಾಡತೊಡಗಿದ್ದರು. ಆಗ ಅಜಯನು:—

"ಲೀಲಾವತಿದೇವಿ, ನೀವು ನಿರ್ಮಲಾಂತಃಕರಣೆಗಳಿರುವಿರಿ. ನೀವು ನಿರಭಿಮಾನದಿಂದ ನನ್ನ ಆರೈಕೆ ಮಾಡಿದ್ದನ್ನು ನೋಡಿ, ನಿಮ್ಮ ವಿಷಯದಲ್ಲಿ ನನಗೆ ಅತ್ಯಂತ ಭಕ್ತಿಯುತ್ಪನ್ನವಾಗಿರುವದು. ರಾಣಿಯು ನಿಮ್ಮನ್ನು ನೋಡಿದರೆ ಬಹು ಸಂಭ್ರಮಗೊಳ್ಳುವಳು. ದಯಾರ್ದ್ರಹೃದಯಿಗಳೂ, ಸಮತಾದೃಷ್ಟಿಯುವರೂ, ಅಭಿಮಾನರಹಿತರೂ ಆದ ನಿಮ್ಮನ್ನು ಆಜೀವವಾಗಿ ನನ್ನ ಬಳಿಯಲ್ಲೇ ಇಟ್ಟುಕೊಳ್ಳಬೇಕೆಂದು ಮನಸ್ಸಾಗಿದೆ; ಆದರೆ ನಿಮ್ಮನ್ನು ಕಡೆತನಕ ನನ್ನ ಬಳಿಯಲ್ಲಿಟ್ಟುಕೊಳ್ಳುವದು ಒಂದುಬಗೆಯ ಅಪರಾಧವೆಂದು ನಿರುಪಾಯನಾಗಬೇಕಾಗಿದೆ.'

"ಅಜಯಸಿಂಹಜೀ, ತಮ್ಮನ್ನಗಲಿ ಹೋಗುವದಕ್ಕೆ ನನ್ನ ಮನಸ್ಸಾದರೂ ಒಪ್ಪದಾಗಿದೆ. ನಾನು ನಿಮ್ಮಲ್ಲಿಯೇ ಇದ್ದರೆ, ನೀತಿಬಾಹ್ಯದೋಷವು ಒರುವದೆಂಬ ಅಂಜಿಕೆಯು ನನಗೆ ಬಹಳವಾಗಿದೆ."

"ಲೀಲಾವತಿ, ಚಿರಸುಖಿಗಳಾದ ನಿಮ್ಮನ್ನು ಗಿರಿಗಹ್ವರದಲ್ಲಿ ಇರುವದಕ್ಕೆ ನಾನು ಆಗ್ರಹ ಮಾಡಲಾರೆನು. ಸರ್ವನಾಶ ಮಾಡಿಕೊಂಡ ನಾನು ಈಗ ಪೂರ್ಣವಾಗಿ ವನವಾಸಿಯಾಗಿರುವೆನು. ಇಂತಹ ಸ್ಥಿತಿಯಲ್ಲಿ ನನ್ನ ಬಳಿಯಲ್ಲಿದ್ದರೆ ನಿಮಗೇನು ಸೌಖ್ಯವಾದೀತು? ಇದಲ್ಲದೆ ನಿಮ್ಮನ್ನು ಪತಿಯಿಂದ ಅಗಲಿಸಿ ಪಾಪಭಾಗಿಯಾಗಲಾರೆನು. ಎರಡು ದಿವಸ ನನ್ನಲ್ಲಿ ನಿಂತು ನಿಮ್ಮ ನಿವಾಸಕ್ಕೆ ತೆರಳಬಹುದು. ನಾನು ನನ್ನ ಅನುಚರರೊಡನೆ ಸುರಕ್ಷಿತವಾಗಿ ನಿಮ್ಮನ್ನು ಕಳುಹಿಸಿಕೊಡುವೆನು."

ತಾನು ಇನ್ನೂ ಅವಿವಾಹಿತಳಿರುವ ಸಂಗತಿಯನ್ನು ಅಜಯಸಿಂಹನು ಅರಿತಿಲ್ಲವಾದ್ದರಿಂದ ಹೀಗೆ ನುಡಿದನೆಂದು ಲೀಲಾವತಿಯು ತಿಳಿದಳು. ಅವಳು ಲಜ್ಜೆಯಿಂದ ಅಧೋವದನೆಯಾಗಿ: —

"ನಾನಿನ್ನೂ ಅವಿವಾಹಿತಳಿರುವೆನು."

"ನಿಮ್ಮ ಜನಾಂಗದಲ್ಲಿ ವಿವಾಹಸ್ವಾತಂತ್ರ್ಯವಿರುವದರಿಂದ, ಕುಮಾರಿಯರಿಗೆ ಎಷ್ಟು ದಿವಸಗಳ ವರೆಗಾದರೂ ಲಗ್ನವಾಗದೆ ಹಾಗೆಯೇ ಇರುವದಕ್ಕೆ ಬರುವದು. ನಿಮ್ಮ ವಿವಾಹಕಾಲಕ್ಕೆ ನನಗೆ ನಿರೂಪ ಕಳುಹಿಸುವದನ್ನು ಮಾತ್ರ ಮರೆಯಬೇಡಿರಿ, ಕಂಡಿರಾ?"

ಬೋವಿಗಳು ಸಸರಾಮನ ಬೆಟ್ಟವನ್ನೇರತೊಡಗಿದ್ದರು. ಆಗ ಪ್ರದೋಷಕಾಲವಾಗಿತ್ತು. ಚಂದ್ರಿಕೆಯ ಶುಭ್ರಛಾಯೆಯಿಂದ ಸೃಷ್ಟಿದೇವತೆಯು ಧೌತವಸ್ತ್ರ ಧಾರಣ ಮಾಡಿದಂತೆ ಪರಿಶೋಭಿಸತೊಡಗಿದ್ದಳು. ವಾಯುವು ಮಂದ-ಮಂದವಾಗಿ ಸಂಚರಿಸತೊಡಗಿದ್ದನು. ಅಷ್ಟರಲ್ಲಿ ಮೇಣೆಯು ಅಜಯಸಿಂಹನ ಮಂದಿರದ ಬಳಿಯಲ್ಲಿ ಬಂದಿತು. ತಾರೆಯೂ ರಾಣಿಯೂ ಅವನು ಬರುವ ದಾರಿ

ಯನ್ನೇ ನೋಡುತ್ತ ನಿಂತುಕೊಂಡಿದ್ದರು. ಅಷ್ಟರಲ್ಲಿ ಅಜಯಸಿಂಹನೂ ಲೀಲಾವತಿಯೂ ಮೇಣೆಯಿಂದಿಳಿದರು. ಅಜಯಸಿಂಹನನ್ನು ನೋಡಿ ರಾಣಿಯ ಆನಂದವು ಉಕ್ಕೇರಿತು; ಆದರೆ ಅವನ ಪಾರ್ಶ್ವದಲ್ಲಿದ್ದ ಅತ್ಯಂತ ಮನಮೋಹಕಳಾದ ಆ ನವತರುಣಿಯನ್ನು ನೋಡಿ ಅವಳು ಒಮ್ಮೆಲೆ ಬೆಚ್ಚಿದಳು! ಬೆದರಿದಳು! ಅವಳ ಮನಸ್ಸು ಸಂಶಯ ಪಿಶಾಚಿಯಿಂದ ಗ್ರಸ್ತವಾಯಿತು. ಕೂಡಲೆ ಅವಳಿಗೆ ಆ ಲೀಲಾವತಿಯು ಅವಳಿಗೆ ಪ್ರತಿಸ್ಪರ್ಧಿಯಂತೆ ಕಾಣತೊಡಗಿದಳು. ರಾಣಿಗೆ ಸಂಶಯ ಪಿಶಾಚಿಯು ಒಡಿವ ಕಾರಣವೇನಿರಬಹುದು?

---

## ಬಿಹಾರದ ಭೀಷ್ಮ!

ಸಸರಾಮನ ಬೆಟ್ಟದಿಂದ ಹೊರಟ ಕುವರಸಿಂಹನು ತನ್ನ ಸೇನೆಯೊಡನೆ ಅಜಮಗಡದ ಕಡೆಗೆ ಸಾಗಿದನು. ಅಲ್ಲಿ ಆಂಗ್ಲ ಸೈನ್ಯವು ಬೀಡು ಬಿಟ್ಟಿರುವದೆಂಬ ಸಂಗತಿಯು ಅವನಿಗೆ ಗೊತ್ತಾಗಿತ್ತು. ಕುವರಸಿಂಹನ ಶಿರಸ್ಸನ್ನು ತಂದು ಕೊಟ್ಟವರಿಗೆ ಐವತ್ತು ಸಾವಿರ ರೂಪಾಯಿಗಳ ಬಹುಮಾನ ಕೊಡಲ್ಪಡುವದೆಂದು ಆಂಗ್ಲ ರಾಜ್ಯಕರ್ತರು ಪ್ರಸಿದ್ಧ ಮಾಡಿದ್ದರಿಂದಂತೂ ಅವನ ತಲೆಯು ತಿರುಗಿತ್ತು. ರಣಭೂಮಿಯಲ್ಲಿ ತನ್ನ ಶಿರವನ್ನು ತೆಗೆದುಕೊಳ್ಳುವ ಆಂಗ್ಲ ಶಕ್ತಿಯು ಘನತೆಯೆಷ್ಟಿರುವದೆಂಬದನ್ನು ಒಂದುಬಾರಿ ನೋಡಿಯೇ ಬಿಡಬೇಕೆಂದು ಅವನು ಟೊಂಕ ಕಟ್ಟಿದ್ದನು. ಅಲ್ಲಲ್ಲಿ ಬಂಡಾಯದ ಬೇಗೆಯು ಹತ್ತಿದ್ದರಿಂದ ಕುವರಸಿಂಹನಿಗೆ ಸೈನ್ಯವನ್ನು ಕೂಡಿಸುವದು ತ್ರಾಸದಾಯಕವಾಗಲಿಲ್ಲ. ನೋಡಿದತ್ತ ಆಂಗ್ಲರ ವಿರುದ್ಧವಾದ ವಾತಾವರಣವಿದ್ದುದರಿಂದ ಹೋದಹೋದಲ್ಲಿ ಕ್ರಾಂತಿಕಾರಕ ಜನರು ಅವನ ಸೈನ್ಯದಲ್ಲಿ ಕೂಡತೊಡಗಿದರು. ತನ್ನ ಪ್ರಚಂಡವಾದ ಸೈನ್ಯವು ಆಂಗ್ಲರನ್ನು ಪರಾಭವಗೊಳಿಸುವದೆಂಬ ಆತ್ಮವಿಶ್ವಾಸವು ಅವನಲ್ಲುಂಟಾಗಿತ್ತು. ಅವನು ಅಜಮಗಡಕ್ಕೆ ಹೋಗುವದನ್ನು ನಿರ್ಧರಿಸಿ ಭಾಗೀರಥೀ ನದಿಯನ್ನು ದಾಟಿದನು.

ಅಜಮಗಡಕ್ಕೆ ಹೋಗುವಾಗ ದಾರಿಯಲ್ಲಿದ್ದ ಅತ್ರೋಲಿಯಾ ಎಂಬ ಸ್ಥಳದಲ್ಲಿ ಕುವರಸಿಂಹನ ಸೈನ್ಯವು ಬೀಡುಬಿಟ್ಟಿತ್ತು. ಅಲ್ಲಿಗೆ ಆಂಗ್ಲ ಸೈನ್ಯವು ಅಕಸ್ಮಾತ್ತಾಗಿ ಬಂದು ಅದರ ಮೇಲೆ ಬಿದ್ದಿತು. ಹಠಾತ್ತಾಗಿ ದಾಳಿಯು ಮಾಡಲ್ಪಟ್ಟದ್ದರಿಂದ ಕುವರಸಿಂಹನ ಸೈನ್ಯವು ಚದರಿತು. ರಣವಿಕ್ರಮನಾದ ಆ ನರಸಿಂಹನು ಚದರಿದ ತನ್ನ ಸೈನಿಕರಿಗೆ ಪ್ರೋತ್ಸಾಹನೆ ಕೊಡುತ್ತ ಒಟ್ಟುಗೂಡಿಸತೊಡಗಿದನು. ಅಷ್ಟರಲ್ಲಿ ಆಂಗ್ಲ ಸೈನಿಕರು ಒಳ್ಳೆಯ ರಭಸದಿಂದ ಅವನ ಸೈನ್ಯವನ್ನು ಮುತ್ತಿದರು. ಕುವರಸಿಂಹನು ಆವೇಶದಿಂದ ಆ ಸೈನ್ಯವನ್ನು ಹಿಂದಕ್ಕಟ್ಟತೊಡ

ಗಿದ್ದನು. ಆ ರಣಶಾರ್ದೂಲನ ಶಸ್ತ್ರಾಘಾತದಿಂದ ಎಷ್ಟೋ ಜನ ಆಂಗ್ಲರ ಶಿರಸ್ಸುಗಳು ಭೂಮಿಗೆ ಬಿದ್ದವು. ಕುವರಸಿಂಹನ ಸೈನ್ಯದಲ್ಲಿ ಸಂಗ್ರಾಮದ ಪೂರ್ವಸಿದ್ಧತೆಯು ಒಳಿತಾಗಿಲ್ಲದ್ದರಿಂದಲೂ, ಆಕಸ್ಮಿಕವಾದ ದಾಳಿಯಿಂದ ಎಷ್ಟೋ ಜನ ಸೈನಿಕರು ಚದರಿಹೋದದ್ದರಿಂದಲೂ ಕಡೆಗೆ ಅವನಿಗೆ ಅಪಜಯವಾಯಿತು.

ದೃಢನಿಶ್ಚಯದ ವೀರಪುಂಗವನಾದ ಕುವರಸಿಂಹನು ಈ ಪರಾಭವದಿಂದ ನಿರುತ್ಸಾಹಿಯಾಗಲಿಲ್ಲ. ಅವ್ಯಾಹತವಾಗಿ ಶ್ರಮಬಟ್ಟು ಅವನು ಎಲ್ಲ ಸೈನಿಕರನ್ನು ಮತ್ತೆ ಒಟ್ಟುಗೂಡಿಸಿದನು. ಯೋಗ್ಯಸಂಧಿಯನ್ನು ಸಾಧಿಸಿ ಅವನು ಆಂಗ್ಲ ಸೇನೆಯ ಮೇಲೆ ಬೀಳಬೇಕೆಂದು ವೇಳೆಯ ಪ್ರತೀಕ್ಷೆ ಮಾಡತೊಡಗಿದ್ದನು. ಆಂಗ್ಲಶಿಬಿರವು ಅವನಿಂದ ಬಹಳ ದೂರವಿದ್ದಿಲ್ಲ. ಅಲ್ಲಿಯ ಪ್ರತಿಯೊಂದು ಬಗೆಯ ಚಲನವಲನವು ಕುವರಸಿಂಹನಿಗೆ ತಿಳಿಯುತ್ತಿತ್ತು. ಆಂಗ್ಲಸೈನಿಕರು ಉಣ್ಣುವದಕ್ಕೆ ಕುಳಿತ ಸಂಧಿಯನ್ನು ನೋಡಿಕೊಂಡು ಅವನು ತನ್ನ ಸೈನ್ಯದೊಡನೆ ಹೋಗಿ ಅದನ್ನು ಮುತ್ತಿದನು. ಆಂಗ್ಲಸೈನ್ಯದಲ್ಲಿ ಈ ಆಕಸ್ಮಿಕ ಪ್ರಕಾರದಿಂದ ವಿಲಕ್ಷಣ ಗೊಂದಲವೆದ್ದಿತು. ಕ್ರಾಂತಿಕಾರಕರು ವಾಯುವೇಗದಿಂದ ಸೈನ್ಯವನ್ನು ಮುತ್ತಿ ಕೈಗೆ ದೊರೆತ ಆಂಗ್ಲಸೈನಿಕರನ್ನು ಕಡಿಗೊಗೆಯತೊಡಗಿದರು. ಈ ಸ್ಥಿತಿಯನ್ನು ನೋಡಿ ಅವರು ಬಹಳವಾಗಿ ಅಂಜಿದರು. ಅವರು ಲಗುಬಗೆಯಿಂದ ತಮ್ಮ ಶಸ್ತ್ರಗಳನ್ನು ತೆಗೆದುಕೊಳ್ಳುವದಕ್ಕೆ ಸಾಗಿದರು. ಅಲ್ಲಿಯಾದರೂ ಕುವರಸಿಂಹನ ಸೈನಿಕರು ಕರಾಲಸ್ವರೂಪಿಗಳಾಗಿ ನಿಂತಿದ್ದರು. ಶಸ್ತ್ರಗಳನ್ನು ತೆಗೆದುಕೊಂಡು ಯುದ್ಧ ಮಾಡುವದಕ್ಕೆ ಅನುಕೂಲವು ದೊರೆಯದ್ದರಿಂದಲೂ, ಕುವರಸಿಂಹನು ಭಯಂಕರವಾದ ಕೋಲಾಹಲವನ್ನೆಬ್ಬಿಸಿದ್ದರಿಂದಲೂ ಆಂಗ್ಲ ಸೈನಿಕರಿಗೆ ಪಲಾಯನಸೂಕ್ತವನ್ನು ಪಠಿಸುವ ಪ್ರಸಂಗವೊದಗಿತು. ಅವರು ಹಿಂಜರಿದ ಕೂಡಲೆ ಹಿಂದೂಸೈನಿಕರು ದ್ವಿಗುಣಿತ ಶಕ್ತಿಯಿಂದ ಮುಂದೆ ಸಾಗಿದರು. ಆಗ ಮಾತ್ರ ಆಂಗ್ಲಸೈನಿಕರಿಂದ ತಡೆದು ನಿಲ್ಲುವದಾಗಲಿಲ್ಲ. ಅವರು ಹಾದಿಯು ದೊರೆತ ಕಡೆಗೆ ಓಡತೊಡಗಿದರು. ಹಿಂದೂಸೈನಿಕರು ಕೆಲವು ದಾರಿಯ ವರೆಗೆ ಅವರ ಬೆನ್ನು ಹತ್ತಿ, ಕೈಗೆ ದೊರೆತ ಜನರ ರುಂಡಗಳನ್ನು ನೆಲಕ್ಕೆ ಕೆಡಹಿದರು. ಎತ್ತ ನೋಡಿದತ್ತ ಭೂಮಿಯು ಆಂಗ್ಲಸೈನಿಕರ ಶಿರಗಳಿಂದ ಮುಚ್ಚಿಹೋಗಿತ್ತು! ಕುವರಸಿಂಹನು ಮೊದಲಿಗಾದ ಪರಾಭವದ ಸೇಡನ್ನು ಈ ಪ್ರಕಾರವಾಗಿ ತೀರಿಸಿಕೊಂಡನು. ಆಂಗ್ಲಸೇನಾಪತಿಯು ಓಡುತ್ತಿರುವ ಸೈನ್ಯಕ್ಕೆ ಧೈರ್ಯಕೊಡುತ್ತ, ಅದನ್ನು ಒಂದೇ ಕಡೆಗೆ ಕೂಡಿಸುವದಕ್ಕೆ ಸಾಹಸಪಡತೊಡಗಿದನು. ಅಪಜಯದ ಅಪಮಾನವು ಅವನಿಗೆ ದುಸ್ಸಹವಾದುದರಿಂದ, ಹಾಗೂ-ಹೀಗೂ ಮಾಡಿ ಸೇನೆಯನ್ನು ಒಟ್ಟುಗೂಡಿಸಿ, ಅವನು ಕುವರಸಿಂಹನೊಡನೆ ಮತ್ತೆ ಯುದ್ಧಕ್ಕೆ ಅಣಿ

ಯಾದನು. ಆ ಯುದ್ಧದಲ್ಲಾದರೂ ಅವನು ಆಂಗ್ಲ ಸೈನ್ಯಕ್ಕೆ ಚನ್ನಾಗಿ ಕೈ ತೋರಿಸಿದನು. ಅಜಮುಗಡದ ಕೋಟೆಯನ್ನು ಸೇರಿದ ಹೊರತು ತಮ್ಮ ರಕ್ಷಣೆಯಾಗಲಾರದೆಂದು ಅವರು ತಿಳಿದರು. ಆಂಗ್ಲರು ಹಿಂದೆ ಸರಿದಂತೆ ಕುವರಸಿಂಹನ ವೀರಾವೇಶವು ಶತಗುಣಿತವಾಯಿತು ಅವನು ಆ ಸೇನೆಯನ್ನು ಬೆನ್ನಟ್ಟಿ ನಡೆದನು.

ಕುವರಸಿಂಹನು ಅಜಮುಗಡದ ಕೋಟೆಯನ್ನು ಬಲವಾಗಿ ಮುತ್ತಿದನು. ಆಗ ಅಲ್ಲಿಯ ದುರ್ಗಾಧಿಪತಿಯಾದ ಮಿಲಮನನು ಬಹಳ ತೊಂದರೆಗೊಳಗಾದನು. ಹೊಸ ಸೇನೆಯು ಸಹಾಯಕ್ಕೆ ಬರದಿದ್ದರೆ ಕೋಟೆಯೊಳಗಿನ ಆಂಗ್ಲ ಸೈನಿಕರ ಪಾಡು ಒಳಿತಾಗದೆಂದು ಅವನು ಸರ್ವಾಧಿಪತಿಯಾದ ಲಾರ್ಡ ಕ್ಯಾನಿಂಗನಿಗೆ ತಿಳಿಸಿದನು. ಕುವರಸಿಂಹನ ಸೇನಾಶರಧಿಯನ್ನೂ, ಅವನ ಸೈನ್ಯದಲ್ಲಿ ಭೋರ್ಗರೆಯುವ ವಿಜಯದುಂದುಭಿ ನಿನಾದವನ್ನೂ ಕೇಳಿ, ಕೋಟೆಯೊಳಗಿನ ಆಂಗ್ಲ ಸೈನಿಕರ ಹೃದಯವು ಬಿರಿದು ಇಬ್ಭಾಗವಾಗತೊಡಗಿತ್ತು.

ಲಾರ್ಡ ಮಾರ್ಕರ್, ಕರ್ನಲ್ ಡಗ್ಲಸ್, ಜನರಲ್ ಲುಗಾರ್ಡ ಮೊದಲಾದ ಸೇನಾಪತಿಗಳು ಬೇಗನೆ ತನ್ನ ಸಹಾಯಕ್ಕೆ ಬರುವರೆಂಬ ವಿಶ್ವಾಸವು ಆ ದುರ್ಗಾಧಿಪತಿಯಾದ ಮಿಲಮನನಿಗೆ ಒಳಿತಾಗಿತ್ತು. ಆ ಸೇನೆಯು ಬರುವದರೊಳಗೆ ಒಮ್ಮೆ ಕುವರಸಿಂಹನ ಶಕ್ತಿ ಪರೀಕ್ಷೆ ಮಾಡಬೇಕೆಂದು ಅವನು ತನ್ನ ಸೈನ್ಯವನ್ನು ಕೋಟೆಯೊಳಗಿಂದ ಹೊರಗೆಡಹಿದನು. ಉಭಯ ಸೈನ್ಯದ ನಡುವೆ ತುಮುಲವಾದ ಸಂಗ್ರಾಮವೆಸಗಿತು.

ಕುವರಸಿಂಹನ ಸೈನ್ಯವು ಮಿಲಮನನ ಸೈನ್ಯಕ್ಕಿಂತ ಎಷ್ಟೋ ಪಾಲು ದೊಡ್ಡದಾಗಿತ್ತು. ಇದಲ್ಲದೆ ಮೇಲಿಂದ ಮೇಲೆ ದೊರೆತ ವಿಜಯದಿಂದ ಕ್ರಾಂತಿಕಾರಕ ಜನರು ಬಹಳ ಹುರುಪುಗೊಂಡವರಾಗಿದ್ದರು. ಇಂತಹರ ಮುಂದೆ ಅಲ್ಪ ಸಂಖ್ಯಾಕವೂ, ಅಪಯಶದಿಂದ ನಿರುತ್ಸಾಹಿಯೂ ಆದ ಆಂಗ್ಲ ಸೈನ್ಯದ ಆಟವು ಹೇಗೆ ನಡೆಯಬೇಕು? ದುರ್ಗದಿಂದ ಹೊರಬಿದ್ದು ಬಂದದ್ದು ಒಳಿತಾಗಲಿಲ್ಲವೆಂದು ಮಿಲಮನನಿಗೆ ಪಶ್ಚಾತ್ತಾಪವಾಯಿತು. ಭೀಷ್ಮ-ದ್ರೋಣರನ್ನು ನೆನಪು ಮಾಡಿಕೊಡುವ ರಣಶಾರ್ದೂಲನಾದ ಕುವರಸಿಂಹನ ಪರಾಕ್ರಮಕ್ಕೆ ಆಂಗ್ಲರು ಹಣ್ಣುಗಾಯಿ-ನೀರಗಾಯಿಯಾಗಿ ಮತ್ತೆ ಕೋಟೆಯನ್ನು ಸೇರಬೇಕಾಯಿತು. ಈ ರಣಕಂದನದಲ್ಲಿ ಅನೇಕ ಆಂಗ್ಲರು ಗತಾಸುಗಳಾದರು. ಆಗ ಕೋಟೆಯ ಸಂರಕ್ಷಣೆ ಮಾಡುವ ಕಾರ್ಯವು ಸೇನಾಪತಿಗೆ ಅಸಾಧ್ಯವಾಗತೊಡಗಿತು. ದಿನದಿನಕ್ಕೆ ಒಳಗಿನ ಜನರು ಕಡಿಮೆಯಾಗತೊಡಗಿದರು. ಸೇನಾಪತಿಯಾದ ಮಿಲಮನನು ಬಹಳ ತೊಂದರೆಗೊಳಗಾಗಿದ್ದನು. ಅವನು ಹೊರಗಿನಿಂದ ಸಹಾಯವು ಬರಬಹುದೆಂದು ಗಟ್ಟಿ ಮನಸ್ಸು ಮಾಡಿಕೊಂಡು ದುರ್ಗದ

ರಕ್ಷಣೆ ಮಾಡಹತ್ತಿದ್ದನು. ಆಗ ಅಜಮಗಡ ಪಟ್ಟಣವು ಬಹುತರವಾಗಿ ಕುವರಸಿಂಹನ ವಶವಾಗಿತ್ತು. ಆವನ ಸೈನ್ಯವು ಪಟ್ಟಣದ ಹಾಗು ಕೋಟೆಯ ಸುತ್ತಮುತ್ತು ಮಂಡಲಾಕಾರವಾಗಿ ಪಸರಿಸಿತ್ತು.

ಕುವರಸಿಂಹನು ಆಂಗ್ಲರಿಗೆ ಅಜಿಂಕ್ಯನಾಗಹತ್ತಿದ್ದನು. ಈಗ ಮಾತ್ರ ಅವನು ಅವರಿಗೆ ಯಮಸ್ವರೂಪಿಯಾಗಿ ಕಾಣಹತ್ತಿದನು. ಜೋನಪುರದ ಬಳಿಯ ಸಂಗ್ರಾಮದಲ್ಲಿ ಆಂಗ್ಲ ಸೇನಾಪತಿಯ ಮಗನು ಕ್ರಿಸ್ತವಾಸಿಯಾದದ್ದರಿಂದ ಆಂಗ್ಲರು ಕುವರಸಿಂಹನಿಗೆ ಮತ್ತಿಷ್ಟು ಹೆದರಹತ್ತಿದ್ದರು. ಅವರು ಅಂಜುತ್ತ ಹೋದಂತೆ ಕುವರಸಿಂಹನ ಬಲವು ಹೆಚ್ಚಾಗುತ್ತ ನಡೆಯಿತು. ಈ ಸಮಯದಲ್ಲಿ ಆಂಗ್ಲ ಸರ್ವಾಧಿಕಾರಿಯಾದ ಲಾರ್ಡ ಕ್ಯಾನಿಂಗನು ಅಲಹಾಬಾದಿನಲ್ಲಿದ್ದನು. ಅವನು ಆಂಗ್ಲರ ಪರಾಭವದ ವಾರ್ತೆಯನ್ನು ಕೇಳಿ ಬಹಳೇ ತೊಂದರೆಗೊಳಗಾದನು. 'ಅಜಮಗಡವೂ ಅಲ್ಲಿಯ ದುರ್ಗವೂ ಕುವರಸಿಂಹನ ವಶವಾದರೆ ಅವನು ಅಜೇಯನಾಗುವನು. ಅನಂತರದಲ್ಲಿ ಅವನನ್ನು ಜಯಿಸುವದು ಅಸಾಧ್ಯವಾಗುವದು. ಅಜಮಗಡವು ವಶವಾದೊಡನೆಯೆ ಅವನು ವಾರಣಾಸಿ ಲಖನೌ ಮೊದಲಾದ ಆಯಕಟ್ಟಿನ ಸ್ಥಳಗಳನ್ನು ಸ್ವಾಧೀನಪಡಿಸಿಕೊಳ್ಳುವನು. ಶಕ್ತಿಮೀರಿ ಪ್ರಯತ್ನ ಮಾಡಿ ಆವನನ್ನು ಪರಾಭೂತ ಮಾಡದಿದ್ದರೆ ಆಂಗ್ಲರ ಬಾಳ್ವೆಯು ಒಳಿತಾಗದು!' ಮೊದಲಾದ ವಿಚಾರಗಳು ಕ್ಯಾನಿಂಗನ ತಲೆಯಲ್ಲಿ ಸೇರಿದ್ದವು. ಅವನು ಕುವರಸಿಂಹನ ಶೂರತನ ಸಾಹಸ ದೃಢನಿಶ್ಚಯ ಮೊದಲಾದ ಉದಾತ್ತ ಗುಣಗಳನ್ನು ಕೊಂಡಾಡಹತ್ತಿದನು. ಉತ್ತರ ವಯಸ್ಕನಾದ ಅವನಲ್ಲಿ ಈ ಬಗೆಯ ರಣೋತ್ಸಾಹವೂ ಸಮರಕೌಶಲ್ಯವೂ ಇರುವದನ್ನು ನೋಡಿ ಲಾರ್ಡ ಕ್ಯಾನಿಂಗನು ಹತಬುದ್ಧನಾದನು. ಆಗ ಅವನು ನಿಸ್ಪೃಹ ವೃತ್ತಿಯಿಂದ:-"ಕುವರಸಿಂಹನು ಎಂಬತ್ತು ವರ್ಷದ ಮುದುಕನಾಗಿರದೆ ನಾಲ್ವತ್ತು ವರ್ಷದ ಪ್ರಾಯದವನಾಗಿದ್ದರೆ ಆಂಗ್ಲ ಜನರು ಇಷ್ಟು ದಿನಗಳ ವರೆಗೆ ಬಿಹಾರ ಪ್ರಾಂತದಲ್ಲಿ ವಾಸಿಸುತ್ತಿರಲಿಲ್ಲ. ಇಂದಿನ ವರೆಗೆ ಆಂಗ್ಲರಿಗೆ ಇಂತಹ ನರಶಾರ್ದೂಲನಾದ ಹಗೆಯು ಎಂದೂ ದೊರೆತಿರಲಿಕ್ಕಿಲ್ಲ!" ಹೀಗೆ ಧನ್ಯೋದ್ಗಾರ ತೆಗೆದನು.

ಲಾರ್ಡ ಕ್ಯಾನಿಂಗನ ವಿಚಾರಗಳು ತಥ್ಯವಾದವುಗಳಿದ್ದವು. ಅಜಮಗಡವು ಕುವರಸಿಂಹನ ಸ್ವಾಧೀನವಾಯಿತೆಂದರೆ ಆಂಗ್ಲರ ಪುಣ್ಯಾಬಲವೇ ತೀರಿದಂತಾಗುತ್ತಿತ್ತು. ಈಗಾಗಲೆ ಸಣ್ಣ-ದೊಡ್ಡ ಕೋಟೆ-ಕೊತ್ತಲಗಳು ಕುವರಸಿಂಹನ ವಶವಾಗಿದ್ದು, ಆಯಕಟ್ಟಿನ ಸ್ಥಳವಾದ ವಾರಣಾಸಿಯು ಸಹ ಅವನ ಸ್ವಾಧೀನವಾಯಿತು. ಆಗ ಮಾತ್ರ ಕ್ಯಾನಿಂಗನು ಒಳ್ಳೆಯ ತೊಂದರೆಯಲ್ಲಿ ಬಿದ್ದನು. ಅವನು ಕುವರಸಿಂಹನನ್ನು ಹಣ್ಣಿಗೆ ತರುವದಕ್ಕಾಗಿ ಅಲಹಾಬಾದ

ಲಖನೌ ಮೊದಲಾದ ಸ್ಥಳಗಳಲ್ಲಿಯು ಸೈನ್ಯವನ್ನು ಕಳುಹಿಸಿದನು.

ಅಲಹಾಬಾದದಿಂದ ಲಾರ್ಡ ಮಾರ್ಕಕಾರನೂ ಲಖನೌದ ಸೇನಾಪತಿಯಾದ ಜನರಲ್ ಲುಗಾರ್ಡನೂ ಕುವರಸಿಂಹನ ಪಾರಿಪತ್ಯಗೊಳಿಸಬೇಕೆಂದು ದೊಡ್ಡ ಸೈನ್ಯವನ್ನು ತೆಗೆದುಕೊಂಡು ಬಂದಿದ್ದರು. ಅವರ ಶೌರ್ಯ ಸಾಹಸಗಳು ವ್ಯರ್ಥವಾಗಿ ಕುವರಸಿಂಹನು ವಿಜಯಶಾಲಿಯಾದನು. ಆಗ ಕರ್ನಲ್ ಡಗ್ಲಸನೆಂಬ ಸೇನಾಪತಿಯು ನಥಾಯಿಗ್ರಾಮದ ಬಳಿಯಲ್ಲಿ ಅವನಿಗೆ ಎದುರಾದನು. ಲಾರ್ಡ ಮಾರ್ಕಕಾರನೂ, ಜನರಲ್ ಲುಗಾರ್ಡನೂ ಡಗ್ಲಸನ ಸೈನ್ಯವನ್ನು ಕೂಡಿಕೊಂಡರು. ಈ ಮೂವರು ನಾಮಾಕಿಂತ ಆಂಗ್ಲ ಸೇನಾಪತಿಗಳು ಕುವರಸಿಂಹನ ನಾಶಕ್ಕಾಗಿ ವಿಶ್ವಪ್ರಯತ್ನ ಮಾಡತೊಡಗಿದರು.

ಈ ಮೂರು ಜನ ಸೇನಾಪತಿಗಳು ತನ್ನ ಮೇಲೆ ಸಾಗಿಬರುವರೆಂಬದನ್ನು ಕುವರಸಿಂಹನು ಮೊದಲೇ ತಿಳಿದಿದ್ದನು. ಅವನ ಸೈನ್ಯವು ಗಂಗಾತಟಾಕದಲ್ಲಿದ್ದುದರಿಂದ ಶತ್ರುಗಳ ದಾಳಿಬಂದಲ್ಲಿ ನದಿಯಿಂದ ಆತಂಕವಾಗುವಂತಿತ್ತು. ನೌಕೆಗಳ ಸಹಾಯದಿಂದ ನದಿಯನ್ನು ದಾಟುವದು ಒಳಿತೆಂದು ಅವನಿಗೆ ತಿಳಿಯಿತು.

ಕರ್ನಲ್ ಡಗ್ಲಸನು ಯುದ್ಧಕಲಾ ಕೋವಿದನಿದ್ದನು. ತಂತ್ರಯುದ್ಧದಿಂದ ಶತ್ರುಗಳನ್ನು ಹೇಗೆ ತೊಂದರೆಯಲ್ಲಿ ಕೆಡಹಬೇಕೆಂಬದನ್ನು ಅವನು ಪೂರ್ಣವಾಗಿ ಅರಿತಿದ್ದನು. ಗಂಗಾತಟಾಕದಲ್ಲಿ ಕುವರಸಿಂಹನು ಯುದ್ಧ ಮಾಡುವದಿಲ್ಲವೆಂಬದನ್ನು ಅವನು ಅರಿತಿದ್ದನು. ಇಂತಹ ಪ್ರಸಂಗದಲ್ಲಿ ಅವನನ್ನು ಗಂಗಾಪಾರವಾಗಗೊಡುವದು ಧೂರ್ತತನವಲ್ಲೆಂದು ಅವನು ತಿಳಿದುಕೊಂಡನು. ಕುವರಸಿಂಹನ ಸೈನ್ಯದ ಹಿಂದೆಯೇ ಗಂಗಾನದಿಯು ಇದ್ದುದರಿಂದ, ಮೂರು ಕಡೆಯು ಹೊಡತಕ್ಕೆ ಅವನು ಪೂರ್ಣವಾಗಿ ಪರಾಭವಹೊಂದುವನೆಂದು ಡಗ್ಲಸನ ತರ್ಕವಿತ್ತು. ಕುವರಸಿಂಹನು ಗಂಗಾಪಾರವಾಗಬಾರದೆಂದು ಅವನು ಅಲ್ಲಿಯ ನೌಕೆಗಳನ್ನೆಲ್ಲ ನೀರಿನಲ್ಲಿ ಮುಳುಗಿಸಿ ಬಿಟ್ಟಿದ್ದನು.

ಕುವರಸಿಂಹನು ಸಾಮಾನ್ಯಕೋಟಿಯೊಳಗಿನ ಮನುಷ್ಯನಿರಲಿಲ್ಲ. ಅವನೂ ಎಲ್ಲ ಬಗೆಯ ತಂತ್ರಯುದ್ಧಗಳನ್ನು ಬಲ್ಲವನಾಗಿದ್ದನು. ಅವನು ಡಗ್ಲಸನಿಗಿಂತಲೂ ಹೆಚ್ಚು ಮಳೆಗಾಲಗಳನ್ನು ಭೋಗಿಸಿದವನಾಗಿದ್ದನು. ಇದಲ್ಲದೆ ಅವನು ದೃಢನಿಶ್ಚಯದಿಂದ ವಿಲಕ್ಷಣವಾದ ಸ್ವಾರ್ಥತ್ಯಾಗ ಮಾಡುವದಕ್ಕೆ ಸಿದ್ಧನಾಗಿದ್ದನು. ಇಂತಹನು ಡಗ್ಲಸನ ಈ ಯುಕ್ತಿಯನ್ನು ಅರಿಯದಿರುವನೆ? ಬಿಹಾರದ ಭೀಷ್ಮನಾದ ಕುವರಸಿಂಹನು ಅವನ ವ್ಯೂಹವನ್ನು ಹೇಗೆ ನಾಶಗೊಳಿಸಿದನೆಂಬದು ಮುಂದೆ ತಿಳಿಯುವದು.

# ಶಂಕಾ ನಿರಸನ.

ರಾಣಿಯು ಅಜಯಸಿಂಹನೊಡನೆ ಬಂದ ಅತುಲರೂಪಶಾಲಿನಿಯಾದ ನವತರುಣಿಯನ್ನು ನೋಡಿದೊಡನೆಯೆ ವಿಲಕ್ಷಣ ಗೊಂದಲದಲ್ಲಿ ಬಿದ್ದಳು. ಪತಿಯ ಆಗಮನ ಸಂಭ್ರಮದಿಂದ ಕುಲುಕುಲು ನಗುತ್ತಿದ್ದ ಅವಳ ಮನಮೋಹಕ ವದನವು ಒಂದೇ ಕ್ಷಣದಲ್ಲಿ ನಿರುತ್ಸಾಹದಿಂದ ಕಳೆಗುಂದಿತು. ಹೃದಯಾಂಬುಧಿಯಲ್ಲಿ ಔದಾಸೀನ್ಯ, ದುಃಖ ನೈರಾಶ್ಯಗಳ, ತರಂಗಗಳು ವೇಗದಿಂದ ತಾಕಲಾಡತೊಡಗಿದವು. ಅವಳ ಮನಸ್ಸು ಚಂಚಲೆಗಿಂತಲೂ ಚಾಂಚಲವಾಯಿತು. ಅವಳ ಮನಸ್ಸಿನಲ್ಲುಂಟಾದ ಸ್ಥಿತ್ಯಂತರವನ್ನು ಅಜಯಸಿಂಹನು ಗುರುತಿಸದೆ ಇರಲಿಲ್ಲ. ಪರಿಣಾಮವು ಎಲ್ಲಿಯ ವರೆಗೆ ಹೋಗುವದೋ ನೋಡಬೇಕೆಂಬ ಉದ್ದೇಶದಿಂದ ಅವನು ತನ್ನ ಮನದಲ್ಲಿ ಹುಟ್ಟಿದ ಯಾವ ವಿಕಾರಗಳನ್ನೂ ಬೈಲಿಗೆಳೆಯಲಿಲ್ಲ. ರಾಣಿಯಲ್ಲಿ ಹುಟ್ಟಿದ ಬುದ್ಧಿಯು ಸ್ತ್ರೀಸ್ವಾಭಾವಿಕ ಗುಣವಾಗಿದ್ದರೂ ಅದು ಉಚ್ಚ ತರಗತಿಯ ಸ್ತ್ರೀಯರಲ್ಲಿರಬಾರದೆಂದು ಅವನ ಅಭಿಪ್ರಾಯವಿತ್ತು. ಪ್ರಬಲವಾದ ಒಂದು ಮನೋವಿಕಾರದಿಂದ ಶಿಥಿಲಮನಸ್ಕಳಾದ ರಾಣಿಯಿಂದ ಯಥಾಸ್ಥಿತವಾದ ಆಗತ-ಸ್ವಾಗತಗಳಾಗದ್ದರಿಂದ, ಅಜಯಸಿಂಹನು ತನ್ನ ಮನಸ್ಸಿನಲ್ಲಿ ಹುಟ್ಟಿದ ಶಂಕೆಯು ನಿರರ್ಥಕವಾದದ್ದಲ್ಲವೆಂದು ಗ್ರಹಿಸಿದನು. ಇಷ್ಟು ದಿನಗಳ ವರೆಗ ಹಾಸಿಗೆಯನ್ನು ಹಿಡಿದ ತನಗೆ ಪ್ರಿಯಪತ್ನಿಯ ದರ್ಶನವಿಲ್ಲದ್ದರಿಂದ, ಇಂದಿನ ಅವಳ ಸಂಯೋಗವು ಸ್ವರ್ಗೀಯ ಆನಂದವನ್ನುಂಟುಮಾಡುವದೆಂದು ಅವನ ಭಾವನೆಯಾಗಿತ್ತು; ಆದರ ಅದೆಲ್ಲವೂ ಮೃಗಜಲದಂತೆ ಮಾಯವಾದದ್ದರಿಂದ, ಅವನ ಮನಸ್ಸು ಕ್ಲೇಶಗೊಳ್ಳತೊಡಗಿತು.

ಅಜಯಸಿಂಹನು ಮಂದಿರವನ್ನು ಹೊಕ್ಕನು. ಹಿಂದಿನಿಂದ ಲೀಲಾವತಿಯೂ ನಡೆದಳು. ರಾಣಿಯೂ ತಾರಾದೇವಿಯೂ ಅವಳ ಹಿಂದೆ ನಡೆದಿದ್ದರು. ಆಗ ರಾಣಿಯು:—"ತಾರಾದೇವಿ, ಈ ಬೇಟೆಯು ಇವರಿಗೆ ಅಡವಿಯಲ್ಲಿಯೇ ದೊರೆತಂತೆ ಕಾಣುತ್ತದೆ."

ತಾರಾದೇವಿಯ ಮನಸ್ಸಾದರೂ ಶಂಕಾಗ್ರಸ್ತವಾಗಿತ್ತು. ಅವಳಿಗೆ ರಾಣಿಯ ಮಾತುಗಳು ಅಯಥಾರ್ಥವಾಗಿ ಕಾಣಲಿಲ್ಲ ಎಲ್ಲರೂ ಒಳಗೆ ಹೋದ ಮೇಲೆ ಅಜಯನು ತನ್ನ ರಾಣಿಯನ್ನು ಕುರಿತು:—"ಇವರನ್ನು ನೀನು ಗುರುತಿಸ್ಟುವೆಯೇನು?" ಎಂದು ಲೀಲಾವತಿಯ ಕಡೆಗೆ ಬೆರಳು ತೋರಿಸಿ ಕೇಳಿದನು.

"ಇಲ್ಲ; ನನಗೆ ಇವರ ಗುರುತು ಇರುವದಿಲ್ಲ. ನಾನು ಇಂದೇ ಇವ

ರನ್ನು ನೋಡಿದೆನು. ಮುಖಲಕ್ಷಣವು ಆಂಗ್ಲವನಿತೆಯರಂತಿರುವದು; ಆದರೆ ಇವರ ಉಡಿಗೆ-ತೊಡಿಗೆಗಳನ್ನು ನೋಡಿದರೆ ಹಿಂದುಗಳಂತೆ ತೋರುವರು.''

''ನಿನ್ನ ತರ್ಕವು ನಿಜವಾದದ್ದಿರುವದು. ಇವರು ಆಂಗ್ಲವನಿತೆಯರಿದ್ದು, ಹಿಂದೂ ಪದ್ಧತಿಯ ಉಡುಪುಗಳನ್ನು ಬುದ್ಧಿಪೂರ್ವಕವಾಗಿ ಧರಿಸಿರುವರು. ನಾನು ಬೇನೆಯಿಂದ ಅಸಾವಧ ಸ್ಥಿತಿಯಲ್ಲಿದ್ದಾಗ ಇವರು ನನಗೆ ಚನ್ನಾಗಿ ಆರೈಕೆ ಮಾಡಿರುವರು.''

''ಅಂತೆಯೇ ಇಷ್ಟು ಸ್ನೇಹಸಂಬಂಧವಾಗಿರುವದು.''

ರಾಣಿಯ ಈ ಮಾರ್ಮಿಕ ಮಾತಿನ ಅರ್ಥವು ಅಜಯಸಿಂಹನಿಗೆ ಚನ್ನಾಗಿ ತಿಳಿಯಿತು. ಲೀಲಾವತಿಗೆ ಮಾತ್ರ ಅದರ ಗಂಧವೂ ತಗಲಿಲ್ಲ. ಅಜಯನು ತನ್ನ ವರ್ಣನೆ ಮಾಡಿದ್ದನ್ನು ಮಾತ್ರ ಅವಳು ತಿಳಿದುಕೊಂಡಳು.

''ಅಜಯಸಿಂಹರು ನನಗೆ ಪುನರ್ಜನ್ಮವಿತ್ತಿರುವರು. ನಾನು ಎಷ್ಟು ಜನ್ಮಗಳನ್ನು ಹೊತ್ತು ತೀರಿಸಿದರೂ ಇವರ ಉಪಕಾರವು ತೀರದವಾಗಿರುವದು.''' ಎಂದು ಲೀಲಾವತಿಯು ಕೃತಜ್ಞತೆಯಿಂದ ಸುಡಿದು, ರಾಣಿಯನ್ನು ಕುರಿತು:—

''ರಾಣಿಯೆಂಬವರು ನೀವೇ ಏನು!''

''ಅಹುದು. ಇಷ್ಟು ದಿನಗಳ ವರೆಗೆ ಜನರು ನನಗೆ ರಾಣಿಯೆನ್ನುತ್ತಿದ್ದರು. ಇನ್ನು ಮೇಲೆ ಮಾತ್ರ..............''

''ರಾಣೀ, ಕ್ಷುಲ್ಲಕ ವಿಚಾರಗಳಿಗೆ ಆಸ್ಪದವೀಯಬೇಡ. ನಿನ್ನ ಮಾರ್ಮಿಕ ಮಾತುಗಳು ಅನ್ಯರ ಮನಸ್ಸನ್ನು ನೋಯಿಸುವವಾದ್ದರಿಂದ, ನಿರರ್ಥಕವಾದ ಮಾತು ಒಳಿಸಬೇಡ.''

ಅಜಯನ ಈ ಗೂಢವಾದ ಮಾತಿನಿಂದ ರಾಣಿಯ ಭ್ರಮ ನಿರಸನವಾಗಲಿಲ್ಲ. ಮುಗ್ಧಭಾವದ ಲೀಲಾವತಿಗೆ ಅವರ ಮಾತಿನ ಗಂಧವೂ ತಗಲಲಿಲ್ಲ. ಅವಳ ಸ್ಫಟಿಕ ಸದೃಶವಾದ ಹೃದಯದಲ್ಲಿ ಇಂತಹ ವಿಚಾರಗಳಿಗೆ ಎಡೆಯು ಹೇಗೆ ದೊರೆಯಬೇಕು?

ಲೀಲಾವತಿಯ ಮನಸ್ಸಿನಲ್ಲಿ ಒಂದು ಅಜ್ಞಾತ ವಿಚಾರವು ಪ್ರಾದುರ್ಭವಿಸಿತ್ತು. ಅಜಯನು ವಿವಾಹಿತನಿದ್ದುದರಿಂದಲೂ, ರಾಣಿಯಂತಹ ಅದ್ವಿತೀಯ ರೂಪವತಿಯೂ ಗುಣಮಣಿಯೂ ಆದ ಸತಿಯು ಅವನಿಗಿದ್ದುದರಿಂದಲೂ ಅವಳ ಆಶೆಯು ಸಂಪೂರ್ಣ ಮಾಯವಾಗಿ ಹೋಯಿತು. ಅವಳು ಅಜಯನಲ್ಲಿ ಪ್ರೇಮಾರ್ಪಣೆ ಮಾಡಿದ್ದೇನೋ ನಿಜವಾಗಿತ್ತು; ಆದರೆ ಅದರ ಪ್ರತಿಫಲವನ್ನು ಬಯಸುವದಕ್ಕೆ ಮಾತ್ರ ಮನಸ್ಸಿಲ್ಲದವಳಾಗಿದ್ದಳು. ಅಜಯಸಿಂಹನು ಅಸಾವಧಸ್ಥಿತಿಯಲ್ಲಿದ್ದಾಗ ಮುಖವಿಲೋಲನವಾದಾಗಲೆ ಅವಳು ತನ್ನ ಹೃದಯಮಂದಿರದಲ್ಲಿ

ಅವನ ಮೂರ್ತಿಯನ್ನು ಸ್ಥಾಪಿಸಿಕೊಂಡಿದ್ದಳು. ಹೀಗಿದ್ದರೂ ತನ್ನ ಮನೋಗತವು ಯಾರಿಗೂ ತಿಳಿಯದಂತೆ ಅತ್ಯಂತ ಜಾಗ್ರತೆಯಿಂದ ನಡೆಯುತ್ತಿದ್ದಳು. ಪ್ರತ್ಯಕ್ಷ ಅಜಯಸಿಂಹನಿಗೆ ಸಹ ಅವಳ ಹೃದಯಸ್ಥಿತಿಯು ಗೊತ್ತಾಗಿರಲಿಲ್ಲ. ಇಂತಹ ನಿರ್ಮಲಹೃದಯದ ತರುಣಿಯು ತನ್ನ ಇಚ್ಛಿತ ಹೃದಯದೇವತೆಯನ್ನು ತನ್ನ ಕಡೆಗೆ ಎಳೆದುಕೊಂಡು, ಸಾಧ್ವಿಯಾದ ರಾಣಿಯ ಮನಸ್ಸನ್ನು ನೋಯಿಸುವದಕ್ಕೆ ಮನವೆಳಸುವಳೇಕೆ? ಪತಿಯ ಪ್ರೇಮದ ಪೂರ್ಣ ಬಾಧ್ಯಸ್ಥಳು ತಾನಿರುವಾಗ ಮತ್ತೊಬ್ಬ ಪಾಲುಗಾರಳು ಬಂದಳೆಂಬ ಕಲ್ಪನೆಯಿಂದ ರಾಣಿಯು ಸ್ತ್ರೀಸ್ವಭಾವಕ್ಕನುಸಾರವಾಗಿ ಅಜಯಸಿಂಹನ ಮೇಲೆ ಸಿಟ್ಟಾಗಿದ್ದಳು.

ಒಂದೆರಡು ದಿವಸಗಳಲ್ಲಿ ರಾಣಿಯೂ ತಾರಾದೇವಿಯೂ ಲೀಲಾವತಿಯ ಉದಾತ್ತಭಾವನೆಗಳ ಹಾಗು ಅವಳಲ್ಲಿದ್ದ ಸದ್ಗುಣಗಳ ವಿಷಯವಾಗಿ ಚನ್ನಾಗಿ ಮನವರಿಕೆ ಮಾಡಿಕೊಂಡರು. ಅವಳು ಸೌಜನ್ಯದ ನಿಧಿಯೂ ಸಾತ್ವಿಕಳೂ ಇರುವಳೆಂಬದು ಅವರಿಗೆ ಗೊತ್ತಾಯಿತು. ತನ್ನ ಪತಿಯಲ್ಲಿ ಇವಳು ಪ್ರಣಯವುಳ್ಳವಳಾಗಿರುವಳೆಂಬ ಸಂಶಯ ಪಿಶಾಚಿಯು ಇನ್ನೂ ರಾಣಿಯಲ್ಲಿ ವಾಸವಾಗಿತ್ತು. ಅಜಯಸಿಂಹನ ಮನಸ್ಸು ಅವಳ ವಿಷಯಕ್ಕೆ ಅತ್ಯಂತ ವಿಚಿತ್ರವಿರುವದೆಂಬದನ್ನು ರಾಣಿಯು ಮನವರಿಕೆ ಮಾಡಿಕೊಂಡಿದ್ದಳು. ಲೀಲಾವತಿಯ ಮನಸ್ಸನ್ನು ಪರೀಕ್ಷಿಸಿ ಬಿಡಬೇಕೆಂದು ರಾಣಿಯೂ ತಾರಾದೇವಿಯೂ ನಿರ್ಧರಿಸಿಕೊಂಡು ಅವಳ ಬಳಿಗೆ ಹೋದರು.

"ಲೀಲಾವತಿ, ನೀವು ಪರಧರ್ಮೀಯ ಜನರಿದ್ದು, ನಮ್ಮ ಸಂಗಡ ಹೀಗೆ ಬೆರತು ನಡೆಯುವದನ್ನು ನೋಡಿ ಬಹಳೇ ಆನಂದವಾಗಿದೆ. ನಿಮ್ಮಲ್ಲಿಯ ಸದ್ಗುಣಗಳು ಅವರ್ಣನೀಯವಿರುವವು."

"ಧರ್ಮವು ಭಿನ್ನವಿದ್ದರೂ ನೀತಿಯು ಭಿನ್ನವಿರುವದಿಲ್ಲ. ಸಕಲ ಮಾನವೀ ಪ್ರಾಣಿಗಳು ನಿರ್ವ್ಯಾಜಪ್ರೇಮದಿಂದ, ನಡೆಯುವದರಲ್ಲಿಯೇ ಭೂಷಣವಿರುತ್ತದಲ್ಲದೆ, ಯಾವದೊಂದು ಕ್ಷುಲ್ಲಕ ವಿಚಾರದಿಂದ ದ್ವೇಷಭಾವನೆಯನ್ನು ತಳೆಯುವದು ಅನುಚಿತವೆಂದು ನಾನು ತಿಳಿದಿರುವೆನು."

ಲೀಲಾವತಿಯು ರಾಣಿಯ ಮಾತಿಗೆ ಹೀಗೆಂದು ಉತ್ತರವಿತ್ತ ಕೂಡಲೆ, ತಾರಾದೇವಿಯು ಅವಳನ್ನು ಕುರಿತು:—

"ನೀವು ಅಜಯಸಿಂಹರ ಆರೈಕೆ ಮಾಡಿ ನಮ್ಮನ್ನು ಪೂರ್ಣ ಋಣಿಯನ್ನಾಗ ಮಾಡಿದಿರಿ. ನಿಮ್ಮ ವಿಷಯಕ್ಕೆ ಅವರು ಬಹಳೇ ಆದರಬುದ್ಧಿಯುಳ್ಳವರಾಗಿರುವರು."

"ನಾನು ಹತ್ತು ಜನ್ಮಗಳನ್ನು ಹೊತ್ತು ಸೇವೆ ಮಾಡಿದರೂ ಅವರ ಭಾ-

ರವು ಇಳಿಯುವಂತಿಲ್ಲ. ನಾನು ಮಾತ್ರ ಅವರಿಗೆ ಅಂತಹ ಹೇಳಿಕೊಳ್ಳುವ ಉಪಕಾರವನ್ನೇನೂ ಮಾಡಿಲ್ಲ. ನೀವು ಮೇಲಿಂದ ಮೇಲೆ ಈ ಮಾತನ್ನಾಡಿ ನನ್ನನ್ನು ನಾಚಿಸಬೇಡಿರಿ.''

''ಅಜಯಸಿಂಹರಲ್ಲಿ ನೀವು ನಿಷ್ಕಲಂಕ ಪ್ರೇಮವುಳ್ಳವರಿರುವಿರಲ್ಲವೆ?''

''ಅಹುದು. ನನ್ನ ಪ್ರೇಮವು ಸಂಪೂರ್ಣವಾಗಿ ವಿಶುದ್ಧವಾದದ್ದಾಗಿರುವದು. ನಾನು ನನ್ನ ಪ್ರೇಮ ಸರ್ವಸ್ವವನ್ನು ಅವರಿಗೆ ಅರ್ಪಿಸಿರುವೆನು. ರಾಣೀ, ನಿಮ್ಮ ಮುಂದೆ ನಾನು ಯಾವ ಮಾತನ್ನೂ ಬಚ್ಚಿಡದೆ ಹೇಳುವೆನು; ಕೇಳಿರಿ. ನಾನು ಅವರಲ್ಲಿ ಪ್ರೇಮವುಳ್ಳವಳಾಗಿದ್ದರೂ, ನನ್ನ ಪ್ರೇಮಕ್ಕೆ ಅವರಿಂದ ಪ್ರತಿಫಲವು ದೊರೆಯಬೇಕೆಂದು ಬಯಸುತ್ತಿರುವದಿಲ್ಲ. ಹಾಗೆ ಬಯಸಿದರೆ ನನ್ನಂತಹ ರಾಕ್ಷಸಿಯು ನಾನೇ ಆಗಲಿಕ್ಕಿಲ್ಲವೆ?''

''ನೀವು ಅವಿವಾಹಿತರಿರುವಿರಲ್ಲವೆ?'' ಎಂದು ತಾರಾದೇವಿಯು ಲೀಲಾವತಿಯನ್ನು ಕೇಳಿದಳು.

''ಅಹುದು. ನಾನು ಅವಿವಾಹಿತಳಿರುವೆನು; ಈಗಲೂ ಇರುತ್ತೇನೆ; ಮುಂದೆಯಾದರೂ ಇರುವೆನು.''

''ಹೀಗೇಕೆ ಹಟವನ್ನು ಹಿಡಿದಿರುವಿರಿ?''ರಾಣಿಯು ಹೀಗೆ ಕೇಳಿದಳು.

''ನಾನು ನನ್ನ ಪ್ರೇಮವನ್ನು ಎರಡನೆಯ ಸ್ಥಳದಲ್ಲಿ ತೊಡಗಿಸಿರುವದರಿಂದ, ಹೀಗೆ ಖಂಡಿತನ ಮಾಡಬೇಕಾಗಿದೆ.''

''ಈ ಬಗೆಯ ನಿರಪೇಕ್ಷ ಪ್ರೇಮವು ನಿಷ್ಫಲವಲ್ಲವೆ?''

''ನನ್ನ ಮನಸ್ಸಿನ ಒಲವು ಹೀಗೆಯೇ ಇರುವದು. ಅದು ಯಾವ ವಿಧದಿಂದಲೂ ತಿರುಗಲೊಲ್ಲದು. ಅದಕ್ಕೆ ನಾನು ಮಾಡಬೇಕಾದುದೇನು?'' ಎಂದು ಲೀಲಾವತಿಯು ರಾಣಿಯ ಮಾತಿಗೆ ಉತ್ತರವಿತ್ತಳು.

ಲೀಲಾವತಿಯ ಸ್ವಭಾವದ ಬಗ್ಗೆ ರಾಣಿಗೂ ತಾರಾದೇವಿಗೂ ಈಗ ಚೆನ್ನಾಗಿ ನಂಬಿಗೆಯಾಯಿತು. ಅವಳ ಮೇಲ್ತರದ ಭಾವನೆಗಳನ್ನು ನೋಡಿ ಉಭಯತರೂ ಬೆರಳು ಕಚ್ಚಿದರು. ರಾಣಿಯಲ್ಲಿ ವಾಸವಾಗಿದ್ದ ಸಂಶಯಪಿಶಾಚಿಯು ಪೂರ್ಣವಾಗಿ ತೊಲಗಿ ಹೋಯಿತು.

ಲೀಲಾವತಿಯು ಅಜಯಸಿಂಹನನ್ನು ಬಿಟ್ಟು ಹೋಗುವದಕ್ಕೆ ಮನಸ್ಸಿಲ್ಲದವಳಾಗಿದ್ದಳು. ಅಜಯನ ಮನಸ್ಸಿನ ಸ್ಥಿತಿಯಾದರೂ ಹಾಗೆಯೇ ಆಗಿತ್ತು. ಬರಬರುತ್ತ ರಾಣಿಯೂ ತಾರಾದೇವಿಯೂ ಲೀಲಾವತಿಯನ್ನು ಕಂಡರೆ ಬಂಗಾರದಂತೆ ಪ್ರೀತಿಸತೊಡಗಿದರು. ಅವಳನ್ನು ತನ್ನ ಬಳಿಯಲ್ಲಿಯೇ ಇಟ್ಟುಕೊಳ್ಳುವದು ಅನುಚಿತವೆಂದು ಅಜಯಸಿಂಹನ ತಿಳುವಳಿಕೆಯಿತ್ತು. ಯಾಕಂದರೆ, ಅವಳು

ಪರಧರ್ಮೀಯ ಸ್ತ್ರೀಯು; ಅವಿವಾಹಿತಳು; ಅದರಲ್ಲಿ ಪ್ರಾಯದವಳು. ಇಂತ ಹಳನ್ನು ತನ್ನಲ್ಲಿರಿಸಿಕೊಂಡರೆ ಲೋಕಾಪವಾದಕ್ಕೆ ಗುರಿಯಾಗದಿರೆನೆಂದು ಅವನು ಬೆದರಿದ್ದನು. ಇದಲ್ಲದೆ ಅವಳ ತಾಯಿತಂದೆಗಳು ಮಗಳ ವಿಯೋಗದಿಂದ ಚಿಂತಾತುರರಾಗಿರಬಹುದೆಂದು ಅವನು ತಿಳಿದಿದ್ದನು. ಹೀಗೆ ಅವನು ಎಲ್ಲ ಬಗೆಯಿಂದ ವಿಚಾರಿಸಿ, ಅವಳನ್ನು ತಾಯಿ-ತಂದೆಗಳ ಬಳಿಗೆ ಕಳಿಸಬೇಕೆಂದು ನಿರ್ಧರಿಸಿದನು.

ಲೀಲಾವತಿದೇವಿಯು ಆರಾದ ಟೇಲರ ಸಾಹೇಬನ ಪುತ್ರಿಯು. ಅಜಯನು ತನ್ನ ಸೇವಕರನ್ನು ಅಲ್ಲಿಗೆ ಕಳುಹಿಸಿ, ಟೇಲರ ಸಾಹೇಬನು ಆರಾದಲ್ಲಿರುವನೆಂಬ ಸುದ್ದಿಯನ್ನು ತಿಳಿದುಕೊಂಡಿದ್ದನು. ಅವಳು ಆರಾಕ್ಕೆ ಹೋಗುವಳೆಂಬದು ನಿಶ್ಚಿತವಾದೊಡನೆಯೆ, ರಾಣಿಯೂ ತಾರಾದೇವಿಯೂ ಅತ್ಯಂತ ದುಃಖಿತರಾದರು. ರಾಣಿಯು ಅವಳನ್ನು ಗಟ್ಟಿಯಾಗಿ ಆಲಿಂಗಿಸಿ, ಕಣ್ಣು ತುಂಬ ನೀರು ತಂದು:—

"ತಂಗೀ, ಲೀಲಾವತಿ! ನೀನು ನನ್ನನ್ನಗಲಿ ಹೋಗುವೆಯಾ! ನಿನ್ನಂತಹ ಸುಹೃದಯ ಭಗಿನಿಯು ನನಗೆ ಪೂರ್ವಪುಣ್ಯದಿಂದಲೇ ದೊರಕಿರುವಳೆಂದು ಭಾವಿಸಿದ್ದೆನು. ನೀನು ನನ್ನನ್ನು ಮರೆಯಬೇಡ ಕಂಡಿಯಾ!"

ರಾಣಿಯು ಕಂಠವು ಸದ್ಗದಿತವಾಯಿತು. ತಾರಾದೇವಿಯೂ ಬಹಳೇ ಕ್ಲೇಶಗೊಂಡಳು. ಅಜಯನು ಉಪಕಾರ ಕರ್ತಳಾದ ಲೀಲಾವತಿಯ ವಿಯೋಗವಾಗುವದೆಂದು ಮರುಗಿದನು. ಲೀಲಾವತಿಯಾದರೂ ಬಹಳವಾಗಿ ದುಃಖಿಸಿದಳು.

ಲೀಲಾವತಿಯನ್ನು ಆರಾಕ್ಕೆ ಮುಟ್ಟಿಸುವದಕ್ಕಾಗಿ ಅಜಯಸಿಂಹನು ಅನುಚರರನ್ನು ನಿಯಮಿಸಿದನು. ಲೀಲಾವತಿಯು ಅಜಯಸಿಂಹನಿಗೂ, ರಾಣಿಗೂ, ತಾರಾದೇವಿಗೂ ನಮಸ್ಕರಿಸಿ:—

"ತಮ್ಮೆಲ್ಲರಿಗೂ ಈ ಬಡವಿಯ ನೆನಪಿರಲಿ. ರಾಣೀ, ಹೋಗಿಬರುತ್ತೇನೆ! ತಾರಾದೇವೀ, ಹೋಗಿಬರುತ್ತೇನೆ! ಅಜಯಸಿಂಹರೇ, ನಿಮಗೆ ವಂದನೆಗಳಿರಲಿ! ನಿರೂಪ ಕೊಡಿರಿ; ಹೋಗಿಬರುವೆನು." ಎಂದು ನುಡಿದು, ಎಲ್ಲರ ಅಪ್ಪಣೆ ಪಡೆದು, ಅತ್ಯಂತ ದುಃಖದಿಂದ ಸಸರಾಮನ ಬೆಟ್ಟವನ್ನಿಳಿದು ಆರಾಕ್ಕೆ ಹೊರಟಳು.

---

## ಬಾರಕೋಲ ಹೊಡತ!

ಪಾಷಾಣ ಹೃದಯಿಯಾದ ರಾಮಶರಣನು ಸಾಧ್ವಿಯಾದ ಪ್ಯಾರಿಯನ್ನು ತಿರಸ್ಕರಿಸಿ ಹೊರಟು ಹೋದದ್ದು ವಾಚಕಮಹಾಶಯರ ಸ್ಮರಣೆಯಲ್ಲಿರಬಹುದು. ಆಗ ಕ್ರಾಂತಿಕಾಲವಿದ್ದುದರಿಂದ ಅದರ ಲಾಭವನ್ನು ಯಥೇಷ್ಟವಾಗಿ ಮಾಡಿಕೊಳ್ಳಬೇಕೆಂದು ಅವನು ಕೆಲವು ಪುಂಡ ಅನುಚರರನ್ನೊಡಗೊಂಡು ಕೊಲೆ ಸುಲಿಗೆ

ಗಳನ್ನು ನಡೆಸಿದನು. ಅವನ ಅತ್ಯಾಚಾರವು ಹಿಂದು-ಮುಸಲ್ಮಾನ ಪಾಶ್ಚಿಮಾತ್ಯ ಮೊದಲಾದ ಎಲ್ಲ ಜನರ ಮೇಲೆ ಸರಿಯಾಗಿ ನಡೆಯುತ್ತಿತ್ತು. ಅವನು ರಾಬರ್ಟ ನನ್ನೂ ಅವನ ಬಾಲಕನನ್ನೂ ಕೊಲೆ ಮಾಡಿಸಿ, ಅವನ ಪತ್ನಿಯನ್ನು ತೆಗೆದು ಕೊಂಡು ಬರುವದಕ್ಕಾಗಿ ಅನುಚರರನ್ನು ಕಳುಹಿಸಿದ್ದನು. ಆಗ ಅಜಯಸಿಂಹನು ಅಕಸ್ಮಾತ್ತಾಗಿ ಅಲ್ಲಿಗೆ ಬಂದು ಆ ಆಂಗ್ಲ ಕುಟುಂಬದ ಮೇಲಿನ ಗಂಡಾಂತರವನ್ನು ದೂರ ಮಾಡಿದನು. ಲಿಲಿಯನ್ನು ತೆಗೆದುಕೊಂಡು ಹೋಗಿ ತನ್ನ ಒಡೆಯನಿಗೆ ಒಪ್ಪಿಸಿ, ಹೇರಳವಾಗಿ ಬಹುಮಾನ ಪಡೆಯಬೇಕೆಂದು ರಾಮಶರಣನ ಸೇವಕರು ಮಾಡಿದ ಪ್ರಯತ್ನವಾದರೂ ಅಜಯನ ಸಾಹಸದಿಂದ ಹೇಗೆ ನಿಷ್ಫಲವಾಯಿತೆಂ-ಬದು ವಾಚಕಮಹಾಶಯರಿಗೆ ವಿದಿತವಾದದ್ದಿರುವದು. ಈ ಬಗೆಯಾಗಿ ಮೇಲಿಂದ ಮೇಲೆ ಅವನಿಂದ ನೀಚಕೃತಿಗಳು ಘಟಿಸತೊಡಗಿದ್ದರಿಂದ ಅವನು ಆಂಗ್ಲಜನರಿಗೂ ಹಗೆಯಾಗಿದ್ದನು. ಅವನನ್ನು ನೆರೆಯಿಟ್ಟಾಗ ಆಕಸ್ಮಿಕವಾಗಿ ಇಲ್ಲದಂತಾದುದ ರಿಂದ ಆಂಗ್ಲ ಅಧಿಕಾರಿಗಳು ಅವನ ಶೋಧವನ್ನು ನಡೆಯಿಸಿದ್ದರು. ಲಿಲಿಯ ಮೇಲೆ ಅತ್ಯಾಚಾರ ನಡೆಯಿಸಿದ್ದರಿಂದಲೂ, ತನ್ನ ಪತ್ನಿಯನ್ನೂ ತಾರೆಯನ್ನೂ ತೆಗೆದುಕೊಂಡು ಹೋದ ನಿಮಿತ್ಯವಾಗಿಯೂ ಅಜಯಸಿಂಹನು ಅವನ ಮೇಲೆ ಬೆಂಕಿಯನ್ನು ಕಾರತೊಡಗಿದ್ದನು. ರಾಮಶರಣನು ಕೈಯಲ್ಲಿ ಸಿಲುಕಿದರೆ ತಕ್ಕ ಶಾಸನವನ್ನು ವಿಧಿಸಬೇಕೆಂದು ಅವನು ಯೋಚಿಸಿದ್ದನು. ಎಲ್ಲ ಕಡೆಯಲ್ಲಿಯೂ ತನಗೆ ಹಗೆಗಳು ಹುಟ್ಟಿದ್ದರಿಂದ ರಾಮಶರಣನಿಗೆ ಮನೆಬಿಟ್ಟು ಹೊರಬೀಳುವದು ಕಠಿಣವಾಗಿ, ದೇವಸ್ಥಾನದಲ್ಲಿದ್ದ ತನ್ನ ಪತ್ನಿಯನ್ನು ತೆಗೆದುಕೊಂಡು ಆರಾಕ್ಕೆ ಬಂದು ಸ್ವಗೃಹದಲ್ಲಿಯೇ ಗುಪ್ತರೀತಿಯಿಂದ ವಾಸವಾಗಿದ್ದನು. ಈಗ ಅವನಿಗೆ ಮೈಚಳಿಬಿಟ್ಟು ತಿರುಗಾಡುವದು ಕಠಿಣವಾಗಿತ್ತು.

ಮೊದಲು ಪತಿಯಿಂದ ಎಷ್ಟೋ ದುಃಖವನ್ನನುಭವಿಸಿದರೂ ಕಡೆಗೆ ಸೌಖ್ಯವು ಲಭಿಸಿತೆಂದು ಸಾಧ್ವಿಯಾದ ಪ್ಯಾರಿಯು ಸಂಭ್ರಮಗೊಳ್ಳತೊಡಗಿ ದ್ದಳು. ಪತಿಯ ವೈಭವ ಕಾಲದಲ್ಲಿ ಸುಖೋಪಭೋಗಗಳು ಅವಳಿಗೆ ದೊರೆಯು ದಿದ್ದರೂ, ಅವನು ದೀನದರಿದ್ರನಾದ ಮೇಲಾದರೂ ದೊರೆತವೆಂದು ಅವಳು ಸುಖ ಸಮಾಧಾನಗಳನ್ನು ಹೊಂದತೊಡಗಿದ್ದಳು. ಆ ಪತಿವ್ರತೆಗೆ ಪತಿಸೇವೆಯೇ ಘನ ತರವಾದ ಸೌಖ್ಯಪ್ರದವಾಗಿತ್ತು. ಅದೇ ಪರಮ ವೈಭವವೆಂದು ಅವಳು ಭಾವಿ ಸಿದ್ದಳು. ಸದ್ಯಕ್ಕೆ ಅವಳ ಮನೆಯಲ್ಲಿ ಸೇವಕ-ಸೇವಕಿಯರಿದ್ದಿಲ್ಲ. ಗಾಯನ-ನರ್ತನಗಳ ಸುಳಿವು ಇರಲಿಲ್ಲ; ಧನಲಕ್ಷ್ಮಿಯ ವಾಸ್ತವ್ಯವಿರಲಿಲ್ಲ. ಇಂತಹ ಪರಿ ಸ್ಥಿತಿಯಲ್ಲಿದ್ದರೂ ಪ್ಯಾರಿಗೆ ಆ ಕಾಲವು ಒಳ್ಳೆಯ ಆನಂದದಾಯಕವಾಗಿತ್ತು. ಪತಿಯು ಕಂಗಾಲಸ್ಥಿತಿಯಲ್ಲಿದ್ದರೆ ತನಗೆ ಸುಖವು ಲಭಿಸಬೇಕೆಂಬ ವಿಧಿಲಿಖಿತ

ಇರಬಹುದೆಂದು ಅವಳು ಭಾವಿಸಿಕೊಂಡಳು.

ಪ್ಯಾರಿಯು ಪ್ರಾರಬ್ಧದಲ್ಲಿ ಈ ಸುಖವನ್ನು ಕಡೆತನಕ ಉಪಭೋಗಿಸುವದು ಇದ್ದಿಲ್ಲ. ಯಾಕಂದರೆ, ರಾಮಶರಣನು ಆರಾದಲ್ಲಿರುವದು ಅಸುರಕ್ಷಿತವಾಗಿತ್ತು. ಆ ಸ್ಥಳವನ್ನು ಬೇಗನೆ ಬಿಡದಿದ್ದರೆ ಶತ್ರುಗಳ ಕೈಯಲ್ಲಿ ಸಿಗುವ ಭಯವಿದ್ದುದರಿಂದ, ಅವನು ವೇಷಾಂತರದಿಂದ ಎರಡನೆಯ ಸ್ಥಳಕ್ಕೆ ಹೊರಡಬೇಕಾಯಿತು. ಪ್ಯಾರಿಯು ಪತಿಯನ್ನಗಲಿ ಇರುವ ಮನಸ್ಸಿಲ್ಲದವಳಾಗಿದ್ದಳು. ಅವಳು ತನ್ನನ್ನು ಸಂಗಡವೇ ಕರೆದುಕೊಂಡು ಹೋಗಬೇಕೆಂದು ಅತ್ಯಾಗ್ರಹಪಟ್ಟಳು. ಆರಾದ ಕಂಟಕಮಯ ಪ್ರದೇಶದಲ್ಲಿ ಅಸಹಾಯ್ಯಸ್ಥಿತಿಯ ಪತ್ನಿಯನ್ನು ಬಿಟ್ಟು ಹೋಗುವದು ಒಳಿತಲ್ಲವೆಂದೂ ರಾಮಶರಣನು ತಿಳಿದನು. ಇದಲ್ಲದೆ ಅವಳು ತನ್ನ ಒಳಿಯಲ್ಲಿದ್ದರೆ, ಒಮ್ಮಿಲ್ಲೊಮ್ಮೆಯಾದರೂ ಉಪಯೋಗಕ್ಕೆ ಬೀಳಬಹುದೆಂದು ಅವನು ಪತ್ನಿಯ ಮಾತಿಗೆ ಒಪ್ಪಿಕೊಂಡನು. ಆಗ ಆ ಕುಲಸತಿಗಾದ ಆನಂದವನ್ನು ಬಣ್ಣಿಸಲಳವಲ್ಲ. ವನವಾಸಿಯಾಗುವ ಪ್ರಸಂಗವೊದಗಿತೆಂದು ರಾಮಶರಣನು ದುಃಖಾಬ್ಧಿಯಲ್ಲಿ ಮುಳುಗಿರಲು ಪತಿಯ ಸಹವಾಸದಲ್ಲಿರುವ ಸುಯೋಗವು ಘಟಿಸಿತೆಂದು ಅವಳು ಹರುಷಗೊಂಡಳು. ಒಂದು ದಿನ ಮಧ್ಯರಾತ್ರಿಯಲ್ಲಿ ಈರ್ವರೂ ಬೈರಾಗಿ-ಬೈರಾಗಿಣಿಯರಾಗಿ ಗ್ರಾಮತ್ಯಾಗ ಮಾಡಿದರು!

ರಾಮಶರಣನಿಗೆ ವಿದ್ವೇಷೀಜನರ ಭಯವು ಸಂಪೂರ್ಣವಾಗಿದ್ದುದರಿಂದ, ವೇಷಾಂತರ ಸ್ಥಿತಿಯಲ್ಲಾದರೂ ಅವನು ರಾಜಮಾರ್ಗವನ್ನು ಹಿಡಿದು ಹೋಗುವದಕ್ಕೆ ಧೈರ್ಯವುಳ್ಳವನಾಗಿರಲಿಲ್ಲ. ಅವನು ಆಂಗ್ಲರಿಗೂ ಅಜಯಸಿಂಹನಿಗೂ ಹಗೆಯಾಗಿದ್ದುದರಿಂದ, ಒಳ್ಳೆಯ ಜಾಗ್ರತೆಯಿಂದಿರುವದು ಅವಶ್ಯವಾಗಿತ್ತು. ಅವನು ಅರಣ್ಯಪಥವನ್ನು ಹಿಡಿದು ಅತ್ತಿತ್ತ ಅಲೆದಾಡುತ್ತ ಸಸರಾಮನ ಬೆಟ್ಟಕ್ಕೆ ಒಂದು ತಲುಪಿದನು.

ಆಂಗ್ಲರು ಅಜಯಸಿಂಹನ ಶೋಧನೆಗಾಗಿ ದೀರ್ಘ ಪ್ರಯತ್ನವನ್ನು ನಡೆಯಿಸಿದ್ದರು. ಅವರು ಸಸರಾಮನ ಬೆಟ್ಟದ ಪ್ರದೇಶದಲ್ಲಾದರೂ ಹೆಜ್ಜೆಯಿಟ್ಟಿದ್ದರು. ಅಜಯಸಿಂಹನು ಈ ಬೆಟ್ಟದಲ್ಲಿರಬಹುದೆಂಬ ಸಂಶಯದಿಂದ ಅವರು ಅಲ್ಲಿಯ ವನಪ್ರದೇಶವನ್ನು ನಾಶ ಮಾಡತೊಡಗಿದ್ದರು. ಆಂಗ್ಲರ ಎಷ್ಟೋ ತಂಡಗಳು ಅಜಯನ ವಸತಿಸ್ಥಾನದ ಒಳಿಯಲ್ಲಿ ಸಹ ಬಂದು ಹೋಗಿದ್ದವು. ಅವನಿರುವ ಸ್ಥಳವು ಅಭೇದ್ಯವಾಗಿತ್ತು; ಹಾಗು ಅತ್ಯಂತ ಗುಪ್ತವಾಗಿದ್ದಿತು. ಬೆಟ್ಟದೊಳಗಿನ ರಜಪೂತ ಜನರು ಆಂಗ್ಲಜನರ ಚಲನವಲನವನ್ನು ತಿಳಿದು ಅಜಯನಿಗೆ ಸೂಚಿಸಿ ಜಾಗ್ರತೆಗೊಳಿಸುತ್ತಿದ್ದರು. ಗುಪ್ತಚರರೆಂಬ ಸಂಶಯವು ಅವರಿಗೆ ಕಂಡು ಬಂದರೆ, ಆ ಜನರನ್ನು ಹಿಡಿದು ತಮ್ಮ ಒಡೆಯನ ಬಳಿಗೆ ಒಯ್ಯುತ್ತಿದ್ದರು.

ಅಜಮುಗಡದ ಸಂಗ್ರಾಮದಲ್ಲಿ ಕುವರಸಿಂಹನಿಗೆ ಯಶವು ದೊರೆತಿರುವದನ್ನೂ, ಅವನನ್ನು ಪರಾಜಯ ಪಡಿಸುವದಕ್ಕಾಗಿ ಜನರಲ್ ಲುಗಾರ್ಡ, ಲಾರ್ಡ ಮಾರ್ಕಕಾರ, ಕರ್ನಲ್ ಡಗ್ಲಸ ಮೊದಲಾದ ನಾಮಾಂಕಿತ ಸೇನಾಪತಿಗಳು ಹೊರಟಿರುವದನ್ನೂ ಅಜಯಸಿಂಹನು ಗುಪ್ತಚರರ ಮುಖಾಂತರವಾಗಿ ತಿಳಿದಿದ್ದನು. ಅವನಿಗೆ ಸಹಾಯ ಮಾಡುವದಕ್ಕಾಗಿ ತನ್ನ ಸೈನ್ಯವನ್ನು ತೆಗೆದುಕೊಂಡು ಹೋಗಬೇಕೆಂದು ಅಜಯನು ನಿಶ್ಚಯಿಸಿಕೊಂಡಿದ್ದನು; ಆದರೆ ರಾಣಿಯೂ ತಾರಾದೇವಿಯೂ ಅಷ್ಟು ದೂರದ ದಂಡಯಾತ್ರೆಗಾಗಿ ಹೋಗಕೂಡದೆಂದು ಅವನಿಗೆ ಅಡ್ಡಿ ಮಾಡ್ಡಿದರು. ಕುವರಸಿಂಹನಾದರೂ ಅಜಮುಗಡದ ಕಡೆಗೆ ಬರುವ ಕಾರಣವಿಲ್ಲವೆಂದು ತಿಳಿಸಿದ್ದನು. ತಾನು ಹೋದರೆ ರಾಣಿ ಹಾಗು ತಾರಾದೇವಿಯರು ಅರಕ್ಷಿತರಾಗುವರೆಂಬ ಭಯವು ಅಜಯನಿಗಿತ್ತು. ಅಂತೆಯೇ ಅವನು ಯುದ್ಧಯಾತ್ರೆಯನ್ನು ನಿಲ್ಲಿಸಿ ಬಿಟ್ಟನು. ಅವನು ದೂರದ ದಂಡಯಾತ್ರೆಗಾಗಿ ಹೋಗದಿದ್ದರೂ, ಸಮೀಪದಲ್ಲಿಯ ಸ್ಥಳಗಳಲ್ಲಿ ಆಂಗ್ಲಸೈನ್ಯಕ್ಕೆ ಎಷ್ಟೋ ಸಾರೆ ತನ್ನ ಕೈ ತೋರಿಸಿದ್ದನು. ಅವನು ಯಾವಾಗಲೂ ಸಸರಾಮನ ಬೆಟ್ಟದ ಬಳಿಯ ಪ್ರದೇಶದಲ್ಲಿ ಸಸೈನ್ಯವಾಗಿ ಅಲೆದಾಡುತ್ತಿದ್ದನು. ತನ್ನ ಗುಪ್ತಚರರನ್ನು ಬಹು ದೂರದ ವರೆಗೆ ಕಳುಹಿಸಿ ಶತ್ರುಗಳ ಸುಳಿವನ್ನು ತಿಳಿದುಕೊಳ್ಳುತ್ತಿದ್ದನು.

ಅಜಯಸಿಂಹನು ರಾಣಿ-ತಾರಾದೇವಿಯರೊಡನೆ ಮಾತನಾಡುತ್ತ ಸಸರಾಮನ ಬೆಟ್ಟದಲ್ಲಿಯ ತನ್ನ ನಿವಾಸದಲ್ಲಿ ಕುಳಿತಿದ್ದನು. ಆಗ ಅವನ ಗುಪ್ತದೂತರು ಒಬ್ಬ ಬೈರಾಗಿಯನ್ನೂ, ಒಬ್ಬಳು ಬೈರಾಗಿಣಿಯನ್ನೂ ತಂದು ಅವನ ಮುಂದೆ ನಿಲ್ಲಿಸಿ: 'ಇವರು ಶತ್ರುಗಳ ಕಡೆಯ ಗುಪ್ತಚರರೆಂಬ ಸಂಶಯವು ಬಂದದ್ದರಿಂದ ಇಲ್ಲಿಗೆ ಕರೆತಂದೆವು' ಎಂದು ಅರಿಕೆ ಮಾಡಿಕೊಂಡರು. ಅಜಯಸಿಂಹನು ಆ ಬೈರಾಗಿಯ ಮುಖವನ್ನು ದಿಟ್ಟಿಸಿ ನೋಡಹತ್ತಿದನು. ಆಗ ಆ ಬೈರಾಗಿಯು ರಾಣಿಯ ಮುಖನಿರೀಕ್ಷಣೆ ಮಾಡುವದರಲ್ಲಿ ಮಗ್ನನಾಗಿದ್ದನು. ಅವನಿಗೆ ಅಜಯಸಿಂಹನ ಗುರುತು ಚನ್ನಾಗಿ ಹತ್ತಿತ್ತು. ಬೈರಾಗಿ ವೇಷಧಾರಿಯಾದ ತನ್ನನ್ನು ಈತನು ಗುರುತಿಸಲಾರನೆಂಬ ದೃಢವಿಶ್ವಾಸದಿಂದ ಅವನು ನಿರ್ಭೀತನಾಗಿ ರಾಣಿಯ ಮುಖಾವಲೋಕನದಲ್ಲಿ ತೊಡಗಿದ್ದನು. ಅಜಯನು ಬೈರಾಗಿಯ ಈ ಅಗೌರವದ ವರ್ತನದಿಂದ ಸಂಶಯಗ್ರಸ್ತನಾಗಿ: 'ಏಲೆ ಬೈರಾಗಿ, ನೀನು ಯಾವ ಊರವನು?'

"ಮಹಾರಾಜಾ, ನಾನು ಎಲ್ಲಿಯವನೆಂಬದನ್ನು ಹೇಗೆ ಹೇಳಲಿ? ನಾವು ದೇಶಸಂಚಾರಿಗಳು. ಎಲ್ಲಿ ಹುಟ್ಟುವೆವೋ, ಎಲ್ಲಿ ಬೆಳೆಯುವೆವೋ, ಎಲ್ಲಿ ಈ ಜಡ ಶರೀರವನ್ನು ತೊಲಗುವೆವೋ ಎಂಬದನ್ನು ಸರ್ವಸಂಗ ಪರಿತ್ಯಾಗಿಗಳಾದ ನಮಗೆ ಹೇಳುವದಕ್ಕೆ ಬರುವದಿಲ್ಲ."

"ನೀನು ಇವಳನ್ನೇಕೆ ಸಂಗಡ ಕರಕೊಂಡು ತಿರುಗಾಡುವೆ?"

"ನಾನು ಕಾಶೀಕ್ಷೇತ್ರದಲ್ಲಿದ್ದಾಗ ಈ ಸಂತಳು ಕೂಡಿದಳು. ಇವಳ ಯೋಗ್ಯತೆಯು ದೊಡ್ಡದಿರುವದು. ಸ್ತ್ರೀಯಾಗಿದ್ದರೂ ಇವಳಲ್ಲಿ ವಾಸವಾಗಿದ್ದ ವಿರಕ್ತಿಯ ಪ್ರಭೆಯನ್ನು ನೋಡಿ, ಈ ದುರ್ಲಭ ವಸ್ತುವು ನಮ್ಮಂತಹ ಸಂತರ ಸಹವಾಸದಲ್ಲಿರುವದು ಅವಶ್ಯವೆಂದು ಕಂಡದ್ದರಿಂದ ಇವಳ ವಿನಂತಿಯ ಮೇರೆಗೆ ನಾನು ಇವಳನ್ನು ಸಂಗಡ ಕರಕೊಂಡು ತೀರ್ಥಯಾತ್ರೆ ಮಾಡತೊಡಗಿರುವೆನು."

ಬೈರಾಗಿಯು ತನ್ನ ಧ್ವನಿಯನ್ನು ಬದಲಿಸಿ ಒಂದು ವಿಧವಾಗಿ ಮಾತನಾಡುತಲಿದ್ದನು. ಅಜಯನಿಗೆ ಈ ಸ್ಥಿತಿಯು ತಿಳಿಯದಿರಲಿಲ್ಲ. ಕೂಡಲೆ ಅವನು ಎದ್ದು ಒಂದು ಅವನ ಗಡ್ಡ ಮೀಸೆಗಳನ್ನು ಹಿಡಿದು ಜಗ್ಗಿದನು. ಆಗ ಆ ಕೃತ್ರಿಮ ಕೇಶಗಳೆಲ್ಲ ಕಿತ್ತಿ ಅವನ ಕೈಯಲ್ಲಿ ಬಂದವು! ಆ ಬೈರಾಗಿಯು ಅಜಯನ ಈ ಕೃತಿಯನ್ನು ನೋಡಿ ಬೆದರಿದನು. ಅವನ ಸರ್ವಾಂಗವು ಭಯಕಂಪಿತವಾಯಿತು. ಗಡ್ಡ-ಮೀಸೆಗಳು ಕಳಚಿ ಬಂದೊಡನೆಯೆ ಅಜಯನು ಅವನನ್ನು ಪೂರ್ಣವಾಗಿ ಗುರುತಿಸಿದನು. ಆಗ ಅವನ ನೇತ್ರಗಳು ಆರಕ್ತವಾದವು. ಕೈಯು ಟೊಂಕಕ್ಕೆ ಅಲೆದಾಡತೊಡಗಿದ್ದ ಖಡ್ಗದ ಕಡೆಗೆ ಹೋಯಿತು. ಅವನು ಸಂತಾಪದ ಭರದಲ್ಲಿ ಸರ್ರನೆ ಖಡ್ಗವನ್ನು ಹಿರಿದು:—

"ಭ್ರಷ್ಟಾ! ರಾಮಶರಣಾ! ನನ್ನ ಕೈಯಲ್ಲಿ ಇಂದು ಚನ್ನಾಗಿ ಸಿಲುಕಿದೆ. ಇದೇ ನಿನ್ನ ಆಯುಷ್ಯದ ಕೊನೆಯ ಗಳಿಗೆಯೆಂದು ತಿಳಿದುಕೊ."

ಬೈರಾಗಿಯ ವೇಷವನ್ನು ಧರಿಸಿದವನು ರಾಮಶರಣನೆಂದೂ, ಬೈರಾಗಿಣಿಯಾದವಳು ಅವನ ಪತ್ನಿಯಾದ ಪ್ಯಾರಿಯೆಂದೂ ಅಜಯನಿಗೆ ತಿಳಿದು, ಕ್ರೋಧಗೊಂಡು ಹೀಗೆ ನುಡಿದ ಕೂಡಲೆ, ರಾಮಶರಣನ ಮುಖವು ಕಪ್ಪಿಟ್ಟಿತು. ತನ್ನ ಪತಿಗೆ ಪ್ರಳಯಕಾಲವೇ ಸಮೀಪಿಸಿತೆಂದು ಪತಿಭಕ್ತಿಪರಾಯಣಳಾದ ಪ್ಯಾರಿಯು ಭಯಕಂಪಿತಳಾದಳು. ಆಗ ಅವಳು ಮುಂದೆ ಹೋಗಿ ಅಜಯಸಿಂಹನ ಪಾದಗಳನ್ನು ಗಟ್ಟಿಯಾಗಿ ಹಿಡಿದುಕೊಂಡು:—

"ಮಹಾನುಭಾವರೆ, ನನ್ನ ಪತಿಗೆ ಜೀವದಾನ ಕೊಡಿರಿ. ಇವರಿಂದ ಸಹಸ್ರಾವಧಿ ಅಪರಾಧಗಳು ಘಟಿಸಿರುವವೆಂಬದನ್ನು ನಾನು ಅರಿತಿರುವೆನು. ಈ ದೀನಳಾದ ಅಬಲೆಯ ಮುಖವನ್ನಾದರೂ ನೋಡಿ ಇವರನ್ನು ವಧಿಸಬೇಡಿರಿ."

ತಮ್ಮ ಮೇಲೆ ಅತ್ಯಾಚಾರ ಮಾಡಲುಪಕ್ರಮಿಸಿದ ನೀಚನು ಇದೇ ರಾಮಶರಣನೆಂಬದು ರಾಣಿಗೂ ತಾರಾದೇವಿಗೂ ತಿಳಿಯಿತು. ರಾಣಿಯಂತೂ ಅವನ ಮೇಲೆ ಬೆಂಕಿಯನ್ನು ಕಾರತೊಡಗಿದ್ದಳು; ಆದರೆ ಪ್ಯಾರಿಯ ಅನುಕಂಪನೀಯ ಸ್ಥಿತಿಯನ್ನು ನೋಡಿ ಎದೆಕರಗಿದವಳಾದಳು. ಪ್ಯಾರಿಯ ವಿನಂತಿಯನ್ನು ಅಜ

ಯನು ಮನ್ನಿಸಲಿಲ್ಲ. ಅವನ ಹೃದಯವು ಕಠೋರವಾಗಿತ್ತು. ಅವನಿಂದ ವರದ ವಾಣಿಯು ಹೊರಟದ್ದನ್ನು ನೋಡಿ ಪ್ಯಾರಿಯು ರಾಣಿಯ ಚರಣದ ಮೇಲೆ ಮಸ್ತಕವನ್ನಿಟ್ಟು:—

“ದೇವೀ, ಈ ದೀನಳಾದ ಅಬಲೆಗೆ ಸೌಭಾಗ್ಯದಾನ ಮಾಡಿರಿ” ಎಂದು ನುಡಿದು, ಅವಳ ಪದಯುಗಲಗಳನ್ನು ಕಂಬನಿಯಿಂದ ತೊಳೆದಳು. ಎಷ್ಟಾದರೂ ಸಾಧ್ವೀಹೃದಯವು ಸುಕೋಮಲವಲ್ಲವೆ? ರಾಣಿಯು ಅವಳ ದೈನ್ಯದಿಂದ ಮನಸ್ಸು ಕರಗಿದವಳಾದಳು. ಆಗ ರಾಮಶರಣನು ಅಜಯಸಿಂಹನ ಪಾದಗಳನ್ನು ಹಿಡಿದು:—

“ನಾನು ಎಷ್ಟು ನೀಚತನ ಮಾಡಿದ್ದರೂ ಕ್ಷಮಿಸಿ ಜೀವದಾನ ಕೊಟ್ಟರೆ, ಆಮರಣವಾಗಿ ತಮ್ಮ ಹಿತಚಿಂತನೆಯ ಕಾರ್ಯಗಳನ್ನು ಮಾಡುತ್ತ ದೇಹವನ್ನು ಸಹಿಸುವೆನು. ಇದೇ ನನ್ನ ಪ್ರತಿಜ್ಞೆಯು!”

“ಕುಲಾಂಗಾರನಾದ ನೀನು ಯಾವ ಸಾಧ್ವಿಯ ಮೇಲೆ ಅತ್ಯಾಚಾರ ಮಾಡಲುಪಕ್ರಮಿಸಿದ್ದೆಯೋ, ಅವಳಲ್ಲಿ ಕ್ಷಮಾಯಾಚನೆ ಮಾಡು. ಅವಳು ಹೇಳಿದಂತಹ ಶಾಸನವನ್ನು ನಾನು ವಿಧಿಸತಕ್ಕವನೇ!”

ಅಜಯನು ಹೀಗೆ ನುಡಿದ ಕೂಡಲೆ ರಾಮಶರಣನು ಶಿರಬಾಗಿ:—“ದೇವೀ, ನಾನು ದುಷ್ಟತನಕ್ಕೆ ಮನವೆಳಸಿದ್ದರೂ ನನ್ನಿಂದ ತಮ್ಮ ಮೈನೆಳಲನ್ನು ಸಹ ಸೋಂಕುವದಾಗಲಿಲ್ಲ. ತಮ್ಮ ಪಾತಿವ್ರತ್ಯಪ್ರಭಾವವು ಅಂತಹ ಘನತರವಾದದ್ದರಿಂದಲೆ ದುರ್ಬುದ್ಧಿಯವನಾದ ನನ್ನ ಕೈಯಿಂದ ಪಾರಾದಿರಿ! ಕೃತಕರ್ಮದ ಪಶ್ಚಾತ್ತಾಪದಿಂದ ಪರಿಶುದ್ಧನಾಗಿರುವ ನನ್ನ ವಿಷಯಕ್ಕೆ ನೈರ್ಘೃಣ್ಯವನ್ನು ತೋರಿಸದೆ ಜೀವದಾನ ಕೊಡಿರಿ.”

ಆಗ ರಾಣಿಯು ಅವನ ಹಾಗು ಅವನ ಪತ್ನಿಯಾದ ಪ್ಯಾರಿಯ ವಿಷಯಕ್ಕೆ ಅನುಕಂಪೆಯುಳ್ಳವಳಾಗಿ, ಪ್ರಾಣದಾನ ಮಾಡಬೇಕೆಂದು ಪತಿಗೆ ಪ್ರಾರ್ಥನೆ ಮಾಡಿಕೊಂಡಳು. ಆಗ ಅಜಯನು ರಾಮಶರಣನನ್ನು ಕುರಿತು:—

“ಪಾತಕಿಕೋ, ನಿನ್ನ ಪತ್ನಿಯ ಪಾತಿವ್ರತ್ಯದ ಪುಣ್ಯಪ್ರಭಾವದಿಂದ ನೀನು ಜೀವಂತವಾಗಿ ಉಳಿದೆ. ನಿನಗೆ ಮರಣದಂಡನೆಯನ್ನು ವಿಧಿಸಬೇಕೆಂಬ ನನ್ನ ಮನಸ್ಸು ನಿನ್ನ ಪತ್ನಿಯ ದೈನ್ಯಾವಸ್ಥೆಯನ್ನು ನೋಡಿ ತಿರುಗಿತು. ಪ್ರಾಣದಾತ್ರಿಯಾದ ನಿನ್ನ ಪತ್ನಿಯನ್ನು ನೀನು ಎಂದೂ ಮರೆಯಬೇಡ. ನಾನು ನಿನಗೆ ಪ್ರಾಣದಾನವಿತ್ತಿದ್ದರೂ ಈ ಪ್ರಸಂಗದ ಗುರುತನ್ನು ಮಾತ್ರ ನಿನಗೆ ಕೊಡದಿರಲಾರೆನು. ಆ ಗುರುತಿನ ಸ್ಮರಣೆಯಿಂದಲಾದರೂ ನೀನು ಪಾಪವಿಮುಖನಾಗುವಿಯೆಂದು ಛಶಿಸುವೆನು.”

"ಯಾವ ಗುರುತದು?" ರಾಣಿಯು ಮಧ್ಯದಲ್ಲಿಯೇ ಕೇಳಿದಳು.

ಕೂಡಲೆ ಅಜಯನು ತನ್ನ ಕುದುರೆಯ ಬಾರಕೋಲನ್ನು ತೆಗೆದುಕೊಂಡು, "ರಾಮಶರಣನಿಗೆ ಇದರ ಗುರುತು ಕೊಡಬೇಕಾಗಿದೆ" ಎಂದು ಕೈಯೊಳಗಿನ ಬಾರಕೋಲನ್ನು ತೋರಿಸಿ, ರಾಮಶರಣನನ್ನು ಕುರಿತು: "ಚನ್ನಾಗಿ ಪೂರ್ವಾಭಿಮುಖವಾಗಿ ನಿಲ್ಲು!" ಎಂದು ಆಜ್ಞಾಪಿಸಿದನು. ಕೂಡಲೆ ಅಜಯನು ವಾತಾವರಣದಲ್ಲಿ ಆ ಬಾರಕೋಲನ್ನು ಗರಗರನೆ ತಿರುಗಿಸಿ, ಭಾಲಪ್ರದೇಶಕ್ಕೆ ಒಂದು ಬಲವಾದ ಹೊಡತ ಹಾಕಿದನು! ರಾಮಶರಣನ ಹಣೆಯೊಳಗಿಂದ ರಕ್ತಪ್ರವಾಹವು ಹರಿಯತೊಡಗಿತು. ಆಗ ಅಜಯನು: —

"ನೆನಪಿನಲ್ಲಿರಲಿ, ಬಾರಕೋಲ ಹೊಡತ!"

---

## ಕೃತಘ್ನ ರಾಮಶರಣ.

ಸ್ವಸರಾಮನ ಬೆಟ್ಟದ ಬಳಿಯ ಪ್ರದೇಶದಲ್ಲಿ ಆರಾದ ಸೇನಾಪತಿಯು ತನ್ನ ಸೈನ್ಯದೊಡನೆ ಬೀಡು ಬಿಟ್ಟಿದ್ದನು. ಅಜಯಸಿಂಹನು ಮೇಲಿಂದ ಮೇಲೆ ಆಂಗ್ಲ ಸೇನೆಗೆ ಉಪದ್ರವ ಕೊಡತೊಡಗಿದ್ದರಿಂದ, ಅವನನ್ನು ಶೋಧಿಸಿ ಪಾರಿಪತ್ಯಗೊಳಿಸಬೇಕೆಂದು ಈ ಸೇನಾಪತಿಯು ದೊಡ್ಡ ಪಡೆಯೊಂದಿಗೆ ಅಲ್ಲಿಗೆ ಹೋಗಿದ್ದನು. ಅವನು ಎಷ್ಟು ಸ್ಥಳಗಳಲ್ಲಿ ಹುಡುಕಿದರೂ ಅಜಯಸಿಂಹನ ಶೋಧವಾಗಲಿಲ್ಲ. ತನ್ನ ಸಾಹಸಕ್ಕೆ ಯಶವು ದೊರೆಯದಂತಾದ್ದರಿಂದ, ಅವನು ಭಗ್ನಮನೋರಥನಾಗತೊಡಗಿದ್ದನು. ಇನ್ನು ತನ್ನ ಸೇನೆಯನ್ನು ಎರಡನೆಯ ಕಡೆಗೆ ಒಯ್ಯಬೇಕೆನ್ನುವಷ್ಟರಲ್ಲಿ ಅವನ ಸೈನಿಕರು ಒಬ್ಬನನ್ನು ಹಿಡಿದು ತಂದು ಅವನ ಮುಂದೆ ನಿಲ್ಲಿಸಿ, 'ಶತ್ರುಗಳ ಕಡೆಯ ಗುಪ್ತಚರನೆಂಬ ಸಂಶಯದಿಂದ ತೆಗೆದುಕೊಂಡು ಬಂದಿವೆ'ಂದು ಅವನಿಗೆ ತಿಳಿಸಿದರು. ಆಗ ಆ ಸೇನಾಪತಿಯು ಅಧಿಕಾರಯುಕ್ತ ವಾಣಿಯಿಂದ ಆ ಮನುಷ್ಯನನ್ನು ಕುರಿತ: —

'ನೀನು ಯಾರು? ನಿಜವಾದ ಸಂಗತಿಯನ್ನು ಹೇಳದಿದ್ದರೆ, ನಿನಗೆ ಮರಣ ದಂಡನೆಯು ವಿಧಿಸಲ್ಪಡುವದು."

'ಖಾವಿಂದ, ನಾನೊಬ್ಬ ಆಂಗ್ಲಪಕ್ಷಪಾತಿಯು. ನಾನು ಮೊದಲಿನಿಂದಲೂ ಆಂಗ್ಲರಾಜ್ಯದಲ್ಲಿ ಒಳ್ಳೆಯ ನಿಷ್ಠೆಯಿಂದ ಕೆಲಸ ಮಾಡುತ್ತ ಬಂದವನಾಗಿರುವೆನು. ಕ್ರಾಂತಿಕಾಲವು ಪ್ರಾರಂಭವಾದಂದಿನಿಂದ ನಾನು ಹೀಗೆ ನಿರಾಧಾರಿಯಾಗಿ ಸಂಚರಿಸುತ್ತಿರುವೆನು. ನಾನು ಇಂತಹ ಸ್ಥಿತಿಯಲ್ಲಿದ್ದರೂ, ಶತ್ರು

ಗಳ ಚಲನವಲನವನ್ನು ತಿಳಿದು, ಅವರ ವಿಷಯದ ಮಹತ್ವದ ಸಂಗತಿಯನ್ನು ಆಂಗ್ಲಸೇನಾಪತಿಗಳಿಗೆ ತಿಳಿಸುವ ಉದ್ಯೋಗವನ್ನು ಸಾಗಿಸಿರುವೆನು. ನಾನು ನಿರಪೇಕ್ಷ ಕರ್ತವ್ಯತತ್ಪರನು. ಕ್ರಾಂತಿಯುಗವು ಪ್ರಾರಂಭವಾದಂದಿನಿಂದ ನಾನು ಆಂಗ್ಲಸೈನಿಕರಿಗೆ ಎಷ್ಟೋ ಉಪಕಾರ ಮಾಡಿರುವೆನು.''

''ನೀನು ಹೀಗೆ ಹೇಳುವದರಿಂದ ನಂಬಿಗೆಯು ಹೇಗೆ ಹುಟ್ಟಬೇಕು? ನಿನ್ನ ಕೃತಿಗಳು ನಮ್ಮ ಕಣ್ಣೆದುರಿನಲ್ಲಿ ಒಂದ ಹೊರತು ವಿಶ್ವಾಸವು ಹುಟ್ಟುವದಕ್ಕೆ ಮಾರ್ಗವಿಲ್ಲ.'' ಎಂದು ಆ ಸೇನಾಪತಿಯು ನುಡಿದ ಕೂಡಲೆ ಆ ಮನುಷ್ಯನು:

''ಸರಕಾರ, ನೀವು ನನ್ನ ವಿಷಯದಲ್ಲಿ ಶಂಕೆಗೊಳ್ಳಬಾರದು. ನಾನು ಸದಾ ಸರ್ವದಾ ಆಂಗ್ಲರ ಹಿತಕ್ಕಾಗಿ ನಿರಪೇಕ್ಷ ಬುದ್ಧಿಯಿಂದ ಪ್ರಯತ್ನಿಸುತ್ತಿರುವೆನು. ಈಗ ಒಂದು ಮಹತ್ವದ ಸಂಗತಿಯನ್ನು ತಿಳಿಸುವದಕ್ಕೆ ಒುದ್ಧಿಪೂರ್ವಕವಾಗಿ ತಮ್ಮ ಬಳಿಗೆ ಬಂದೆನು. ಖಾವಿಂದ, ನಾನು ಶತ್ರುಗಳ ಕಡೆಯ ಗುಪ್ತಚರನಿದ್ದರೆ, ತಮ್ಮ ಶಿಬಿರದ ಬಳಿಗೆ ಬರುತ್ತಿದ್ದೆನೆ? ನಾನು ಹೇಳಬೇಕೆಂದಿರುವ ಮಹತ್ವದ ಸಂಗತಿಯಲ್ಲಿ ಮಿಥ್ಯಾಂಶವಿದ್ದರೆ, ತಾವು ವಿಧಿಸಿದ ಶಿಕ್ಷೆಗೆ ಸಿದ್ಧನಾಗುವೆನು.''

''ನೀನು ಯಾವ ಸಂಗತಿಯನ್ನು ತಿಳಿಸುವದಕ್ಕೆ ಇಲ್ಲಿಗೆ ಬಂದಿರುವೆ?''

''ಇಂದು ಸಾಯಂಕಾಲದೊಳಗಾಗಿ ಬಾಬೂ ಅಜಯಸಿಂಹನು ಇತ್ತ ಕಡೆಗೆ ಬರತಕ್ಕವನಿರುವನು. ನಿಮ್ಮ ಪ್ರಯಾಣವನ್ನು ಇಂದು ನಿಲ್ಲಿಸಿದರೆ, ಒಬ್ಬ ಪ್ರಬಲ ಶತ್ರುವನ್ನು ನಿರಾಯಾಸವಾಗಿ ಸ್ವಾಧೀನ ಪಡಿಸಿಕೊಂಡಂತಾಗುವದು.''

''ನೀನು ಹೇಳುತ್ತಿರುವ ಸಂಗತಿಯು ನಿಜವೆ?'

''ನನ್ನ ಮಾತಿನ ಸತ್ಯತೆಯು ಇಂದೇ ತಮ್ಮ ನಿದರ್ಶನಕ್ಕೆ ಬರುವದು.''

''ನಿನ್ನ ಮಾತಿನಲ್ಲಿ ವಿಶ್ವಾಸವಿಟ್ಟು ಇಂದು ಸೈನ್ಯವನ್ನು ಹೊರಡಿಸುವದಿಲ್ಲ. ಒಂದುವೇಳೆ ಆ ಅಜಯಸಿಂಹನು ಇಲ್ಲಿಗೆ ಬಾರದಿದ್ದರೆ, ನಿನ್ನ ನೂರು ವರ್ಷಗಳು ಇಂದಿಗೇ ತುಂಬಿದವೆಂದು ತಿಳಿದುಕೊಳ್ಳಬೇಕಾಗುವದು. ಹಿಂದಿನಿಂದ ನಿನ್ನ ಯಾವ ಬಗೆಯ ವಿನಂತಿಯಿಂದಲೂ ಪ್ರಯೋಜನವಾಗಲಾರದು.'' ಎಂದು ಸೇನಾಪತಿಯು ನುಡಿದ ಕೂಡಲೆ, ಆ ಮನುಷ್ಯನು:—

''ಅವಶ್ಯ-ಅವಶ್ಯ! ನನ್ನ ಈ ಮಾತು ಸಟೆಯಾದರಷ್ಟೆ, ಮುಂದಿನ ವಿಚಾರವು?'' ಎಂದು ಹೇಳಿದನು. ಈ ಮನುಷ್ಯನು ಮತ್ತಾರೂ ಆಗಿರದೆ, ರಾಮಶರಣನೇ ಆಗಿದ್ದನು. ರಾಮಶರಣನು ಹೀಗೆ ನುಡಿದ ಕೂಡಲೆ ಸೇನಾಪತಿಯ ಲಕ್ಷ್ಯವು ಅವನ ಹಣೆಯ ಮೇಲಿರುವ ಗಾಯದ ಕಡೆಗೆ ಹೋಯಿತು. ಅದನ್ನು ಕಂಡ ಅವನು:—

"ನಿನ್ನ ಹಣೆಯಲ್ಲಿ ಗಾಯವಾದ ಕಾರಣವೇನು?"

"ಗಾಯಕ್ಕೆ ಕಾರಣವು ಬಾರಕೋಲ ಹೊಡತ!"

"ಬಾರಕೋಲ ಹೊಡತ ಬೀಳುವದಕ್ಕೆ ಕಾರಣವೇನು?"

"ಅಜಯನ ನೀಚತನ!"

"ಸ್ಪಷ್ಟವಾಗಿ ಹೇಳಬಾರದೆ?'

"ಖಾವಿಂದ, ಅಜಯನನ್ನು ಶೋಧಿಸುವ ಕಾರ್ಯವನ್ನು ಪ್ರಾರಂಭಿಸಿ ಬಹು ದಿನಗಳಾದವು. ಅವನ ಗುಪ್ತಸ್ಥಳವನ್ನು ಕಂಡು ಹಿಡಿದು, ಆಂಗ್ಲಸೇನಾ ಪತಿಗಳಿಗೆ ತಿಳಿಸಬೇಕೆಂಬದೇ ನನ್ನ ಉದ್ದೇಶವು. ಅದಕ್ಕಾಗಿಯೇ ಗಿರಿ-ವನ ಗಳಲ್ಲಿ ಸಂಚರಿಸುತ್ತ ಇಲ್ಲಿಗೆ ಬಂದಾಗ, ಅವನ ಗುಪ್ತಚರರು ನನ್ನನ್ನು ಒಯ್ದು ಅವನ ಸಮ್ಮುಖದಲ್ಲಿ ನಿಲ್ಲಿಸಿದರು. ಆಗ ಆ ಖಳನು ಕ್ರೋಧಸಂತಪ್ತನಾಗಿ ನನ್ನ ಹಣೆಯ ಮೇಲೆ ಬಾರಕೋಲ ಹೊಡತ ಹಾಕಿ, ಕಾರಾಗೃಹದಲ್ಲಿಡಬೇಕೆಂದು ತನ್ನ ಸೇವಕರಿಗೆ ಆಜ್ಞಾಪಿಸಿದನು. ನಾನು ಬುದ್ಧಿಕೌಶಲ್ಯದಿಂದ ಆ ಸೇವಕರಿಗೆ ಲಂಚದಾಸೆ ಹಚ್ಚಿ, ಅಲ್ಲಿಂದ ಪಾರಾಗಿ ಬಂದೆನು. ಅಜಯನ ಬಾರಕೋಲ ಹೊಡತದ ಚಿಹ್ನವೇ ಇದು!" ಎಂದು ರಾಮಶರಣನು ನುಡಿದು, ಸ್ವಲ್ಪ ಹೊತ್ತು ಯೋಚಿಸಿ:— "ನೀವು ನಿಮ್ಮ ಸೈನ್ಯವನ್ನು ಈ ಅರಣ್ಯದಲ್ಲಿ ಬೇರೆ ಬೇರೆ ಕಡೆಗೆ ಕಳುಹಿಸಿರಿ. ಅವನು ಬರುವ ಮಾರ್ಗದಲ್ಲಿ ಮೊದಲು ಯಾರೂ ಅವನ ಕಣ್ಣಿಗೆ ಬೀಳಬಾರದು. ಸೈನ್ಯದ ಸುಳಿವು ಕಂಡರೆ ಅವನು ಇತ್ತ ಬಾರದೆ, ನಮ್ಮ ವಿಚಾರ ಗಳೆಲ್ಲ ವ್ಯರ್ಥವಾಗಿ ಈ ಬಡವನ ಮೇಲೆ ಗಂಡಾಂತರ ಬಂದೊದಗಬಹುದೆಂದು ಎಲ್ಲ ಸಂಗತಿಯನ್ನು ಪ್ರಭುಸನ್ನಿಧಿಯಲ್ಲಿ ಅರಿಕೆ ಮಾಡಿಕೊಂಡಿರುವೆನು.'

ಸೇನಾಪತಿಯು ರಾಮಶರಣನ ಮಾತಿನಲ್ಲಿ ವಿಶ್ವಾಸವಿಟ್ಟು ತನ್ನ ಸೈನಿಕ ರನ್ನು ಬಳಿಯಲ್ಲಿದ್ದ ಲತಾಕುಂಜವೇಷ್ಟಿತ ವನಪ್ರದೇಶದಲ್ಲಿ ಮರೆಯಾಗುವದಕ್ಕೆ ಸೂಚಿಸಿದನು. ರಾಮಶರಣನು ಒಂದು ಕುದುರೆಯನ್ನೇರಿ ಅಜಯನು ಬರುವ ಮಾರ್ಗದಲ್ಲಿ ತಿರುಗಾಡತೊಡಗಿದನು. ಅವನ ಮಾತಿನಲ್ಲಿ ಸೇನಾಪತಿಯು ನಂಬಿಗೆಯಿಟ್ಟಿದ್ದರೂ ಅವನ ಸುತ್ತಮುತ್ತು ನಾಲ್ಕೆಂಟು ಜನ ಸೈನಿಕರನ್ನು ಕಾವ ಲಾಗಿರಿಸಿದ್ದನು.

ರಾಮಶರಣನು ಬಹಳ ವೇಳೆಯ ವರೆಗೆ ಅಜಯಸಿಂಹನ ಮಾರ್ಗಪ್ರತೀಕ್ಷೆ ಮಾಡಬೇಕಾಗಲಿಲ್ಲ; ಅವನು ತನ್ನ ಅನುಯಾಯಿಗಳೊಡನೆ ಸ್ವಲ್ಪ ವೇಳೆಯಲ್ಲಿ ಯೇ ಸಪರಾಮನ ಬೆಟ್ಟವನ್ನಿಳಿದು ಬಂದನು. ಅವನನ್ನು ನೋಡಿದೊಡನೆಯೆ ರಾಮಶರಣನ ಮೈಯಲ್ಲಿ ವಾಯುಸಂಚಾರವಾದಂತಾಯಿತು. ಕೂಡಲೆ ಅವನು ಕೀಳುಮಾತಿನಿಂದ ಅಜಯಸಿಂಹನ ನಿಂದ ಮಾಡಲುಪಕ್ರಮಿಸಿದನು. ಅಜಯ

ಸಿಂಹನು ಅವನ ಈ ವರ್ತನವನ್ನು ನೋಡಿ ಬಹಳೇ ಸಂತಪ್ತನಾದನು. ಅವನು ತನ್ನ ಅನುಚರರನ್ನು ಅಲ್ಲಿಯೇ ಬಿಟ್ಟು, ರಾಮುಶರಣನ ಮೇಲೆ ಧಾವಿಸಿಹೋದನು. ಪರಮ ಕೃತಘ್ನನಾದ ಅವನನ್ನು ವಧಿಸಬೇಕೆಂಬ ದೃಢಸಂಕಲ್ಪದಿಂದ ಅಜಯನು ತನ್ನ ಕುದುರೆಯನ್ನು ವಾಯುವೇಗದಿಂದ ಸಾಗಿಸಿದ್ದನು. ಅವನು ತನ್ನ ಮೇಲೆ ಸಾಗಿ ಬರತೊಡಗಿದ್ದನ್ನು ನೋಡಿ, ರಾಮುಶರಣನು ಆಂಗ್ಲ ಸೈನಿಕರು ಅಡಗಿಕೊಂಡಿದ್ದ ಸ್ಥಳದ ಕಡೆಗೆ ಸಾಗಿದನು.

ಅಜಯಸಿಂಹನು ನರಾಧಮನಾದ ರಾಮುಶರಣನ ಕೃಷ್ಣಕಾರಸ್ಥಾನವನ್ನು ಅರಿಯದವನಿದ್ದುದರಿಂದ ಯಾವ ಬಗೆಯ ಅಂಜಿಕೆಯಿಲ್ಲದೆ ಅವನನ್ನು ಹಿಡಿಯಬೇಕೆಂದು ಹೊರಟಿದ್ದನು. ಅವನ ಕುದುರೆಯು ಆಂಗ್ಲ ಸೈನಿಕರಿದ್ದ ಸ್ಥಳಕ್ಕೆ ಬಂದಿತು. ಸ್ವಲ್ಪ ಅವಕಾಶವು ದೊರೆತಿದ್ದರೆ, ಅವನ ತೀಕ್ಷ್ಣಧಾರೆಯ ಖಡ್ಗವು ರಾಮುಶರಣನ ಶಿರವನ್ನು ಬಲಿಯಾಗಿ ತೆಗೆದುಕೊಳ್ಳುತ್ತಿತ್ತು; ಆದರೆ ಈಶ ಸಂಕಲ್ಪವು ಬೇರೆವಿಧವಾಗಿತ್ತು. ರಾಮುಶರಣನ ಮೇಲೆ ಖಡ್ಗಪ್ರಹಾರ ಮಾಡುವ ಸಮಯದಲ್ಲಿ ಆಂಗ್ಲ ಸೈನ್ಯವು ಅವನನ್ನು ಮುತ್ತಿತು! ವೀರಾಗ್ರಣಿಯಾದ ಅಜಯಸಿಂಹನು ನಿಮಿಷಾರ್ಧದಲ್ಲಿ ನಾಲ್ಕೆಂಟು ಜನ ಸೈನಿಕರನ್ನು ನೆಲಕ್ಕುರುಳಿಸಿದನು. ಬಹುಸಂಖ್ಯಾಕ ಸೇನೆಯ ಮುಂದೆ ಒಬ್ಬನೇ ಒಬ್ಬನಾದ ಅವನ ಆಟವು ಹೇಗೆ ನಡೆಯಬೇಕು? ಸ್ವಲ್ಪ ಹೊತ್ತಿನಲ್ಲಿಯೇ ಅವನು ಆಂಗ್ಲರ ಸೆರೆಯಾಳಾದನು. ಒಂದು ರಕ್ತಬಿಂದುವನ್ನಾದರೂ ಕೆಡಹದೆ ಅಜಯಸಿಂಹನನ್ನು ಸೆರೆಹಿಡಿಯಬೇಕೆಂದು ಸೇನಾಪತಿಯು ಕಟ್ಟಳೆಯಿದ್ದುದರಿಂದ, ಆ ಕಾದಾಟದಲ್ಲಿ ಅವನಿಗೆ ಯಾವ ಅಪಾಯವೂ ಒದಗಲಿಲ್ಲ. ಅವನನ್ನು ಜೀವಂತವಾಗಿ ಸೆರೆ ಹಿಡಿದೊಯ್ದು ತನ್ನ ಪರಾಕ್ರಮದ ಹೆಚ್ಚಳ ಪಡೆಯಬೇಕೆಂದು ಸೇನಾಪತಿಯು ಮನೀಷೆಯಿದ್ದುದರಿಂದಲೇ, ಅವನು ತನ್ನ ಸೈನಿಕರಿಗೆ ಅವರಂತೆ ಕಟ್ಟಳೆ ಮಾಡಿದ್ದನು.

ಅಜಯನು ಸೆರೆಯಾಳಾದಾಗ ರಾಮುಶರಣನು ಅವನನ್ನು ನೋಡಿ ವಿಕಟ ಹಾಸ್ಯಗೈಯತೊಡಗಿದ್ದನು. ಕಡು ಹಗೆಯೊಬ್ಬನು ಶತ್ರುಗಳ ಕೈಯಲ್ಲಿ ಸಿಲುಕಿದನೆಂದೂ, ಅವರು ಅವನ ಪಾರಿಪತ್ಯಗೊಳಿಸುವರೆಂದೂ ಅವನು ಆನಂದಮಯನಾಗಿದ್ದನು. ಅವನ ಮುಖದಿಂದ ಅಜಯಸಿಂಹನ ಬಗ್ಗೆ ಕುತ್ಸಿತವಾದ ಮಾತುಗಳು ಹೊರಡತೊಡಗಿದ್ದವು. ರಾಮುಶರಣನ ಈ ನೀಚ ವರ್ತನವನ್ನು ನೋಡಿ ಅಜಯನ ಸರ್ವಾಂಗಕ್ಕೂ ಬೆಂಕಿಹತ್ತಿದಂತಾಗಿತ್ತು. ಆಗ ಅವನು ಸಂತಪ್ತ ಮುದ್ರೆಯಿಂದ: –

"ನರಪಿಶಾಚಿಯೆ! ನಾನು ನಿನಗೆ ಉಪಕಾರ ಮಾಡಿ ಮೋಸ ಹೋದೆನು. ಹಾವಿಗೆ ಹಾಲೆರದರೆ ವಿಷವನ್ನೀಯುವದೇ ಹೊರತು ಅಮೃತವನ್ನುಣಿಸುವದೆ?

ನರಾಧಮನಾ, ನಿನ್ನ ಈ ನೀಚತನದಿಂದ ಯಾವ ಪುರುಷಾರ್ಥವು ಸಾಧಿಸುವಂತಿದೆ? ಆಂಗ್ಲರು ಹಾಕುವ ತುಣುಕು ರೊಟ್ಟಿಗಾಗಿ ಇಂತಹ ಅಧೋಗತಿಸಾಧಕವಾದ ಮಾರ್ಗವನ್ನವಲಂಬಿಸಿದೆಯಲ್ಲವೆ? ನಿಮ್ಮಂತಹ ವಂಚಕರಿಂದಲೆ ದೇಶವು ಪರವಶತೆಯ ದುಃಖವನ್ನು ಭೋಗಿಸುತ್ತಿರುವದು. ರಾಮಶರಣಾ, ನಾನು ನಿನಗೆ ಜೀವದಾನ ಕೊಟ್ಟ ಉಪಕಾರಕ್ಕೆ ಸರಿಯಾಗಿ ಪ್ರತಿಫಲವಿತ್ತೆ!''

''ಅಜಯ, ನೀನು ಇಲ್ಲದ ದೊಡ್ಡಸ್ತಿಕೆಯನ್ನು ಇಲ್ಲಿ ಪ್ರದರ್ಶಿಸಬೇಡ. ನಿನ್ನ ಆಡಂಬರದ ಮಾತಿಗೆ ಮಹತ್ವ ಕೊಡುವವರು ಇಲ್ಲಿ ಯಾರೂ ಇಲ್ಲ.''

ರಾಮಶರಣನು ಅಧ್ಯಕ್ಷತೆಯಿಂದ ಹೀಗೆ ನುಡಿದ ಕೂಡಲೆ ಅಜಯನು ಆಪಾದಮಸ್ತಕದ ವರೆಗೆ ಉರಿಯತೊಡಗಿದನು; ಆದರೆ, ಮಾಡುತ್ತಾನೇನು? ಅವನು ನಿರುಪಾಯದಿಂದ ತಟಸ್ಥವೃತ್ತಿಯನ್ನು ಅವಲಂಬಿಸಬೇಕಾಯಿತು.

ಒಬ್ಬ ಪ್ರಬಲನಾದ ವೈರಿಯು ಹಸ್ತಗತನಾದದ್ದಕ್ಕೆ ಆಂಗ್ಲ ಸೇನಾಪತಿಗೆ ಹರ್ಷವಾಯುವು ಕೂಡಿದಂತಾಗಿತ್ತು. ಅನೇಕ ವಿಧದಿಂದ ಶ್ರಮಬಟ್ಟರೂ ಆಗದಂತಹ ಮಹತ್ಕಾರ್ಯವು ಅನಾಯಾಸವಾಗಿ ನೆರವೇರಿದ ಮೇಲೆ ಯಾರಿಗೆ ಆನಂದವಾಗಲಿಕ್ಕಿಲ್ಲ? ಆಗ ಅವನು ರಾಮಶರಣನನ್ನು ಕುರಿತು ಸಂಭ್ರಮದಿಂದ:—

''ರಾಮಶರಣ, ನಿನ್ನಿಂದ ಸರಕಾರದ ಮೇಲೆ ದೊಡ್ಡ ಉಪಕಾರವಾಯಿತು. ನಿನ್ನ ಉಪಕೃತಿಯಿಂದ ನಾನೂ ಕೃತಕೃತ್ಯನಾದೆನು. ನನ್ನೊಡನೆ ಆರಾಕ್ಕೆ ನಡೆ. ಅಲ್ಲಿಯೇ ನಿನಗೆ ಯೋಗ್ಯ ಸಂಭಾವನೆಯು ದೊರೆಯುವದು.''

ಆಂಗ್ಲ ಸೇನಾಪತಿಯು ನರಕೇಸರಿಯಾದ ಅಜಯಸಿಂಹನನ್ನು ಸಂಗಡ ಕರೆದುಕೊಂಡು ವಿಜಯಾನಂದದಿಂದ ಆರಾದ ದಾರಿ ಹಿಡಿದನು.

---

## ಎಲಾ, ಇದೇನು!

ನ್ಯಧಾಯಿಯ ಬಳಿಯಲ್ಲಿ ಬಾಬೂ ಕುವರಸಿಂಹನು ಲಾರ್ಡ ಮಾರ್ಕಕಾರ, ಕರ್ನಲ್ ಡಗ್ಲಸ, ಜನರಲ್ ಲುಗಾರ್ಡ ಈ ಮೂವರು ಸೇನಾಪತಿಗಳಿಗೆ ಯುದ್ಧ ಚಾಪಲ್ಯವನ್ನು ತೋರಿಸುತ್ತ ಗಂಗಾತಟಾಕಕ್ಕೆ ಬಂದನು. ಅವನು ಅಲ್ಲಿಗೆ ಒಯುವಷ್ಟರಲ್ಲಿ ಕರ್ನಲ್ ಡಗ್ಲಸನು ಅಲ್ಲಿಯ ನೌಕೆಗಳನ್ನೆಲ್ಲ ನೀರಲ್ಲಿ ಮುಳುಗಿಸಿದ್ದರಿಂದ, ಅವನು ಬೇರೆ ಕಡೆಗೆ ಹೋಗಬೇಕಾಯಿತು. ಆಗ ಅವನು ತನ್ನ ಸೇನೆಯಲ್ಲಿ ಕೆಲವು ಭಾಗ ಮಾಡಿ ಒಂದೊಂದು ಕಡೆಗೆ ಹೋಗಿ ಗಂಗಾಪಾರಾಗುವದಕ್ಕಾಗಿ ಆಜ್ಞಾಪಿಸಿದ್ದನು. ತಾನು ಸ್ವಲ್ಪ ದಂಡಿನೊಡನೆ ಈ ಸೇನಾಪತಿ

ತ್ರಯರಿಗೆ ಮಂಕುಬೂದಿ ಹಚ್ಚುತ್ತ, ಬಲಿಯಾ ಬಂದರದಿಂದ ಗಂಗಾನದಿಯನ್ನು
ದಾಟುವೆನೆಂದು ಪ್ರಸಿದ್ಧ ಮಾಡಿದನು. ಡಗ್ಲಸನು ಆ ಬಂದರದಲ್ಲಿ ಅವನಿಗೆ
ಆತಂಕ ಮಾಡುವದಕ್ಕಾಗಿ ಪ್ರಯತ್ನ ನಡೆಯಿಸಿದನು.

ಕುವರಸಿಂಹನ ಚಾತುರ್ಯದ ಮುಂದೆ ಆಂಗ್ಲಸೈನಿಕರು ಕೈಯಾರಿದ
ರೆಂದು ಹೇಳಲು ಪ್ರತ್ಯವಾಯವಿಲ್ಲ. ಅವರು ಬಲಿಯಾ ಬಂದರವನ್ನು ಕಾಯ್ದಿ
ರುವಾಗ ಕುವರಸಿಂಹನು ಬೇರೆ ವಿಧವಾಗಿ ಕಾರಸ್ಥಾನವನ್ನು ನಡೆಯಿಸಿದ್ದನು
ಅವನು ತನ್ನ ಅನುಚರರನ್ನು ಶಿವಪುರಕ್ಕೆ ಕಳುಹಿಸಿ, ಅಲ್ಲಿ ನೌಕೆಗಳನ್ನು ಸಿದ್ಧ
ವಿಡುವದಕ್ಕೆ ತಿಳಿಸಿದ್ದನು. ಶಿವಪುರ ಬಂದರವು ಬಲಿಯಾದಿಂದ ಐದು ಹರದಾ
ರಿಯ ಮೇಲಿತ್ತು ಅಲ್ಲಿ ಕುವರಸಿಂಹನ ಸೈನಿಕರು ಗಂಗಾ ಪಾರಾಗುತ್ತಿರು
ವದರ ಸೊಲ್ಲು ಕೂಡ ಆಂಗ್ಲಸೈನಿಕರಿಗೆ ತಗಲಿದ್ದಿಲ್ಲ. ಕುವರಸಿಂಹನು ಆಂಗ್ಲ
ರಿಗೆ ಮಂಕುಬೂದಿ ಹಚ್ಚಿ ಪಾರಾಗಬೇಕೆನ್ನುವ ಸಾಹಸವು ಸಂಪೂರ್ಣವಾಗಿ
ಸಿದ್ಧಿಸುವದಕ್ಕೆ ಮಾರ್ಗವಿರಲಿಲ್ಲ. ಯಾಕಂದರೆ, ಭರತಭೂಮಿಯು ಒಡಕಿನಿಂದ
ಶಿಥಿಲವಾಗಿತ್ತು; ವಂಚಕರಿಂದ ದುರ್ಬಲವಾಗಿತ್ತು.

ಭಾರತವರ್ಷದಲ್ಲೆಲ್ಲ ಸ್ವಾತಂತ್ರ್ಯಯಜ್ಞವು ಪ್ರಾರಂಭವಾಗಿ, ಆ ಸ್ವಾತಂ
ತ್ರ್ಯದ ರಣಕುಂಡದಲ್ಲಿ ದುಮುಕುವದಕ್ಕೆ ಅಸಂಖ್ಯ ವೀರಾಧಿವೀರರು ಸಿದ್ಧ
ರಾದರು. ಆ ಎಲ್ಲ ಜನರು ಬಹುತರವಾಗಿ ಶೂರರೂ ಸಾಹಸಿಗಳೂ ಇದ್ದರು.
ಅವರು ತಮ್ಮ ಶಿರಕಮಲಗಳನ್ನು ಕೈಯಲ್ಲಿ ತೆಗೆದುಕೊಂಡು ಕಾದಿದರು. ಹೀಗಿ
ದ್ದರೂ ಬಹು ಸಂಖ್ಯಾಕರಿಗೆ ಅಪಜಯವಾಗಿ ಅಲ್ಪ ಸಂಖ್ಯಾಕ ಜನರು ವಿಜಯ
ಶಾಲಿಗಳಾಗುವದರಲ್ಲಿ ಏನಾದರೂ ಗೂಢವಿರಬೇಕಲ್ಲವೆ? ಝಾಂಸಿಯ ಮಹಾ
ರಾಣಿ ಲಕ್ಷ್ಮೀಬಾಯಿ, ತಾತ್ಯಾ ಟೋಪಿ, ನಾನಾಸಾಹೇಬ ಪೇಶವೆ, ಕುವರ
ಸಿಂಹ, ಮೌಲವೀಸಾಹೇಬ ಮೊದಲಾದ ಸಂಗ್ರಾಮಪಟುಗಳ ಸಾಹಸವು ನಿರ
ರ್ಥಕವಾಗಿ, ಅಗಣಿತ ವೀರರು ತಮ್ಮ ಬಿಸಿ ನೆತ್ತರವನ್ನು ಸಂಗ್ರಾಮದೇವತೆಗೆ
ಅರ್ಪಿಸಿದ ಪುಣ್ಯವು ನಿಷ್ಫಲವಾಗಬೇಕಾದರೆ, ಕ್ರಾಂತಿಕಾರಕರಲ್ಲಿ ಏನಾದರೂ
ದೋಷವಿರಬಹುದೆಂಬದನ್ನು ಯಾರಾದರೂ ಒಪ್ಪಬಹುದಾಗಿದೆ. ಈ ಕ್ರಾಂತಿ
ಕಾರಕ ಜನರಲ್ಲಿ ಐಕ್ಯವಿರಲಿಲ್ಲ. ಏಕಸೂತ್ರಿಯ ತಂತ್ರವಿರಲಿಲ್ಲ. ಸಂಘಟಿತ
ಶಕ್ತಿಯೂ ಉದಾತ್ತಭಾವನೆಗಳೂ ಇರದಿದ್ದರೆ, ಸ್ವೀಕೃತ ಕಾರ್ಯಗಳು ಹೇಗೆ
ಯಶಸ್ವಿಯಾಗಬೇಕು? ಇದಕ್ಕೆ ವಿರುದ್ಧವಾಗಿ ಆಂಗ್ಲಸೈನ್ಯದಲ್ಲಿ ವ್ಯವಸ್ಥೆಯಿತ್ತು.
ಒಂದು ಕಡೆಯಲ್ಲಿ ಸೈನ್ಯದ ಕೊರತೆಯಾದರೆ, ಮತ್ತೊಂದು ಕಡೆಯಿಂದ ಸಹಾ
ಯವು ಬರುತ್ತಿತ್ತು. ಅವರಲ್ಲಿ ಅನೇಕ ಉಚ್ಚಭಾವನೆಗಳು ಅತ್ಯಂತ ಜಾಗ್ರತ
ವಿದ್ದವು. ಅವರ ಸ್ವದೇಶಾಭಿಮಾನವೂ ಐಕ್ಯತ್ವವೂ ಅವರ್ಣನೀಯವಿದ್ದವು.

ನೀಚ ಸ್ವಾರ್ಥಕ್ಕಾಗಿ ಹೇಸಿತನದ ಕೃತ್ಯಗಳನ್ನು ಮಾಡುವದು ಆ ಜನಾಂಗಕ್ಕೆ ಗೊತ್ತಿದ್ದಿಲ್ಲ. ಹೀಗಿದ್ದ ಮೇಲೆ ಅವರು ಭಾವೀ ಸಂಗ್ರಾಮದಲ್ಲಿ ವಿಜಯ ದುಂದುಭಿಯನ್ನು ಮೊಳಗಿಸದಿರುವರೆ?

ಇದುವರೆಗಾದ ಸಂಗ್ರಾಮದಲ್ಲಿ ಕುವರಸಿಂಹನು ಎಷ್ಟು ಮಾತ್ರವೂ ಹಿಂಜರಿದಿದ್ದಿಲ್ಲ. ಅವನು ಈಗ ಹಿಂದಿರುಗಿದ್ದಾದರೂ ಆಂಗ್ಲರ ಭೀತಿಯಿಂದಲ್ಲ; ಜಗದೀಶಪುರಕ್ಕೆ ಹೋಗಿ ಹೊಸ ಸೇನಾಸನ್ನಾಹದೊಂದಿಗೆ ದಂಡಯಾತ್ರೆಗಾಗಿ ಹೊರಡಬೇಕೆಂದು ಅವನ ನಿಶ್ಚಯವಿತ್ತು. ಸದ್ಯದಲ್ಲಿ ಅವನ ಒಳಿಯ ಸೈನ್ಯವು ವ್ಯಾಹತಿಯಿಲ್ಲದೆ ಯುದ್ಧ ಕಾರ್ಯ ಮಾಡಿದ್ದರಿಂದ, ಅದಕ್ಕೆ ಸ್ವಲ್ಪ ದಿನಗಳ ವಿಶ್ರಾಂತಿಯಾದರೂ ಅತ್ಯವಶ್ಯವಾಗಿ ಬೇಕಾಗಿತ್ತು. ಅಂತೆಯೇ ಅವನು ಆಂಗ್ಲಸೇನೆಗೆ ಮಂಕುಬೂದಿ ಹಚ್ಚುತ್ತ, ಪ್ರಸಂಗ ವಿಶೇಷದಲ್ಲಿ ಕೈಗೊಟ್ಟು ಕಾದುತ್ತ ಭಾಗೀರಥೀನದಿಯನ್ನು ದಾಟಬೇಕೆಂಬ ಹವಣಿಕೆಯಲ್ಲಿ ತೊಡಗಿದ್ದನು. ಆ ಸಂಗ್ರಾಮಸಿಂಹನ ರಣಚಾತುರ್ಯವನ್ನೂ ಧೂರ್ತತನವನ್ನೂ ನೋಡಿ, ಜನರಲ್ ಲುಗಾರ್ಡ, ಡಗ್ಲಸ ಮೊದಲಾದ ಸೇನಾಪತಿಗಳು ದಂಗು ಒಡೆದರು.

ಕುವರಸಿಂಹನು ಗಂಗಾನದಿಯನ್ನು ದಾಟುವ ಪ್ರಯತ್ನದಲ್ಲಿರುವದನ್ನು ಡಗ್ಲಸನು ಕಂಡು ಹಿಡಿದದ್ದರಿಂದಲೇ ಬಾಲಿಯಾ ಬಂದರದೊಳಗಿನ ಎಲ್ಲ ನೌಕೆಗಳನ್ನು ನೀರಿನಲ್ಲಿ ಮುಳುಗಿಸಿದ್ದನು. ಕುವರಸಿಂಹನಾದರೂ ತುಸ ನೀರಿನಲ್ಲಿ ಮುಳುಗುವವನಿದ್ದಿಲ್ಲ. ಒಂದು ಕಡೆಗೆ ಹೋಗಬೇಕೆಂದು ಪ್ರಸಿದ್ಧವಾಗಿ ಹೇಳಿ, ಮತ್ತೊಂದು ಕಡೆಗೆ ಗುಪ್ತರೀತಿಯಿಂದ ಹೋಗುತ್ತಿದ್ದನು. ಬಾಲಿಯಾ ಬಂದರದೊಳಗಿನ ನೌಕೆಗಳು ಜಲಸಮಾಧಿಯನ್ನು ಹೊಂದಿದ್ದರಿಂದ, ಕುವರಸಿಂಹನ ಮನಸ್ಸು ತಿಲಾಂಶವಾದರೂ ವಿಷಾದಗೊಳ್ಳಲಿಲ್ಲ. ಯಾಕಂದರೆ ಅವನು ಆ ಬಂದರದಿಂದ ದಾಟಿ ಹೋಗಬೇಕೆಂಬ ಯತ್ನವನ್ನೇ ಮಾಡಿದ್ದಿಲ್ಲ ಕೇವಲ ಶತ್ರುಗಳ ತೋರಿಕೆಗಾಗಿ ಹಾಗೆ ನಟಿಸಿದ್ದನು.

ಬಾಲಿಯಾ ಬಂದರದ ಸಮೀಪದಲ್ಲಿಯೇ ಕುವರಸಿಂಹನ ಸೈನ್ಯವು ಬೀಡು ಬಿಟ್ಟಿತ್ತು. ಆಗ ಅವನ ಸೇನೆಯೊಳಗಿನ ಬಹು ಭಾಗವು ಎರಡನೆಯ ಕಡೆಗೆ ಹೋಗಿತ್ತು. ಉಳಿದ ಸೈನ್ಯವನ್ನಾದರೂ ಅಲ್ಲಿಂದ ತೆಗೆದುಕೊಂಡು ಹೋಗಬೇಕೆಂಬ ಆಲೋಚನೆಯಲ್ಲಿ ಕುವರಸಿಂಹನು ತೊಡಗಿದ್ದನು. ಆಂಗ್ಲಸೇನೆಯು ಅಲ್ಲಿಗೆ ಬರುವದರೊಳಗೆ ಪಾಳ್ಯವನ್ನು ಕಿತ್ತಬೇಕಾದುದರಿಂದ, ಅವನು ಪ್ರಯಾಣ ಸಿದ್ಧತೆಗಾಗಿ ತನ್ನ ಸೈನಿಕರಿಗೆ ಒತ್ತಾಯ ನಡೆಸಿಸಿದ್ದನು. ಅವರಾದರೂ ಲಗುಬಗೆಯಿಂದ ಹೊರಡಲುದ್ಯುಕ್ತರಾಗತೊಡಗಿದ್ದರು.

ಬಾಲಿಯಾ ಬಂದರದಿಂದಲೇ ಕುವರಸಿಂಹನ ಸೈನ್ಯವು ಗಂಗಾನದಿಯನ್ನು

ದಾಟಿ ಹೋಗುವದೆಂಬ ದೃಢವಿಶ್ವಾಸವು ಡಗ್ಲಸನಿಗಿದ್ದುದರಿಂದಲೇ ಅವನು ತನ್ನ ಸೇನೆಯನ್ನು ಅತ್ಯಂತ ಜಾಗ್ರತೆಯಿಂದ ಬಂದರಕ್ಕೆ ತಂದಿದ್ದನು. ತನ್ನ ಸೈನ್ಯವು ಬಂದರಕ್ಕೆ ಬಂದ ವರ್ತಮಾನವು ಶತ್ರುಗಳಿಗೆ ತಿಳಿಯಬಾರದೆಂದು ಅವನು ರಾತ್ರಿಯ ಸಮಯದಲ್ಲಿಯೇ ಮಾರ್ಗಕ್ರಮಣ ಮಾಡಿ ಬಂದರವನ್ನು ಮುಟ್ಟಿದನು. ಅವನು ಅಲ್ಲಿ ಶೋಧಿಸಲಾಗಿ ಕುವರಸಿಂಹನ ಸೈನ್ಯವು ಇನ್ನೂ ಬಂದಿಲ್ಲವೆಂದು ತಿಳಿದು ಬಂತು. ರಾತ್ರಿಯ ವೇಳೆಯಲ್ಲಿ ಬರುವವನಿರುವನೆಂಬ ವಾರ್ತೆಯನ್ನು ಅವನ ಗುಪ್ತಚಾರರು ತಿಳಿಸಿದರು. ಆಗ ಡಗ್ಲಸನಿಗಾದ ಆನಂದವನ್ನು ಬಣ್ಣಿಸಲಳವಲ್ಲ. ಶತ್ರುವು ತಾನಾಗಿಯೇ ಜಾಲದಲ್ಲಿ ಸಿಲುಕುವನೆಂದು ಅವನು ಸಂಭ್ರಮಗೊಳ್ಳತೊಡಗಿದ್ದನು.

ಕರ್ನಲ್ ಡಗ್ಲಸನು ಬಾಲಿಯಾ ಬಂದರದಲ್ಲಿ ಕುವರಸಿಂಹನ ಮಾರ್ಗಪ್ರತೀಕ್ಷೆ ಮಾಡುತ್ತಿರುವಾಗ ಅವನು ತನ್ನ ಸೈನ್ಯದೊಡನೆ ಬಾಲಿಯಾದಿಂದ ಐದು ಹರದಾರಿ ದೂರವಿರುವ ಶಿವಪುರದ ಒಳಗೆ ಸಾಗಿದ್ದನು. ಬೆಳಗಾಗುವದರೊಳಗೆ ಅವನು ನದೀ ತೀರವನ್ನು ಮುಟ್ಟಿದನು. ಕೂಡಲೆ ಅವನ ಸೈನ್ಯವು ನೌಕೆಯಿಂದ ಪರತೀರವನ್ನು ಸೇರಲಾರಂಭಿಸಿತು. ನೌಕೆಗಳು ಸ್ವಲ್ಪವಿದ್ದುದರಿಂದ, ಒಮ್ಮೆಲೆ ಅವನ ಸೈನ್ಯವು ಹೋಗುವಂತಿದ್ದಿಲ್ಲ. ಅವನು ಸ್ವಲ್ಪ ಸ್ವಲ್ಪ ಜನರನ್ನು ನದೀ ಪಾರು ಮಾಡಿ ಕಳುಹಿಸಿ ಕೊಡುವ ಕಾರ್ಯವನ್ನು ಪ್ರಾರಂಭಿಸಿದ್ದನು. ತಾನು ಇತ್ತ ಕಡೆಗೆ ಹೊರಟ ಸುದ್ದಿಯನ್ನು ಕೇಳಿ, ಆಂಗ್ಲಸೈನ್ಯವು ಬಂದರೆ ಅದರೊಡನೆ ಕಾದಬೇಕಾಗುವದೆಂದು ಅವನು ತನ್ನ ಬಳಿಯಲ್ಲಿ ರಣದಲನಸಿಂಹ, ಜವಾನಸಿಂಹ ಮೊದಲಾದ ವೀರರನ್ನೂ, ಕಾಳಗದಲ್ಲಿ ಹೆಸರುವಾಸಿಗಳಾದ ನುರಿತ ದಂಡಾಳುಗಳನ್ನೂ ಇಟ್ಟುಕೊಂಡಿದ್ದನು. ತಾನು ಅವರ ಸಂಗಡ ಕಡೆಯ ಬಾರಿಗೆ ಹೋಗಬೇಕೆಂದು ನಿಶ್ಚಯಿಸಿಕೊಂಡಿದ್ದನು. ನೌಕೆಗಳು ಎಡವಿಡದೆ ಹೋಗಬರತೊಡಗಿದ್ದರಿಂದ ಗಂಗಾನದಿಯು ಅಲ್ಲೋಲ-ಕಲ್ಲೋಲವಾಗತೊಡಗಿತ್ತು. ಕೆಲವು ಹೊತ್ತಿನ ಮೇಲೆ ನೋಡಲು, ನದಿಯ ಎರಡೂ ಬದಿಯ ತಟಾಕಗಳೂ ನದಿಯೂ ಸೈನಿಕರಿಂದ ತುಂಬಿ ಹೋದಂತೆ ಕಾಣತೊಡಗಿದವು.

ಇತ್ತ ಬಾಲಿಯಾ ಬಂದರದಲ್ಲಿ ಡಗ್ಲಸನು ಕುವರಸಿಂಹನ ಸೈನ್ಯದ ಮಾರ್ಗಪ್ರತೀಕ್ಷೆ ಮಾಡಿ-ಮಾಡಿ ಬೇಸತ್ತನು. ಈಗ ಬಂದೀತು; ಆಗ ಬಂದೀತೆಂದು ಬೆಳಗಾಗುವ ವರೆಗೆ ಅವನು ಬಂದರದಲ್ಲಿ ಕುಳಿತು ಬಿಟ್ಟನು. ಅರುಣೋದಯವಾಯಿತು; ತಮಸ್ಸು ಹರಿಯಿತು; ಆಗಸದೊಳಗಿನ ತಾರೆಗಳು ಕಳೆಗುಂದತೊಡಗಿದವು. ಅವುಗಳೊಡನೆ ಡಗ್ಲಸನ ತೇಜವುಳ್ಳ ಮುಖವೂ ಕಾಂತಿಹೀನವಾಯಿತು! ಸ್ವಲ್ಪ ಹೊತ್ತಿನಲ್ಲಿಯೇ ಎಲ್ಲ ಕಡೆಯಲ್ಲಿಯೂ ಬೆಳಕಾಯಿತು. ದಿನಮಣಿಯು

ಮಾತ್ರ ಇನ್ನೂ ಉದಯಿಸಿರಲಿಲ್ಲ. ಆಗ ಮಾತ್ರ ಡಗ್ಲಸನ ತಲೆಯು ತಿರುಗಿತು. ಬಾಲಿಯಾ ಬಂದರದಿಂದ ಸ್ವಲ್ಪವೇ ದೂರದಲ್ಲಿದ್ದ ಕುವರಸಿಂಹನ ಶಿಬಿರವನ್ನು ಮುತ್ತಿ ದೂಳ ಹಾರಿಸಬೇಕೆಂದು ನಿರ್ಧರಿಸಿದನು. ಅವನು ತನ್ನ ಸೈನ್ಯವನ್ನು ಅಲ್ಲಿಂದ ಹೊರಡಿಸುವ ಸಿದ್ಧತೆಯಲ್ಲಿ ತೊಡಗಿದನು. ಅವನು ಅತ್ಯಂತ ಸಂತಪ್ತ ನಾಗಿದ್ದನು. ಕುವರಸಿಂಹನ ಸೈನ್ಯದೊಳಗಿಂದ ಒಬ್ಬನಾದರೂ ಓಡಿ ಹೋಗ ದಂತೆ ಶೂರತನದಿಂದ ಕಾದಬೇಕೆಂದು ಅವನು ತನ್ನ ಸೈನಿಕರಿಗೆ ಉತ್ತೇಜನ ಕೊಡತೊಡಗಿದ್ದನು. ಬಾಲಿಯಾದ ಸಂಗ್ರಾಮದಲ್ಲಿ ವಿಜಯವನ್ನು ಸಂಪಾದಿಸಿ ದರೆ, ಹೇರಳವಾದ ಪಾರಿತೋಷಕವು ದೊರೆಯುವದೆಂದು ಅವನು ತನ್ನ ಸೈನ್ಯಕ್ಕೆ ಸಂಭಾವನೆಯ ಆಶೆ ಹಚ್ಚಿದ್ದನು. ಡಗ್ಲಸನ ಕಟ್ಟಪ್ಪಣೆಯಿಂದಲೂ, ಅವನ ಪಾರಿ ತೋಷಕದ ಆಶೆಯಿಂದಲೂ, ಸಮೀಪದಲ್ಲಿಯೇ ಶತ್ರುವಿನ ಶಿಬಿರವಿರುವದೆಂಬ ಉತ್ಸಾಹದಿಂದಲೂ ಆಂಗ್ಲಸೈನ್ಯವು ನವ್ಯಸ್ಫೂರ್ತಿಯಿಂದ ಕುವರಸಿಂಹನ ಮೇಲೆ ಬೀಳುವದಕ್ಕಾಗಿ ಹೊರಟಿತು

ಕುವರಸಿಂಹನ ಸೈನ್ಯದ ದೂಳ ಹಾರಿಸಬೇಕೆಂದು ಹೊರಟ ಡಗ್ಲಸನ ಸೈನ್ಯವು ನೆಲದ ದೂಳವನ್ನು ಮಾತ್ರ ಚನ್ನಾಗಿ ಹಾರಿಸಿತು! ಯಾಕಂದರೆ, ಅದು ಬರುವಷ್ಟರಲ್ಲಿ ಕುವರಸಿಂಹನ ಶಿಬಿರವಿದ್ದ ಸ್ಥಳದಲ್ಲಿ ಕಾಗಿ ಗುಬ್ಬಿಗಳ ಸುಳಿ ದಾಟವು ಸಹ ಕಾಣಲಿಲ್ಲ! ಡಗ್ಲಸನು ಈ ಪರಿಸ್ಥಿತಿಯನ್ನು ನೋಡಿ:—"ಎಲಾ! ಇದೇನು!!" ಎಂದು ಆಶ್ಚರ್ಯೋದ್ಗಾರ ತೆಗೆದನು!

---

## ಮೋಹನಾಸ್ತ್ರ!

ಅಜಯಸಿಂಹನು ಕೈಸೆರೆಯಾದ ವಾರ್ತೆಯು ವೇಗದಿಂದ ಎಲ್ಲ ಕಡೆಯಲ್ಲಿಯೂ ಪಸರಿಸಿತು. ಈ ಸಂಗತಿಯನ್ನು ಕೇಳಿ ಆರಾದ ನಿವಾಸಿಗಳು ಅತ್ಯಂತ ದುಃಖಿತ ರಾದರು. ಬಿಹಾರದ ಪ್ರಜಾಜನರಾದರೂ ಬಹಳವಾಗಿ ಮರುಗತೊಡಗಿದರು. ಕ್ರಾಂತಿಕಾರಕರ ಮುಂದಾಳುವಾದ್ದರಿಂದ, ಅವನಿಗೆ ದೇಹಾಂತಶಾಸನವು ವಿಧಿಸ ಲ್ಪಡುವದೆಂದು ಎಲ್ಲರೂ ತಿಳಿದಿದ್ದರು.

ಲಿಲಿಯು-ಕುಮಾರಿ ಲೀಲಾವತಿಯು-ಅಜಯಸಿಂಹನಿಂದ ಅಪ್ಪಣೆ ಪಡೆದು ಆರಾಕ್ಕೆ ಬಂದಿದ್ದಳು. ಅವಳು ಅವನ ಘನತರವಾದ ಯೋಗ್ಯತೆಯನ್ನು ಎಲ್ಲ ಆಂಗ್ಲ ಜನರಿಗೂ ತಿಳಿಸಿದ್ದಳು. ಅವಳ ಆಪ್ತಕೋಟಿಯೊಳಗಿನವನಾದ ರಾಬರ್ಟನಿಗೂ ಅವನ ಗುಣಾನುಭವವು ಚನ್ನಾಗಿದ್ದುದರಿಂದ, ಅವನು ತನ್ನ ಸ್ನೇಹಿತನ ಮುಂದೆ

ಅವನ ಸಚ್ಚಾರಿತ್ರ್ಯವನ್ನೂ ದಯಾಳುತನವನ್ನೂ ಹೊಗಳಿದ್ದನು. ಈ ಎಲ್ಲ ಸಂಗತಿಯನ್ನು ಕೇಳಿ ಆರಾದ ಆಂಗ್ಲ ಅಧಿಕಾರಿಗಳೂ ನಿವಾಸಿಗಳೂ ಅಜಯನ ವಿಷಯದಲ್ಲಿ ಪ್ರೇಮಭಾವನೆಯುಳ್ಳವರೂ ಸಹಾನುಭೂತಿಯನ್ನು ತಳೆದವರೂ ಆಗಿದ್ದರು; ಆದರೆ ಅವನು ಕ್ರಾಂತಿಕಾರಕರ ಮುಖ್ಯಸ್ಥನಿದ್ದುದರಿಂದ, ತಮ್ಮ ಮನೋಗತವನ್ನು ಬಹಿರಂಗದಲ್ಲಿ ತೋರಿಸುವದಕ್ಕೆ ಬರುವಂತಿದ್ದಿಲ್ಲ. ಕ್ರಾಂತಿಕಾರಕರೆಲ್ಲರೂ ಕ್ರೂರರೇ ಎಂದು ಅವರು ತಿಳಿದಿದ್ದರು. ಅಜಯಸಿಂಹನ ಗುಣಗಾನದಿಂದ ಅವರ ಆ ತಿಳವಳಿಕೆಯು ಬದಲಾಗಿ, ಅವರಲ್ಲಿ ತಾತ್ವಿಕ-ಸಾತ್ವಿಕ ಜನರೂ ಇರುವರೆಂಬುದನ್ನು ಮನವರಿಕೆ ಮಾಡಿಕೊಂಡರು. ಆದ್ದರಿಂದಲೇ ಅವನು ಬಂಧನದಲ್ಲಿ ಸಿಲುಕಿದ್ದರಿಂದ ಆಂಗ್ಲ ಜನರೂ ದುಃಖಿತರಾದರು. ಲೀಲಾವತಿಯೂ ರಾಬರ್ಟನೂ ಅವನ ಬಿಡುಗಡೆ ಹೇಗಾಗಬಹುದೆಂದು ವ್ಯಸನಾಕ್ರಾಂತರಾದರು.

ಸೇನಾಪತಿಯು ಅಜಯಸಿಂಹನನ್ನು ಆರಾದ ನ್ಯಾಯಾಧೀಶನ ಕಡೆಗೊಪ್ಪಿಸಿದ್ದನು. ಅವನು ಅಜಯಸಿಂಹನ ವಿಷಯವಾಗಿ ನ್ಯಾಯವಿಚಾರಣೆ ಮಾಡುವದಕ್ಕಾರಂಭಿಸಿದ್ದನು. ಅವನ ಸುತ್ತಮುತ್ತು ಬಿಚ್ಚುಗತ್ತಿಯ ದೂತರ ಕಾವಲು ಇರಿಸಲ್ಪಟ್ಟಿತ್ತು. ಅಷ್ಟರಲ್ಲಿ ನ್ಯಾಯಸಭೆಯೊಳಗೆ ಕುಮಾರೀ ಲೀಲಾವತಿಯು ಪ್ರವೇಶಿಸಿದಳು. ಅವಳ ಆಗಮನದಿಂದ ನ್ಯಾಯಾಧೀಶನ ಮುಖಮುದ್ರೆಯು ಗಂಭೀರವಾಯಿತು.

"ಮಿಸ್ ಟೇಲರ, ಬನ್ನಿರಿ." ಎಂದು ನ್ಯಾಯಾಧೀಶನು ಸ್ವಾಗತಪೂರ್ವಕವಾಗಿ ಅವಳನ್ನು ಬರಮಾಡಿಕೊಂಡು, ತನ್ನ ಒಳಿಯಲ್ಲಿದ್ದ ಆಸನದ ಮೇಲೆ ಕುಳ್ಳಿರಿಸಿಕೊಂಡನು. ಅನಂತರದಲ್ಲಿ ಅವನು ಲೀಲಾವತಿಯನ್ನು ಕುರಿತ: "ನನ್ನ ಕಡೆಗೆ ಏನಾದರೂ ಕೆಲಸವಿದ್ದರೆ ಆಜ್ಞೆಯಾಗಲಿ' ಎಂದು ವಿನಯದಿಂದ ಹೇಳಿದ ಕೂಡಲೆ, ಲೀಲಾವತಿಯು:—"ಕೆಲಸವೇನೂ ಇಲ್ಲ; ಇಂದಿನ ಪ್ರಕರಣವನ್ನು ನೋಡುವದಕ್ಕೆ ಬುದ್ಧಿಪೂರ್ವಕವಾಗಿ ಬಂದೆನು."

ಲೀಲಾವತಿಯು ಹೀಗೆ ನುಡಿದ ಕೂಡಲೆ, ಆ ನ್ಯಾಯಾಧೀಶನು ಸ್ವಲ್ಪ ಹೊತ್ತು ವಿಚಾರಿಸುತ್ತ ಕುಳಿತು, ಅನಂತರದಲ್ಲಿ:— "ನೀವು ಅಜಯಸಿಂಹನಲ್ಲಿ ಕೆಲವು ದಿವಸ ಅತಿಥಿಗಳಾಗಿದ್ದಿರೆಂದು ತಿಳಿಯುತ್ತದೆ. ನೀವು ಅಜಯಸಿಂಹನನ್ನು ಗುರುತಿಸಬಲ್ಲಿರೇನು?"

ನ್ಯಾಯಾಧೀಶನು ಹೀಗೆ ನುಡಿಯುವಾಗ ಲೀಲಾವತಿಯ ದೃಷ್ಟಿಯು ಅಜಯನಲ್ಲಿ ನಟ್ಟಿತ್ತು. ಅಜಯನಾದರೂ ನಿರ್ಮಲಪ್ರೇಮದಿಂದ ಅವಳನ್ನು ನೋಡತೊಡಗಿದ್ದನು. ತನ್ನ ಮಾನರಕ್ಷಕನು ಇಂದು ಆಂಗ್ಲರ ಬಂಧನದಲ್ಲಿ ಸಿಲುಕಿ ಪರಾಧೀನನಾದುದರಿಂದಲೂ, ಮುಂದೆ ಅವನ ಅವಸ್ಥೆಯು ಶೋಚನೀಯವಾಗು

ವದೆಂಬ ವಿಚಾರವು ಮನಸ್ಸಿನಲ್ಲಿ ಹುಟ್ಟಿದ್ದರಿಂದಲೂ ಅವಳ ನೇತ್ರಗಳು ಸಜಲ ವಾದವು. ಅವಳು ಯಾರಿಗೂ ಕಾಣದಂತೆ ಆ ಅಶ್ರುಗಳನ್ನು ಕರವಸ್ತ್ರದಿಂದ ಒರಿಸಿಕೊಂಡಳು. ಆಗ ಆ ನ್ಯಾಯಾಧೀಶನು 'ಮಿಸ್ ಟೇಲರ, ಇವನೇ ನಿಮ್ಮ ಮಾನರಕ್ಷಕನಾದ ಅಜಯಸಿಂಹನಲ್ಲವೆ?' ಎಂದು ಅವಳ ಮುದ್ದು ಮುಖವನ್ನು ಕಣ್ಣು ತುಂಬ ನೋಡುತ್ತ ಕೇಳಿದನು.

ನ್ಯಾಯಾಧೀಶನು ತರುಣನಿದ್ದನು. ಅವನು ಲೀಲಾವತಿಯಲ್ಲಿ ಪ್ರೇಮ ವುಳ್ಳವನಾಗಿದ್ದನು. ಕ್ರಾಂತಿಯ ಗೊಂದಲವು ಶಾಂತವಾದೊಡನೆಯೇ ತನ್ನ ಮನೋಗತವನ್ನು ಅವಳೆದುರಿನಲ್ಲಿರಿಸಬೇಕೆಂದು ಅವನು ನಿರ್ಧರಿಸಿಕೊಂಡಿದ್ದನು. ಲಿಲಿ ಅಥವಾ ಲೀಲಾವತಿಯು ಟೇಲರ ಸಾಹೇಬನ ಪುತ್ರಿಯಾದುದರಿಂದ, ಅವನು 'ಮಿಸ್ ಟೇಲರ' ಎಂದು ಅವಳನ್ನು ಸಂಬೋಧಿಸುತ್ತಿದ್ದನು. ಈಗ ಅವನು ಪ್ರೇಮಾರಾಧನೆಯ ಕಾರ್ಯವನ್ನು ಸಾಗಿಸಿದ್ದನು. ಲೀಲಾವತಿಯು ಔಪಚಾರಿಕ ಭಾಷಣಗಳಿಗಿಂತ ಹೆಚ್ಚಾಗಿ ಮಾತನಾಡುತ್ತಿದ್ದಿಲ್ಲವಾದುದರಿಂದ, ಅವನ ಪ್ರೇಮಿ ಹೃದಯವು ಇನ್ನೂ ಶಾಂತವಾಗಿದ್ದಿಲ್ಲ. ಅವನು ಕೂಡಿದಾಗ ಲೀಲಾವತಿಯ ಮನೆಗೆ ಹೋಗುತ್ತಿದ್ದನು; ಅವಳು ಮಾತ್ರ ಇದು ವರೆಗೂ ಆ ನ್ಯಾಯಾಧೀಶನ ಮನೆಗೆ ಬಂದಿರಲಿಲ್ಲ. ತನ್ನ ಪ್ರಣಯಿನಿಯು ಆಕಸ್ಮಿಕವಾಗಿ ಬಂದದ್ದರಿಂದ ಆ ನ್ಯಾಯಾಧೀಶನಿಗೆ ಕಡು ಹರುಷವಾದದ್ದರಲ್ಲಿ ವಿಸ್ಮಯವಿಲ್ಲ.

ನ್ಯಾಯಾಧೀಶನು ಅಜಯಸಿಂಹನ ಬಗ್ಗೆ ವಿಚಾರಿಸಿದ ಮಾತಿಗೆ ಉತ್ತರ ವನ್ನೇನು ಕೊಡಬೇಕೆನ್ನುವದು ಲೀಲಾವತಿಗೆ ಹೊಳೆಯಲಿಲ್ಲ. ಆಗ ಅವಳು—

"ಈ ಗೃಹಸ್ಥರು ಏನು ಹೇಳುವರು?'

"ನಾನು ಇವನಿಗೆ ಯಾವ ಪ್ರಶ್ನೆಯನ್ನೂ ವಿಚಾರಿಸಿಲ್ಲ. ಆರಾದೊಳಗಿನ ಬಹು ಜನ ಸಮಾಜಕ್ಕೆ ಇವನ ಪರಿಚಯವಿರುವದರಿಂದ, ಕೆಲವು ಸದ್ಗೃಹಸ್ಥ ರನ್ನು ಕರೆಯಿಸಿದರೆ ಈ ಮಾತಿನ ಪರಿಷ್ಕಾರವು ತಾನಾಗಿಯೇ ಆಗುವದು. ನೀವಾ ದರೂ ಅಜಯಸಿಂಹನ ಬಳಿಯಲ್ಲಿದ್ದವರಾದುದರಿಂದ ಈ ಮಾತನ್ನು ಕೇಳಿದೆನು."

ನ್ಯಾಯಾಧೀಶನು ಹೀಗೆ ನುಡಿದೊಡನೆಯೆ ಲೀಲಾವತಿಯು ಗೊಂದಲದಲ್ಲಿ ಬಿದ್ದಳು. ಈ ಪ್ರಸಂಗದಲ್ಲಿ ಸುಳ್ಳು ಮಾತನಾಡುವದರಿಂದ ಅಜಯಸಿಂಹನ ಬಿಡುಗಡೆಯಾಗುವಂತಿದ್ದರೆ, ಈ ಪ್ರಸಂಗವನ್ನು ವ್ಯರ್ಥವಾಗಗೊಡುವದೇಕೆಂದು ಅವಳು ತಿಳಿದಳು. ಆಗ ಅವಳು ನಿಶ್ಚಯಾತ್ಮಕ ಧ್ವನಿಯಿಂದ:—

"ಛೇ! ಇವನು ಅಜಯಸಿಂಹನೆಂದು ಅದಾರು ಹೇಳುವರು? ನಿಮ್ಮ ಸೇನಾಪತಿಗಳು ಯಾವ ಒಬ್ಬ ನಿರುಪದ್ರವಿ ಮನುಷ್ಯನನ್ನು ಹಿಡಿದು ತಂದಂತೆ ನನಗೆ ಭಾಸವಾಗುವದು. ಇವನು ಕ್ರಾಂತಿಕಾರಕ ಜನರಲ್ಲಿಯವನಲ್ಲವೆಂಬದು

ಇವನ ಮುಖಮುದ್ರೆಯು ಮೇಲಿಂದಲೇ ವ್ಯಕ್ತವಾಗುತಲಿದೆ.''

''ಲೀಲಾವತಿ ದೇವಿ, ನನ್ನನ್ನು ರಕ್ಷಿಸುವದಕ್ಕಾಗಿ ನೀವು ಅನೃತ ಮಾತ ನಾಡಬೇಡಿರಿ. ನಿಜವಾದ ಹಿಂದೂವೀರನು ಮರಣಕ್ಕೆ ಎಂದೂ ಹಿಂಜರಿ ಯುವದಿಲ್ಲ. ಆರಾದೊಳಗಿನ ಪ್ರತಿಯೊಬ್ಬ ಮನುಷ್ಯನು ನನ್ನನ್ನು ಗುರುತಿಸು ವನು. ಇಲ್ಲಿಯ ಆಂಗ್ಲಜನರು ಸಹ ಇಷ್ಟು ಬೇಗನೆ ನನ್ನನ್ನು ಮರೆಯುವಂ ತಿರುವದಿಲ್ಲ. ನಾನು ಕ್ರಾಂತಿಕಾರಕನಿರುವೆನು. ನಾನು ಜೀವಿಸಿರುವ ವರೆಗೆ ಆಂಗ್ಲರ ವಿರುದ್ಧವಾಗಿ ಕಾದತಕ್ಕವನೇ! ಭಾರತವರ್ಷದಲ್ಲಿ ಭಾರತೀಯರ ಅಧಿ ಕಾರವಿರಬೇಕೆಂಬ ಉತ್ಕಟೇಚ್ಛೆಯುಳ್ಳ ಜನರೊಳಗಿನವನು ನಾನಿರುವೆನು. ನಾನು ಜಗದೀಶಪುರದ ಬಾಬೂ ಅಜಯಸಿಂಹನಿರುವೆನು! ನ್ಯಾಯಾಧೀಶರೇ, ನನ್ನ ಸ್ವಂತದ ಸಮ್ಮತಿ ವಾಕ್ಯಗಳನ್ನು ನೀವು ಬರೆದುಕೊಳ್ಳಿರಿ.''

ಅಜಯಸಿಂಹನು ಹೀಗೆ ನಿರ್ಭಯದಿಂದ ನುಡಿದ ಕೂಡಲೆ ಲೀಲಾವತಿಯು ಜರ್‍ರನೆ ಇಳಿದಳು. ಅವಳ ಮುಖವು ಕ್ಲೇಶದಿಂದ ಕಳೆಗುಂದಿತು. ಯಾವದೊಂದು ಉಪಾಯದಿಂದ ಅವನನ್ನು ಪಾರುಮಾಡಬೇಕೆಂದು ಅವಳು ಅಸತ್ಯ ಭಾಷಣವಾ ಡಿದ್ದು ವ್ಯರ್ಥವಾಯಿತು. ಆಗ ಆ ನ್ಯಾಯಾಧೀಶನು ಅವಳನ್ನು ಕುರಿತು:-''ಅಪ ರಾಧಿಯು ತನ್ನ ಬಾಯಿಯಿಂದಲೇ ಒಪ್ಪುತ್ತಿರುವನು. ಉಪಕಾರಕರ್ತನೆಂಬ ಅಭಿಮಾನದಿಂದ ನೀವು ಸುಳ್ಳಾಡುವ ಹವ್ಯಾಸಕ್ಕೆ ಹೋದದ್ದು ನಿರರ್ಥಕವಾ ಯಿತು.'' ಎಂದು ನುಡಿದು ಸ್ಮಿತವದನನಾಗಿ ಲೀಲಾವತಿಯ ಮುಖವನ್ನು ನೋಡ ತೊಡಗಿದನು. ತನ್ನ ಅಂತಃಕರಣದ ಮೂರ್ತಿಯಾದ ಅಜಯಸಿಂಹನು ಜೀವದ ಮೇಲೆ ಗಂಡಾಂತರವನ್ನು ತಂದುಕೊಳ್ಳುವದಕ್ಕೆ ಹವಣಿಸುತ್ತಿರುವನೆಂದು ಅವಳು ಚಿಂತಾಕ್ರಾಂತಳಾಗಿದ್ದಳು. ಅವಳು ಮ್ಲಾನವದನೆಯಾಗಿ ಮುಂದುಗಾಣದೆ ಸ್ವಲ್ಪ ಹೊತ್ತು ಸ್ವಸ್ಥವಾಗಿ ಕುಳಿತುಬಿಟ್ಟಳು. ಆಗ ನ್ಯಾಯಾಧೀಶನು ಅಜಯಸಿಂಹ ನನ್ನು ಕುರಿತು:—

''ನಿನ್ನ ವಿಷಯವಾಗಿ ಕಮಿಶನರ ಸಾಹೇಬರಿಂದ ಅಭಿಪ್ರಾಯವು ಬಂದ ಹೊರತು ನನಗೆ ಯಾವುದನ್ನೂ ನಿರ್ಣಯಿಸುವದಕ್ಕೆ ಬರುವಂತಿಲ್ಲ; ಬಹುತರವಾಗಿ ಮರಣ ದಂಡನೆಯು ನಿನಗೆ ವಿಧಿಸಲ್ಪಡಬಹುದು.''

ನ್ಯಾಯಾಧೀಶನು ಹೀಗೆ ನುಡಿದ ಕೂಡಲೆ ಲೀಲಾವತಿಯು ಚಟ್ಟನೆ ಎದ್ದು ಅಲ್ಲಿಂದ ಹೊರಟು ಹೋದಳು. ಅನಂತರದಲ್ಲಿ ನ್ಯಾಯಾಧೀಶನು ಅಜಯಸಿಂಹ ನನ್ನು ಕಾರಾಗೃಹದಲ್ಲಿರಿಸಬೇಕೆಂದು ಸೇವಕರಿಗೆ ಆಜ್ಞಾಪಿಸಿದನು. ಬಂಡುಗಾ ರರು ಕಾರಾಗೃಹವನ್ನು ಕೆಡಹಿಬಿಟ್ಟದ್ದರಿಂದ, ಆ ನ್ಯಾಯಾಧೀಶನ ನಿವಾಸದೊಳ ಗಿನ ಒಂದು ಕೋಣೆಯಲ್ಲಿಯೇ ಅಜಯಸಿಂಹನು ಇರಿಸಲ್ಪಟ್ಟನು. ಕಾಂಟ

ಗೃಹದ ಬೀಗದ ಕೈಯನ್ನು ನ್ಯಾಯಾಧೀಶನು ತನ್ನ ಬಳಿಯಲ್ಲಿರಿಸಿಕೊಂಡನು. ಅಜಯಸಿಂಹನನ್ನಿರಿಸಿದ ಕೋಣೆಗೆ ಬಿಗಿಯಾದ ಕಾವಲು ಕುಳ್ಳಿರಿಸಲ್ಪಟ್ಟಿತು.

ಅಜಯಸಿಂಹನನ್ನು ಬಂಧನದಲ್ಲಿರಿಸಿ ಕೃತಕೃತ್ಯನಾದೆನೆಂದು ಆ ನ್ಯಾಯಾಧೀಶನು ತನ್ನ ದಿವಾಣಖಾನೆಯಲ್ಲಿ ಕುಳಿತುಕೊಂಡಿದ್ದನು. ಆಗ ಲೀಲಾವತಿಯು ಅಲ್ಲಿಗೆ ಬಂದಳು. ಎಂದೂ ಬಾರದಿದ್ದ ತನ್ನ ಮನೋಹರೆಯು ಆಗಮನದಿಂದ ಆ ತರುಣ ನ್ಯಾಯಾಧೀಶನಿಗೆ ಅತ್ಯಾನಂದವಾಯಿತು. ಅವನು ಅವಳ ಕೈ ಹಿಡಿದು ಬಳಿಯಲ್ಲಿದ್ದ ಆಸನದ ಮೇಲೆ ಕುಳ್ಳಿರಿಸಿಕೊಂಡನು. ಆಗ ಲೀಲಾವತಿಯು:—

"ಪ್ರಕರಣವು ಎಲ್ಲಿಗೆ ಬಂದಿತು?"

"ಅವನೇ ಬಾಬೂ ಅಜಯಸಿಂಹನೆಂಬದು ನಂಬಿಗೆಯಾಯಿತು. ಬಹಳ ಮಾಡಿ ಅವನಿಗೆ ಮರಣದಂಡನೆಯು ಕೊಡಲ್ಪಡಬಹುದು."

"ನಾನು ಅವರ ಆಶ್ರಯದಲ್ಲಿದ್ದುದೇನೋ ನಿಜವು. ಯಾವಾಗಲೂ ದಂಡಯಾತ್ರೆಗಾಗಿ ಹೋಗುತ್ತಿರುವ ಅವರೊಡನೆ ಮಾತು-ಕಥೆಗಳಾಡುವ ಪ್ರಸಂಗವು ಇರುತ್ತಿದ್ದಿಲ್ಲವಾದ್ದರಿಂದ ನನಗೆ ಗುರತು ಹತ್ತಲಿಲ್ಲ."

"ಯಾವಾಗಲೂ ಸ್ತ್ರೀಯರ ಗುಂಪಿನಲ್ಲಿದ್ದ ನಿಮಗೆ ಅವನ ಪರಿಚಯವಾಗದಿದ್ದುದರಲ್ಲಿ ಆಶ್ಚರ್ಯವಿಲ್ಲ."

"ಈಗ ಅವರನ್ನು ಎಲ್ಲಿ ಇಟ್ಟಿರುವಿರಿ?"

"ಈ ದಿವಾಣಖಾನೆಗೆ ಹೊಂದಿ ಬೊಕ್ಕಸದ ಕೋಣೆಯಿರುವದು. ಅದರಾಚೆಗಿರುವ ಕೋಣೆಯಲ್ಲಿಯೇ ಅಜಯಸಿಂಹನನ್ನು ಇಟ್ಟಿರುತ್ತದೆ. ಆ ಕೋಣೆಗೆ ಹೊರಗಿನಿಂದ ಬರುವದಕ್ಕೆ ಒಂದು ಬಾಗಿಲವಿದೆ; ಇಲ್ಲಿಂದ ಬೊಕ್ಕಸದ ಕೋಣೆಯೊಳಗೆ ಹಾಯ್ದು ಹೋಗುವದಕ್ಕಾದರೂ ಬಾಗಿಲವುಂಟು. ಇಗೋ, ಇದು ಅಜಯಸಿಂಹನನ್ನು ಹಾಕಿದ ಕೋಣೆಯ ಬೀಗದ ಕೈಯು." ಎಂದು ನುಡಿದು ನ್ಯಾಯಾಧೀಶನು ಅದನ್ನು ಲೀಲಾವತಿಗೆ ತೋರಿಸಿ: —'ಮಹತ್ವದ ಪ್ರಕರಣವಿದ್ದುದರಿಂದ ಇದನ್ನು ನನ್ನ ಬಳಿಯಲ್ಲಿಯೇ ಇಟ್ಟುಕೊಂಡಿರುವೆನು."

ನ್ಯಾಯಾಧೀಶನ ಮಾತು ಕೇಳಿ, ಲೀಲಾವತಿಯು ಸ್ವಲ್ಪ ವೇಳೆಯವರೆಗೆ ಯೋಚಿಸುತ್ತ ಕುಳಿತಳು. ಆ ಮೇಲೆ ಅವಳು ನೆನಪು ಮಾಡಿಕೊಂಡವಳಂತೆ ನಟಿಸಿ:—"ಓಹೋ! ಮರೆತೇ ಬಿಟ್ಟಿದ್ದೆನು. ಇಂದು ನೀವು ನಮ್ಮ ಮನೆಗೆ ಊಟಕ್ಕೆ ಬರಬೇಕು. ನೀವು ಬರಬೇಕೆಂದು ರಾಜಪುತ್ರರವರಾದರೂ ಇಚ್ಛಿಸುತ್ತಿರುವರು."

"ಕ್ಷಮಿಸಿರಿ. ಇಂದು ನಾನು ಮನೆಯನ್ನು ಬಿಟ್ಟು ತೆರಳುವದಿಲ್ಲ. ಇಂದು ನಿಮ್ಮ ಭೋಜನವು ಇಲ್ಲಿಯೇ ಆಗಲಿ; ನಾನು ಮತ್ತೊಮ್ಮೆ ನಿಮ್ಮಲ್ಲಿಗೆ ಬರು

ವೆನು. ಈ ಮನೆಯು ನಿಮ್ಮದೇ ಇರುವದರಿಂದ, ಪರಕೀಯ ಭಾವನೆಗೆ ಆಸ್ಪದ ಕೊಡದೆ ಸಹಭೋಜನದ ಲಾಭವನ್ನು ಕೊಡಬೇಕು.''

ಲೀಲಾವತಿಯು ಅವನ ಮಾತುಗಳನ್ನು ಕೇಳಿ ಮಂದಹಾಸದಿಂದ:—
''ಒಳ್ಳೇದು, ತಮ್ಮ ಆಮಂತ್ರಣವನ್ನು ನಾನು ಆನಂದದಿಂದ ಸ್ವೀಕರಿಸುತ್ತೇನೆ''

ಲೀಲಾವತಿಯು ಮನಬಿಚ್ಚಿ ಮಾತನಾಡುವದನ್ನು ಕೇಳಿ, ಆ ಸಾಹೇಬನಿಗೆ ಸಂತೋಷವಾಯಿತು. ಅವಳ ಲಜ್ಜಾಯುಕ್ತಮುಖವನ್ನೂ, ಸಪ್ರೇಮಭಾಷಣಗಳನ್ನೂ, ಮನಮೋಹಕವಾದ ಮಂದಹಾಸವನ್ನೂ ಅನುಲಕ್ಷಿಸಿ, ಅವನ ಆನಂದವು ಮೇರೆದಪ್ಪಿತು. ಆ ಸೌಂದರ್ಯದೇವತೆಯಲ್ಲಿ ಅವನ ಮನಸ್ಸು ಸಂಪೂರ್ಣ ರಮಮಾಣವಾದ್ದರಿಂದ ಆತನು ದೇಹಭಾನವನ್ನೇ ತೊರೆಯತೊಡಗಿದನು. ಆಗ ಅವನು ಅವಳ ಗಲ್ಲವನ್ನು ಹಿಡಿದು:—

''ಮಿಸ್ ಟೇಲರ, ನನ್ನ ಆಮಂತ್ರಣಕ್ಕೆ ನೀವು ಮರ್ಯಾದೆಪಿತ್ತದ್ದರಿಂದ ಮಹದಾನಂದವಾಯಿತು.''

ಸುಖಮಯ ಕಲ್ಪನಾಸಾಮ್ರಾಜ್ಯದಲ್ಲಿ ಮುಳುಗಿದ ಆ ಸಾಹೇಬನ ವರ್ತನದಿಂದ ಲೀಲಾವತಿಯ ಅಂತರಂಗವು ಹೇಗಾಗಿತ್ತೆಂಬದನ್ನು ಹೇಳುವ ಅವಶ್ಯವೇ ಇಲ್ಲ. ಅವಳು ಅಂತರಂಗದೊಳಗಿನ ಮನೋವಿಕಾರಗಳನ್ನು ಹೊರಗೆ ಹಾಕದೆ, ಅವನನ್ನು ಸಂತುಷ್ಟಪಡಿಸುವದಕ್ಕೆ ಅನೇಕ ಬಗೆಯ ಮೋಹನಾಸ್ತ್ರಗಳನ್ನು ಸಿದ್ಧಪಡಿಸತೊಡಗಿದ್ದಳು. ಅಷ್ಟರಲ್ಲಿ ಸೇವಕನು ಆಹಾರದ ಪದಾರ್ಥಗಳನ್ನಿರಿಸಿ ಹೋದನು. ಇವರೀರೂ ನಗುತ್ತ-ಕೆಲೆಯುತ್ತ ಭೋಜನವನ್ನು ಮುಗಿಸಿದರು. ಭೋಜನೋತ್ತರದಲ್ಲಿ ಸಾಹೇಬನು:—

''ಸ್ವಲ್ಪ ಮದ್ಯವನ್ನು ತರಲೇನು?' ಎಂದು ಲೀಲಾವತಿಯನ್ನು ಕೇಳಿದನು.

'ಅವಶ್ಯವಾಗಿ ತರಬಹುದು.''

ಲೀಲಾವತಿಯು ಹೀಗೆ ನುಡಿದ ಕೂಡಲೆ ಅವನು ಪೆಟ್ಟಿಗೆಯೊಳಗಿನ ಮದ್ಯದ ಸೀಸೆಯನ್ನು ತರುದದಕ್ಕೆ ಎದ್ದನು. ಆಗ ಅವಳು ತನ್ನ ಬಳಿಯಲ್ಲಿದ್ದ ಕುಪ್ಪಿಯೊಳಗಿನ ನೀರಿನಂತಹ ದ್ರವಪದಾರ್ಥವನ್ನು ಅಲ್ಲಿಯೇ ಇದ್ದ ಒಂದು ಕಾಜಿನ ಪೇಲೆಯಲ್ಲಿ ಸ್ವಲ್ಪ ಹಾಕಿದಳು. ಅಷ್ಟರಲ್ಲಿ ಸಾಹೇಬನು ಮದ್ಯದ ಸೀಸೆಯನ್ನು ಚೌಕಿಯ ಮೇಲಿರಿಸಿದನು. ಅವಳು ಅದರ ಬೆಣೆಯನ್ನು ತೆಗೆದು ಎರಡು ಪೇಲೆಯಲ್ಲಿ ಹಾಕಿದಳು. ಆ ಪೇಲೆಗಳಲ್ಲೊಂದರಲ್ಲಿ ಅವಳು ದ್ರವಪದಾರ್ಥವನ್ನು ಹಾಕಿದ್ದಳು. ಅವಳು ಅದನ್ನೇ ಸಾಹೇಬನ ಮುಂದೆ ಹಿಡಿದು:—

''ತೆಗೆದುಕೊಳ್ಳಬೇಕು' ಎಂದು ವಿನಯದಿಂದ ನುಡಿದು, ಅವನ ಕೈಯಲ್ಲಿ ಕೊಟ್ಟಳು. ಆ ಮನಮೋಹಿನಿಯು ಕೊಟ್ಟ ಮದ್ಯವನ್ನು ಅಮೃತವೆಂದು

ಭಾವಿಸಿ, ನಿರ್ವಿವಾದದಲ್ಲಿ ಅದನ್ನು ಕುಡಿದನು. ಲೀಲಾವತಿಯೂ ಕುಡಿದಳು.

ಅನಂತರದಲ್ಲಿ ಇವರೀರ್ವರೂ ಒಂದು ಗಳಿಗೆ ಉದ್ಯಾನದಲ್ಲಿ ತಿರುಗಾಡಿದರು. ಅವರು ಹಾಸ್ಯವಿನೋದಗೈಯುತ್ತ ವಿಹರಿಸುವದನ್ನು ನೋಡಿ, ಈ ಜೋಡಿಯು ಪ್ರೇಮಬದ್ಧರಾಗಿರುವರೆಂದು ಸೇವಕಜನರ ಭಾವನೆಯಾಯಿತು. ಕೆಲ ವೇಳೆಯ ಮೇಲೆ ಸಾಹೇಬನಿಗೆ ಆಕಳಿಕೆಗಳು ಬರತೊಡಗಿದವು. ತನ್ನ ಮೋಹನಾಸ್ತ್ರವು ನಾಟಿತೆಂದು ಲೀಲಾವತಿಗೆ ಆನಂದವಾಯಿತು. ಆಗ ಅವಳು:—"ನಿದ್ರೆ ಬರುವಂತೆ ತೋರುತ್ತಿದೆ" ಎಂದು ನುಡಿಯಲು, ಸಾಹೇಬನು ನಿದ್ರೆಗಾಗಿ ಅಷ್ಟೇನೂ ಅವಸರ ಪಡುವ ಕಾರಣವಿಲ್ಲ. ಒಳಗೆ ಹೋಗೋಣ ನಡೆಯಿರಿ. ಇನ್ನೆರಡು ಗಳಿಗೆ ಮಾತನಾಡುತ್ತ ಕುಳಿತುಕೊಳ್ಳೋಣ." ಎಂದು ನುಡಿದು, ಅವಳನ್ನು ಕರೆದುಕೊಂಡು ದಿವಾಣಖಾನೆಯಲ್ಲಿ ಹೋದನು ಅಲ್ಲಿ ಅವನು ಸಿದ್ಧವಾಗಿದ್ದ ಹಾಸಿಗೆಯ ಮೇಲೆ ಕುಳಿತನು. ಲೀಲಾವತಿಯಾದರೂ ಬಳಿಯಲ್ಲಿಯೇ ಇದ್ದಳು. ಅವರೀರ್ವರಲ್ಲಿ ವಿನೋದಪರ ಭಾಷಣಗಳು ಸ್ವಲ್ಪ ಹೊತ್ತು ನಡೆದಿದ್ದವು. ಆಗ ಸಾಹೇಬನು:—"ಮಿಸ್ ಟೇಲರ, ನಾನು ನಿಮ್ಮನ್ನು ಮನಃಪೂರ್ವಕವಾಗಿ ಪ್ರೀತಿಸುತ್ತಿರುವೆನು. ನೀವಾದರೂ ನನ್ನ ವಿಷಯಕ್ಕೆ ಅನುರಾಗವುಳ್ಳ....ವ....ರಾ........" ಹೀಗೆ ನುಡಿಯುವಷ್ಟರಲ್ಲಿ ಅವನ ಮಾತುಗಳು ಕಟ್ಟಾದವು. ಪರಕ್ಷಣದಲ್ಲಿ ಅವನು ಗಾಢನಿದ್ರೆಯೊಳಗಾದನು. ತನ್ನ ಮೋಹನಾಸ್ತ್ರವು ಚನ್ನಾಗಿ ನಾಟಿತೆಂದು ಲೀಲಾವತಿಗೆ ಮಹದಾನಂದವಾಯಿತು!

---

## ಪ್ರೇಮಪ್ರಭಾವ!

ಮೋಹನಾಸ್ತ್ರದಿಂದ ಸಾಹೇಬನು ಗಾಢನಿದ್ರೆಗೊಳಗಾದನೆಂಬದು ಲೀಲಾವತಿಗೆ ತಿಳಿದ ಕೂಡಲೆ, ಅವಳು ಅವನ ಬಳಿಯಲ್ಲಿದ್ದ ಬೀಗದ ಕೈಯನ್ನು ತೆಗೆದುಕೊಂಡು, ಅಜಯಸಿಂಹನನ್ನು ಬಂಧಿಸಲ್ಪಟ್ಟಿದ್ದ ಕಾರಾಗೃಹದ ಬಾಗಿಲ ತೆರೆದಳು. ಆಗ ಅಜಯಸಿಂಹನು ನಿದ್ರೆಗೊಳಗಾಗಿದ್ದನು. ತನಗೆ ಮರಣದಂಡನೆಯು ವಿಧಿಸಲ್ಪಡುವದೆಂಬದು ನಿಶ್ಚಿತವಾಗಿದ್ದರೂ, ಅವನು ಹೀಗೆ ನಿಶ್ಚಿಂತೆಯಿಂದ ನಿದ್ರಾಧೀನನಾದದ್ದನ್ನು ನೋಡಿ, ಲೀಲಾವತಿಗೆ ಬಹಳ ಕೌತುಕವಾಯಿತು. ಅವಳು ವಿಸ್ಮಯದಿಂದ: 'ಶಾಬಾಸ್! ರಜಪೂತವೀರಾ!!' ಎಂದು ಉದ್ಗಾರ ತೆಗೆದಳು! ಅನಂತರದಲ್ಲಿ ಅವನನ್ನು ಎಚ್ಚರಗೊಳಿಸಬೇಕೆಂದು ಮೆಲ್ಲಗೆ ಅವನ ಮುಖದ ಮೇಲೆ ಕೈಯಿಳಿದು: "ಅಜಯಸಿಂಹಜೀ" ಎಂದು ಕೂಗಿದಳು. ಕೂಡಲೆ ಅಜಯಸಿಂಹನು ತಡವರಿಸುತ್ತ ಎದ್ದು ಕುಳಿತು, ಲೀಲಾವತಿಯ ಮುಖವನ್ನು

ಆಶ್ಚರ್ಯದಿಂದ ನೋಡತೊಡಗಿದನು. ಆಗ ಅವಳು ಅಜಯಸಿಂಹನನ್ನು ಕುರಿತು:
“ಮಾತನಾಡಬೇಡಿರಿ; ಬೇಗನೆ ಇಲ್ಲಿಂದ ಹೊರಡಿರಿ ತಡವಾದರೆ ಘಾತ....”

“ಲೀಲಾವತಿದೇವಿ, ನೀವು ನನ್ನ ಸಲುವಾಗಿ ಬಹಳ ಶ್ರಮಪಟ್ಟಿರಿ. ರಜಪೂತನಾದ ನಾನು ಮರಣಕ್ಕೆ ಅಂಜಿ ಕಳ್ಳನಂತೆ ಓಡಿ ಹೋಗಲಾ?”

“ಅಜಯಸಿಂಹಜೀ, ನೀವು ಮೋಸದಿಂದ ಬಂಧನಕ್ಕೊಳಗಾಗಿರುವಿರಿ; ಮೋಸಕ್ಕೆ ಮೋಸ ಮಾಡುವದು ಅಧರ್ಮವೆನಿಸಲಾರದು. ಇನ್ನು ಮಾತಾಡುತ್ತ ವೇಳೆಗಳೆಯಬೇಡಿರಿ. ಬೇಗನೆ ಏಳಿರಿ” ಎಂದು ಲೀಲಾವತಿಯು ಅಜಯಸಿಂಹನ ಮಾತಿಗೆ ಉತ್ತರವಿತ್ತು, ಅವನನ್ನು ಅಲ್ಲಿಂದ ಹೊರಡಿಸಿಕೊಂಡು ಕಾರಾಗಾರದ ಕೋಣೆಯಿಂದ ದಿವಾಣಖಾನೆಗೆ ಬಂದಳು. ಅನಂತರದಲ್ಲಿ ಅವಳು ಅಲ್ಲಿಯೇ ಇದ್ದ ಸಾಹೇಬನ ಉಡಿಗೆ-ತೊಡಿಗೆಗಳನ್ನು ತೋರಿಸಿ, ಅವುಗಳನ್ನು ಧರಿಸುವದಕ್ಕೆ ಹೇಳಿದಳು. ಲೀಲಾವತಿಯ ಈ ಹಂಚಿಕೆಯು ಅವನಿಗೆ ಸರಿಯಾಗಿ ಕಂಡದ್ದರಿಂದ ತನ್ನ ಉಡಿಗೆ-ತೊಡಿಗೆಗಳನ್ನು ಬಿಟ್ಟು ಅವುಗಳನ್ನು ತೊಟ್ಟುಕೊಂಡನು. ಲೀಲಾವತಿಯು ಬೀಗದ ಕೈಯನ್ನು ಸಾಹೇಬನ ಅಂಗಿಯ ಜೇಬಿನಲ್ಲಿಟ್ಟು, ಅಜಯಸಿಂಹನನ್ನು ಕುರಿತು: —

“ನಾವೀರ್ವರೂ ಕೈ ಹಿಡಿದು ಸ್ವಲ್ಪ ವೇಳೆಯ ವರೆಗೆ ಮುಂದಿರುವ ಉದ್ಯಾನದಲ್ಲಿ ತಿರುಗಾಡತಕ್ಕದ್ದು; ಮುಂದೆ ಸ್ವಲ್ಪ ಹೊತ್ತಿನ ಮೇಲೆ ಹೊರಗೆ ಹೋಗತಕ್ಕದ್ದು. ಹೀಗೆ ಮಾಡದೆ ಒಮ್ಮೆಲೆ ಹೊರಗೆ ಹೋದರೆ ಕಾವಲುಗಾರರಿಗೆ ಸಂಶಯವು ಹುಟ್ಟುವ ಸಂಭವವಿರುವದು.”

ಲೀಲಾವತಿಯ ಮಾತಿನಂತೆ ನಡೆಯದಿದ್ದರೆ ಗತ್ಯಂತರವೇ ಇದ್ದಿಲ್ಲವಾದ್ದರಿಂದ, ಅಜಯಸಿಂಹನು ಅವಳ ಕೈ ಹಿಡಿದುಕೊಂಡು ಆ ಕೋಣೆಯೊಳಗಿಂದ ಹೊರಗೆ ಬಂದನು. ಅವರೀರ್ವರೂ ಉದ್ಯಾನದಲ್ಲಿ ನಗುತ್ತ-ಕೆಲೆಯುತ್ತ ತಿರುಗಾಡತೊಡಗಿದರು. ಅವರು ದಂಪತಿಗಳಂತೆ ತಿರುಗಾಡತೊಡಗಿದ್ದನ್ನು ನೋಡಿ ಕಾವಲುಗಾರರು: “ಶಾದೀ ಹೋಗಯಾ ಕ್ಯಾ?” ಎಂದು ತಮ್ಮ-ತಮ್ಮೊಳಗೆ ಮಾತನಾಡತೊಡಗಿದ್ದರು. ಲೀಲಾವತಿ ಅಜಯಸಿಂಹರು ಆ ಉಪವನದಲ್ಲಿ ಕೆಲ ಹೊತ್ತಿನ ವರೆಗೆ ತಿರುಗಾಡಿದ ಮೇಲೆ ಮೆಲ್ಲನೆ ಅಲ್ಲಿಂದ ಹೊರಬಿದ್ದರು. ಅವರನ್ನು ನೋಡಿ ಕಾವಲುಗಾರರಿಗೆ ಯಾವ ಬಗೆಯ ಸಂಶಯವು ಉಂಟಾಗುವದಕ್ಕೂ ಕಾರಣವಿರಲಿಲ್ಲ. ಅವರು ಹೊರಗೆ ಬಂದಮೇಲೆ ಅಜಯನು ಲೀಲೆಯನ್ನು ಕುರಿತು:

“ನನ್ನನ್ನು ಈ ರೀತಿಯಾಗಿ ಮುಕ್ತ ಮಾಡಿದ್ದಕ್ಕೆ ನಿಮ್ಮ ಮೇಲೆ ಯಾವ ಬಗೆಯ ಸಂಕಟವೂ ಒದಗಲಿಕ್ಕಿಲ್ಲವಷ್ಟೇ?”

“ಸಂಕಟಕ್ಕೆ ನಾನು ತಿಲಾಂಶವಾದರೂ ಅಂಜುವದಿಲ್ಲ. ನನ್ನ ಪವಿತ್ರವಾದ

ಧರ್ಮವನ್ನು-ಸ್ತ್ರೀಯರಿಗುಚಿತವಾದ ಮಾನವನ್ನು ಕಾಯ್ದು ನಿಮ್ಮಂತಹ ಉಪಕಾರಕರ್ತರಿಗಾಗಿ ನಾನು ನನ್ನ ಪ್ರಾಣವನ್ನರ್ಪಿಸುವದಕ್ಕಾದರೂ ಸಿದ್ಧಳಿರುವೆನು. ನನ್ನ ರಕ್ಷಣೆಯ ಕಾರ್ಯದಲ್ಲಿ ನೀವು ನಿಮ್ಮ ಜೀವವನ್ನು ಗಂಡಾಂತರದೊಳಗೆ ತೊಡಗಿಸಿದ್ದಿಲ್ಲವೇನು? ರಾಬರ್ಟರವರ ಮೇಲೆ ನೀವು ಮಾಡಿದ ಉಪಕಾರವು ಸ್ವಲ್ಪವಿರುವದೊ? ನಿಮ್ಮನ್ನು ಮುಕ್ತ ಮಾಡಿದ ಬಗ್ಗೆ ನನ್ನ ಮೇಲೆ ಯಾವ ಸಂಕಟವು ಒದಗುವದೋ, ಹಿಂದಿನಿಂದ ನೋಡೋಣ''

"ನನ್ನನ್ನು ಮುಕ್ತಮಾಡುವ ಹಂಚಿಕೆಯನ್ನು ನೀವು ಹೇಗೆ ಸಾಧಿಸಿದಿರಿ?"

"ಅಜಯಸಿಂಹಜೀ, ಸಾಹೇಬನು ನನ್ನ ವಿಷಯಕ್ಕೆ ಅತ್ಯಂತ ಪ್ರೇಮವುಳ್ಳವನಾಗಿರುವನು. ಅವನು ಪ್ರೇಮಾರಾಧನೆಯ ಉದ್ಯೋಗವನ್ನು ಕೈಕೊಂಡು ಬಹಳ ದಿನಗಳಾದವು. ಅವನ ವರ್ತನದ ವಿಷಯಕ್ಕೆ ನಾನು ತಿರಸ್ಕಾರವುಳ್ಳವಳಾಗಿದ್ದೆನು. ಆದರೂ ಬಹಿರಂಗದಲ್ಲಿ ಯಾವ ಬಗೆಯ ಉದಾಸೀನತೆಯನ್ನೂ ವ್ಯಕ್ತಪಡಿಸದೆ, ಕೇವಲ ಔಪಚಾರಿಕ ಭಾಷಣಗಳಿಂದ ಅವನನ್ನು ಸಮಾಧಾನಪಡಿಸುತ್ತಿದ್ದೆನು. ನಿಮ್ಮನ್ನು ಇಲ್ಲಿಗೆ ತಂದ ವಾರ್ತೆಯು ನನಗೆ ತಿಳಿದೊಡನೆ ರಾಬರ್ಟರವರಿಗೆ ಈ ಸಂಗತಿಯನ್ನು ತಿಳಿಸಿದೆನು. ಅವರೂ ನಾನೂ ಕೂಡಿಯೇ ನಿಮ್ಮ ಬಂಧವಿಮೋಚನೆ ಮಾಡುವ ಬಗ್ಗೆ ಸಂಚು ನಡೆಸಿದೆವು. ಕಡೆಗೆ ಅವನ ಮದ್ಯದ ಪೇಲೆಯಲ್ಲಿ ಮಾದಕದ್ರವ್ಯವನ್ನು ಹಾಕಿ, ಅವನನ್ನು ಸ್ಮೃತಿಹೀನನನ್ನಾಗಮಾಡಿ, ಅವನ ಬಳಿಯಲ್ಲಿರುವ ಬೀಗದ ಕೈಯಿಂದ ಬಾಗಿಲ ತೆರೆದೆನು.'

ಅಜಯನೂ ಲೀಲಾವತಿಯೂ ಮಾತನಾಡುತ್ತ ಮಾರ್ಗಕ್ರಮಣ ಮಾಡತೊಡಗಿದ್ದರು. ತನ್ನ ಪ್ರೇಮ ಮೂರ್ತಿಯ ವಿಯೋಗವಾಗುವದೆಂದು ಲೀಲಾವತಿಗೆ ಪರಮಾವಧಿ ವ್ಯಸನವಾಗಿತ್ತು. ಅಜಯಸಿಂಹನು ಅವಳಲ್ಲಿ ಒಳ್ಳೆಯ ಆದರಭಾವನಿದ್ದುದರಿಂದ ಅವಳನ್ನು ತ್ಯಜಿಸಿ ಹೋಗುವದಕ್ಕೆ ಚಡಪಡಿಸಿದನು.

"ದೇವೀ, ನೀವು ನನಗೆ ಪುನರ್ಜನ್ಮವಿತ್ತಂತಾಯಿತು. ನಿಮ್ಮ ಉಪಕಾರವನ್ನು ಹೇಗೆ ತೀರಿಸಲಿ?"

"ಈ ಬಗೆಯ ಮಾನವನ್ನೂ ಪ್ರಾಣವನ್ನೂ ರಕ್ಷಿಸಿದ ನಿಮ್ಮಂತಹರು ಈ ನನ್ನ ಅಲ್ಪ ಕೃತಿಯಿಂದ ಅಷ್ಟೊಂದು ಉಪಕಾರವಾಯಿತೆಂದು ಭಾವಿಸಬಾರದು."

"ನೀವಾದರೂ ಈಗ ನಿಮ್ಮ ಜೀವವನ್ನು ಗಂಡಾಂತರದಲ್ಲಿ ತೊಡಗಿಸಿಕೊಂಡಂತಾಯಿತು. ನೀವು ಈ ವಿಪತ್ತಿನೊಳಗಿಂದ ಹೇಗೆ ದಾಟುವಿರಿ?"

"ನೀವು ನನ್ನ ವಿಷಯವಾಗಿ ಚಿಂತಿಸಬೇಡಿರಿ. ಏನಾದರೊಂದು ಹಂಚಿಕೆ ಮಾಡಿ ನಾನು ಪಾರಾಗುವೆನು." ಎಂದು ಲೀಲಾವತಿಯು ಅವನನ್ನು ಸಮಾಧಾನಪಡಿಸಿ:—"ಇನ್ನು ಪುನರ್ದರ್ಶನವೆಂದು?"

"ಈಶ್ವರೇಚ್ಛೆಯ ಮೇಲೆ ಈ ಮಾತು ಅವಲಂಬಿಸಿರುವದು." ಎಂದು ಅಜಯಸಿಂಹನು ನುಡಿದ.: —"ಇನ್ನು ನೀವು ನಿಂತುಕೊಳ್ಳಿರಿ."

"ಹಾಗಾದರೆ ಪೋಗಿಬರುವಿರಾ?" ಹೀಗೆ ನುಡಿಯುವಾಗ ಲೀಲಾವತಿಯ ಕಂಠವು ಸದ್ಗದಿತವಾಗಿತ್ತು; ನೇತ್ರಗಳು ಸಜಲವಾಗಿದ್ದವು ಅವಳು ಅವನ ಹಸ್ತವನ್ನು ಹಿಡಿದು ಅಲ್ಲಾಡಿಸಿ: —"ಅಜಯಸಿಂಹಜೀ, ಹೋಗಿ ಬನ್ನಿರಿ! ಈ ನಿಮ್ಮ ಸ್ನೇಹಿತಳನ್ನು ಮರೆಯಬೇಡಿರಿ"

ಅಜಯಸಿಂಹನು ಲೀಲಾವತಿಯ ನಿರೋಪವನ್ನು ಹೊಂದಿ ಜಗದೀಶಪುರದ ಕಡೆಗೆ ಸಾಗಿದನು. ಅವಳು ತಿರುತಿರುಗಿ ತನ್ನ ಮನೋಹರನನ್ನು ನಿರೀಕ್ಷಿಸುತ್ತ ತನ್ನ ಮನೆಯ ದಾರಿಯನ್ನು ಹಿಡಿದಳು.

ಮಾರನೆಯ ದಿವಸ ಬೆಳಗ್ಗೆ ಸಾಹೇಬನು ನಿದ್ರೆಯಿಂದ ಎಚ್ಚತ್ತು ನೋಡುತ್ತಾನೆ, ತನ್ನ ದಿವಾಣಖಾನೆಯಲ್ಲಿ ಒಬ್ಬ ಹಿಂದೂಮನುಷ್ಯನ ಉಡುಗೆ-ತೊಡಿಗೆಗಳು ಬಿದ್ದಿದ್ದವು; ತನ್ನ ಉಡುಗೆ-ತೊಡಿಗೆಗಳಲ್ಲಿ ಒಂದು ಜೊತೆಯು ಹೋಗಿತ್ತು. ಇದಲ್ಲದೆ ಒಂದು ಕೈಚೀಲಿಯೂ ಇದ್ದಿಲ್ಲ. ಈ ಪರಿಸ್ಥಿತಿಯನ್ನು ನೋಡಿ ಅವನು ಗಾಬರಿಗೊಂಡು, ತನ್ನ ಜೇಬಿನಲ್ಲಿರುವ ಬೀಗದ ಕೈಯನ್ನು ತೆಗೆದುಕೊಂಡು ಹೋಗಿ ಅಜಯಸಿಂಹನ ಕಾರಾಗೃಹದ ಬಾಗಿಲ ತೆರೆದನು. ಅಲ್ಲಿ ಅವನು ಇಲ್ಲದ್ದನ್ನು ನೋಡಿದ ಕೂಡಲೆ ಸಾಹೇಬನು ವಿಸ್ಮಯಭಯಚಕಿತನಾದನು. ಮುನ್ನಿನ ರಾತ್ರಿಯಲ್ಲಿ ತನಗೆ ಸ್ಮೃತಿ ತಪ್ಪಿದಂತಾದದ್ದೂ, ಆಗ ಲೀಲಾವತಿಯು ಅಲ್ಲಿಯೇ ಇದ್ದದ್ದೂ ಅವನ ಲಕ್ಷ್ಯದಲ್ಲಿ ಬರಲು, ಇದೆಲ್ಲ ಅನರ್ಥಕ್ಕೆ ಅವಳೇ ಕಾರಣಳು! ಎಂಬದನ್ನು ಆ ಸಾಹೇಬನು ತಿಳಿದುಕೊಂಡನು. ಕೂಡಲೆ ಅಜಯಸಿಂಹನ ಶೋಧಕ್ಕಾಗಿ ನಾಲ್ಕು ಕಡೆಗೆ ಅಶ್ವಾರೋಹಿ ಚರರನ್ನು ಕಳುಹಿಸಿದನು. ತರುವಾಯ ಲೀಲಾವತಿಗೆ ಭೆಟ್ಟಿಯಾಗಿ ಎಲ್ಲ ಸಂಗತಿಗಳನ್ನು ತಿಳಿದುಕೊಳ್ಳಬೇಕೆಂದು ಅವನು ಅವಳ ಮನೆಗೆ ಹೋದನು. ಸಾಹೇಬನು ತನ್ನ ಮನೆಗೆ ಬಂದದ್ದರ ಕಾರಣವು ಲೀಲಾವತಿಗೆ ತಿಳಿಯಿತು. ಅವಳು ಅವನನ್ನು ಆಸನದಲ್ಲಿ ಕುಳ್ಳಿರಿಸಿ: —"ಇದೇನು? ಬೆಳಗಾದ ಕೂಡಲೆ ಬರೋಣವಾಯಿತು?"

"ನಿಮ್ಮ ಕಡೆಗೆ ಮಹತ್ವದ ಕೆಲಸವಿದ್ದುದರಿಂದ ಬಂದೆನು."

"ಅದೇನು?' ಎಂದು ಲೀಲಾವತಿಯು ಬುದ್ಧಿಪೂರ್ವಕವಾಗಿ ಕೇಳಿದಳು.

"ಅಜಯಸಿಂಹರನ್ನು ನೀವು ಸೆರೆಮನೆಯಿಂದ ಮುಕ್ತ ಮಾಡಿ ಕಳುಹಿಸಿರುವಿರಲ್ಲವೆ?

"ಅಹುದು. ನಾನು ಅವರನ್ನು ಸೆರೆಮನೆಯಿಂದ ಪಾರುಮಾಡಿರುವೆನು."

"ನಿಮ್ಮ ಈ ಕೃತಿಯಿಂದ ನನ್ನ ಅವಸ್ಥೆಯು ಏನಾಗುವದೆಂಬದನ್ನು ವಿಚಾ

ರಿಸಿದಿರೇನು?''

"ನಿಮ್ಮ ಮೇಲೆ ಯಾವ ದೋಷವೂ ಬರುವದಿಲ್ಲ. ಈಗಿನ ಕ್ರಾಂತಿ ಸಮಯದಲ್ಲಿ ಎಷ್ಟೋ ಸೆರೆಯಾಳುಗಳು ಕಾರಾಗೃಹದಿಂದ ಪಾರಾಗಿ ಹೋಗುತ್ತಿರುತ್ತಾರೆ. ನೀವು ಈ ವಿಷಯದಲ್ಲಿ ಭಯಪಡುವ ಕಾರಣವಿಲ್ಲ.''

"ಮಾದಕ ಪದಾರ್ಥಗಳನ್ನು ನನಗೆ ಕೊಟ್ಟು, ಅವನನ್ನು ದಾಟಿಸಬೇಕೆನ್ನುವ ವಿಚಾರವನ್ನೇಕೆ ನೀವು ಮಾಡಿವಿರಿ? ಬಂಡುಗಾರರ ನಾಶವಾಗಬೇಕೆಂದು ಪ್ರತಿಯೊಬ್ಬ ಆಂಗ್ಲನು ಯತ್ನಿಸುತ್ತಿರಲು, ನೀವು ಈ ರೀತಿಯಾಗಿ ಆಂಗ್ಲ ಹಿತ ವಿಘಾತುಕವಾದ ಕಾರ್ಯವನ್ನು ಕೈಕೊಂಡದ್ದು ಉಚಿತವೆ?''

'ಅಜಯಸಿಂಹರು ನನ್ನ ಮಾನರಕ್ಷಕರು ಅವರ ಮೇಲಿನ ಗಂಡಾಂತರವನ್ನು ದೂರಮಾಡುವದು ನನ್ನ ಕರ್ತವ್ಯವಾಗಿರುವದು. ಮಾನವೀ ಕರ್ತವ್ಯಕ್ಕಿಂತ ಇತರ ಕರ್ತವ್ಯಗಳು ಹೆಚ್ಚಿನವಲ್ಲ. ಆಂಗ್ಲರಾದರೂ ಅವರನ್ನು ಮೋಸದಿಂದ ಹಿಡಿದಿದ್ದರು. ನಿಜವಾದ ಶೂರತನವಿದ್ದರೆ, ಇನ್ನಾದರೂ ಅವರೊಡನೆ ಕಾಳಗ ಮಾಡಿ ಜಯಿಸಲಿ. ಸಂಗ್ರಾಮದಲ್ಲಿ ಸಂಗ್ರಾಮಸಿಂಹರಾದ ಅಜಯಸಿಂಹರು ಪ್ರಾಣವನ್ನು ತ್ಯಜಿಸುವರೇ ಹೊರತು, ಅವರು ಜೀವಂತವಾಗಿ ಆಂಗ್ಲರ ವಶವಾಗಲಿಕ್ಕಿಲ್ಲ.''

"ನೀವು ಅಜಯಸಿಂಹನಲ್ಲಿ ಪ್ರೇಮವುಳ್ಳವರಾಗಿರುವಿರಿ. ಹಿಂದುಗಳಲ್ಲಿ ಪ್ರಣಯವುಳ್ಳವರಾಗುವದು ಆಂಗ್ಲ ಯುವತಿಯರಿಗೆ ಶೋಭಿಸದು. ಇದಲ್ಲದೆ, ಅವನು ನಿಮ್ಮ ಇಚ್ಛೆಯನ್ನು ಪೂರ್ತಿಗೊಳಿಸುವದಿಲ್ಲೆಂಬಂತೆ ತೋರುವದು.''

"ಕಾರ್ಯಕ್ಷೇತ್ರವನ್ನು ಮೀರಿ ಮಾತನಾಡುವ ಅಧಿಕಾರವು ನಿಮಗಿರುವದಿಲ್ಲ. ಅವರ ವಿಷಯವಾಗಿ ನಾನು ಪ್ರೇಮವುಳ್ಳವಳಾಗಿದ್ದರೂ, ಆ ಪ್ರೇಮದ ಪ್ರತಿಫಲವನ್ನು ನಾನು ಬಯಸುತ್ತಿರುವದಿಲ್ಲ. ಅವರು ನನ್ನ ವಿಷಯದಲ್ಲಿ ಪವಿತ್ರ ಹೃದಯಿಗಳಾಗಿರುವರು.''

"ಅಜಯಸಿಂಹನು ನಿಮ್ಮನ್ನು ವರಿಸಲೊಪ್ಪದಿದ್ದರೆ, ನೀವು ಅವನಲ್ಲಿ ಪ್ರೇಮವಿಡುವ ಕಾರಣವೇನು? ನಿರಪೇಕ್ಷ ಪ್ರೇಮವು ನಿಮ್ಮಂತಹ ಯುವತಿಯರಿಗೆ ಅಪ್ರಯೋಜಕವು.''

"ನನ್ನ ಮನಸ್ಸಿನ ಪ್ರವೃತ್ತಿಗೆ ಏನು ಮಾಡುವದಿದೆ?"

"ಮಿಸ್ ಟೇಲರ, ನೀವು ಹೀಗೆ ಹಟಹಿಡಿಯಬೇಡಿರಿ; ಇದರಿಂದ ಸುಖವಾಗಲಾರದು. ಅಜಯಸಿಂಹನಲ್ಲಿ ನೀವು ಪ್ರೇಮವಿಟ್ಟ ಮಾತ್ರದಿಂದ ಪ್ರಯೋಜನವೇನು? ನವಯುವತಿಯರಾದ ನೀವು ಆ ಅಜಯನ ಮೂರ್ತಿಯನ್ನು ಮನಸ್ಸಿನಲ್ಲಿಟ್ಟುಕೊಂಡು ಸ್ವಸ್ಥವಾಗಿ ಕುಳಿತುಕೊಳ್ಳುವಿರೇನು?"

"ನಾನು ಹಾಗೆಯೇ ಮಾಡಬೇಕೆಂದು ನಿಶ್ಚಯಿಸಿರುವೆನು."

"ನೀವು ವಿವಾಹವಾಗುವದಿಲ್ಲವೆ?" ಎಂದು ವಿಸ್ಮಯಚಕಿತನಾಗಿ ಸಾಹೇಬನು ಕೇಳಿದನು.

"ಇಲ್ಲ!"

"ಮಿಸ್ ಟೀಲರ, ನೀವು ನನ್ನನ್ನು ವರಿಸಿದರೆ ನಿಮ್ಮ ಅಪರಾಧವು ಮುಚ್ಚಿಹೋಗುವದು. ಒಬ್ಬ ಬಂಡುಗಾರನನ್ನು ಸೆರೆಮನೆಯಿಂದ ಓಡಿಸಿದ ಅಪರಾಧವು ಸಾಮಾನ್ಯವಾದದ್ದಲ್ಲವೆಂಬುದನ್ನು ಚನ್ನಾಗಿ ಸ್ಮರಣೆಯಲ್ಲಿಟ್ಟುಕೊಂಡು ನಡೆಯಿರಿ."

"ನನಗೆ ಎಲ್ಲವೂ ಗೊತ್ತಿದೆ. ನಿಮ್ಮ ಈ ಪೊಳ್ಳು ಬೆದರಿಕೆಯಿಂದ ಪ್ರೇಮತೃಷಿತವಾದ ನಿಮ್ಮ ಆತ್ಮಕ್ಕೆ ಶಾಂತಿಯು ದೊರೆಯಲಾರದು."

"ಅಜಯನು ನಿಮ್ಮನ್ನು ಪ್ರೇಮಜಾಲದಿಂದ ಬಿಗಿದಿರುವನೇ."

"ಅವರ ವಿಷಯದಲ್ಲಿ ಇಲ್ಲದ ಆಕ್ಷೇಪಣೆಯನ್ನು ತೆಗೆಯಬೇಡಿರಿ. ಅವರ ಹೃದಯವು ಸ್ಫಟಿಕದಂತಿರುವದು. ನಿಮ್ಮಂತಹ ಉತ್ಶೃಂಖಲ ವೃತ್ತಿಯ ತರುಣರು ಸ್ತ್ರೀಯರೊಡನೆ ಹೇಗೆ ನಡೆಯಬೇಕೆಂಬ ವಿಷಯವನ್ನು ಅವರ ಬಳಿಯಲ್ಲಿಯು ಕಲಿಯತಕ್ಕ ಹಾಗೆ ಅವರ ವರ್ತನವಿರುವದು."

"ಕೇವಲ ಅಜಯಸಿಂಹನ ಮುಕ್ತತೆಗಾಗಿ ನೀವು ಪ್ರೇಮಾಭಿನಯ ಮಾಡಿದಿರೆಂದಂತಾಯಿತು."

"ನಿಜ!"

"ಪ್ರೇಮಪ್ರಭಾವವು ಅತ್ಯಂತ ಘನತರ ಯೋಗ್ಯತೆಯದಿರುವದು!" ಎಂದು ಆ ಸಾಹೇಬನು ಉದ್ಗಾರ ತೆಗೆದು, ಅಲ್ಲಿಂದ ಹೊರಟು ಹೋದನು.

---

## ಆತ್ಮ ಬಲಿ!

....(೦)....

ಕುವರಸಿಂಹನು ಭಾಗೀರಥೀನದಿಯನ್ನು ದಾಟುವದಕ್ಕಾಗಿ ಶಿವಪುರಕ್ಕೆ ತೆರಳಿರುವನೆಂಬ ಸಂಗತಿಯು ಬಾಲಿಯಾದಲ್ಲಿದ್ದ ಡಗ್ಲಸನಿಗೆ ತಿಳಿಯಿತು. ಕೂಡಲೆ ಅವನು ತನ್ನ ಸೈನ್ಯವನ್ನು ಶಿವಪುರಕ್ಕೆ ಸಾಗಿಸಿದನು. ಬಾಲಿಯಾದಿಂದ ಶಿವಪುರವು ಐದುಹರದಾರಿಯ ಮೇಲಿತ್ತು. ಡಗ್ಲಸನಿಗೆ ಆ ವಾಲುಕಾಮಯ ಪ್ರದೇಶದೊಳಗಿಂದ ಗಂಗಾತಟಾಕವನ್ನು ಮುಟ್ಟುವದಕ್ಕೆ ಒಂದು ಪ್ರಹರ ವೇಳೆಯು ಹಿಡಿಯಿತು. ಆಂಗ್ಲಸೈನ್ಯವು ಅಲ್ಲಿಗೆ ಬರುವಷ್ಟರಲ್ಲಿ ಕುವರಸಿಂಹನು ಬಹುತರವಾಗಿ ಎಲ್ಲ ಸೈನ್ಯವನ್ನೂ ಪರತೀರಕ್ಕೆ ಕಳುಹಿಸಿದ್ದನು; ಅವನಾದರೂ ಉಳಿದ ಅಲ್ಪ

ಸೈನ್ಯದೊಂದಿಗೆ ನೌಕೆಯಲ್ಲಿ ಕುಳಿತು ನದಿಯ ಮಧ್ಯಕ್ಕೆ ಹೋಗಿದ್ದನು.

ಕುವರಸಿಂಹನು ತನ್ನ ಕೈಯಿಂದ ಜಾರಿ ಹೋಗುವನೆಂದು ಡಗ್ಲಸನು ಸಂತಪ್ತನಾಗಿ ಮುಂಗೈ ಕಚ್ಚಿಕೊಂಡನು. ತಾನು ಮನಸ್ಸಿನಲ್ಲಿ ರಚಿಸಿಕೊಂಡಿದ್ದ ಮನೋರಾಜ್ಯವೆಲ್ಲ ಹಾಳಾಯಿತೆಂದು ಅವನಿಗೆ ಬಹಳೇ ದುಃಖವಾಯಿತು ಸಂತಾಪದ ಭರದಲ್ಲಿ ಅವನು ತನ್ನ ಕೈತುಬಾಕಿಯನ್ನು ತೆಗೆದು ಕುವರಸಿಂಹನ ಮೇಲೆ ಗುರಿಯಿಟ್ಟನು. ಸೈನಿಕರಾದರೂ ನೌಕೆಯಲ್ಲಿದ್ದ ಕುವರಸಿಂಹನ ಸೈನಿಕರ ಮೇಲೆ ತಮ್ಮ ತುಬಾಕಿಗಳನ್ನು ಗುರಿಹಿಡಿದರು. ಎರಡನೆಯ ಕ್ಷಣದಲ್ಲಿ ನೌಕೆಯ ಮೇಲೆ ಗುಂಡಿನ ಮಳೆಯು ಸುರಿಯತೊಡಗಿತು!

ಗುಂಡುಗಳು ತನ್ನ ನೌಕೆಯ ವರೆಗೆ ಬರಲಿಕ್ಕಿಲ್ಲವೆಂದು ಕುವರಸಿಂಹನ ತಿಳವಳಿಕೆಯಿತ್ತು. ಎಲ್ಲ ಗುಂಡುಗಳು ಅಲ್ಲಿಯ ವರೆಗೆ ಬರದಿದ್ದರೂ ಕೆಲವು ಮಾತ್ರ ನೌಕೆಯೊಳಗಿನ ಸೈನಿಕರಿಗೆ ಬಡಿಯತೊಡಗಿದವು. ಕೆಲವು ಜನರು ಆ ಗುಂಡಿನ ಪೆಟ್ಟಿನಿಂದ ಗಾಯಾಳುಗಳಾದರು. ಕೆಲವರು ಗತಾಸುಗಳಾದರು. ನೌಕೆಯು ಬಹಳ ವೇಗದಿಂದ ಪರತೀರವನ್ನು ಮುಟ್ಟುವದಕ್ಕಾಗಿ ನಡೆದಿತ್ತು. ಅಷ್ಟರಲ್ಲಿ ಒಂದು ಗುಂಡು ಕುವರಸಿಂಹನ ಎಡಭುಜಕ್ಕೆ ಬಡಿಯಿತು. ಆ ಹೊಡತಕ್ಕೆ ಅವನ ಕೈಯು ಮುರಿದು ಜೋತಾಡತೊಡಗಿತು! ಗಾಯದಿಂದ ರಕ್ತವು ಪ್ರವಾಹಗಟ್ಟಿ ಹರಿಯತೊಡಗಿತು. ಸೇವಕರು ಅವನ ಮುರಿದ ಕೈಯನ್ನು ಕಟ್ಟುವದಕ್ಕೆ ತೊಡಗಿದರು. ಅದನ್ನು ನೋಡಿ ಆ ವೃದ್ಧ ರಜಪೂತನು:—

"ಛೋಡ ದೇವ್. ಯಹ ನಿಕಮ್ಮಾ ಹಾತ ಐಸಾ ಬಂಧನೇಸೇ ಕ್ಯಾ ಹೋಗಾ? ಹಾತ ಕಾಟ ಡಾಲೋ. ಅನೆಘೇರ ಕಪಡೇಸೆ ರಕ್ತ ಬಂದ ಕರೋ!"

ಕುವರಸಿಂಹನ ಈ ನಿಷ್ಠುರವಾದ ಆಜ್ಞೆಯನ್ನು ಮನ್ನಿಸುವದಕ್ಕೆ ಯಾರೂ ಮುಂದಾಗಲಿಲ್ಲ. ಕೂಡಲೆ ಅವನು ತನ್ನ ಟೊಂಕದಲ್ಲಿ ಅಲೆದಾಡುತ್ತಿದ್ದ ತೀಕ್ಷ್ಣ ಧಾರೆಯ ಖಡ್ಗವನ್ನು ತೆಗೆದುಕೊಂಡು ಅದರಿಂದ ಎಡಗೈಯನ್ನು ಕಡಿದು:—

"ಗಂಗಾಮಾಯಿ! ರಜಪೂತಕಾ ಹಾತ ಆಪನೆ ಹೃದಯಮೆ ಅಕ್ಷಯಕೆಲಿಯೆ ರಖನೀವ್!" ಎಂದು ನುಡಿದು, ಅದನ್ನು ಭಾಗೀರಥಿಗೆ ಅರ್ಪಿಸಿದನು!

ನೌಕೆಯು ಪರತೀರವನ್ನು ತಲುಪಿತು. ಆಂಗ್ಲರಿಗೆ ಮಂಕುಬೂದಿ ಹಚ್ಚಿ ಪಾರಾಗಿ ಬಂದೆವೆಂಬ ಸಂಭ್ರಮದಿಂದ ಕುವರಸಿಂಹನ ಸೈನಿಕರು ಜಯ ಜಯಕಾರ ಧ್ವನಿಗೈಯತೊಡಗಿದರು. ಅವರು ಆನಂದದಿಂದ ವಿಜಯರವಗೈಯುತ್ತಿದ್ದರೂ, ಅವರ ಅಂತಃಕರಣವು ಮಾತ್ರ ಬಹಳ ಚಿಂತೆಯಲ್ಲಿತ್ತು. ಕುವರಸಿಂಹನ ಕರಚ್ಛೇದನದಿಂದ ಅವರು ಬಹಳೇ ಉದ್ವಿಗ್ನರಾಗಿದ್ದರು.

ಕುವರಸಿಂಹನು ಉಧ್ವಸ್ತವಾದ ತನ್ನ ರಾಜಧಾನಿಗೆ ಸೈನ್ಯ ಸಹಿತವಾಗಿ

ಬಂದನು. ಕೊಳಲಸ್ವಾಮಿಯು ಭೆಟ್ಟಿಯಾಗಿ:—"ರಾಜಾ, ನಿನ್ನ ಆಯುರ್ಮರ್ಯಾದೆಯು ತೀರಿರುವದು. ಈಶ ಸಂಕಲ್ಪಕ್ಕೆ ಯಾರು ಮಾಡುವದೇನು?"

"ಸದ್ಗುರೊ! ಈ ಸಂಗತಿಯು ನನಗೂ ತಿಳಿದಿರುವದು. ನಾನು ಮರಣಕ್ಕಾಗಿ ಅಂಜುವದಿಲ್ಲ. ನನ್ನ ಸೈನಿಕರು ನನ್ನ ಮೇಲೆ ಒಹಳೇ ವಿಶ್ವಾಸವುಳ್ಳವರಿರುವರು. ನನ್ನ ತರುವಾಯ ಅವರು ಕರ್ತವ್ಯಪರಾಙ್ಮುಖರಾಗುವರೆಂಬ ಭಯವು ಬಾಧಿಸತೊಡಗಿದೆ."

"ರಾಜಾ, ಆಗಬೇಕಾದದ್ದು ಆಗಿಯೇ ತೀರುವದು. ಅದರ ಸಲುವಾಗಿ ಚಿಂತೆ ಮಾಡಿದರೆ ಹೇಗೆ? ಅಜಯಸಿಂಹನು ವೀರಾಧಿವೀರನಿರುವನು. ಅವನು ಯಶಸಂಪಾದನೆಗಾಗಿ ಸಾಹಸ ಮಾಡುವನೆಂಬದರಲ್ಲಿ ಸಂದೇಹವಿಲ್ಲ." ಎಂದು ಕೊಳಲಸ್ವಾಮಿಯು ಕುವರಸಿಂಹನನ್ನು ಸಂತೈಸಿದನು.

ಆರಾದ ಕಾರಾಗೃಹದಿಂದ ಮುಕ್ತನಾದ ಅಜಯಸಿಂಹನು ಜಗದೀಶಪುರಕ್ಕೆ ಬಂದನು. ಅವನು ತನ್ನ ಅಣ್ಣನ ವಿಷಯವಾಗಿ ಎಲ್ಲ ಸಂಗತಿಯನ್ನು ದಾರಿಯಲ್ಲಿಯೇ ಕೇಳಿದನು. ಅವನು ಮೃತ್ಯುಪಥವನ್ನು ಹಿಡಿದ ಸಂಗತಿಯನ್ನು ಕೇಳಿ ಅಜಯಸಿಂಹನಿಗೆ ಒಹಳೇ ದುಃಖವಾಯಿತು. ಅವನು ಜಗದೀಶಪುರಕ್ಕೆ ಬಂದು ಕುವರಸಿಂಹನನ್ನು ಕಂಡನು. ತಾನು ಸೆರೆಯಾಳಾದ ಸಂಗತಿಯನ್ನೂ, ಅಲ್ಲಿಂದ ಹೇಗೆ ಬಿಡುಗಡೆ ಹೊಂದಿದೆನೆಂಬ ಸಂಗತಿಯನ್ನೂ ಅವನು ತನ್ನ ಅಣ್ಣನಿಗೆ ಅರುಹಿದನು. ಈ ಸಂಗತಿಯನ್ನು ಕೇಳಿ ಕುವರಸಿಂಹನು ಲೀಲಾವತಿಯ ವಿಷಯಕ್ಕೆ ಸಹಾನುಭೂತಿಪರ ಉದ್ಗಾರ ತೆಗೆದನು. ಅನಂತರದಲ್ಲಿ ಅವನು ತನ್ನ ಕೈಕೆಳಗಿನ ಸರದಾರ-ಸೇನಾಪತಿಗಳನ್ನೂ ಸೈನಿಕರನ್ನೂ ಕರೆಯಿಸಿ, ಅವರಿಗೆ ಉಪದೇಶಿಸಿ, ತನ್ನ ಸ್ಥಳದಲ್ಲಿ ಅಜಯಸಿಂಹನನ್ನು ನಿಯಮಿಸಿರುವೆನೆಂದು ತಿಳಿಸಿದನು. ಆ ಮೇಲೆ ಅವನು ಅಜಯಸಿಂಹನನ್ನು ಕುರಿತು:—

"ಅಜಯ, ಬಿಹಾರದ ಸ್ವಾತಂತ್ರ್ಯ ರಣಕುಂಡದಲ್ಲಿ ನಾನು ಆತ್ಮಬಲಿದಾನ ಮಾಡಿದೆನು. ಈ ಸ್ವಾತಂತ್ರ್ಯಯಜ್ಞವನ್ನು ನೀನು ಕಡೆಗಾಣಿಸುವೆಯೆಂಬ ಆತ್ಮವಿಶ್ವಾಸವು ನನಗಿರುವದು."

"ದೇಶದ ಪಾರತಂತ್ರ್ಯದ ಅಂಧಕಾರವನ್ನು ಹೋಗಲಾಡಿಸಿ ಸ್ವಾತಂತ್ರ್ಯದ ಜೀವಜ್ಯೋತಿಯನ್ನು ಪ್ರಕಾಶಗೊಳಿಸುವಂತೆ ಮಾಡುವ ಕಾರ್ಯದಲ್ಲಿ ನಾನು ಜೀವದ ಪರಿವೆಯಿಲ್ಲದೆ ಸಾಹಸಮಾಡುವೆನು. ಈ ವಿಷಯದಲ್ಲಿ ನೀವು ನಿಶ್ಚಿಂತರಾಗಿರಿ. ಸ್ವಾತಂತ್ರ್ಯಯಜ್ಞದ ಫಲಿತಾಂಶವನ್ನು ಕಾಣುವದಕ್ಕೆ ನೀವು ಇರಬೇಕಾಗಿತ್ತು!" ಹೀಗೆ ನುಡಿಯುವಾಗ ಅಜಯಸಿಂಹನ ಕಣ್ಣುಗಳಿಂದ ದುಃಖಬಾಷ್ಪಗಳು ಸುರಿಯತೊಡಗಿದ್ದವು. ಕಂಠವು ಸದ್ಗದಿತವಾಗಿತ್ತು.

ಅಜಯಸಿಂಹನ ಆಧಿಪತ್ಯದಲ್ಲಿ ಬಂಡುಗಾರರು ಸಮರಸನ್ನಾಹ ನಡೆಯಿಸಿದ ಸಂಗತಿಯನ್ನು ತಿಳಿದು, ಲೇ ಗ್ರ್ಯಾಂಟ, ಕರ್ನಲ್ ಆಯರ ಮೊದಲಾದ ಆಂಗ್ಲ ಸೇನಾಪತಿಗಳು ಅವರ ಮೇಲೆ ದಂಡೆತ್ತಿ ಬಂದರು. ಈ ಸಂಗತಿಯು ಅಜಯಸಿಂಹನಿಗೆ ತಿಳಿದ ಕೂಡಲೆ, ಅವನು ನೀರಳವಾದ ಸೈನ್ಯವನ್ನು ತೆಗೆದುಕೊಂಡು ಆಂಗ್ಲಸೈನ್ಯಕ್ಕೆ ಎದುರಾಗಿ ಹೊರಟನು. ಅರಾ ಹಾಗು ಜಗದೀಶಪುರದ ಮಧ್ಯದಲ್ಲಿದ್ದ ಅರಣ್ಯಪ್ರದೇಶದಲ್ಲಿ ಈ ಎರಡೂ ಸೈನ್ಯಗಳು ಕೂಡಿದವು. 'ಹೊಡೆಯುವೆವು ಇಲ್ಲವೆ ಮಡಿಯುವೆವು' ಎಂದು ಕ್ರಾಂತಿಕಾರರ ದಳವು ದೃಢ ಪ್ರತಿಜ್ಞೆ ಮಾಡಿತ್ತು. ಅವರು ಒಳ್ಳೆಯ ವೀರಾವೇಶದಿಂದ ಆಂಗ್ಲಸೈನ್ಯದ ಮೇಲೆ ಬಿದ್ದು ಅದನ್ನು ನಾಶಗೊಳಿಸತೊಡಗಿದರು. ಅವರು ಆಂಗ್ಲ ಆಗ್ನೇಯಾಸ್ತ್ರ ಚಾಲಕರನ್ನು ಸಂಹರಿಸಿದ್ದರಿಂದ ಅವರ ಯಂತ್ರವು ಕಟ್ಟಾಗಿ ಹೋಯಿತು. ಬಂಡುಗಾರರ ಹೊಡತಕ್ಕೆ ಆಂಗ್ಲ ಸೈನ್ಯವು ನುಗ್ಗುನುಗ್ಗಾಗಿ ಪಲಾಯನಸೂಕ್ತವನ್ನು ಪಠಿಸತೊಡಗಿತು. ಆಯರ ಸಾಹೇಬನು ಓಡಿಹೋಗುವ ತನ್ನ ಸೈನ್ಯವನ್ನು ತಡೆದು ನಿಲ್ಲಿಸುವದಕ್ಕೆ ಪ್ರಯತ್ನಿಸತೊಡಗಿದನು. ಆಗ ಅಜಯಸಿಂಹನು ಅಶ್ವಾರೋಹಿಯಾಗಿ ಅವನ ಬಳಿಗೆ ಬಂದು:—

"ಆಯರಸಾಹೇಬರೇ, ನೀವು ನನ್ನನ್ನು ಗುರುತಿಸುವಿರೇನು? ಇದು ನಮ್ಮ ನಿಮ್ಮ ದರ್ಶನದ ಮೂರನೆಯ ಪ್ರಸಂಗವು. ಒಂದನೆಯ ಪ್ರಸಂಗವು ಬಿಬೀಗಂಜದ ಬಳಿಯ ಅರಣ್ಯದಲ್ಲಿ; ಎರಡನೇಯದು ಸಸರಾಮನ ಬೆಟ್ಟದ ಬಳಿಯಲ್ಲಿ; ಇಗೋ ಇದೇ ಮೂರನೇಯದು; ಹಾಗು ಕಡೆಯದು!" ಎಂದು ನುಡಿದು, ಅವನ ಮೇಲೆ ಸಾಗಿಹೋದನು. ಈರ್ವರೂ ಹೆಸರುವಾಸಿಗಳಾದ ವೀರರು. ವೈರಿಯು ಎದುರಿನಲ್ಲಿ ಹೀಗೆ ಮರ್ಮಭೇದಕ ಮಾತುಗಳನ್ನು ಆಡಿದ್ದರಿಂದ ಆಯರನು ಸಂತಪ್ತನಾಗಿ ಅವನನ್ನು ತನ್ನ ತೀಕ್ಷ್ಣಧಾರೆಯ ಖಡ್ಗದಿಂದ ಹೊಡೆದನು. ಅಜಯನು ಅಭೇದ್ಯಕವಚಧಾರಿಯಿದ್ದುದರಿಂದಲೂ, ಸಂಗ್ರಾಮಪಟುವಾಗಿದ್ದರಿಂದಲೂ ಅವನ ಈ ಹೊಡತದಿಂದ ಏನೂ ಪ್ರಯೋಜನವಾಗಲಿಲ್ಲ. ಕೂಡಲೆ ಅವನು ತನ್ನ ಕುದುರೆಯನ್ನು ಮುಂದೆ ನೂಕಿ ಸೇನಾಪತಿಯ ಮಸ್ತಕಕ್ಕೆ ಖಡ್ಗಪ್ರಹಾರ ಮಾಡಿದನು! ಕೂಡಲೆ ಪ್ರಚಂಡವಾದ ಆಘಾತದಿಂದ ಅವನು ಕುದುರೆಯಿಂದ ಭೂಮಿಗೆ ಬಿದ್ದು ಗತಾಸುವಾದನು! ಸೇನಾಪತಿಯು ಸ್ವರ್ಗವಾಸಿಯಾದ ಕೂಡಲೆ ಆಂಗ್ಲ ಸೈನಿಕರು ದಾರಿ ದೊರೆತ ಕಡೆಗೆ ಓಡಿ ಹೋದರು.

ಅಪ್ರತಿಮ ವಿಜಯೋತ್ಸಾಹದಿಂದ ಅಜಯಸಿಂಹನು ತನ್ನ ಸೇನೆಯೊಡನೆ ಜಗದೀಶಪುರಕ್ಕೆ ಬಂದನು. ವೃದ್ಧತ್ವ ವ್ಯಾಧಿಯಿಂದ ಶಯ್ಯಾಶಾಯಿಯಾದ ಕುವರಸಿಂಹನು ಆ ವಿಜಯವಾರ್ತೆಯಿಂದ ಆನಂದಭರಿತನಾದನು.

ಕುವರಸಿಂಹನು ತನ್ನ ಅಂತಿಮಕಾಲವು ಒದಗಿತೆಂಬದನ್ನು ತಿಳಿದು ತನ್ನ ಜನರನ್ನು ಕರೆದನು. ಘುಲಶಾಹ, ಕೊಳಲಸ್ವಾಮಿ, ಅಜಯಸಿಂಹ, ಜವಾನಸಿಂಹ, ರಣದಲನಸಿಂಹ ಮೊದಲಾದವರೂ ಎಷ್ಟೋ ಸೈನಿಕರೂ ಅವನ ಬಳಿಗೆ ಬಂದಿದ್ದರು. ತಾರಾದೇವಿ, ಇಂದುಮತಿ ರಾಣಿ ಮೊದಲಾದ ಸ್ತ್ರೀ ಪರಿವಾರವಾದರೂ ಅವನ ಕೊನೆಯ ದರ್ಶನಕ್ಕಾಗಿ ಆಗಮಿಸಿತ್ತು. ಕುವರಸಿಂಹನು ಆ ದುಃಖಿತ ಜನರನ್ನು ಸಂತೈಸತೊಡಗಿದ್ದನು. ಘುಲಶಾಹನೂ ಕೊಳಲಸ್ವಾಮಿಯೂ ಕುವರಸಿಂಹನಿಗೆ ಅಂತಿಮ ಉಪದೇಶ ಮಾಡತೊಡಗಿದ್ದರು. ಅವರ ಉಪದೇಶವು ಮುಗಿದ ಮೇಲೆ ಕುವರಸಿಂಹನು:—

"ನನ್ನ ಇಹಲೋಕ ಯಾತ್ರೆಯು ಸ್ವಲ್ಪ ವೇಳೆಯಲ್ಲಿಯೇ ಮುಗಿಯುವದು. ನಾನು ಜೀವಿಸಿರುವ ವರೆಗೆ ಯೋಗ್ಯತಾನುಸಾರವಾಗಿ ದೇಶಕಾರ್ಯ ಮಾಡುವ ಸುಯೋಗವು ಘಟಿಸಿತೆಂದು ಆನಂದಪಡುತ್ತೇನೆ. ನೀವೆಲ್ಲರೂ ಪುತ್ರ ತುಲ್ಯನಾದ ನನ್ನ ಬಂಧು ಅಜಯಸಿಂಹನಿಗೆ ಮಾನಕೊಡಬೇಕು. ಅವನು ನನ್ನ ಸ್ಥಳದಲ್ಲಿರುವನೆಂದು ಭಾವಿಸಿರಿ. ಸ್ವಾತಂತ್ರ್ಯ ಸಂಗ್ರಾಮವನ್ನು ಸಂಘಟಿತ ಶಕ್ತಿಯಿಂದ ಸಾಗಿಸಿದರೆ ಜಯಶಾಲಿಗಳಾಗುವಿರಿ. ಬಿಹಾರದ ರಣಕುಂಡದಲ್ಲಿ ನನ್ನ ಆತ್ಮಬಲಿದಾನವಾದ್ದರಿಂದ ಮಹದಾನಂದವಾಗಿದೆ. 'ಘುಲಶಾಹ-ಕೊಳಲಸ್ವಾಮಿಗಳೇ, ಬರುತ್ತೇನೆ! ಅಜಯ, ಬರುತ್ತೇನೆ. ತಾರಾ-ಇಂದುಮತಿರಾಣಿಯರೇ, ಬರುತ್ತೇನೆ! ಸೈನಿಕ ಜನರೇ ಹೋಗಿಬರುತ್ತೇನೆ!' ಎಂದು ನುಡಿಯುತ್ತಿರಲು ಕುವರಸಿಂಹರ ನಾಲಿಗೆಯು ಸೆಳೆಯತೊಡಗಿತು. ಪರಕ್ಷಣದಲ್ಲಿ ಅವನ ದೇಹದೊಳಗಿನ ದಿವ್ಯವಾದ ಆತ್ಮವು ಜಡಶರೀರವನ್ನು ತೊರೆದು ಹೋಯಿತು!

ಬಿಹಾರದ ರಣಭೂಮಿಯಲ್ಲಿ ಕುವರಸಿಂಹನು ತನ್ನ ದಿವ್ಯವಾದ ಆತ್ಮಬಲಿದಾನ ಮಾಡಿದ್ದರಿಂದ ಅದರ ಪುಣ್ಯವು ತಮ್ಮ ಭಾವೀಆಯುಷ್ಯವನ್ನು ಸುಖಮಯವಾಗಿ ಮಾಡುವದೆಂದು ಆ ದುಃಖಿತ ಪರಿವಾರವು ಆನಂದಮಯವಾಯಿತು.

---

## ಉಪಸಂಹಾರ.

ಕುವರಸಿಂಹನು ಮರಣಹೊಂದಿದೊಡನೆಯೇ ಅವನ ಸ್ಥಳದಲ್ಲಿ ಅಜಯಸಿಂಹನು ಬಂದನು. ಕ್ರಾಂತಿಕಾರಕ ಜನರು ನವೋತ್ಸಾಹದಿಂದ ಸಮರವನ್ನು ಹೂಡಿದರು. ಆರಾಪಟ್ಟಣವನ್ನು ವಶಮಾಡಿಕೊಳ್ಳಬೇಕೆಂದು ಅಜಯಸಿಂಹನ ಮನಸ್ಸಿನಲ್ಲಿತ್ತು. ಅವನು ತನ್ನ ಸೈನ್ಯದಲ್ಲಿ ಬೇರೆ ಬೇರೆ ಭಾಗಗಳನ್ನು ಮಾಡಿ ಒಂದೊಂದು ಕಡೆಗೆ ಕಳುಹಿಸಿದನು. ಆ ತಂಡಗಳು ಲುಗಾರ್ಡ, ಲೀ ಗ್ರ್ಯಾಂಟ, ಡಗ್ಲಸ ಮೊದಲಾದ ಸೇನಾಪತಿಗಳ ಮೇಲೆ ಬಿದ್ದು ಅವರ ಸೈನ್ಯವನ್ನು 'ತ್ರಾಹಿ ಭಗವನ್" ಎಂದು

ಉದ್ಗಾರ ತೆಗೆಯುವದಕ್ಕೆ ಹೆಚ್ಚಿದವು. ಬಂಡುಗಾರರೊಡನೆ ಯುದ್ಧಮಾಡುವ ದಕ್ಷ್ಯಾಗದೆ ಲುಗಾರ್ಡ ಸಾಹೇಬನು ತನ್ನ ಸೇನಾಪತಿ ಕೆಲಸದಿಂದ ನಿವೃತ್ತಿಹೊಂದಿದನು. ಅನಂತರ ಅವನ ಸ್ಥಳದಲ್ಲಿ ಡಗ್ಲಸನು ಬಂದನು. ಬಂಡುಗಾರರು ಆಂಗ್ಲರ ಮೇಲೆಯೂ ಅವರ ಸೀಮೆಯಲ್ಲಿಯೂ ಮಾಡಿದ ಹಾವಳಿಯನ್ನು ವರ್ಣಿಸಲಸಾಧ್ಯವು. ಅವರು ನೀಲೀಕೋಟಿ, ರಾಜಪುರ ಮೊದಲಾದ ಊರುಗಳನ್ನು ಸುಲಿದರು; ಲೋಹಮಾರ್ಗ ಸಂಸ್ಥೆಯ ಓಲಗವನ್ನು ಸುಲಿದುಕೊಂಡರು. ಗಯಾ ಮೊದಲಾದ ಸ್ಥಳಗಳಲ್ಲಿಯ ಕಾರಾಗೃಹವಾಸಿಗಳ ಬಂಧವಿಮೋಚನೆ ಮಾಡಿದರು. ಕ್ರಾಂತಿಕಾರಕರ ಕೋಲಾಹಲಕ್ಕೆ ಆಂಗ್ಲರ ಹೃದಯಗಳು ನಡುಗತೊಡಗಿದವು. ಅವರು ಪೂರಾ ದಿಙ್ಮೂಢರಾದರು.

೧೮೫೭ನೇ ಅಕ್ಟೋಬರ ತಿಂಗಳ ೧೩ನೆಯ ತಾರೀಖಿನವರೆಗೆ ಬಂಡುಗಾರರು ಸಾಹಸದ ಪರಮಾವಧಿಯನ್ನು ತೋರಿಸಿ, ವಿಜಯದುಂದುಭಿಯನ್ನು ಚನ್ನಾಗಿ ಮೊಳಗಿಸಿದರು. ಅಲ್ಲಿಂದ ಮುಂದಿನ ದಿನಗಳು ಮಾತ್ರ ಅವರಿಗೆ ಪ್ರತಿಕೂಲವಾದವು. ನಾಮಾಂಕಿತ ಸೇನಾಪತಿಯಾದ ಸರ ಹೇನ್ರಿ ಹ್ಯಾವಲಾಕನೂ ಅವನ ಮಗನಾದ ಮೇಜರ ಹ್ಯಾವಲಾಕನೂ ಡಗ್ಲಸನ ಸೈನ್ಯವನ್ನು ಕೂಡಿದರು. ಕೂಡಲೆ ಕಾಲವು ತಿರುಗಿತು! ಬಂಡುಗಾರರು ಮುಂದೆ ಕಲ್ಪನಾತೀತವಾದ ದುರವಸ್ಥೆಯನ್ನು ಹೊಂದಿದರು!

ಮೇಜರ ಹ್ಯಾವಲಾಕನು ಬಂಡುಗಾರರ ನಿರ್ಮೂಲ ಮಾಡುವದಕ್ಕೆ ಬದ್ಧಕಂಕಣನಾಗಿಯೆ ಹೊರಟನು. ಆ ಸಂಗ್ರಾಮಸಿಂಹನಿಗೆ ಗಿರಿಗಂಹರಗಳಲ್ಲಿಯ ಕ್ರಾಂತಿಕಾರಕರು ಸಹ ಕಾಣುತ್ತಿದ್ದರು. ಅವನ ಪರಾಕ್ರಮದ ಮುಂದೆ ಅಜಯಸಿಂಹನು ಕೈ ಊರಬೇಕಾಯಿತು. ದಿನದಿನಕ್ಕೆ ಬಂಡುಗಾರರ ಸಂಖ್ಯೆಯು ಕಡಿಮೆಯಾಗತೊಡಗಿತು. ಅವರು ಜೀವವನ್ನು ರಕ್ಷಿಸುವದಕ್ಕಾಗಿ ಮನಬಂದ ಕಡೆಗೆ ಹೋಗತೊಡಗಿದ್ದರು. ವೀರಾಗ್ರಣಿಯಾದ ಅಜಯಸಿಂಹನು ಆಗ ಹೇಡಿಯಂತೆ ಓಡಿಹೋಗಬೇಕಾಯಿತು.

ಬಿಹಾರದ ಸ್ವಾತಂತ್ರ್ಯದ ರಣಕುಂಡದಲ್ಲಿ ಕುವರಸಿಂಹನು ಆತ್ಮಬಲಿದಾನ ಮಾಡಿದ ಕೂಡಲೆ ಕ್ರಾಂತಿಕಾರಕ ಸಂಘವು ಉಧ್ವಸ್ತವಾಯಿತು. ಬಂಡುಗಾರರಲ್ಲಿ ಕೆಲವರು ಯುದ್ಧಭೂಮಿಯಲ್ಲಿ ಮಡಿದರು; ಕೆಲವರು ಆಂಗ್ಲಕರ್ಮಚಾರಿಗಳ ಕೈಗೆ ಸಿಗಲಿಲ್ಲ. ಕೈಯಲ್ಲಿ ದೊರೆತ ಬಂಡುಗಾರರಿಗೆ ದೇಹಾಂತ ಶಾಸನವು ವಿಧಿಸಲ್ಪಟ್ಟಿತು. ಕುವರ ಸಿಂಹನ ಜಹಗೀರಿಯು ಅವನ ಸಮೀಪದ ಆಪ್ತರಿಗೆ ಕೊಡಲ್ಪಟ್ಟಿತ್ತು.

ಅಜಯನು ನೇಪಾಳದ ಕಡೆಗೆ ಹೊರಟನು. ಅವನು ತನ್ನ ಸಂಗಡ ರಾಣಿ

ತಾರಾದೇವಿಯವರನ್ನು ಕರೆದುಕೊಂಡು ಹೊರಟಿದ್ದನು. ಅವನು ಗಡೀಪಾರು ಹೊಂದಬೇಕೆಂದಿದ್ದರೂ ನೀಚನಾದ ರಾಮಶರಣನು ಅವನ ಮೇಲಿನ ಹುನಸನ್ನು ತ್ಯಜಿಸಿರಲಿಲ್ಲ. ಅವನು ಗಂಗಾತೀರದಲ್ಲಿ ಅಜಯನನ್ನು ಕಂಡು, ಅವನ ಮೇಲೆ ಗುಂಡು ಒಗೆದನು. ಕರ್ಮಧರ್ಮಸಂಯೋಗದಿಂದ ಅದು ಅವನಿಗೆ ತಗಲಲಿಲ್ಲ. ಅಷ್ಟರಲ್ಲಿ ಲೀಲಾವತಿಯು ಅವನನ್ನು ಕೈತುಬಾಕಿಯಿಂದ ಹೊಡೆದು ಕೊಂದಳು!

ಅಜಯಸಿಂಹನು ನೇಪಾಳದೇಶಕ್ಕೆ ಹೊರಟ ಸಂಗತಿಯನ್ನು ಲೀಲಾವತಿಯು ಗುಪ್ತಚರರ ಮುಖಾಂತರ ತಿಳಿದು, ಅವನ ದರ್ಶನಕ್ಕಾಗಿ ಹೊರಟಿದ್ದಳು. ಗಂಗಾತಟಾಕದಲ್ಲಿ ಅವನು ಭೆಟ್ಟಿಯಾದನು. ರಾಮಶರಣನು ಅಜಯಸಿಂಹನ ಮೇಲೆ ತುಬಾಕಿಯು ಗುರಿಯಿಟ್ಟದ್ದನ್ನು ನೋಡಿ, ಅವನನ್ನು ತನ್ನ ತುಬಾಕಿಯಿಂದ ಹೊಡೆದು ಕೊಂದಳು! ನೀಚ ಜನರಿಗೆ ದುರ್ಮರಣದ ಹೊರತು ಮತ್ತಾವ ಲಾಭವು ದೊರೆಯುವದು?

ಲೀಲಾವತಿಯು ದರ್ಶನದಿಂದ ರಾಣಿಗೂ ತಾರಾದೇವಿಗೂ ಅಜಯಸಿಂಹನಿಗೂ ಬಹಳೇ ಆನಂದವಾಯಿತು. ತನಗೊದಗಿದ ಆಪತ್ತನ್ನು ತಿಳಿಸಿ, ಅಜಯಸಿಂಹನು ಕಣ್ಣುತುಂಬ ನೀರು ತಂದನು. ದೇಶತ್ಯಾಗ ಮಾಡುವ ಪ್ರಸಂಗ ಒದಗಿದ ಮೇಲೆ ಯಾರಿಗೆ ದುಃಖವೆನಿಸಲಿಕ್ಕಿಲ್ಲ? ಅಷ್ಟರಲ್ಲಿ ಫುಲಶಾಹನೂ ಕೊಳಲಸ್ವಾಮಿಯೂ ಅಲ್ಲಿಗೆ ಬಂದು ಅವನಿಗೆ ಹಿತೋಪದೇಶ ಮಾಡಿದರು.

ರಾಬರ್ಟಸಾಹೇಬನು ಆಂಗ್ಲ ಮುಖ್ಯಾಧಿಕಾರಿಯಾದ ಲಾರ್ಡ ಕ್ಯಾನಿಂಗನ ಬಳಿಗೆ ಹೋಗಿ ನಿಮ್ಮ ಗುಣವರ್ಣನೆ ಮಾಡಿರುವನೆಂಗೂ, ನಿಮ್ಮ ಜಹಾಗೀರಿಯು ನಿಮಗೆ ದೊರೆಯುವ ಬಗ್ಗೆ ಅವನು ಪ್ರಯತ್ನ ನಡೆಯಿಸಿರುವನೆಂದೂ ಲೀಲಾವತಿಯು ಅಜಯಸಿಂಹನಿಗೆ ಹೇಳಿದಳು. ಜಹಾಗೀರಿಯ ವ್ಯವಸ್ಥೆಯಾಗುವವರೆಗೆ ನೇಪಾಳದಲ್ಲಿರಬೇಕೆಂದು ಪುಲಶಾಹನೂ ಕೊಳಲಸ್ವಾಮಿಯೂ ಹೇಳಿದರು.

ಲೀಲಾವತಿಯು ರಾಣಿ-ತಾರಾದೇವಿಯವರನ್ನೂ ಅಜಯಸಿಂಹನನ್ನೂ ಅಗಲಿ ಇರುವದಕ್ಕೆ ಮನಸ್ಸಿಲ್ಲದವಳಾಗಿದ್ದಳು. ಅವರಾದರೂ ಆ ಆಂಗ್ಲಯುವತಿಯ ವಿಷಯದಲ್ಲಿ ನಿರ್ವ್ಯಾಜ ಪ್ರೇಮವುಳ್ಳವರಾಗಿದ್ದರು. ಅಜಯಸಿಂಹನು ಲೀಲಾವತಿಯನ್ನು ಅವಳ ಇಚ್ಛೆಯ ಮೇರೆಗೆ ತನ್ನೊಡನೆ ಕರೆದುಕೊಂಡು ನೇಪಾಳಕ್ಕೆ ಹೋಗುವದಕ್ಕಾಗಿ ಗಂಗಾನದಿಯನ್ನು ದಾಟಿದನು.

ಭಾರತದ ಈ ಸ್ವಾತಂತ್ರ್ಯದ ರಣಕುಂಡದಲ್ಲಿ ಕುವರಸಿಂಹರಂತಹ ಎಷ್ಟೋ ನರರತ್ನಗಳು 'ಆತ್ಮಬಲಿ'ದಾನ ಮಾಡಿದರೂ ಕಡೆಗೆ ಅಪಯಶವೇ ಪ್ರಾಪ್ತವಾಯಿತು! ಇದೇನು ದೈವದುರ್ವಿಲಾಸವೊ ಗ್ರಹಲೀಲೆಯೊ?

ಸಂಪೂರ್ಣ